ಬಾದಾಮಿ ತಾಲೂಕಿನ ಹುಲಿಗೆಮ್ಮ ಕೊಳ್ಳ : ಸಾಂಸ್ಕೃತಿಕ ಅಧ್ಯಯನ

(ಎ.ಫಿಲ್.ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕಿರುಪ್ರಬಂಧ)

ಸಂಶೋಧಕ

ಯಮನೂರ ಅ. ಹಾಲಿಗೇರಿ

ಮಾರ್ಗದರ್ಶಕರು

ರಮೇಶ ನಾಯಕ

ಸಹ ಪ್ರಾಧ್ಯಾಪಕರು

…ಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ,

ಸಮಾಜ ವಿಜ್ಞಾನಗಳ ನಿಕಾಯ

…ಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

೨೦೧೦

ಬಾದಾಮಿ ತಾಲೂಕಿನ ಹುಲಿಗೆಮ್ಮ ಕೊಳ್ಳ : ಸಾಂಸ್ಕೃತಿಕ ಅಧ್ಯಯನ

(ಎ.ಫಿಲ್.ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕಿರುಪ್ರಬಂಧ)

ಸಂಶೋಧಕ

ಯಮನೂರ ಅ. ಹಾಲಿಗೇರಿ

ಮಾರ್ಗದರ್ಶಕರು

ರಮೇಶ ನಾಯಕ

ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

೨೦೧೦

ಮಾರ್ಗದರ್ಶಕರ ಪ್ರಮಾಣ ಪತ್ರ

ಬಾದಾಮಿ ತಾಲೂಕಿನ ಹುಲಿಗೆಮ್ಮ ಕೊಳ್ಳ : ಸಾಂಸ್ಕೃತಿಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಯಮನೂರ ಅ. ಹಾಲಿಗೇರಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ರಮೇಶ ನಾಯಕ
ಸಹಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧[illegible] ೦೯ -೨೦೦೦

ಸಂಶೋಧಕನ ಪ್ರಮಾಣ ಪತ್ರ

ಬಾದಾಮಿ ತಾಲೂಕಿನ ಹುಲಿಗೆಮ್ಮ ಕೊಳ್ಳ : ಸಾಂಸ್ಕೃತಿಕ ಅಧ್ಯಯನ ಎಂಬ ನಿಬಂಧವನ್ನು ಸಹಪ್ರಾಧ್ಯಾಪಕರಾದ ರಮೇಶ ನಾಯಕ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(Y. A. Haligeri)

ಯಮನೂರ ಅ. ಹಾಲಿಗೇರಿ
ಸಂಶೋಧಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೦೪ - ೦೯ - ೨೦೧೦

“ಬಾದಾಮಿ ತಾಲೂಕಿನ ಹುಲಿಗೆಮ್ಮ ಕೊಳ್ಳ ಸಾಂಸ್ಕೃತಿಕ ಅಧ್ಯಯನ”

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ಸ್ವರೂಪ

ಪ್ರಸ್ತಾವನೆ :

ವಿವಿಧ ಜ್ಞಾನಶಾಖೆಗಳಲ್ಲಿ ಆಗಿರುವಂತೆ ಇತಿಹಾಸದಲ್ಲೂ ಜ್ಞಾನ ವಿಸ್ತರಣೆಯ ಪ್ರಯತ್ನಗಳು ಅಸಂಖ್ಯ ರೀತಿಯಲ್ಲಿ ನಡೆದಿವೆ, ನಡೆಯುತ್ತಲೂ ಇವೆ. ಬೌದ್ಧಿಕ ಇತಿಹಾಸವನ್ನು ಗಮನಿಸಿದಾಗ ಇತಿಹಾಸದ ಶ್ರೇಷ್ಠ ಚಿಂತಕರೆಲ್ಲರೂ ಇದಕ್ಕೆ ಒಂದಲ್ಲ ಒಂದು ಬಗೆಯಲ್ಲಿ ಮುಖಾಮುಖಿಯಾಗುತ್ತಲೇ ಬಂದಿದ್ದಾರೆ. ಚಿಂತಕರು, ದಾರ್ಶನಿಕರೂ ಸೇರಿದಂತೆ ಸೃಜನಶೀಲ ಮನಸ್ಸುಗಳು ಇತಿಹಾಸ ಅಧ್ಯಯನದಲ್ಲಿ ಆಸಕ್ತಿ ತೋರಿರುವಂತೆ ಸಾಮಾನ್ಯರೂ ಇದರಲ್ಲಿ ಆಸಕ್ತಿ ತೋರಿದ್ದಾರೆ. ಸೃಜನಶೀಲರಿಗೆ ಇತಿಹಾಸವು ಜ್ಞಾನ ವಿಸ್ತರಣೆಯ ಕ್ಷೇತ್ರವಾದರೆ ಸಾಮಾನ್ಯರಿಗೆ ತಮ್ಮ ಸಂಸ್ಕೃತಿಕ 'Identity' ಯನ್ನು ಕಂಡುಕೊಳ್ಳುವ ಮಾರ್ಗವಾಗಿದೆ. ಮುಖ್ಯ ಅಂಶವೆಂದರೆ ಇತಿಹಾಸ ಹಾಗೂ ಇತಿಹಾಸದ ಪ್ರಜ್ಞೆಯು ಮನುಷ್ಯನ ಅಸ್ತಿತ್ವದ ಅವಿಭಾಜ್ಯ ಭಾಗವಾಗಿದೆ. ಈ ಕಾರಣಕ್ಕಾಗಿಯೇ ಇತಿಹಾಸವು ಸರ್ವಕಾಲಿಕ ಚಲನಶೀಲತೆಯನ್ನು ಪಡೆದುಕೊಂಡಿದೆ. ಇತಿಹಾಸವನ್ನು ಕುರಿತು ಸಂಶೋಧಕರು, ಅಧ್ಯಾಪಕರು ಮಾತನಾಡಿದಂತೆಯೆ ಜನಸಾಮಾನ್ಯರು ಮಾತನಾಡುತ್ತಾರೆ. ಒಟ್ಟಾರೆ, ಇತಿಹಾಸ ಎಲ್ಲರ ಆಸಕ್ತಿಯ ಕ್ಷೇತ್ರವಾಗಿದೆ.

ವಿಶ್ವದ ಅಸ್ತಿತ್ವದಷ್ಟೇ 'ಇತಿಹಾಸ' ಅನಾದಿಯಾದುದು. ಮಾನವನ ಉಗಮಕ್ಕಿಂತ ಹಿಂದೆ ಇದ್ದ ವ್ಯವಸ್ಥೆಯನ್ನು ವಿಜ್ಞಾನಿಗಳು ಅರಿಯುವ ಪಯತ್ನ ನಡೆಸಿದ್ದಾರೆ. ಅಸಂಖ್ಯಾತ ವರ್ಷಗಳಲ್ಲಿ ನಡೆದಿರುವುದೆಲ್ಲವು ಇತಿಹಾಸದ ಭಾಗವೆ. ವಿಜ್ಞಾನಿಗಳಾಗಲಿ, ಚರಿತ್ರೆಕಾರರಾಗಲಿ ತಮ್ಮ ಅರಿವಿನ ಪ್ರಯತ್ನಕ್ಕೆ ದಕ್ಕಿದಷ್ಟನ್ನು ಸಮಾಜದ ಜೊತೆ ಹಂಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಸಂಶೋಧನೆ ಅಥವಾ ಅರಿವಿನ ವಿಧಾನಗಳು ಹೆಚ್ಚೆಚ್ಚು ವೈಜ್ಞಾನಿಕವಾದಂತೆ ನಮ್ಮ ಇತಿಹಾಸದ ಅಧ್ಯಯನವು ಹಿಂದಕ್ಕೆ ಸರಿಯುತ್ತಿರುತ್ತದೆ. ಹೀಗಾಗಿ ಇತಿಹಾಸ ಒಂದು ಶಿಸ್ತಾಗಿ, ಜ್ಞಾನಶಾಖೆಯಾಗಿ ಇತ್ತೀಚೆಗೆ ಬೆಳೆದಿದೆಯೇ ಹೊರತು, ಇತಿಹಾಸವೇ ಇತ್ತೀಚಿನದಲ್ಲ.

ಮಾನವ ಬೌದ್ಧಿಕವಾಗಿ ವಿಕಾಸವಾದಂತೆಲ್ಲಾ ತನ್ನ ಬದುಕನ್ನು ಬೇರೆ, ಬೇರೆ ರೂಪಗಳಲ್ಲಿ ದಾಖಲು ಮಾಡುವುದನ್ನು ಕಲಿತನು. ಚಿತ್ರಗಳ ಮುಖಾಂತರ ಭಾಷೆಯ ಆವಿಷ್ಕಾರದ ಮೂಲಕ ತನ್ನ ಸಾಧನೆಗಳನ್ನು ದಾಖಲಿಸುವುದನ್ನು ಕಲಿತನು. ತನ್ನ ಭಾಷೆ, ಸಂಸ್ಥೆಗಳು, ಆಲೋಚನಾ ಕ್ರಮಗಳು, ಯುದ್ಧಗಳು, ಸೌಂದರ್ಯಕಲೆ ಹಾಗೂ ಇವುಗಳಲ್ಲಿ ತಾನು ಪ್ರವೇಶಿಸಿ ಅನುಭವಿಸಿದನು. ಇಂಥ ಅನೇಕ ಬಗೆಯ ಹೊಸ ಆವಿಷ್ಕಾರಗಳನ್ನು ದಾಖಲಿಸುತ್ತಾ ಬಂದಿದ್ದಾನೆ. ಇಂತಹ ದಾಖಲೆಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಸ್ತುತ ಪ್ರದೇಶದಲ್ಲಿ ಹರಡಿಕೊಂಡಿವೆ. ಇವುಗಳ ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

ಇಂತಹ ದಾಖಲೆಗಳನ್ನು ಹೊಂದಿರುವ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಜಾಲಿಹಾಳ ಗ್ರಾಮಕ್ಕೆ ಸೇರಿದ ಹುಲಿಗೆಮ್ಮನ ಕೊಳ್ಳ ಪರಿಸರದಲ್ಲಿ ಕರಗಿ ಹೋಗುತ್ತಿರುವ ಸ್ಥಳೀಯ ಸಂಸ್ಕೃತಿಯ ಇತಿಹಾಸದ ಸೂಕ್ಷ್ಮತೆಗಳನ್ನು ಮತ್ತು ಅಜ್ಞಾತವಾಗಿರುವ ಘಟನೆಗಳನ್ನು ಇತಿಹಾಸ ಅಧ್ಯಯನದ ಚೌಕಟ್ಟಿನೊಳಗೆ ಸಂಗ್ರಹಿಸುವ ಮೂಲಕ ಆ ಪರಿಸರದ ಸಮಗ್ರ ಇತಿಹಾಸದ ಜೀವಂತಿಕೆಯನ್ನು . ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಜವಾಬ್ದಾರಿಯು ಜರೂರಿದೆ.

ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನವು ಅಲ್ಲಿನ ನಿರ್ದಿಷ್ಟಪಡಿಸಿದ ಭೌಗೋಳಿಕ ಪರಿಸರ ಮತ್ತು ಆಯಾ ಕಾಲದಲ್ಲಿ ಬಿಟ್ಟುಹೋಗಿರುವ ಪ್ರಾಚೀನ ಅವಶೇಷಗಳು ಮತ್ತು ಅಲ್ಲಿ ನೆಲೆಸಿರುವ ಜನರ ಜೀವನ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕೊಡುಕೊಳ್ಳುವಿಕೆಗಳಿಂದ ಪ್ರಭಾವಿತವಾಗಿರುತ್ತದೆ. ಆಯಾ ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ತಿಳಿಯಬೇಕಾದರೆ, ಅಲ್ಲಿ ದೊರೆಯುವ ಪುರಾತತ್ವ ಆಕರಗಳು ಹಾಗೂ ಎಲ್ಲಾ ಕಾಲಾವಧಿಯಲ್ಲಿ ಪ್ರಚಲಿತವಿರುವ ಐತಿಹ್ಯಗಳು, ಮೌಖಿಕ ಕಥನಗಳು ಹಾಗೂ ಸಾಹಿತ್ಯಿಕ ಆಕರಗಳು ಇತಿಹಾಸ ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ.

ಇಲ್ಲಿ ಹರಿಯುವ ನದಿಗಳು ಅನೇಕ ಸಾಮ್ರಾಜ್ಯಗಳ ಉಗಮಕ್ಕೆ ಸ್ಫೂರ್ತಿ ನೀಡಿರುವುದರೊಂದಿಗೆ ಅನೇಕ ಐತಿಹಾಸಿಕ ಘಟನೆಗಳಿಗೆ ಕಾರಣವಾಗಿವೆ. ಈ ನಾಡಿನ ಉತ್ತರ ಭಾಗದಲ್ಲಿರುವ ಬಾಗಲಕೋಟೆಯು ವಿಜಾಪೂರ ಜಿಲ್ಲೆಯಿಂದ ಬೇರ್ಪಟ್ಟ ನೂತನ ಜಿಲ್ಲೆಯಾಗಿದೆ. ಇದು ಬಾದಾಮಿ, ಬಾಗಲಕೋಟ, ಹುನಗುಂದ, ಮುಧೋಳ, ಜಮಖಂಡಿ ಮತ್ತು ಬೀಳಗಿ ಎಂಬ ಆರು ತಾಲೂಕುಗಳನ್ನು ಒಳಗೊಂಡಿದೆ.

ಬಾದಾಮಿಯು ಪ್ರಾಚೀನ ಕಾಲದಿಂದಲೂ ಐತಿಹಾಸಿಕ, ಸಾಂಸ್ಕೃತಿಕ ಪರಂಪರೆ ಹೊಂದಿರುವ ನಾಡಾಗಿದೆ. ಪ್ರಾಗೈತಿಹಾಸ ಕಾಲದ ಮಾನವನ ಚಟುವಟಿಕೆಗಳ ಕುರುಹುಗಳು ಕಂಡು ಬಂದಿವೆ. ಈ ಪ್ರದೇಶದಲ್ಲಿ ಅನೇಕ ಸಾಮ್ರಾಜ್ಯಗಳು ಆಳ್ವಿಕೆಯ ಪರಾಕಾಷ್ಠೆ ಕಂಡಿವೆ. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ರಂಗಗಳಲ್ಲಿ ಏರುಪೇರು ಭೌಗೋಳಿಕವಾಗಿ ಪ್ರಮುಖಸ್ಥಾನ ಹೊಂದಿರುವ ಈ ಪ್ರದೇಶ ಪ್ರಾಚೀನ ಕಾಲದಿಂದಲೂ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳ ಕೇಂದ್ರವಾಗಿತ್ತು.

ಬಾದಾಮಿ ಚಲುಕ್ಯರ ನೆಲೆಯಾದ ಈ ಪ್ರದೇಶದಲ್ಲಿ ನೂರಾರು ದೇವಾಲಯಗಳು ನಿರ್ಮಾಣವಾಗಿವೆ. ಈ ಪರಿಸವನ್ನು ಪ್ರಾಚೀನ ದೇವಾಲಯಗಳ ನಿರ್ಮಾಣದ ಪ್ರಯೋಗ ಶಾಲೆಯೆಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಈ ನಾಡಿನ ಕಲಾಪರಂಪರೆಯ ಪ್ರಮುಖ ಕೇಂದ್ರಗಳಲ್ಲೊಂದಾದ ಐಹೊಳೆಯು ''ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು'' ಎಂಬ ಹೆಗ್ಗಳಿಕೆ ಪಡೆದಿದೆ. ಅದರಂತೆ ಪಟ್ಟದಕಲ್ಲು ವಿಶ್ವಪರಂಪರೆಯ ತಾಣವಾಗಿದ್ದು ಮಹಾಕೂಟ, ಬನಶಂಕರಿ, ಸಿದ್ದನಕೊಳ್ಳ, ನಾಗನಾಥನಕೊಳ್ಳ, ಹುಲಿಗೆಮ್ಮನಕೊಳ್ಳ ಈ ಪರಿಸರದಲ್ಲಿರುವ ಪ್ರಾಚೀನ ಪ್ರಸಿದ್ಧ ಐತಿಹಾಸಿಕ ನೆಲೆಗಳಾಗಿವೆ.

ಐತಿಹಾಸಿಕ ಮಹತ್ವವನ್ನು ಪಡೆದಿರುವ ಈ ಪರಿಸರದಲ್ಲಿ ಹುಲಿಗೆಮ್ಮನಕೊಳ್ಳ ಪರಿಸರ ಪ್ರಾಗೈತಿಹಾಸ ಹಾಗೂ ಐತಿಹಾಸಿಕ ದೃಷ್ಟಿಯಿಂದ ಮಹತ್ವಪಡೆದುಕೊಂಡ ಪ್ರಮುಖ ಪ್ರದೇಶವಾಗಿದೆ. ಈ ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಕಟ್ಟಿಕೊಡುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಇದು ಬಾದಾಮಿಯಿಂದ ಪೂರ್ವಕ್ಕೆ ಸು. ೧೮ ಕಿ.ಮೀ. ಮತ್ತು ಪಟ್ಟದಕಲ್ಲಿನಿಂದ ಪಶ್ಚಿಮಕ್ಕೆ ೫ ಕಿ.ಮೀ. ಅಂತರದಲ್ಲಿದೆ. ಇದರ ಪರಸರದಲ್ಲಿ ಮಲಪ್ರಭಾ (ಮಲಪಹಾರಿ) ನದಿಯು ಹರಿಯುವುದು ಒಂದು ವೈಶಿಷ್ಟ್ಯ.

ಅಧ್ಯಯನದ ಉದ್ದೇಶ :

ಪ್ರಸ್ತುತ ಅಧ್ಯಯನದ ಶೀರ್ಷಿಕೆಯು ''ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳ ಪರಿಸರದ ಸಾಂಸ್ಕೃತಿಕ ಅಧ್ಯಯನ''ವಾಗಿದ್ದು, ಈ ಪರಿಸರದ ಒಟ್ಟಾರೆ ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಹಾಗೂ ಲಭ್ಯವಿರುವ ಆಧಾರಗಳ ಹಿನ್ನೆಲೆಯಲ್ಲಿ ಮರು ವಿಮರ್ಶಿಸುವುದಾಗಿದೆ. ಈ ವಿಷಯಕ್ಕೆ ಪೂರಕವಾದ ಈ ಪರಿಸರದಲ್ಲಿ ದೊರೆಯುವ ಪುರಾತತ್ವ ಆಕರಗಳನ್ನು ಸಂಗ್ರಹಿಸುವ ಹಾಗೂ ವಿಶ್ಲೇಷಣೆಯ ಮೂಲಕ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದೆ. ಪ್ರಾಗೈತಿಹಾಸ ಕಾಲದಿಂದಲೂ ಈ ಪ್ರದೇಶವು ಮಾನವನ ವಸತಿ ನೆಲೆಯಾಗಿದ್ದು ಇದಕ್ಕೆ ಸಾಕ್ಷಿಯಾಗಿ ವಿದ್ವಾಂಸರು ಪ್ರಾಚ್ಯಾವಶೇಷಗಳುಳ್ಳ ನೆಲೆಗಳನ್ನು ಪತ್ತೆಹಚ್ಚಿದ್ದಾರೆ. ಆದರೂ ಮತ್ತೆ ಹೊಸ ಹೊಸ ಪ್ರಾಗೈತಿಹಾಸ ಕಾಲದ ನೆಲೆಗಳು ಇತ್ತೀಚಿನ ಶೋಧನಾ ಕಾರ್ಯದ ಮೂಲಕ ಬೆಳಕಿಗೆ ಬಂದಿವೆ. ಈ ಪರಿಸರದ ಇತಿಹಾಸ ತಿಳಿಯಲು ಪ್ರಾಗೈತಿಹಾಸದ ಕುರುಹಗಳಲ್ಲದೇ ಈವರೆಗೆ ದೊರೆತಿರುವ ಶಾಸನಗಳು, ದೇವಾಲಯಗಳು, ವೀರಗಲ್ಲುಗಳು ನಮಗೆ ಹೆಚ್ಚಿನ ಸಹಾಯಕಾರಿಯಾಗಿ ನಿಲ್ಲುತ್ತವೆ. ಇವುಗಳನ್ನೆಲ್ಲ ಬಳಸಿಕೊಂಡು ಬೇಕಾದ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಿ ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಹಾಗೆ ವಸ್ತುನಿಷ್ಠವಾದ ಅಧ್ಯಯನ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಈ ಪರಿಸರದಲ್ಲಿಯ ಈವರೆಗಿನ ಲಭ್ಯವಿರುವ ಪ್ರಾಚ್ಯಾವಶೇಷಗಳ ಅಧ್ಯಯನದ ಜೊತೆಗೆ ಕ್ಷೇತ್ರಕಾರ್ಯ ಕೈಗೊಂಡು ಸಂದರ್ಶನಗಳ ಮೂಲಕ ಪ್ರಚಲಿತವಿರುವ ಐತಿಹ್ಯ ಮತ್ತು ಮೌಖಿಕ ಕಥನಗಳನ್ನು ದಾಖಲಿಸಿಕೊಳ್ಳಲಾಗಿದೆ. ಅಲ್ಲದೇ ಸಂಗ್ರಹಿತ ಸಂಪನ್ಮೂಲವನ್ನು ವಿವೇಚಿಸುವ ಮೂಲಕ ಸಮಗ್ರ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಇದರ ಜೊತೆಜೊತೆಗೆ ವಿವಿಧ ಕಾಲಘಟ್ಟಗಳಲ್ಲಿ ಈ ಪ್ರದೇಶದಲ್ಲಾದ ಹಾಗೂ ಅನೇಕ ಅಂಶಗಳ ಪರಿವರ್ತನೆಗೆ ಕಾರಣೀಭೂತ ಅಂಶಗಳಾಗಿ ಮಹತ್ವದ ಪ್ರಭಾವ ಬೀರಿದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳ ಬದಲಾವಣೆ ಮತ್ತು ವಿಕಾಸಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗುವುದು. ವಿನಾಶದ ಅಂಚಿನಲ್ಲಿರುವ ಈ ಪರಿಸರದ ಪುರಾತತ್ವ ಅವಶೇಷಗಳು ಹಾಗೂ ಪ್ರಚಲಿತವಿರುವ ಪ್ರಾಚೀನ ಐತಿಹ್ಯ ಮತ್ತು ಮೌಖಿಕ ಕಥನಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಬಳಸಿಕೊಂಡು ಕೆಳಸ್ತರದ ಇತಿಹಾಸ ಹಾಗೂ ಸ್ಥಳೀಯ ಅಭಿಪ್ರಾಯಗಳನ್ನು

ಆಲೋಚಿಸುವುದುರ ಮೂಲಕ ಈ ಪ್ರದೇಶದ ಅಧ್ಯಯನಗಳ ವಸ್ತುನಿಷ್ಠತೆಯನ್ನು ಮರು ವಿಮರ್ಶಿಸಿ ಅಧ್ಯಯನಗಳಿಗೆ ಹೊಸ ರೂಪ ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಯಾವುದೇ ಒಂದು ಸಂಶೋಧನೆಯು ಯಶಸ್ವಿಯಾಗಬೇಕಾದರೆ ಅದಕ್ಕೆ ವ್ಯಾಪ್ತಿ ಬಹುಮುಖ್ಯವಾದುದು. ಒಂದು ಉದ್ದೇಶಪೂರಿತ ಹಾಗೂ ನಿರ್ದಿಷ್ಟವಾದ ಸಂಶೋಧನೆಯು ಯಶಸ್ವಿಯಾಗಲೂ ಇದು ತುಂಬಾ ಸಹಾಯಕ. ಪ್ರಸ್ತುತ ಅಧ್ಯಯನದ ಶೀರ್ಷಿಕೆಯು ''ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳ ಪರಿಸರದ ಸಾಂಸ್ಕೃತಿಕ ಅಧ್ಯಯನ'' ಎಂಬುದಾಗಿದ್ದು ಇದರ ಭೌಗೋಳಿಕ ವ್ಯಾಪ್ತಿಯನ್ನು ಸಮಗ್ರ ಅಧ್ಯಯನದ ದೃಷ್ಟಿಯಿಂದ ನಿರ್ದಿಷ್ಟಪಡಿಸಿಕೊಳ್ಳಲಾಗಿದೆ. ಪೂರ್ವಕ್ಕೆ ಅಕ್ಕರಗಲ್ ಮತ್ತು ಬಾಚಿನಗುಡ್ಡದವರೆಗೆ ಪಶ್ಚಿಮಕ್ಕೆ ನಂದಿಕೇಶ್ವರ ಮತ್ತು ನೆಲವಿಗಿಯವರೆಗೆ ಮತ್ತು ದಕ್ಷಿಣಕ್ಕೆ ಶಿರಬಡಗಿ, ಗೋನಾಳ ಮತ್ತು ಮಂಗಳೂರುವರೆಗೆ ಉತ್ತರದಲ್ಲಿ ಹುಲ್ಲಿಕೇರಿ ಮತ್ತು ಹಾನಾಪೂರಗಳವರೆಗೆ ವಿಸ್ತರಿಸಿಕೊಳ್ಳಲಾಗಿದೆ. ಆದರೆ ಸಾಂದರ್ಭಿಕವಾಗಿ ಅಕ್ಕಪಕ್ಕದ ಪ್ರದೇಶಗಳನ್ನು ವಿಷಯದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಹಾಗೇ ಕಾಲಾವಧಿಯ ದೃಷ್ಟಿಯಿಂದ ಪ್ರಾಗೈತಿಹಾಸ ಕಾಲದಿಂದ ಪ್ರಚಲಿತ ಕಾಲದವರೆಗೂ ಇದರ ಅಧ್ಯಯನವನ್ನು ವಿಸ್ತರಿಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ :

ಪ್ರಸ್ತುತ ಅಧ್ಯಯನದ ಕ್ಷೇತ್ರವು ಬಾದಾಮಿ ಚಲುಕ್ಯರ ಮತ್ತು ಪ್ರಾಗೈತಿಹಾಸ ಕಾಲದ ಮಾನವನ ಚಟುವಟಿಕೆಗಳ ಪ್ರಮುಖ ಕೇಂದ್ರಗಳಲ್ಲೊಂದಾಗಿದೆ. ಇಂತಹ ಕ್ಷೇತ್ರದ ಕುರಿತು ಇದುವರೆಗೂ ಕೆಲವು ಬಿಡಿ ಲೇಖನಗಳು ಮತ್ತು ಸ್ಮರಣ ಸಂಚಿಕೆಗಳು ಕೆಲವು ಟಿಪ್ಪಣಿಗಳು ಪ್ರಕಟವಾಗಿರುವುದನ್ನು ಹೊರತುಪಡಿಸಿದರೆ ವಿವರವಾಗಿ ಪ್ರಸ್ತುತಪಡಿಸುವ ಯಾವುದೇ ರೀತಿಯ ಸಮಗ್ರವಾದ ಐತಿಹಾಸಿಕ ಅಧ್ಯಯನಗಳಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕಟಗೊಂಡಿರುವ ಲೇಖನಗಳನ್ನು ಅವಲೋಕಿಸಿ ಮುಂದೆ ಕೈಗೊಳ್ಳಬೇಕಾದ ಅಂಶಗಳನ್ನು ಮನಗಂಡು ಪ್ರಸ್ತುತ ಪ್ರಬಂಧವನ್ನು ರೂಪಿಸಿ ವಿಸ್ತರಿಸಲಾಗಿದೆ.

ಈ ಪರಿಸರವು ಸಾಂಸ್ಕೃತಿಕವಾಗಿ ಮತ್ತು ಪ್ರಾಚ್ಯಾವಶೇಷಗಳಿಂದ ಶ್ರೀಮಂತವಾಗಿದ್ದು, ಲಭ್ಯವಿರುವ ಆಕರಗಳನ್ನು ಕ್ರೋಢೀಕರಿಸಿ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಈ ಪರಿಸರದಲ್ಲಿ ದೊರೆಯುವ ಮೌಖಿಕ ಕಥನಗಳು ಹಾಗೂ ಐತಿಹ್ಯಗಳನ್ನು ಉಪಯೋಗಿಸಿಕೊಂಡು ಪ್ರಸ್ತುತ ಇತಿಹಾಸದ ಅಧ್ಯಯನದ ಮಹತ್ವವನು ಹೆಚ್ಚಿಸಲಾಗಿದೆ. ಈ ಅಧ್ಯಯನದ ಮುಲಕ ಕಂಡುಕೊಳ್ಳುವ ಫಲಿತಾಂಶಗಳನ್ನು ಒಟ್ಟುಗೂಡಿಸಿಕೊಂಡು ವಿಷಯದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾಗಿದೆ. ಈ ಪರಿಸರದ ಎಲ್ಲ ಗ್ರಾಮಗಳಲ್ಲಿರುವ

ಆಕರಗಳನ್ನು ಪರಿಚಯಿಸುವ ಹಾಗೂ ವಿಶ್ಲೇಷಿಸುವ ಮಹತ್ವದ ಕಾರ್ಯವನ್ನು ಈ ಪ್ರಬಂಧದ ರಚನೆಯ ಮುಖ್ಯ ಉದ್ದೇಶವಾಗಿ ಇಟ್ಟುಕೊಂಡು ಅದನ್ನು ಸಾಧಿಸಲಾಗಿದೆ.

ಅಧ್ಯಯನದ ವಿಧಾನ :

ಹುಲಿಗೆಮ್ಮನಕೊಳ್ಳ ಪರಿಸರದ ಸಾಂಸ್ಕೃತಿಕ ಅಧ್ಯಯನವು ಮುಖ್ಯವಾಗಿ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಅಧ್ಯಯನದ ವ್ಯಾಪ್ತಿಗೆ ಒಳಪಡುವ ಪ್ರತಿಯೊಂದು ಪ್ರದೇಶಗಳಿಗೆ ನೇರವಾಗಿ ಭೇಟಿ ನೀಡಿ ದೊರೆಯುವ ಸಂಪನ್ಮೂಲ ಅವಶೇಷಗಳನ್ನು ಪರಿಶೀಲಿಸಿ ದಾಖಲಿಸಿಕೊಳ್ಳಲಾಗಿದೆ. ಮೌಖಿಕ ಕಥನಗಳನ್ನು ಮತ್ತು ಐತಿಹ್ಯಗಳನ್ನು ಹೊಂದಿದ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯವನ್ನು ಸಂಗ್ರಹಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ದೊರೆಯುವ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಪ್ರಸ್ತುತದಲ್ಲಿರುವ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನದ ವಿಧಾನಗಳನ್ನು ಅಳವಡಿಸಿಕೊಂಡು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಕರಗಳನ್ನು ಸಂಗ್ರಹಿಸಿ ವಿಷಯಾನುಸಾರ ಮತ್ತು ಅವಧಿಯನುಸಾರ ವಿಶ್ಲೇಷಿಸಿ ಸಂಯೋಜಿಸುವ ಮೂಲಕ ಫಲಿತಾಂಶಗಳನ್ನುಕಂಡುಕೊಳ್ಳಲಾಗಿದೆ. ಬರುವ ಫಲಿತಗಳ ಆಧಾರಗಳಿಂದ ಈ ಪ್ರದೇಶದ ಸಾಂಸ್ಕೃತಿಕ ಚಿತ್ರಣವನ್ನು ವಸ್ತುನಿಷ್ಠವಾದ ಮತ್ತು ವೈಜ್ಞಾನಿಕವಾದ ವಿಧಾನಗಳನ್ನು ಈ ಕಿರು ಪ್ರಬಂಧ ರಚನೆಯಲ್ಲಿ ಪ್ರಾಮಾಣಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಅಧ್ಯಯನಗಳ ಸಮೀಕ್ಷೆ :

ಪ್ರಸ್ತುತ ಹುಲಿಗೆಮ್ಮನಕೊಳ್ಳ ಪರಿಸರವು ಬಾದಾಮಿ ಕ್ಷೇತ್ರಕ್ಕೆ ಒಳಪಡುವದರಿಂದ ಈ ಪರಿಸರದ ಅಧ್ಯಯನಗಳಲ್ಲಿ ಒಂದಾದ ದೇವಾಲಯಗಳು ಪುರಾತತ್ವ ನೆಲೆಗಳು ಮತ್ತು ಇಲ್ಲಿಯ ಜನರ ಸಾಂಸ್ಕೃತಿಯ ಅಧ್ಯಯನ ಮಾಡುವುದು ಅರ್ಥಪೂರ್ಣ. ಹುಲಿಗೆಮ್ಮಕೊಳ್ಳ ಪರಿಸರದ ಕುರಿತು ಅಧ್ಯಯನವಾಗದೇ ಇರುವುದು ಪ್ರಸ್ತುತ ಈ ಅಧ್ಯಯನಕ್ಕೆ ಮೂಲ ಕಾರಣವೆನ್ನಬಹುದು.

ಈವರೆಗೆ ಬಾದಾಮಿ ತಾಲೂಕು, ಬಾದಾಮಿ ಚಲುಕ್ಯರಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಲೇಖನಗಳಲ್ಲಿ ಈ ಪರಿಸರವು ಒಂದು ಭಾಗವಾಗಿ ಸಾಂದರ್ಭಿಕ ಉಲ್ಲೇಖಗಳಿಗೆ ಮಾತ್ರ ಸೀಮಿತವಾಗಿ ಕಾಣುತ್ತದೆ. ಈ ಪ್ರದೇಶಕ್ಕೆ ಸಂಬಂಧಿಸಿದ ಲೇಖನಗಳು, ಕೃತಿಗಳು, ಕೆಲವು ಅಂಶಗಳಿಗೆ ಮಾತ್ರ ಮಹತ್ವ ನೀಡಿವೆ. ಅಲ್ಲದೇ ಇಲ್ಲಿಯ ದೇವಾಲಯ ವಾಸ್ತು ಸ್ವರೂಪದ ಅಧ್ಯಯನ, ಶಾಸನ ಅಧ್ಯಯನ ಮತ್ತು ರೇಖಾಚಿತ್ರಗಳ ಬಗೆಗೆ ಸ್ಪಷ್ಟವಾಗಿ ಗುರುತಿಸುವ ಪ್ರಯತ್ನಗಳು ಅಷ್ಟಾಗಿ ಆಗಿರುವುದಿಲ್ಲ. ಈ ಕೊರತೆಯನ್ನು ನೀಗಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ

ಈ ವರೆಗಿನ ಅಧ್ಯಯನ ಪ್ರಮುಖ ರಾಜ ಮನೆತನಗಳ ಬಗೆಗೆ ನಾಡು-ನುಡಿ,. ಸಂಸ್ಕೃತಿಯ ಬಗೆಗೆ ಹಲವಾರು ಪ್ರಕಟಣೆಗಳು ಹೊರಬಂದಿವೆ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಅದರಲ್ಲೂ ಹೆಚ್ಚಾಗಿ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟಕ್ಕೆ ಸಂಬಂಧಿಸಿದಂತೆ, ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳಲ್ಲಿ ಸಾಕಷ್ಟು ಮಾಹಿತಿಗಳು ದೊರಕುತ್ತವೆ.

ಪ್ರಾಥಮಿಕ ಆಕರಗಳಲ್ಲಿ ಮುಖ್ಯವಾಗಿ ಭಾರಿತೀಯ ಪುರಾತತ್ವ ಶಾಸನಶಾಸ್ತ್ರದ ವಾರ್ಷಿಕ ವರದಿಗಳಲ್ಲಿ, ದಕ್ಷಿಣ ಭಾರತೀಯ ಶಾಸನಶಾಸ್ತ್ರದ ವರದಿಗಳಲ್ಲಿ ಚಾಲುಕ್ಯರ ಸಂಶೋಧನಾ ಸಂಪುಟಗಳಲ್ಲಿ, ಶಾಸನಗಳ, ಉತ್ಖನನಗಳ ಹಾಗೂ ಸ್ಮಾರಕಗಳ ಕುರಿತು ಮಾಹಿತಿಗಳು ದೊರೆಯುತ್ತವೆ. ಬಾದಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಹಲವಾರು ವಿದ್ವಾಂಸರುಗಳ, ಗ್ರಂಥಗಳು, ಲೇಖನಗಳು ಪ್ರಕಟವಾಗಿವೆ. ಎಸ್. ರಾಜಶೇಖರವರ ''ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ'' ಕೃತಿಯಲ್ಲಿ ಬಾದಾಮಿ ಚಲುಕ್ಯರ ವಾಸ್ತುಶಿಲ್ಪದ ಬಗೆಗೆ, ಕೆ. ಬಿ. ಶಿವತಾರಕರ ''ಕರ್ನಾಟಕದ ಪುರಾತತ್ವ ನೆಲೆಗಳು'' ಎಂಬ ಕೃತಿಯಲ್ಲಿ ಕಳೆದ ಶತಮಾನದ ಪೂರ್ವಾರ್ಧದಿಂದೀಚೆಗೆ ಕರ್ನಾಟಕದಲ್ಲಿ ಶೋಧಿತವಾಗಿ ವರದಿಯಾಗಿರುವ ವಿವಿಧ ಶಿಲಾಯುಗ ಸಂಸ್ಕೃತಿಯ ವಸತಿನೆಲೆಗಳ ವರದಿ ನೀಡಿದ್ದಾನೆ. ಇದರಲ್ಲಿ ಹುಲಿಗೆಮ್ಮಕೊಳ್ಳ ಪರಿಸರದಲ್ಲಿ ಬೆಳಕಿಗೆ ಬಂದಿರುವ ನೆಲೆಗಳ ಉಲ್ಲೇಖಗೊಂಡಿವೆ. ಎ. ಎಂ. ಅಣ್ಣಿಗೇರಿ ಅವರು ''ಬಾದಾಮಿ ಶಿಲ್ಪಕಲೆ'' ಕೃತಿಯಲ್ಲಿ ದೇವಾಲಯಗಳು ಮತ್ತು ಶಿಲ್ಪಗಳನ್ನು ಪರಿಚಯಿಸಿದ್ದಾರೆ. ಕರವೀರಪ್ರಭು ಕ್ಯಾಲಕೊಂಡ ಅವರ ''ಚಾಲುಕ್ಯ ವಾಸ್ತುಶಿಲ್ಪ ವೈಭವ'' ಕೃತಿಯಲ್ಲಿ ಚಾಲುಕ್ಯರ ದೇವಾಲಯಗಳ ಶೈಲಿ ಮತ್ತು ಶಿಲ್ಪಗಳನ್ನು ಪರಿಚಯಿಸಿದ್ದಾರೆ. ಶೀಲಾಕಾಂತ ಪತ್ತಾರ ಅವರ ''ಬಾದಾಮಿ ಸಾಂಸ್ಕೃತಿಕ ಅಧ್ಯಯನ'' ಎಂಬ ಕೃತಿಯಲ್ಲಿ ದೇವಾಲಯಗಳು, ಶಿಲ್ಪಗಳು ಮತ್ತು ಈ ಪರಿಸರ ಪ್ರಾಚೀನ ಸಂಸ್ಕೃತಿಯ ಬಗೆಗೆ ಪರಿಚಯಿಸಿದ್ದಾರೆ. ಎಂ. ಚಿದಾನಂದ ಮೂರ್ತಿ ಅವರ ''ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'' ಕೃತಿಯಲ್ಲಿ ಮತ್ತು ಇನ್ನು ಮುಂತಾದ ವಿದ್ವಾಂಸರುಗಳು ಬಾದಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಕಟನೆಗಳನ್ನು ಹೊರತಂದಿದ್ದಾರೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದೇವಾಲಯಗಳು, ಶಾಸನಗಳು, ನಾಣ್ಯಗಳು ಇನ್ನು ಮುಂತಾದ ವಿಚಾರ ಕುರಿತು ಹಲವಾರು ಸಂಶೋಧನಾ ಲೇಖನಗಳು, ಗ್ರಂಥಗಳು ಪ್ರಕಟವಾಗಿದ್ದಾಗ್ಯೂ ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ಇನು ಪ್ರಕಟವಾಗದ ದೇವಾಲಯಗಳು, ಶಿಲ್ಪಗಳು, ಶಾಸನಗಳು, ರೇಖಾಚಿತ್ರಗಳು, ವರ್ಣಚಿತ್ರಗಳು ಇವೆ. ಈ ಹಿನ್ನೆಲೆಯನ್ನು ಆಧರಿಸಿ ಈ ಪರಿಸರದ ಕುರಿತಾದ ವಿಚಾರಗಳನ್ನು ಮರುಪರಿಶೀಲಿಸಿ ಸಮಗ್ರವಾಗಿ ವಿವೇಚನೆ ಮಾಡುವುದಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ''ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳ ಪರಿಸರದ ಸಾಂಸ್ಕೃತಿಕ ಅಧ್ಯಯನ'' ಎಂಬ ಪ್ರಬಂಧವನ್ನು ಅಧ್ಯಯನದ ಅನುಕೂಲತೆಗಾಗಿ ಪ್ರಮುಖವಾಗಿ ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಈ

ಅಧ್ಯಯನಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಉಪವಿಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಈ ಅಧ್ಯಾಯಗಳು ಒಳಗೊಂಡಿರುವ ವಿಷಯ ಮತ್ತು ಸ್ವರೂಪ ಈ ಕೆಳಗಿನಂತಿವೆ.

ಅಧ್ಯಾಯ-೧ ಪ್ರಸ್ತಾವನೆ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿ, ವಿಧಾನ, ಮಹತ್ವ ಮತ್ತು ಅಧ್ಯಯನದ ಸ್ವರೂಪ ಕುರಿತು ವಿವರಿಸಲಾಗಿದೆ.

ಅಧ್ಯಾಯ-೨ ಭೌಗೋಳಿಕ ಪರಿಸರ ಮತ್ತು ಪ್ರಾಗೈತಿಹಾಸಕಾಲ

ಪ್ರಸ್ತುತ ಹುಲಗೆಮ್ಮನಕೊಳ್ಳ ಪರಿಸರವು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವುದರಿಂದ ಅಲ್ಲಿಯ ಭೌಗಳಿಕ ಪರಿಸರ ಭೂರಚನೆ, ವಾಯುಗುಣ, ಬೆಟ್ಟಗುಡ್ಡಗಳು, ಜಲಸಂಪತ್ತು, ಖನಿಜಸಂಪತ್ತು, ನದಿಗಳು, ಹಳ್ಳಕೊಳ್ಳಗಳು ಕುರಿತು ಚರ್ಚಿಸಲಾಗಿದೆ.

ಈ ಪ್ರದೇಶವು ಮಲಪ್ರಭಾ ನದಿದಂಡೆಯ ಮೇಲಿರುವುದರಿಂದ ಈ ಪರಿಸರ ಮತ್ತು ಇದರ ಸುತ್ತಮುತ್ತ ಪ್ರಾಗೈತಿಹಾಸ ಕಾಲದ ಮಾನವನ ನೆಲೆಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿವೆ. ಈ ಪ್ರದೇಶವು ಆದಿಮಾನವನು ನೆಲೆಸಲು ಉತ್ತಮ ವಾತಾವರಣ ಕಲ್ಪಿಸಿತ್ತೆಂದು ಇದರಿಂದ ತಿಳಿದುಬರುತ್ತದೆ. ಅಲ್ಲಲ್ಲಿ ಬೆಟ್ಟಗುಡ್ಡಗಳಲ್ಲಿ ನೀರಿನ ಮೂಲಗಳು, ಹಳ್ಳಕೊಳ್ಳಗಳು, ಗುಹೆಗಳು ಕಂಡುಬರುತ್ತವೆ. ಪ್ರಾಚೀನ ಕಾಲದಲ್ಲಿ ಈ ಪರಿಸರವು ಫಲವತ್ತತೆಯಿಂದ ಕೂಡಿದ್ದು ಮಾನವನ ವಾಸಕ್ಕೆ ಯೋಗ್ಯವಾದ ವಾತಾವರಣ ಒದಗಿಸಿತ್ತು ಎಂಬದು ತಿಳಿದು ಬರುತ್ತದೆ.

ಅಧ್ಯಾಯ-೩ ಇತಿಹಾಸ ಕಾಲ

ಈ ಅಧ್ಯಾಯದಲ್ಲಿ ಈ ಪರಿಸರವು ಚಾರಿತ್ರಿಕ ಯುಗದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಎಲ್ಲಾ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿದೆ. ಇವರಲ್ಲಿ ಪ್ರಮುಖವಾಗಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಲುಕ್ಯರು, ಪಲ್ಲವರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ನೊಳಂಬರು, ಕಳಚೂರಿಗಳು, ಸೇವುಣರು, ಸಿಂಧರು, ರಟ್ಟರು, ಚೋಳರು, ವಿಜಯನಗರದ ಅರಸರು, ಆದಿಲ್‌ಶಾಹಿಗಳು, ಬ್ರಿಟಿಷರು ಮುಂತಾದವರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದು ಅವರುಗಳ ರಾಜಕೀಯ ಇತಿಹಾಸ ರೂಪಿಸಲು ಸ್ಥಳೀಯವಾಗಿ ಸಿಗುವ ಮತ್ತು ಈ ಪರಿಸರದ ಸುತ್ತಲೂ ದೊರೆಯುವ ಶಾಸನಗಳನ್ನು, ಪುರಾತತ್ವ ಆಕರಗಳನ್ನು ಬಳಸಿಕೊಂಡು ಇತಿಹಾಸ ಕಟ್ಟಿಕೊಡುವ ಪ್ರಯತ್ನಮಾಡಲಾಗಿದೆ.

ಅಧ್ಯಾಯ-೪ : ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿ

ಈ ನಾಲ್ಕನೆಯ ಅಧ್ಯಾಯದಲ್ಲಿ ಶಾಸನಗಳನ್ನು, ಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ವರ್ಗವ್ಯವಸ್ಥೆ, ಜಾತಿಪದ್ಧತಿ, ಆಡಳಿತ, ಶೈಕ್ಷಣಿಕ ಸ್ಥಿತಿ-ಗತಿ, ಆಚಾರ, ವಿಚಾರ, ಜಾತ್ರೆ, ಹಬ್ಬ, ಹರಿದಿನಗಳನ್ನು ಕುರಿತು ವಿವೇಸಲಾಗಿದೆ. ಪ್ರಮುಖ ಧರ್ಮಗಳು ಅವುಗಳ ನಡುವಿನ ಸಂಬಂಧ ಸಮಾಜದಲ್ಲಿ ಧರ್ಮದ ಪಾತ್ರ ಮುಂತಾದವುಗಳ ಪ್ರಭಾವ ಕುರಿತು ತಿಳಿಸಲಾಗಿದೆ.

ಆರ್ಥಿಕ ವ್ಯವಸ್ಥೆಯಲ್ಲಿ ಪ್ರಾಚೀನ ಕಾಲದಿಂದಲೂ ಈ ಪರಿಸರದಲ್ಲಿ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳು, ನೀರಾವರಿ ವ್ಯವಸ್ಥೆ, ವ್ಯಾಪಾರ, ವಾಣಿಜ್ಯ ಮತ್ತು ತೆರಿಗೆ ವ್ಯವಸ್ಥೆ, ಜನಸಾಮಾನ್ಯರ ಸ್ಥಿತಗತಿ ಹೀಗೆ ಮುಂತಾದ ಅಂಶಗಳ ಕುರಿತು ವಿವರಿಸಲಾಗಿದೆ.

ಅಧ್ಯಾಯ-೫ : ಕಲೆ ಮತ್ತು ವಾಸ್ತುಶಿಲ್ಪ

ಪ್ರಸ್ತುತವಾಗಿ ಈ ಐದನೇ ಅಧ್ಯಾಯದಲ್ಲಿ ವಿವಿಧ ರಾಜಮನೆತನಗಳು ಪ್ರದೇಶಕ್ಕೆ ನೀಡಿದ ಕಲೆ ಮತ್ತು ವಾಸ್ತುಶಿಲ್ಪ ಕುರಿತು ಮತ್ತು ವರ್ಣಚಿತ್ರಕಲೆ ಕುರಿತು ವಿವರಿಸಲಾಗಿದೆ. ಇದರಲ್ಲಿ ದೇವಾಲಯಗಳು, ಶಿಲ್ಪಗಳು, ಮೂರ್ತಿಶಿಲ್ಪಗಳ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಮತ್ತು ವೀರಗಲ್ಲು, ಮಹಾಸತಿ ಕಲ್ಲುಗಳು, ರೇಖಾಚಿತ್ರಗಳ ಕುರಿತು ವಿವರಿಸಲಾಗಿದೆ.

ಅಧ್ಯಾಯ-೬

ಈ ಅಧ್ಯಾಯದಲ್ಲಿ ಸ್ಥಳಾಧಾರಿತ ಐತಿಹ್ಯಗಳು, ಮೌಖಿಕ ಕಥನಗಳು ಮತ್ತು ಈ ಪರಿಸರದಲ್ಲಿ ದೊರೆತ ಶಾಸನಗಳು ಮತ್ತು ವೀರಗಲ್ಲುಗಳ ಕುರಿತು ತಿಳಿಸಲಾಗಿದೆ.

ಅಧ್ಯಾಯ-೭ : ಸಮಾರೋಪ

ಇದು ಕೊನೆಯ ಅಧ್ಯಾಯವಾಗಿದೆ. ಇದರಲ್ಲಿ ಒಟ್ಟಾರೆ ಅಧ್ಯಯನದ ಸಂಕ್ಷಿಪ್ತ ರೂಪ ನೀಡಲಾಗಿದೆ. ಪ್ರಸ್ತುತ ಈ ಕಿರು ಪ್ರಬಂಧದಲ್ಲಿ ಕಂಡುಕೊಂಡ ಪ್ರಮುಖ ಸಂಗತಿಗಳ ಸಮೀಕ್ಷೆಯನ್ನು, ಫಲಿತಾಂಶಗಳನ್ನು ಮತ್ತು ನಿರ್ಧಾರಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ-ಎರಡು

ಭೌಗೋಳಿಕ ಪರಿಸರ ಮತ್ತು ಪ್ರಾಗೈತಿಹಾಸ

ಇತಿಹಾಸಕ್ಕೆ ಭೂಗೋಲವೇ ನೆಲೆ ಎಂಬಂತೆ ಯಾವುದೇ ಜನಾಂಗದ ಸಂಸ್ಕೃತಿಯು ಅದು ನೆಲೆಯೂರಿದ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಅಲ್ಲಿಯ ಭೌಗೋಳಿಕ ಲಕ್ಷಣಗಳು ಮಾನವ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸುತ್ತದೆಂಬುದು ಸರ್ವವಿಧಿತ.[1] ಮಾನವನ ಸಂಸ್ಕೃತಿಯ ಮೇಲೆ ಆಯಾ ಪ್ರದೇಶದ ಪರಿಸರದ ಪ್ರಭಾವವಿರುತ್ತದೆ. ಒಂದು ಪ್ರದೇಶದ ಕುರಿತು ಅಧ್ಯಯನ ಕೈಕೊಳ್ಳುವ ಮೊದಲು ಆ ಪ್ರದೇಶದ ಭೌಗೋಳಿಕ ಲಕ್ಷಣಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ. ಏಕೆಂದರೆ, ಅಲ್ಲಿಯ ಭೌಗೋಳಿಕ ವೈಶಿಷ್ಟ್ಯತೆಗಳು ಆಯಾ ಪ್ರದೇಶದ ಜನ ಜೀವನ, ಆ ಪರಿಸರದ ಸ್ವರೂಪ ಮತ್ತು ಸ್ವಭಾವಗಳನ್ನು ನಿರ್ಮಿಸುತ್ತದೆ. ಹೀಗಾಗಿ ಅಲ್ಲಿಯ ಭೌಗೋಳಿಕತೆಯ ಕುರಿತು ಮೊದಲು ಅಧ್ಯಯನ ಮಾಡುವುದು ಸೂಕ್ತವಾದುದು. ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಮೊದಲ ವಾಸಸ್ಥಾನವಾಗಿ ಬೆಟ್ಟದಲ್ಲಿಯ ಕಲ್ಲುಬಂಡೆಯ ಆಸರೆ, ಗವಿ ಮತ್ತು ಗಿಡದ ಪೊಟರೆಯ ಆಸರೆಯನ್ನು ಅವಲಂಬಿಸಿದ್ದ. ಹಂತ-ಹಂತವಾಗಿ ಈತ ಬೆಟ್ಟದಿಂದ ಕೆಳಗಿಳಿದು ನದಿ ಪಾತ್ರದಲ್ಲಿ ನೆಲೆಸತೊಡಗಿದ. ಹೀಗೆ ನದಿದಂಡೆಯಲ್ಲಿ ನೆಲೆಸ ತೊಡಗಿದ ಮಾನವನು ಅಲ್ಲಿಯೇ ಬೃಹತ್ ನಾಗರಿಕತೆಯನ್ನು ನಿರ್ಮಿಸಿದ ಉದಾಹರಣೆಗಳು ಸಾಕಷ್ಟು. ಈ ಹಿನ್ನೆಲೆಯಲ್ಲಿ ಮಾನವನ ಇತಿಹಾಸ ರಚನೆಯಲ್ಲಿ ಭೌಗೋಳಿಕ ಲಕ್ಷಣಗಳನ್ನು ಮರೆತು ಖಚಿತವಾದ ಚರಿತ್ರೆಯನ್ನು ರಚಿಸುವುದು ಅಸಾಧ್ಯವಾದ ಮಾತು.

ಜಗತ್ತಿನ ಪ್ರತಿಯೊಂದು ಪ್ರಾಚೀನ ನಾಗರಿಕತೆಗಳ ಉಗಮ ಮತ್ತು ವಿಕಾಸ ನದಿ ದಂಡೆಗಳ ಮೇಲೆ ಆಗಿರುವುದನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಮಹತ್ವವನ್ನು ತಿಳಿಯಬಹುದು. ಯಾವುದೇ ಒಂದು ಪ್ರದೇಶದಲ್ಲಿ ಮಾನವ ನೆಲೆನಿಲ್ಲಲು ಅಲ್ಲಿಯ ಭೌಗೋಳಿಕ ಅಂಶಗಳಾದ ಬೆಟ್ಟಗುಡ್ಡ, ಪರ್ವತಶ್ರೇಣಿ, ಭೂಮಿಯ ರಚನೆ, ಹವಾಗುಣ, ಹರಿಯುವ ನದಿಗಳು, ಖನಿಜ ಸಂಪತ್ತು, ತೀರ ಪ್ರದೇಶಗಳು, ಅರಣ್ಯ ಸಂಪತ್ತು ಮುಂತಾದವುಗಳು ಕಾರಣವಾಗುತ್ತವೆ ಮತ್ತು ಈ ಅಂಶಗಳು ಅಲ್ಲಿನ ಜನಜೀವನ, ಸಾಂಸ್ಕೃತಿಕ ವಿಚಾರಗಳನ್ನು ಪ್ರಬುದ್ಧಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಪ್ರಸ್ತುತ ''ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳ ಪರಿಸರದ ಸಾಂಸ್ಕೃತಿಕ ಅಧ್ಯಯನ'' ದಲ್ಲಿ ಅಲ್ಲಿಯ ಭೌಗೋಳಿಕ ಲಕ್ಷಣಗಳ ಪ್ರಭಾವವನ್ನು ಅರಿಯುವುದು ಪ್ರಮುಖವಾಗಿದೆ.

ಪ್ರಸ್ತುತ ಅಧ್ಯಯನಕ್ಕೊಳಪಟ್ಟ ಪ್ರದೇಶವು ಕರ್ನಾಟಕದ ಉತ್ತರ ಭಾಗದಲ್ಲಿರುವ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿದೆ. ಇದು ಐತಿಹಾಸಿಕವಾಗಿ ವೈವಿಧ್ಯಮಯವಾದ ವೈಶಿಷ್ಟ್ಯತೆಗಳನ್ನು ಹೊಂದಿರುವ ಪ್ರದೇಶವಾಗಿದೆ. ಅಲ್ಲಲ್ಲಿ ವ್ಯಾಪಿಸಿರುವ ಕಿರುಬೆಟ್ಟಗಳ ಶ್ರೇಣಿಗಳು ಈ ಪರಿಸರದ ಒಂದು ವೈಶಿಷ್ಟ್ಯ.

ಈ ಬಾಗಲಕೋಟ ಜಿಲ್ಲೆಯು ಬಿಜಾಪುರ ಜಿಲ್ಲೆಯಿಂದ ಬೇರ್ಪಟ್ಟು ನೂತನವಾಗಿ ರಚಿತವಾದ ಜಿಲ್ಲೆಯಾಗಿದೆ. ಈ ಜಿಲ್ಲೆಯು ಬಾದಾಮಿ, ಬೀಳಗಿ, ಬಾಗಲಕೋಟ, ಜಮಖಂಡಿ, ಮುಧೋಳ ಮತ್ತು ಹುನಗುಂದ ಎಂಬ ಆರು ತಾಲೂಕು ಕೇಂದ್ರಗಳನ್ನು ಒಳಗೊಂಡಿದೆ. ಇವುಗಳಲ್ಲಿ ಬಾದಾಮಿಯು ಪ್ರಾಚೀನ ಕಾಲದಿಂದಲೂ ರಾಜಕೀಯ, ವ್ಯಾಪಾರ, ವಾಣಿಜ್ಯ ಚಟುವಟಿಕೆಯ ಕೇಂದ್ರವಷ್ಟೇ ಅಲ್ಲದೇ ರಾಜಧಾನಿಯಾಗಿಯೂ ಪ್ರತೀತಿ ಪಡೆದ ಸ್ಥಳವಾಗಿದೆ.

ಕ್ರಿ.ಶ. ೧೫೦ರ ಸುಮಾರಿಗೆ ಭಾರತಕ್ಕೆ ಭೇಟಿ ನೀಡಿದ ಗ್ರೀಕ್ ದೇಶದ ಭೂಗೋಳ ತಜ್ಞನಾದ ಟಾಲೆಮಿಯು ತನ್ನ ''A Guide to Geogrpahy'' ಎಂಬ ಗ್ರಂಥದಲ್ಲಿ ಬಾದಾಮಿ (ಬೊದೋಮಿಯೋ) ಪೇತರಗಲ್ (ಪಟ್ಟದಕಲ್ಲ್) ಮುದಗಲ್[೩] ಮುಂತಾದ ಸ್ಥಳಗಳನ್ನು ಉಲ್ಲೇಖಿಸಿದ್ದಾನೆ. ಇಂತಹ ಪ್ರದೇಶಗಳ ಮಧ್ಯದಲ್ಲಿರುವ ಹುಲಿಗೆಮ್ಮನಕೊಳ್ಳ ಪರಿಸರವು ಬಾದಾಮಿಯಿಂದ ಪೂರ್ವಕ್ಕೆ ೧೮ ಕಿ.ಮೀ. ಅಂತರದಲ್ಲಿದೆ ಮತ್ತು ಪಟ್ಟದಕಲ್ಲ್‌ನಿಂದ ೫ ಕಿ.ಮೀ. ಅಂತರದಲ್ಲಿ ಪಶ್ಚಿಮದಲ್ಲಿದ್ದು ೧೫°-೫೫' ಉತ್ತರ ಅಕ್ಷಾಂಶ ಮತ್ತು ೭೫°-೪೧' ಪೂರ್ವ ರೇಖಾಂಶದ್ ವ್ಯಾಪ್ತಿಯಲ್ಲಿ ಬರುತ್ತದೆ.

ಹವಾಮಾನಕ್ಕೆ ಸಂಬಂಧಪಟ್ಟಂತೆ ಈ ಪ್ರದೇಶವು ಮಾನ್ಸೂನ್ ಹವಾಮಾನ ಕ್ಷೇತ್ರದಲ್ಲಿ ಬರುತ್ತಿದ್ದರೂ ಮಳೆಯ ಪ್ರಮಾಣ ವಾರ್ಷಿಕ ಸರಾಸರಿ ೫೦ ಸೆಂ.ಮೀ. ದಿಂದ ೭೦ ಸೆಂ.ಮೀ.[೫] ಆದ್ದರಿಂದ ಈ ಪ್ರದೇಶವನ್ನು ಅರೆ ಒಣಗಿದ ಹವೆಯ ಪ್ರದೇಶವೆಂದು ಕರೆಯಬಹುದು.

ಭೂರಚನೆ :

ಹುಲಿಗೆಮ್ಮನಕೊಳ್ಳ ಪರಿಸರದ ಭೂರಚನೆಯು ಸುತ್ತಲೂ ಬೆಟ್ಟ ಗುಡ್ಡಗಳಿಂದ ಕೂಡಿದ್ದು ಮಧ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಸಮತಟ್ಟಾದ ಭೂಮಿಯು ಕಂಡುಬರುತ್ತದೆ. ಮುಖ್ಯವಾಗಿ ಇಲ್ಲಿಯ ಮಣ್ಣು ಮರಳುಮಿಶ್ರಿತ ಕೆಂಪು ಮತ್ತು ಕಪ್ಪು (ಎರೆ) ಮಣ್ಣಿನಿಂದ ಕೂಡಿದೆ. ಈ ಪ್ರದೇಶದ ಜೀವನದಿಯೆನಿಸಿರುವ ಮಲಪ್ರಭಾ ನದಿಯು ಇಲ್ಲಿ ಹರಿಯುವುದರಿಂದ ಇದರ ಎರಡು ಇಕ್ಕೆಲ್ಲಗಳಲ್ಲಿ ರೇವೆ ಮಣ್ಣನ್ನು ತಂದು ಹರಡುತ್ತದೆ. ಕೃಷಿಯು ಇಲ್ಲಿನ ಜನರ ಮುಖ್ಯ ಉದ್ಯೋಗವಾಗಿದ್ದು ಇದು ಮಾನ್ಸೂನ್ ಮಳೆಯೊಂದಿಗೆ ಆಡುವ ಜೂಜಾಟವೆಂದು ಹೇಳಬಹುದು. ನದಿಯು ಸಹ ಇದರಿಂದ ಹೊರತಾಗಿಲ್ಲ. ಈ ನದಿಗೆ ಅಲ್ಲಲ್ಲಿ ನೀರಿನ ತಡೆಗೋಡೆ ನಿರ್ಮಿಸಿದ್ದರು ಅದು ಹೆಚ್ಚು ಮಳೆಯ ನೀರನ್ನು ಅವಲಂಬಿಸಿದೆ. ಹೀಗಾಗಿ ಇಲ್ಲಿಯ ಜನರು ಖುಷ್ಕಿ ಬೆಳೆಯನ್ನು ಹೆಚ್ಚು ಬೆಳೆಯುವರು.

ಸಜ್ಜೆ, ನವಣೆ, ತೊಗರಿ, ನೆಲಗಡಲೆ (ಶೇಂಗಾ), ಸೂರ್ಯಕಾಂತಿ, ಮೆಕ್ಕೆಜೋಳ, ಹೆಸರು, ಹುರಳಿ, ಕಡಲೆ, ಜೋಳ, ಅಲಸಂದಿ, ಅವರೆ ಮುಂತಾದ ಬೆಳೆಗಳನ್ನು ಬೆಳೆಯುವರು. ಇತ್ತೀಚೆಗೆ ನೀರಾವರಿಯ ಅನುಕೂಲತೆ ಪಡೆದ ಪ್ರದೇಶದಲ್ಲಿ ಹತ್ತಿ, ಕಬ್ಬು, ರೇಷ್ಮೆ, ಈರುಳ್ಳಿ (ಉಳ್ಳಾಗಡ್ಡೆ)ಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ.

ಜಲಸಂಪತ್ತು :

ಜಲಸಂಪತ್ತು ಮಾನವನ ಪ್ರತಿಯೊಂದು ಚಟುವಟಿಕೆಗಳಿಗೆ ಅವಶ್ಯಕ. ಇಲ್ಲಿ ಪ್ರಮುಖವಾಗಿ ನದಿ, ಕೆರೆ, ಬಾವಿ, ಕೊಳವೆಬಾವಿ, ಪ್ರಮುಖವಾಗಿ ಕಂಡುಬರುತ್ತವೆ. ಮಲಪ್ರಭಾ ನದಿಯು ಈ ಪ್ರದೇಶದಲ್ಲಿ ಹರಿಯುವ ಏಕೈಕ ಪ್ರಮುಖ ನದಿಯಾಗಿದೆ. ಇವುಗಳು ಪ್ರಾಚೀನ ಕಾಲದಿಂದ ಇಲ್ಲಿ ಜನಜೀವನಕ್ಕೆ ನೀರಿನ ಆಸರೆಯನ್ನು ಒದಗಿಸಿವೆ. ಅದರಂತೆ ತೆರೆದ ಬಾವಿಗಳು ಸಹ ಇಲ್ಲಿ ಅನುಕೂಲ ಒದಗಿಸಿವೆ.

ಬೆಟ್ಟಗುಡ್ಡಗಳು :

ನಿಸರ್ಗ ನಿರ್ಮಿತ ಬೆಟ್ಟಗುಡ್ಡಗಳು ಮಾನವ ಪ್ರಪ್ರಥಮ ವಾಸದ ನೆಲೆಗಳಾಗಿದ್ದು ಇವು ಅಂದಿನಿಂದ ಇಂದಿನವರೆಗೂ ಮಾನವನ ಜೀವನದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತಿವೆ. ಇಲ್ಲಿ ಕುಡಿಯಲು ನೀರು ವಾಸಕ್ಕೆ ನೈಸರ್ಗಿಕ ಗುಹೆಗಳು, ತಿನ್ನಲು ಗಡ್ಡೆಗೆಣಸುಗಳು, ಪ್ರಾಣಿಗಳು, ಹಣ್ಣು ಹಂಪಲಗಳು, ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಲ್ಲದೆ, ಬಯಲು ಜೀವನಕ್ಕೆ ಅನುಕೂಲಕರ ಹವಾಮಾನ, ಇವುಗಳ ಶಿಲಾಯುಗದ ಇವುಗಳು ಶಿಲಾಯುಗದ ಮಾನವನಿಗೆ ನೆಲೆಸಲು ತಕ್ಕವಾತಾವರಣವನ್ನು ನೀಡಿದ್ದವು.[೬] ಪ್ರಾಚೀನ ಕಾಲದಿಂದಲೂ ಮಾನವನು ಇಂತಹ ಬೆಟ್ಟಗುಡ್ಡಗಳನ್ನು ಆಯ್ಕೆ ಮಾಡಿಕೊಂಡು ವಾಸಮಾಡಲು ಈ ಅಂಶಗಳು ಪ್ರಮುಖ ಕಾರಣವಾಗಿದೆ. ಇಲ್ಲಿ ನೈಸರ್ಗಿಕ ಸಂಪನ್ಮೂಲಗಳು ಹೇರಳ ಪ್ರಮಾಣದಲ್ಲಿ ದೊರೆಯುತ್ತವಲ್ಲದೆ, ಸಮುದ್ರಮಟ್ಟಕ್ಕಿಂತ ಹೆಚ್ಚು ಎತ್ತರವಾದ ಭೂಪ್ರದೇಶಗಳಲ್ಲಿ ಉಷ್ಣತೆಯ ಪ್ರಮಾಣ ಕಡಿಮೆಯಾಗಿ ಹವೆಯು ತಂಪಾಗಿರುತ್ತದೆ. ಶತೃಗಳಿಂದ ರಕ್ಷಣೆ ಪಡೆಯಲು ಪ್ರಕೃತಿ ನಿರ್ಮಿತ ಗುಹೆಗಳು ಇರುತ್ತವೆ. ಇದಕ್ಕೆ ಉದಾಹರಣೆ ಎಂಬಂತೆ ಈ ಪರಿಸರದಲ್ಲಿ ಹುಲಿಗೆಮ್ಮನಕೊಳ್ಳ, ಶಂಕರಲಿಂಗನಗುಡ್ಡ, ಅಯ್ಯನಪಡೆ, ಡೊಂಕನಕೊಳ್ಳ, ಮಂಗಳೂರಿನ ಕಳ್ಳರ ಪಡೆ ಮುಂತಾದವು ಸಾಕ್ಷಿಯಾಗಿವೆ.

ವನ್ಯ ಸಂಪತ್ತು :

ಮಾನ್ಸೂನ್ ಹಮಾಮಾನ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಈ ಪ್ರದೇಶದಲ್ಲಿ ವನ್ಯ ಸಂಪತ್ತು ಅಷ್ಟೊಂದು ಬೃಹತ್ ಪ್ರಮಾಣದಲ್ಲಿರುವುದಿಲ್ಲ. ಮಳೆಯ ಪ್ರಮಾಣ ವಾರ್ಷಿಕ ಸರಾಸರಿ ೫೦ ಸೆಂ.ಮೀ. ದಿಂದ ೭೦ ಸೆಂ.ಮೀ. ಆಗಿರುವದರಿಂದ ಇಲ್ಲಿ ಬೆಳೆಯುವ ಮರಗಳೆಂದರೆ, ಬೇವು, ಜಾಲಿ, ಕಕ್ಕೆ. ಹುಣಸೆ, ನೀಲಗಿರಿ, ಬಸರಿ, ಪಾಪಾಸುಕಳ್ಳಿ,

ಬಾರಿ, ಬನ್ನಿಮರ, ಪತ್ರೆಮರ, ಕಾರಿ, ಕವಳಿ, ಈಚಲ, ತುಗ್ಗಲಿ, ಸೂಬಾಬಲ, ಅರಬೇವು, ಕಳ್ಳಿ, ಮಸಿವಾಳ ಮುಂತಾದ ಸಾಮಾನ್ಯ ವರ್ಗದ ಗಿಡ-ಮರಗಳು ಬೆಳೆಯುತ್ತವೆ. ಮಳೆಯ ಪ್ರಮಾಣ ಕಡಿಮೆ ಇರುವುದರಿಂದ ದಟ್ಟ ಅರಣ್ಯಗಳಿರದೆ, ಎತ್ತರವಲ್ಲದ ಮರಗಳನ್ನು ಮತ್ತು ಪೊದೆಗಳನ್ನು ಕಾಣುತ್ತೇವೆ. ಇವು ಬೇಸಿಗೆಯ ಕಾಲದಲ್ಲಿ ಎಳೆ ಉದುರಿಸುವಂತಹವುಗಳಾಗಿದ್ದು ವಸಂತ ಋತುವಿನಲ್ಲಿ ಚಿಗುರತ್ತವೆ. ಮಳೆಗಾಲದ ಸಂದರ್ಭದಲ್ಲಿ ಇಲ್ಲಿಯ ಮರಗಳು ಚಿಗುರೊಡೆದು ಎಲೆಗಳಿಂದ ಮೈತುಂಬಿಕೊಂಡು, ಈ ಪರಿಸರದ ಪ್ರಾಕೃತಿಕ ಸೌಂದರ್ಯ ಹೆಚ್ಚಿಸಿರುತ್ತವೆ.

ಪ್ರಾಣಿ ಸಂಪತ್ತು :

ಈ ಪರಿಸರದಲ್ಲಿ ದಟ್ಟವಾದ ಅರಣ್ಯಗಳಿಲ್ಲದ ಕಾರಣ ಇಲ್ಲಿ ದ್ವಿತೀಯ ದರ್ಜೆಯ ಪ್ರಾಣಿ-ಪಕ್ಷಿಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಸಾಕುಪ್ರಾಣಿಗಳಲ್ಲಿ ವಿಶೇಷವಾಗಿ ಎತ್ತು, ಎಮ್ಮೆ, ಕೋಣ, ಆಕಳು, ಮೇಕೆ, ಕುರಿ, ನಾಯಿ, ಕೋಳಿ, ಬೆಕ್ಕು, ಹಂದಿ ಮತ್ತು ಕಾಡು ಪ್ರಾಣಿಗಳಾದ ತೋಳ, ಮೊಸಳೆ, ನರಿ, ಕಾಡುಹಂದಿ, ಮೊಲ, ಹಾವು, ನವಿಲು, ಮುಂಗುಸಿ ಮುಂತಾದವುಗಳಾಗಿವೆ. ಪಕ್ಷಿಗಳಲ್ಲಿ ಕಾಗೆ, ಗುಬ್ಬಿ, ಹಾಲಕ್ಕಿ, ಹದ್ದು ಕಾಡುಪಾರಿವಾಳ, ಗಿಳಿ, ಗೂಬೆ, ಬುರಲಿ, ಕೋಗಿಲೆ ಮುಂತಾದದವು ಕಂಡುಬರುತ್ತವೆ.

ಪ್ರಾಗೈತಿಹಾಸ ಕಾಲ

ಪ್ರಾಗೈತಿಹಾಸ ಕಾಲದ ಮಾನವನ ಸಾಂಸ್ಕೃತಿಕ ಚರಿತ್ರೆಯು ಬಹುಸುದೀರ್ಘವಾದುದು. ಇದರ ಕುರಿತು ಅನೇಕ ದೇಶಿಯ ಮತ್ತು ವಿದೇಶಿಯ ವಿದ್ವಾಂಸರು ಅಧ್ಯಯನ ಕೈಗೊಂಡಿದ್ದಾರೆ. ಅಧ್ಯಯನದ ಅನುಕೂಲತೆಗಾಗಿ ಮತ್ತು ಅವರು ಬಳಸಿದ ಉಪಕರಣಗಳಲ್ಲಿಯ ಗಾತ್ರ, ಆಕಾರ, ತಂತ್ರಗಾರಿಕೆಯನ್ನು ಅನುಸರಿಸಿ ಈ ಸುದೀರ್ಘ ಅವಧಿಯನ್ನು ಮೂರು ಪ್ರಮುಖ ಕಾಲ ಘಟ್ಟಗಳಾಗಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಮತ್ತೆ ಸಂದರ್ಭಕ್ಕನುಸಾರವಾಗಿ ಉಪವಿಭಾಗಗಳನ್ನು ಮಾಡಿರುವುದು ಕಂಡುಬರುತ್ತದೆ. ಅವುಗಳು ಈ ಕೆಳಗಿನಂತಿವೆ.

೧. ಹಳೆ ಶಿಲಾಯುಗ

ಆದಿ ಹಳೆ ಶಿಲಾಯುಗ

ಮಧ್ಯ ಹಳೆ ಶಿಲಾಯುಗ

ಅಂತ್ಯ ಹಳೆ ಶಿಲಾಯುಗ

೨. ಮಧ್ಯ /ಸೂಕ್ಷ್ಮ ಶಿಲಾಯುಗ

೩. ನವ / ನೂತನ ಶಿಲಾಯುಗ

೪. ಶಿಲಾ-ತಾಮ್ರಯುಗ

೫. ಬೃಹತ್ ಶಿಲಾಯುಗ

ಇಂತಹ ಮಹತ್ವಪೂರ್ಣ ಸುದೀರ್ಘ ಇತಿಹಾಸ ಹೊಂದಿರುವ ಭಾರತದ ಮಾನವನ ಚರಿತ್ರೆಯನ್ನು ಕಟ್ಟಿಕೊಡಲು ಹಲವಾರು ವಿದ್ವಾಂಸರು ಸ್ವಾತಂತ್ರ್ಯ ಪೂರ್ವದಿಂದಲೇ ಅಂದರೆ ಸುಮಾರು ೧೫೦ ವರ್ಷಗಳಿಂದಲೂ ಈ ಕುರಿತು ದೇಶೀಯ ಮತ್ತು ವಿದೇಶೀಯ ಮಟ್ಟದ ಪುರಾತತ್ವಶಾಸ್ತ್ರಜ್ಞರು ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರಾರಂಭಿಕಹಂತದಲ್ಲಿ ಪುರಾತತ್ವ ವಿದ್ವಾಂಸರು ಪ್ರಾಚೀನ ನಾಗರಿಕತೆಯ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿ ಪರಿಚಯಿಸಿದರೆ ನಂತರದಲ್ಲಿ ಮಾಹಿತಿಯನ್ನು ಅರ್ಥೈಸಿ ವಿಶ್ಲೇಷಿಸುವ ಕಾರ್ಯವನ್ನು ಕೈಗೊಂಡಿದ್ದಾರೆ. ಈ ದಿಶೆಯಲ್ಲಿ ರಾಬರ್ಟ್ ಬ್ರೂಸ್‌ಫುಟ್, ಕರ್ನಲ್ ಮೆಕೆಂಜಿ, ಎಮ್. ಎಚ್. ಕೃಷ್ಣ, ಬಿ. ಸುಬ್ಬರಾವ್, ಆರ್. ಶೇಷಾದ್ರಿ, ಎಚ್. ಡಿ. ಸಂಕಾಲಿಯಾ, ಅ. ಸುಂದರ ಮುಂತಾದವರು ಕೈಗೊಂಡ ಸರ್ವೇಕ್ಷಣೆ ಹಾಗೂ ಅನ್ವೇಷಣೆಯ ಫಲವಾಗಿ ನೂರಾರು ಹಳೆ ಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ನೆಲೆಗಳು ಪತ್ತೆಯಾದವು. ಈ ಕಾರ್ಯದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಮೈಸೂರು ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ಪುಣೆಯ ಡೆಕ್ಕನ್ ಕಾಲೇಜು ಸಂಸ್ಥೆಗಳು ಮುಂತಾದವುಗಳು ಇತಿಹಾಸಪೂರ್ವ ಕಾಲದ ನೆಲೆಗಳನ್ನು ಪತ್ತೆಹಚ್ಚುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಭಾರತದಲ್ಲಿ ಮದ್ರಾಸಿನ ಬಳಿಯ 'ಪಲ್ಲವರಂ' ಎಂಬಲ್ಲಿ ಕ್ರಿ.ಶ. ೧೮೬೩ರಲ್ಲಿ ರಾಬರ್ಟ್ ಬ್ರೂಸ್‌ಫೂಟ್‌ರವರು ಜಂಬಿಟ್ಟಿಗೆ ಮಣ್ಣಿನ ಗರಸು ನೆಲೆದಲ್ಲಿ ಮೊದಲಬಾರಿಗೆ ಶಿಲಾಯುಗದ ಉಪಕರಣಗಳನ್ನು ಶೋಧಿಸುವ ಮೂಲಕ ಈ ಕಾರ್ಯಕ್ಕೆ ಚಾಲನೆ ನೀಡಿದರು. ನಂತರ ಕರ್ನಾಟಕದಲ್ಲಿಯೂ ಕೂಡಾ ಇವರೇ ಮೊದಲ ಬಾರಿಗೆ ಪ್ರಾಚೀನ ನಾಗರಿಕತೆಯನ್ನು ಗುರುತಿಸುವ ಪ್ರಯತ್ನ ಮಾಡಿದ ಮೊದಲಿಗರು.[೭] ಅಂತೆಯೇ ಇವರನ್ನು ''ಭಾರತದ ಪೂರ್ವ ಇತಿಹಾಸದ ಪಿತಾಮಹ'' ಎಂದು ಕರೆಯುತ್ತಾರೆ.[೮] ಹಾಗೆಯೇ ಇವರು ಬಾಗಲಕೋಟ ಜಿಲ್ಲೆಯ ಬಾದಾಮಿ ಹತ್ತಿರದ ಮಲಪ್ರಭಾ ನದಿಯ ದಂಡೆಯ ಮೇಲಿನ ಢಾಣಕಶಿರೂರು ಮತ್ತು ಮೆಣಸಗಿಯ (ರೋಣ ತಾಲೂಕು)ಲ್ಲಿ ಪ್ರಾಚೀನ ಶಿಲಾಯುಗದ ಉಪಕರಣ ಇದ್ದುದನ್ನು ೧೮೭೩ರಲ್ಲಿ ವರದಿ ಮಾಡಿದರು.[೯]

ಆದಿ ಹಳೇ ಶಿಲಾಯುಗ :

ಆದಿ ಹಳೇ ಶಿಲಾಯುಗದ ಮಾನವನು ಸುಮಾರು ೨೦ ಲಕ್ಷ ವರ್ಷಗಳ ಹಿಂದೆ ಜೀವಿಸಿರಬೇಕೆಂದು ಪುರಾತತ್ವ ವಿಜ್ಞಾನಿಗಳು ತರ್ಕಿಸಿದ್ದಾರೆ. ಆದಿ ಹಳೇ ಶಿಲಾಯುಗದ ಮನವನು ಈ ಪರಿಸರದ ಮುಖ್ಯ ನೀರಿನ ಜೀವವಾಹಿನಿಯಾದ ಮಲಪ್ರಭಾ ನದಿಯ ಬಯಲಲ್ಲಿ ವಿರಮಿಸಿದ ಕುರುಹು ದೊರೆತಿವೆ. ಆತನು ಬಳಸಿದ ಶಿಲಾ ಉಪಕರಣಗಳು ಈ ನದಿಯ ಎಡ ಮತ್ತು ಬಲ ದಂಡೆಯಲ್ಲಿ ಚದುರಿಕೊಂಡಿವೆ. ಪ್ರಾಣಿಗಳನ್ನು ಬೇಟೆಯಾಡಲು, ನೆಲದಲ್ಲಿಯ ಗಡ್ಡೆ ಗೆಣಸುಗಳನ್ನು ಅಗೆದು ತೆಗೆಯಲು ಈತನು ಉಪಯೋಗಿಸಿದ ಉಪಕರಣಗಳು ಇಲ್ಲಿ ದೊರೆತಿವೆ. ಈ ಆಯುಧಗಳನ್ನು

ತಯಾರಿಸಲು ಈ ನದಿಯ ಬಯಲಲ್ಲಿ ದೊರೆವ ಉಸುಕುಕಲ್ಲಿನ ಗಟ್ಟಿಗಳನ್ನು ಬಳಸಿಕೊಂಡು, ಈ ಉಪಕರಣಗಳ ತಯಾರಿಕೆಯಲ್ಲಿ ಇವರ ಕೌಶಲ್ಯವನ್ನು ಗುರುತಿಸಬಹುದು. ಈ ಅವಧಿಯನ್ನು ಭೂವಿಜ್ಞಾನಿಗಳು ಹಿಮಯುಗದ ಮಧ್ಯಕಾಲವೆಂದು ತರ್ಕಿಸಿದ್ದಾರೆ.

ಕ್ರಿ.ಶ. ೧೮೭೩ರಲ್ಲಿ ರಾಬರ್ಟ್ ಬ್ರೂಸ್‌ಫುಟ್ ಅವರು ಬಾದಾಮಿ ಸಮೀಪದ ಮಲಪ್ರಭಾ ನದಿಯ ತಟದಲ್ಲಿಯ ಢಾಣಕಶಿರೂರು, ಖ್ಯಾಡ, ಮೆಣಸಗಿ ಮೊದಲಾದ ಗ್ರಾಮಗಳ ಹತ್ತಿರ ಆದಿ ಹಳೆಶಿಲಾಯುಗದ ಮಾನವನ ಉಪಕರಣಗಳನ್ನು ಶೋಧಿಸಿದರು. ನಂತರ ಆರ್. ವಿ. ಜೋಶಿಯವರು ಈ ನದಿಯ ಬಯಲಿನಲ್ಲಿರುವ ಮಣ್ಣೇರಿ ಢಾಣಕಶಿರೂರು, ಆಲೂರ (ತಳಕವಾಡ) ತಮಿನಹಾಳ, ಹೊಳೆಆಲೂರ ಮೊದಲಾದವುಗಳಲ್ಲಿ ಈ ಕಾಲದ ಉಪಕರಣಗಳನ್ನು ಸಂಗ್ರಹಿಸಿದರು.[೧೦] ಇದೇ ರೀತಿಯಾಗಿ ಡಾ. ಎಮ್. ಎನ್. ದೇಶಪಾಂಡೆ ಮತ್ತು ಡಾ. ಅ. ಸುಂದರ (೧೯೭೭) ಅವರು ನಂದಿಕೇಶ್ವರ ಭದ್ರನಾಯಕನ ಜಾಲಿಹಾಳ, ಪಟ್ಟದಕಲ್ಲು, ಐಹೊಳೆಗಳಲ್ಲಿ ಶಿಲಾಯುಧಗಳನ್ನು ಶೋಧಿಸಿದರು.[೧೧] ಇದರಲ್ಲಿಯ ನಂದಿಕೇಶ್ವರ, ಭದ್ರನಾಯಕನ ಜಾಲಿಹಾಳಗಳು ಪ್ರಸ್ತುತ ಅಧ್ಯಯನಕ್ಕೊಳಪಟ್ಟ, ಪ್ರಮುಖ ಸ್ಥಳಗಳಾಗಿವೆ. ಇದೇ ರೀತಿಯಾಗಿ ಇದರ ಸುತ್ತಮುತ್ತಲಿನ ಪರಿಸರಗಳಲ್ಲಿ ಡಾ. ಶ್ರೀನಿವಾಸ ಪಾಡಿಗಾರ, ಡಾ. ಶಿಲಾಕಾಂತ ಪತ್ತಾರ, ಡಾ. ರವಿ ಕೋರಿಶೆಟ್ಟರ ಹಾಗೂ ಮೈಕಲ್ ಪೆಟ್ರಿಗಾಲ್ ಮುಂತಾದವರು ಬಾದಾಮಿಯ ಸಿಡಿಲುಪಡಿ, ಸಾಬರಪಡಿಗಳಲ್ಲಿ ಈ ಕಾಲದ ಮಾನವನ ಉಪಕರಣಗಳನ್ನು ಪತ್ತೆಹಚ್ಚಿರುವರು.

ಈ ಶಿಲಾಯುಗದ ಮಾನವನು ಮುಖ್ಯವಾಗಿ ಕೈಕೊಡಲಿ, ಮಚ್ಚು, ಹೆರೆಯುವ ಚಕ್ಕೆಗಳನ್ನು ಮತ್ತು ಚಕ್ರದಂತಿರುವ ಆಯುಧಗಳನ್ನು ಉಪಯೋಗಿಸುತ್ತಿದ್ದನು. ಈ ಅವಧಿಯ ಮಾನವನ ಉಪಕರಣಗಳು ಹೆಚ್ಚು ದೊಡ್ಡದಾಗಿಯು, ಭಾರವಾಗಿಯೂ ಇದ್ದವು. ಆತ ಕೈಕೊಡಲಿಯನ್ನು ನೆಲದಿಂದ, ಗಡ್ಡೆ, ಗೆಣಸು ಅಗೆಯಲು ಮತ್ತು ಪ್ರಾಣಿಯ ತಲೆ ಸೀಳಲು ಅಥವಾ ಉದ್ದನೆಯ ಕೋಲಿನ ತುದಿಗೆ ಅದನ್ನು ಕಟ್ಟಿ ಈಟಿಯಂತೆ ತಿವಿಯಲು ಬಳಸುತ್ತಿದ್ದಿರಬೇಕು.[೧೨] ಭಾರವಾದ ಆಯುಧಗಳನ್ನು ಬೀಸಿ ಒಗೆದು ದೂರದ ಪ್ರಾಣಿಯನ್ನು ಕೊಲ್ಲುವುದು ಕಷ್ಟದಕೆಲಸವಾಗಿತ್ತು. ಅದಕ್ಕಾಗಿ ಅಂಡಾಕಾರದ ಚಕ್ಕೆಗಳನ್ನು ಮತ್ತು ಚಕ್ರದಂತೆ ಬಳಕೆಯಾಗುವ ಆಯುಧಗಳನ್ನು ನಿರ್ಮಿಸಿಕೊಂಡನು. ಇವು ಗಾಳಿಯನ್ನು ಸೀಳಿಕೊಂಡು ಹೋಗಬಲ್ಲಂತವುಗಳಾಗಿದ್ದವು. ಇದರಿಂದಾಗಿ ಓಡುವ ಪ್ರಾಣಿಯು ಆತನ ಚಕ್ರಾಯುಧಕ್ಕೆ ಬಲಿಯಾಗಿರಬೇಕು.

ಆದರೆ, ಒಂದು ಉಪಕರಣವನ್ನು ನಿರ್ದಿಷ್ಟವಾಗಿ ಇದೇ ಕೆಲಸಕ್ಕೆ ಉಪಯೋಗಿಸಲಾಗಿತ್ತೆಂದು ಸ್ಪಷ್ಟವಾಗಿ ಹೇಳುವುದು ಕಷ್ಟ. ಈ ಒಂದು ಆಯುಧಗಳು ವಿಭಿನ್ನ ರೀತಿಯ ಬೇರೆ ಬೇರೆ ಕೆಲಸಕ್ಕೆ ಬಳಕೆಯಾಗಿರಲೂಬಹುದು.

ಆಯುಧ ತಯಾರಿಕಾ ತಂತ್ರ :

''ಮಲಪ್ರಭಾ ನದಿ ಬಯಲಿನ ಉಪಕರಣಗಳು ಹೆಚ್ಚಾಗಿ ಫ್ರಾನ್ಸ್ ದೇಶದ ಸೋಮ್ ನದಿಯ ಸೇಂಟ್ ಅಶೂಲದಲ್ಲಿಯ ಆಯುಧಗಳನ್ನು ಹೋಲುತ್ತವೆ. ಆದ್ದರಿಂದ ಇಲ್ಲಿಯ ಆಯುಧ ಕೈಗಾರಿಕಾ ತಂತ್ರವನ್ನು ಅಶ್ಯೂಲಿಯನ್ ತಂತ್ರವೆಂದು ಕರೆಯಲಾಗಿದೆ.'' ಈ ಪ್ರದೇಶದ ಆದಿ ಮಾನವನು ಕ್ಯಾಕ್ಟೋನಿಯನ್ ತಂತ್ರವನ್ನು ಕೂಡ ಬಳಸಿರುವುದು ಕಂಡುಬರುತ್ತದೆ.[೧೩]

ಮಧ್ಯ ಹಳೇ ಶಿಲಾಯುಗ :

ಈ ಅವಧಿಯು ಆದಿ ಹಳೇ ಶಿಲಾಯುಗ ಮತ್ತು ಅಂತ್ಯ ಹಳೇಶಿಲಾಯುಗದ ಮಧ್ಯಕಾಲಾವಧಿ ಈ ಅವಧಿಯಲ್ಲಿ ಮಾನವನು ಪ್ರಸ್ಥಭೂಮಿಯಲ್ಲಿಯೇ ನೆಲೆಯೂರಿದನು ಮತ್ತು ಈ ಕಾಲದ ಮಾನವನ ನೆಲೆಗಳು ಭೌಗೋಳಿಕವಾಗಿ ಹೆಚ್ಚು ವಿಶಾಲವಾದವು. ಜೈವಿಕ ಹಾಗೂ ನಿರ್ಜೀವ ಸಂಪನ್ಮೂಲಗಳನ್ನು ಉಪಯೋಗಿಸುತ್ತಾ ಹೆಚ್ಚಿನ ಜ್ಞಾನವನ್ನು ಬೆಳೆಸಿಕೊಳ್ಳುತ್ತಾ ಸಾಂಸ್ಕೃತಿಕ ಕೇಂದ್ರಗಳ ಪ್ರಭಾವವು ಹೆಚ್ಚಿನ ಭೌಗೋಳಿಕ ಪ್ರದೇಶವನ್ನು ಆವರಿಸಿತು. ಈ ಅವಧಿಗೆ ಸಂಬಂಧಿಸಿದ ನೆಲೆಗಳು ಬಾದಾಮಿ ತಾಲೂಕಿನಲ್ಲಿ ಮಲಪ್ರಭಾ ನದಿಯ ಬಯಲಿನ ತಮಿಹಾಳ,[೧೪] ಬಾದಾಮಿ ಸಿಡಿಲುಪಡಿ,[೧೫] ಮುಂತಾದವುಳಾಗಿದ್ದು ಇದೇ ತಾಲೂಕಿನ ಮತ್ತು ಹುಲಿಗೆಮ್ಮನಕೊಳ್ಳ ಪರಿಸರದ ವ್ಯಾಪ್ತಿಯಲ್ಲಿ ಬರುವ ನಂದಿಕೇಶ್ವರ[೧೬]ದಲ್ಲಿಯು ಈ ಅವಧಿಯ ಉಪಕರಣಗಳು ದೊರೆತಿವೆ ಮತ್ತು ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮಂಗಳೂರಿನ ''ಕಳ್ಳರಪಡೆ'' ಯಲ್ಲಿ ಈ ಅವಧಿಯ ಆಯುಧ ದೊರೆತಿದೆ.

ಈ ಅವಧಿಯ ಉಪಕರಣಗಳು ಆದಿಹಳೇಶಿಲಾಯುಗದ ಉಪಕರಣಗಳಿಗಿಂತ ಗಾತ್ರದಲ್ಲಿ ಚಿಕ್ಕವಾಗಿದ್ದು ಅಷ್ಟೊಂದು ಭಾರವಿರುವುದಿಲ್ಲ. ಬಳಸಲಾದ ಶಿಲೆಯು ಬೇರೆ ಬಗೆಯದು. ಇವು ಉತ್ತಮ ಗುಣಮಟ್ಟದ ನುಣುಪಾದ ಕಲ್ಲುಗಳಿಂದ ಅಂದರೆ, ಚರ್ಟ್, ಅಗೇಟ್, ಜಾಸ್ಪರ್ ಮೊದಲಾದ ಗುಣಮಟ್ಟದವುಗಳಾಗಿವೆ. ಈ ಸಂಸ್ಕೃತಿಯ ಮುಖ್ಯ ಆಯುಧಗಳೆಂದರೆ, ರಂಧ್ರಕೊರೆಯುವ ಸೂಜಿಕಲ್ಲುಗಳು, ಮೊನೆಗಳು, ಪೀನ ಮತ್ತು ನಿಮ್ನ ಅಂಚಿನ ಹೆರೆಯುವ ಚಕ್ಕೆಗಳು ಪ್ರಮುಖವಾಗಿವೆ.[೧೭] ಈ ಅವಧಿಯಲ್ಲಿ ವಾಯುಗಣ ವೈಪರೀತ್ಯದಿಂದಾಗಿ ಬೃಹದಾಕಾರದ ಪ್ರಾಣಿಗಳು ಕಣ್ಮರೆಯಾದವು ಬೇರೆ ಬಗೆಯ ಪ್ರಾಣಿಗಳು ಅಧಿಕವಾದವು. ಅವನ್ನು ಬೇಟೆಯಾಡಲು ಹೊಸ ಮಾದರಿಯ ಉಪಕರಣಗಳನ್ನು ನಿರ್ಮಿಸಿಕೊಂಡರು.

ಅಂತ್ಯಹಳೇ ಶಿಲಾಯುಗ :

ಈ ಅವಧಿಯು ಹಳೇಶಿಲಾಯುಗ ಮತ್ತು ಮಧ್ಯಶಿಲಾಯುಗವನ್ನು ಜೋಡಿಸುವ ಕೊಂಡಿಯಾಗಿದೆ. ಈ ಅವಧಿಯಲ್ಲಿ (Blade rools)[೧೮]ಗಳು ವಿಶೇಷವಾಗಿ ಕಂಡು ಬರುತ್ತವೆ. ಕರ್ನಾಟಕದ ಸಾಲ್ವಡಗಿಯ[೧೯] ನೀಳಚಕ್ಕೆಯ

ಕೈಗಾರಿಕೆಯ ನೆಲೆಯಾಗಿತ್ತು (ಅ. ಸುಂದರ ೧೯೬೧). ಇಲ್ಲಿ ದೊರೆತ ಉಪಕರಣಗಳಲ್ಲಿ ಕೆಲವು ಅಂತ್ಯ ಹಳೇ ಶಿಲಾಯುಗದವೆಂದು ಗುರುತಿಸಲಾಗಿದೆ. ಬಾದಾಮಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಾಯಶಃ ಈ ಕಾಲದವೆಂಬ ಶಂಕೆ ಇರುವ ವರ್ಣಚಿತ್ರಗಳಿದ್ದು[೨೦] ಈ ಪರಿಸರದಲ್ಲಿಯೂ ಈ ಅವಧಿಯಲ್ಲಿ ಮಾನವನ ಚಟುವಟಿಕೆ ಇದ್ದಿತೆಂದು ಹೇಳಬಹುದಾಗಿದೆ.

ಸೂಕ್ಷ್ಮ ಶಿಲಾಯುಗ :

ಈ ಕಾಲಘಟ್ಟವು ಹಳೇ ಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಮಹತ್ವದ ಹಂತವಾಗಿದೆ. ಕರ್ನಾಟಕದ ತುಮಕೂರು ಹತ್ತಿರ ಕಿಬ್ಬನಹಳ್ಳಿ,[೨೧] ಬೆಂಗಳೂರಿನ ಜಾಲಹಳ್ಳಿ[೨೨] ಮತ್ತು ಬಳ್ಳಾರಿಯ ಹತ್ತಿರದ ಸಂಗನಕಲ್ಲು[೨೩]ನಲ್ಲಿ ಈ ಅವಧಿಯ ನೆಲೆಗಳನ್ನು ಶೋಧಿಸಿ ಈ ಹಂತದ ಉಪಕರಣಗಳನ್ನು ಅಭ್ಯಸಿಸಲಾಗಿದೆ. ಈ ಸಂಸ್ಕೃತಿಯ ಮಾನವನು ವಿವಿಧ ಪ್ರಕಾರದ ಜಾಗಗಳಲ್ಲಿ ವಾಸಮಾಡುತ್ತಿದ್ದನು. ಸಮುದ್ರದ ತೀರಗಳಲ್ಲಿ, ಬಯಲುಜಾಗೆಗಳಲ್ಲಿ, ಕಲ್ಲಾಸರೆಗಳಲ್ಲಿ, ದಿನ್ನೆಗಳ ಮೇಲೆ ತಪ್ಪಲು ಪ್ರದೇಶಗಳಲ್ಲಿ ವಾಸವಾಗಿದ್ದನು.

ಈ ಕಾಲಕ್ಕೆ ಸಂಬಂಧಿಸಿದ ನೆಲೆಗಳನ್ನು ಬಾದಾಮಿಯ ಹತ್ತಿರದ ಸಿಡಿಲು ಫಡಿಯಲ್ಲಿ ಅ. ಸುಂದರ ಅವರು, ಬಾದಾಮಿಯ ಕಲ್ಲಾಸರೆಯ ಹತ್ತಿರ, ಗುಡ್ಡದ ಅಡಿಯಲ್ಲಿ ದಿನ್ನೆಯ ಮೇಲಿನ ಬಯಲಿನಲ್ಲಿ ಸಾವಿರಾರು ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ರವಿಕೋರಿಶೆಟ್ಟರ್ ಮತ್ತು ಮೈಕಲ್ ಟ್ರಾಗ್ಲಿಯಾ ಅವರು ಶೋಧಿಸಿದರು.[೨೪] ಬಾದಾಮಿಯ ರಂಗನಾಥ ಬೆಟ್ಟದಲ್ಲಿ ಈ ಕಾಲದ ಉಪಕರಣಗಳನ್ನು ಶೀಲಾಕಾಂತ ಪತ್ತಾರರವರು ಪತ್ತೆ ಹಚ್ಚಿರುವರು.[೨೫]

ಈ ಪರಿಸರಕ್ಕೆ ಸಂಬಂಧಿಸಿದ ಹಿರೇಗುಡ್ಡದಲ್ಲಿ[೨೬] ಈ ಕಾಲಘಟ್ಟದ ನೆಲೆಯು ಕಂಡುಬಂದಿರುತ್ತದೆ. ಈ ಕಾಲದ ಉಪಕರಣಗಳು ಸಮಾನಾಂತರ ಅಂಚಿನ ನೀಳ ಚಕ್ಕೆಗಳು ಮೊನೆಗಳು ತ್ರಿಕೋನಾಕಾರಾದ ಉಪಕರಣಗಳು ಈ ಸಂಸ್ಕೃತಿಯ ವಿಶೇಷ ಲಕ್ಷಣವೆನಿಸಿವೆ. ಈ ಪರಿಸರಕ್ಕೆ ಸಂಬಂಧಿಸಿದಂತೆ ಮುದ್ದಗಟ್ಟು ಶಿಲೆಯಲ್ಲಿ ಬಂಧಿತವಾದ ಕ್ವಾರ್ಟ್ಜ್, ಚರ್ಟ್ ಮತ್ತು ಅಗೇಟ್ ತುಂಡುಗಳಿಂದ ಈ ಉಪಕರಣಗಳನ್ನು ರಚಿಸಲಾಗಿದೆ. ಈ ಕಾಲಕ್ಕೆ ಸಂಬಂಧಿಸಿದ ಕಲಾತ್ಮಕ ಅಭಿವ್ಯಕ್ತಿಯನ್ನು ಕೂಡಾ ಬಾದಾಮಿಯ ಕಲ್ಲಾಸರೆಗಳಲ್ಲಿ ಕಾಣಬಹುದು. ಈ ಚಿತ್ರಗಳು ಕೆಮ್ಮಣ್ಣಿನ ಮತ್ತು ಸುಣ್ಣದಂತಹ ಬಿಳಿಯ ಬಣ್ಣದಲ್ಲಿ ಕಂಡುಬಂದಿವೆ. ಎರ್ವಿನ್ ನ್ಯೂಮೋಯರ್ ಅವರು ರಂಗನಾಥ ಗುಡ್ಡದ ಬೃಹದಾಕಾರದ ಬಂಡೆಯ ಮೇಲೆ ಕೆಮ್ಮಣ್ಣಿನ ಬಣ್ಣದ ಚಿತ್ರಗಳನ್ನು ಶೋಧಿಸಿದ್ದಾರೆ.[೨೭]

ನವಶಿಲಾಯುಗ :

ಕರ್ನಾಟಕದಲ್ಲಿ ಬ್ರಹ್ಮಗಿರಿ, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ ಮೊದಲಾದೆಡೆ ಇಂತಹ ನೆಲೆಗಳು ಶೋಧವಾಗಿವೆ.[೨೮] ಬಾದಾಮಿ ಪ್ರದೇಶದಲ್ಲಿ ಸಹ ಈ ಸಾಂಸ್ಕೃತಿಕ ನೆಲೆ ೧ ರಿಂದ ೪ ಹೆಕ್ಟೇರಿನಷ್ಟು ವಿಸ್ತಾರವಾಗಿ

ಹರಡಿಕೊಂಡಿವೆ. ಈ ಕಾಲಘಟ್ಟದ ಮುಖ್ಯಲಕ್ಷಣವೆಂದರೆ, ಉಜ್ಜಿನಯಗೊಳಿಸಿದ ಕಲ್ಲಿನ ಕೊಡಲಿಗಳು, ಮಣ್ಣಿನ ಪಾತ್ರೆಗಳ ತಯಾರಿಕೆ ಎಂದು ಹೇಳಬಹುದಾಗಿದೆ.

ವ್ಹೀಲರ್ ಅವರ ಅಭಿಪ್ರಾಯದಲ್ಲಿ ನವಶಿಲಾಯುಗದ ಈ ಸಂಸ್ಕೃತಿಯ ಹಂತವನ್ನು ''ಮಿರುಗುವ ಕಲ್ಲುಕೊಡಲಿ ಸಂಸ್ಕೃತಿ''[೨೯] ಎಂದು ಬಣ್ಣಿಸಿದ್ದಾರೆ. ಆದರೆ, ಅಲ್ಪಪ್ರಮಾಣದಲ್ಲಿ ತಾಮ್ರದ ಉಪಕರಣಗಳು ಈ ಸಂಸ್ಕೃತಿಯ ನೆಲೆಗಳಲ್ಲಿ ದೊರೆತಿವೆ. ಹೀಗೆ ಈ ಕಾಲದಲ್ಲಿ ಕಲ್ಲುಮತ್ತು ತಾಮ್ರ ಬಳಕೆಯಾಗಿದ್ದರಿಂದ ಇದನ್ನು ''ತಾಮ್ರಶಿಲಾಯುಗ'' ಎಂದು ಕರೆಯುವರು.[೩೦]

ಈ ಕಾಲಘಟ್ಟದಲ್ಲಿ ಮಾನವನು ವಿಶೇಷವಾಗಿ ಬಳಸಿದ್ದು ಕಲ್ಲಿನ ಉಪಕರಣಗಳನ್ನೇ. ಅವುಗಳು ೧. ಕರೆಕಲ್ಲ (Dolerite)ನ ಗಟ್ಟಿಗಳಿಂದ ಚಕ್ಕೆ ತೆಗೆದು ನಂತರ ಉಜ್ಜಿ ತಯಾರಿಸಿದ ಕೊಡಲಿಗಳು ಮತ್ತು ಬಾಚಿಗಳು. ೨. ಉತ್ತಮ ಜಾತಿಯ ಚರ್ಟ, ಜಾಸ್ಪರ್, ಅಗೇಚ್ ಕಲ್ಲುಗಳ ನೀಳವಾದ ಮತ್ತು ಹರಿತವಾದ ತೆಳ್ಳನೆಯ ಚಕ್ಕೆಗಳು ಈ ಎರಡು ಬಗೆಯ ಅವಶೇಷ ಮಲಪ್ರಭಾ ನದಿ ಪ್ರದೇಶದಲ್ಲಿ ದೊರೆತಿವೆ. ಜೊತೆಗೆ ಸುಟ್ಟು ತಯಾರಿಸಲಾದ ಮಣ್ಣಿನ ಪಾತ್ರೆಗಳ ಚೂರುಗಳು ಈ ಬಯಲಿನಲ್ಲಿ ಕಂಡುಬಂದಿವೆ.

ಈ ಅವಧಿಗೆ ಸಂಬಂಧಿಸಿದ ಅಕ್ಕರಗಲ್ ನೆಲೆಯು ಹುಲಿಗೆಮ್ಮನಕೊಳ್ಳ ದಿಂದ ಸುಮಾರು ೫ ಕಿ.ಮೀ. ಅಂತರದಲ್ಲಿದೆ. ಈ ನೆಲೆಯು ಮಲಪ್ರಭಾ ನದಿಯ ಎಡ ದಂಡೆಯ ಮೇಲಿದ್ದು ಗುಡ್ಡಕ್ಕೆ ಹೊಂದಿಕೊಂಡಿದೆ. ಈ ನೆಲೆಯಲ್ಲಿರುವ 'ಶಂಕರ ಗುಂಡದ' ಮೇಲಿರುವ ಈಶ್ವರ ಗುಡಿಯ ಎಡಬದಿಗೆ ಸಮಕಟ್ಟಿನಲ್ಲಿ ನವ ಶಿಲಾಯುಗ ಸಂಸ್ಕೃತಿಯ (ಕ್ರಿ.ಪೂ. ೧೮೦೦-೧೦೦೦) ಅವಶೇಷಗಳು ಪತ್ತೆಯಾಗಿವೆ. ಈ ಸಂಸ್ಕೃತಿಯ ಮೃತ್ ಪಾತ್ರೆಯ ಚೂರುಗಳು ಈ ನೆಲೆಯಲ್ಲಿ ಅಲ್ಲಲ್ಲಿ ದೊರೆತಿವೆ.[೩೧] ಈ ನೆಲೆಯು ಪಟ್ಟದಕಲ್ಲಿನಿಂದ ನಾಗರಾಳ ಅಥವಾ ಗುಳೇದಗುಡ್ಡಕ್ಕೆ ಹೋಗುವ ಮಾರ್ಗದಲ್ಲಿದ್ದು ಈಗ ಈ ನೆಲೆಯಲ್ಲಿ ಜನವಸತಿ ಇರುವುದಿಲ್ಲ. ಇದು ನದಿಯ ಅಂಚಿನಲ್ಲಿದ್ದ ಕಾರಣದಿಂದಾಗಿ ಇಲ್ಲಿಯ ಜನರು ಬಹುದಿನಗಳ ಹಿಂದೆಯೆ ಬೇರೆಡೆಗೆ ಸ್ಥಳಾಂತರವಾಗಿದ್ದಾರೆ. ಈ ನೆಲೆಯು ಪಟ್ಟದಕಲ್ಲಿನಿಂದ ಉತ್ತರಕ್ಕೆ ೫ ಕಿ.ಮೀ. ಮತ್ತು ಹುಲಿಗೆಮ್ಮನಕೊಳ್ಳದಿಂದ ಪೂರ್ವಕ್ಕೆ ೫ ಕಿ.ಮೀ. ಅಂತರದಲ್ಲಿ ಕಂಡುಬರುವ ಪ್ರಮುಖ ನೆಲೆಯಾಗಿದೆ.

ಬಾಚಿನಗುಡ್ಡ :

ಈ ನೆಲೆಯು ನೂತನ ಶಿಲಾ ಸಂಸ್ಕೃತಿಯ ನೆಲೆಗಳ್ಲಲಿ ಪ್ರಮುಖವಾದದ್ದಾಗಿದೆ. ಹುಲಿಗೆಮ್ಮನಕೊಳ್ಳದಿಂದ ಸುಮಾರು ೩ ಕಿ.ಮೀ. ಅಂತರದಲ್ಲಿರುವ ಇದು ಪಟ್ಟದಕಲ್ಲಿನಿಂದ ಪಶ್ಚಿಮಕ್ಕೆ ೧.೫ ಕಿ.ಮೀ. ಅಂತರದಲ್ಲಿದೆ. ಈಲ್ಲಿಯ ಗುಡ್ಡ (ಮರಡಿಯ)ದ ಪೂರ್ವದಂಚಿನಲ್ಲಿರುವ ವಿಸ್ತಾರವಾದ ಇತಿಹಾಸ ಪ್ರಾರಂಭ ಕಾಲದ ನೆಲೆಯ

ಸಮೀಪದಲ್ಲಿಯೇ ಅ. ಸುಂದರ ಅವರು ಈ ಸಂಸ್ಕೃತಿಗೆ ಸಂಬಂಧಿಸಿದ ಉಜ್ಜಿ ನಯಗೊಳಿಸಿದ ಎರಡು ಕಲ್ಲಿನ ಕೊಡಲಿಗಳನ್ನು ಕೆಲವು ಬೂದು ಬಣ್ಣದ ಮೃತ್ ಪಾತ್ರೆಯ ಅವಶೇಷಗಳನ್ನು ಪತ್ತೆಚ್ಚಿದರು.[೩೨]

''ಈ ಶೋಧನೆಯಿಂದಾಗಿ ಹೆಸರಾಂತ ಈ ಎರಡು ಸ್ಥಳಗಳಲ್ಲಿ ಆದಿ ಹಳೆಶಿಲಾಯುಗದಿಂದ ಹಿಡಿದು ಬಾದಾಮಿ ಚಾಲುಕ್ಯರ ಕಾಲದವರೆಗಿನ ಮಾನವ ಸಂಸ್ಕೃತಿ ಬೆಳವಣಿಗೆಯ ಎಲ್ಲ ಮುಖ್ಯ ಹಂತಗಳ ಅವಶೇಷಗಳು ದೊರೆತಂತಾಗಿವೆ.''[೩೩]

ಈ ಕಾಲದ ಮಾನವ ತನ್ನ ಕಲಾಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸಿದ್ದಾನೆ. ತನ್ನ ಉಪಯುಕ್ತತೆಗಾಗಿ ನಿರ್ಮಿಸಿದ ಮಣ್ಣಿನ ಪಾತ್ರೆಗಳ ಮೇಲೆ ಕಲೆಯ ಸಂಸ್ಕಾರ ನೀಡಿದನು. ಪಾತ್ರೆಗಳ ಮೇಲೆ ಬಗೆಬಗೆಯ ಜ್ಯಾಮಿತಿ ರೇಖಾಚಿತ್ರಗಳನ್ನು ಮೂಡಿಸಿದನು. ಇಂತಹ ರೇಖಾಚಿತ್ರಗಳುಳ್ಳ ಮಣ್ಣಿನ ಪಾತ್ರೆಗಳ ಚೂರುಗಳು ಮಲಪ್ರಭಾ ನದಿ ಪ್ರದೇಶದಲ್ಲಿ ಕಂಡುಬಂದಿವೆ.[೩೪] ಈ ಜನರು ಅಲಂಕಾರ ಪ್ರೀಯರಾಗಿದ್ದು ದೇಹಾಲಂಕಾರಕ್ಕಾಗಿ ಜಾಸ್ಪರ್, ಅಗೇಜ್ ಜಾತಿಯ ಶಿಲಾಮಣಿಗಳ ಸರವನ್ನು ಧರಿಸುತ್ತಿದ್ದರು. ಈ ಪ್ರದೇಶದಲ್ಲಿ ಆರ್. ಎಸ್. ಪಂಚಮುಖಿಯವರು ಶಂಖದ ಆಭರಣಗಳನ್ನು ಸಂಗ್ರಹಿಸಿದ್ದಾರೆ.[೩೫] ಈ ಕಾಲಕ್ಕೆ ಸಂಬಂಧಿಸಿದ ಕೆಮ್ಮಣ್ಣಿನ ಬಣ್ಣದ ವಿವಿಧ ಪ್ರಾಣಿ ಮತ್ತು ಮನುಷ್ಯರ ರೇಖಾಚಿತ್ರಗಳು, ಹತ್ತಿರದ ಬಾದಾಮಿ, ಐಹೊಳೆ, ಮಹಾಕೂಟಗಳ ಬಂಡೆಗಲ್ಲುಗಳ ಮೇಲೆ ಕಂಡುಬಂದಿರುತ್ತವೆ. ಇವು ಈ ಕಾಲದ ಧಾರ್ಮಿಕ ಜೀವನ ಇಲ್ಲವೆ ಹಬ್ಬದ ಆಚರಣೆಗೆ ಸಂಬಂಧಿಸಿದವುಗಳಾಗಿವೆ.[೩೬]

ಬೃಹತ್ ಶಿಲಾಯುಗ :

ಈ ಸಾಂಸ್ಕೃತಿಕ ಹಂತದ ಅನೇಕ ನೆಲೆಗಳು ಈ ಪರಸರ ಒಳಗಡೆ ಮತ್ತು ಸುತ್ತಮುತ್ತಲು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಈ ಪರಿಸರದಲ್ಲಿರುವ ನೆಲೆಗಳೆಂದರೆ, ಅಕ್ಕರಗಲ್ ಮತ್ತು ಬಾಚಿಗುಡ್ಡ ಪ್ರಮುಖವಾದವುಗಳಾಗಿವೆ. ಈ ನೆಲೆಗಳು ಮಲಪ್ರಭಾ ನದಿಯ ಎಡ ದಂಡೆಯ ಮೇಲಿದ್ದು ಈ ಪ್ರದೇಶದ ಬೃಹತ್ ಶಿಲಾ ಸಂಸ್ಕೃತಿಯ ಜನರು ತೋರಿದ ವಾಸ್ತು ವೈವಿಧ್ಯವನ್ನು ಈ ರೀತಿಯಾಗಿ ಗುರುತಿಸಬಹುದು.

೧. ಹಾದಿ ಕೋಣೆ ಗೋರಿಗಳು

೨. ಕಿಂಡಿಕೋಣೆ ಗೋರಿಗಳು

೩. ವರ್ತುಳ ಕಲ್ಲುಗ್ಪೆಗಳು

೪. ಗುಂಡಿ ವೃತ್ತಗಳು[೩೭]

ಎಂದು ನಾಲ್ಕು ವಿಧವಾಗಿ ಈ ಪರಿಸರದಲ್ಲಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಕಂಡುಬರುವುದು ವೈಶಿಷ್ಟ್ಯವಾಗಿದೆ.

ಹುಲಿಗೆಮ್ಮನಕೊಳ್ಳ ಹತ್ತಿರದ ಬಾಚಿನಗುಡ್ಡದ ವ್ಯಾಪ್ತಿಯಲ್ಲಿ ಕಿಂಡಿಕೋಣೆಯ ಎಡು ಕಲ್ಗೋರಿಗಳು[೩೮] ಮತ್ತು ಅಕ್ಕರಗಲ್ ಸೀಮೆಗೆ ಸೇರಿದ ಬಯಲಿನಲ್ಲಿ ಇಪ್ಪತ್ತು ಕಲ್ಗೋರಿಗಳು ತುಂಬಾ ಹಾಳಾದ ಸ್ಥಿತಿಯಲ್ಲಿವೆ.[೩೯] ಇವುಗಳು ಗ್ರಾನೈಟ್ ಶಿಲೆಯಿಂದ ನಿರ್ಮಿಸಲ್ಪಟ್ಟಿವೆ. ಈ ಪ್ರದೇಶಗಳಲ್ಲಿ ಗಷ್ಟು ಕಲ್ಲಿನ ಆಕರವಿದ್ದರೂ ಗ್ರಾನೈಟ್ ಕಲ್ಲನ್ನು ಇವುಗಳ ನಿರ್ಮಾಣಕ್ಕೆ ಬಳಸಿಕೊಂಡಿರುವದು ಈ ಸಂಸ್ಕೃತಿ ಜನರ ಪ್ರಾಯೋಗಿಕತೆಯೆನ್ನಬಹುದು.

ಸಮೀಪದ ಐಹೊಳೆಯಲ್ಲಿಯು ಈ ಸಂಸ್ಕೃತಿಯ ಸುಮಾರು ೪೫ ಕಲ್ಗೋರಿಗಳು ಕಂಡುಬಂದಿವೆ. ಇವುಗಳು ಇಲ್ಲಿಯ ಸುಪ್ರಸಿದ್ಧ ಮೇಗುತಿ ದೇವಾಯದ ಪೂರ್ವಭಾಗದ ಗುಡ್ಡದ ಮೇಲೆ ವಿಶಾಲಬಯಲಲ್ಲಿ ಸುಮಾರು ಒಂದು ಹೆಕ್ಟೇರ್ ಪ್ರದೇಶದಲ್ಲಿ ಇವೆ. ಗುಡ್ಡದ ಮೇಲೆ ವಿಶಾಲಬಯಲಲ್ಲಿ ಸುಮಾರು ಒಂದು ಹೆಕ್ಟೇರ್ ಪ್ರದೇಶದಲ್ಲಿ ಇವೆ. ಇವು ಕಿಂಡಿ ಕೋಣೆಯ ಗೋರಿಗಳಾಗಿದ್ದು ಇದರಾಚೆಗೆ ಕ್ಯಾದಿಗ್ಗೇರಿ ಗ್ರಾಮದ ಸಾಗುವಳಿ ಮಾಡಿದ ಹೊಲಗಳಲ್ಲಿ ಹಾದಿಕೋಣೆಗೋರಿಗಳು ಮತ್ತು ವರ್ತುಲ ಕಲ್ಲುಗುಪ್ಪೆಗಳು ಕಂಡುಬಂದಿವೆ. ಹೀಗೆ ಒಂದೇ ನೆಲೆಯಲ್ಲಿ ವಿಭಿನ್ನ ಬಗೆಯ ಕಲ್ಗೋರಿಗಳು ನಿರ್ಮಿತವಾಗಿರುವುದೊಂದು ಮಹತ್ವವಾಗಿದೆ. ಸುಮಾರು ಅರವತ್ತು ಹಾದಿಕೋಣೆಗೋರಿಗಳು ಮತ್ತು ಮೂರು ವರ್ತುಲ ಕಲ್ಲುಗುಪ್ಪೆಗಳು ಇಲ್ಲಿವೆ (ಅ. ಸುಂದರ). ಬೆಟ್ಟದ ಮೇಲೆ ಅಂಚಿನ ಬಯಲಿನಲ್ಲಿ ಹಾದಿಕೋಣೆಗೋರಿಗಳು ಮತ್ತು ಮೇಗುತಿ ದೇವಾಲಯದ ಹತ್ತಿರದ ಬಯಲಿನಲ್ಲಿ ಕಿಂಡಿಕೋಣೆಗಳು ಇದ್ದು ಈ ಎರಡು ಪ್ರಕಾರದ ಕಲ್ಗೋರಿಗಳು ಒಂದೇ ಸ್ಥಳದಲ್ಲಿ ದೊರೆತನೆಲೆ ಭಾರತದಲ್ಲಿ ಇದೊಂದೆ ಆಗಿದೆ.[೪೦] ಈ ಕಾರಣ ಈ ಸಂಸ್ಕೃತಿಯ ಮಹತ್ವದ ಸ್ಥಳವಾಗಿದೆ. ಇದರ ಸಮೀಪದ ಸಿದ್ದನಕೊಳ್ಳದಲ್ಲಿಯೂ ಸಹ ಬೃಹತ್ ಶಿಲಾಸಮಾಧಿಗಳ ಮತ್ತೊಂದು ಗುಂಪು ಶೋಧವಾಗಿದೆ.[೪೧]

ಮುಖ್ಯವಾಗಿ ಈ ಎಲ್ಲಾ ನೆಲೆಗಳನ್ನು ಅವಲೋಕಿಸಿದಾಗ ಈ ಸಂಸ್ಕೃತಿಯ ಜನರು ಸಮಾಧಿಗಳ ನಿರ್ಮಾಣಕ್ಕೆ ಕಲ್ಬೆಟ್ಟದ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿರುವುದು ಬೃಹದಾಕಾರದ ಬಂಡೆಗಳನ್ನು ಕೊರೆದು ತೆಗೆದು ಅವನ್ನು ನಿರ್ದಿಷ್ಟ ಸ್ಥಳಕ್ಕೆ ಸಾಗಿಸಿರುವುದು ವಿಶೇಷತೆಯಾಗಿದೆ. ಐಹೊಳೆ ಪ್ರದೇಶದ ಕಲ್ಗೋರಿಗಳು ಗಷ್ಟು ಗಲ್ಲಿನಿಂದ ನಿರ್ಮಿತವಾಗಿದ್ದರೆ, ಅಕ್ಕರಗಲ್ಲ ಮತ್ತು ಬಾಚಿನಗುಡ್ಡದ ಕಲ್ಗೋರಿಗಳು ಗ್ರಾನೈಟ್ ಕಲ್ಲಿನಿಂದ ನಿರ್ಮಿತವಾಗಿವೆ. ಅದೇ ರೀತಿಯಾಗಿ ಇತಿಹಾಸ ಕಾಲದ ವಾಸ್ತು ಕಲೆಗೆ ಸಂಬಂಧಿಸಿದಂತೆ ಔತ್ತರೇಯ ಮತ್ತು ದಾಕ್ಷಿಣಾತ್ಯ ವಾಸ್ತು ಶೈಲಿಗಳ ಸಮ್ಮಿಲನದ ಬೆಸುಗೆಯು ಈ ಪರಿಸರದ ಸುತ್ತಲೂ ಕಂಡುಬರುವುದು ಈ ನೆಲೆದ ಪ್ರಯೋಗಶೀಲತೆಯ ವೈಶಿಷ್ಟ್ಯವೆಂದು ಹೇಳಬಹುದು.

ಅಡಿಟಿಪ್ಪಣಿಗಳು :

೧. ಶೀಲಾಕಾಂತ ಪತ್ತಾರ, ೨೦೦೦ : ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ, ಪ್ರ.ಕ.ವಿ.ವಿ., ಹಂಪಿ, ಪು. ೧೧.

೨. ಪುರಾತತ್ವ ಪರಿಚಯ, ಶ್ರೀನಿವಾಸ ಪಾಡಿಗಾರ, ಪು. ೧೮.

೩. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು. ೯.

೪. ಅದೇ, ಪು. ೧೧.

೫. ಅದೇ, ಪು. ೧೨.

೬. ಅದೇ, ಪು. ೧೨.

೭. ಬಿ. ಷೇಕ್ ಅಲಿ (ಪ್ರ. ಸಂ.), ೧೯೯೭ : ಕರ್ನಾಟಕ ಚರಿತ್ರೆ, ಸಂಪುಟ-೧, ಪ್ರ.ಕ.ವಿ.ವಿ., ಹಂಪಿ, ಪು. ೯೬.

೮. ರಮೇಶ ನಾಯಕ (ಸಂ) ೨೦೦೭ : ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರ.ಕ.ವಿ.ವಿ., ಹಂಪಿ, ಪು. ೧.

೯. ಬಿ. ಷೇಕ್ ಅಲಿ (ಪ್ರ. ಸಂ.), ೧೯೯೭ : ಕರ್ನಾಟಕ ಚರಿತ್ರೆ, ಸಂಪುಟ-೧, ಪ್ರ.ಕ.ವಿ.ವಿ., ಹಂಪಿ, ಪು. ೯೬.

೧೦. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು. ೯.

೧೧. ಸುಂದರ ಅ. ೧೯೮೨ : ''ಮಲಪ್ರಭೆ ಬಯಲಿನ ಪ್ರಾಚೀನ ಸಂಸ್ಕೃತಿ : ಒಂದು ಸಮೀಕ್ಷೆ'' ಚಾಲುಕ್ಯಶ್ರೀ, ಬದಾಮಿ, ಪು. ೨.

೧೨. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು. ೯.

೧೩. ಅದೇ, ಪು. ೧೩.

೧೪. ಅದೇ, ಪು. ೧೩.

೧೫. ಅದೇ,ಪು. ೧೩.

೧೬. ಕೆ. ಬಿ. ಶಿವತಾರಕ್, ೨೦೦೧ : ಕರ್ನಾಟಕದ ಪುರಾತತ್ವ ನೆಲೆಗಳು, ಪ್ರ.ಕ.ವಿ.ವಿ., ಹಂಪಿ, ಪು. ೩೯೪.

೧೭. ಬಿ. ಷೇಕ್ ಅಲಿ, ಪುರ್ವೋಕ್ತ, ಪು. ೧೨೯.

೧೮. ಅದೇ, ಪು. ೧೧೬.

೧೯. ಅದೇ, ಪು. ೧೧೬.

೨೦. ಕರ್ನಾಟಕ ಗ್ಯಾಸಟಿಯರ್ ಭಾಗ-೧, ೧೯೮೪, ಬೆಂಗಳೂರು, ಪು. ೧೫೧.

೨೧. ಬಿ. ಷೇಕ್ ಅಲಿ, ಪುರ್ವೋಕ್ತ, ಪು. ೧೨೯.

೨೨. ಅದೇ, ಪು. ೧೨೯.

೨೩. ಕೆ. ಬಿ. ಶಿವತಾರಕ್, ಪುರ್ವೋಕ್ತ, ಪು. ೩೫೭.

೨೪. ಶೀಲಾಕಾಂತ ಪತ್ತಾರ, ಪುರ್ವೋಕ್ತ, ಪು. ೧೪.

೨೫. ಅದೇ, ಪು. ೧೪.

೨೬. ಕೆ. ಬಿ. ಶಿವತಾರಕ್, ಪುರ್ವೋಕ್ತ, ಪು. ೩೫೭.

೨೭. ಶೀಲಾಕಾಂತ ಪತ್ತಾರ, ಪುರ್ವೋಕ್ತ, ಪು. ೧೪.

೨೮. ಬಿ. ಷೇಕ್ ಅಲಿ, ಪುರ್ವೋಕ್ತ, ಪು. ೧೫೩.

೨೯. ಶೀಲಾಕಾಂತ ಪತ್ತಾರ, ಪುರ್ವೋಕ್ತ, ಪು. ೧೫.

೩೦. ಅದೇ, ಪು. ೧೫.

೩೧. ಎಸ್. ಎಸ್. ಸುಂಕಾಪುರ (ಸಂ) ೧೯೭೭, ಕರ್ನಾಟಕ ಭಾರತಿ, ಕ.ವಿ.ವಿ., ಧಾರವಾಡ, ಪು. ೮೦.

೩೨. ಅದೇ, ಪು. ೮೦.

೩೩. ಅದೇ, ಪು. ೮೦.

೩೪. ಶೀಲಾಕಾಂತ ಪತ್ತಾರ, ಪುರ್ರ್ವೋಕ್ತ, ಪು. ೧೫.

೩೫. ಅದೇ, ಪು. ೧೫.

೩೬. ಅದೇ, ಪು. ೧೫.

೩೭. ಅದೇ, ಪು. ೧೫.

೩೮. ಅದೇ, ಪು. ೧೫.

೩೯. ಅದೇ, ಪು. ೧೫.

೪೦. ಅದೇ, ಪು. ೧೫.

೪೧. ಅದೇ, ಪು. ೧೫.

ಅಧ್ಯಾಯ-ಮೂರು

ಇತಿಹಾಸ ಕಾಲ

ಮಾನವನು ನೆಲೆಯಾತೀತ ಹಂತದಿಂದ ಇಂದಿನವರೆಗೆ ಸಾಗಿ ಬಂದಿದ್ದಾನೆ. ಅಲೆಮಾರಿಯಾಗಿದ್ದ ಅವನು ಕ್ರಮೇಣ ಸಾಂಘಿಕ ಜೀವನವನ್ನು ಕಟ್ಟಿಕೊಂಡನು. ಸಾಂಘಿಕ ಜೀವನ ಕಾಲಾಂತರದಲ್ಲಿ ಬಹುಮುಖಿ ಆಯಾಮಗಳನ್ನು ಪಡೆದುಕೊಂಡಿತು. ಬದುಕಿನ ಕ್ರಮ ವಿಸ್ತರಣೆಯಾದಂತೆಲ್ಲಾ ಆ ಬದುಕನ್ನು ರೂಪಿಸುವ, ಬೆಳೆಸುವ ಯೋಚನಾಕ್ರಮಗಳು ಹುಟ್ಟಿಕೊಂಡವು. ಹೊಸ ಯೋಚನಾಕ್ರಮಗಳ ಆಗಮನದ ಬೆನ್ನಲ್ಲೇ ಅನೇಕ ಸಂಸ್ಥೆಗಳು ಜನಿಸಿದವು. ಸಮಾಜ ವಿಕಾಸ ಅಥವಾ ರಾಜ್ಯ ವಿಕಾಸದ ಇತಿಹಾಸವನ್ನು ಗಮನಿಸಿದರೆ ಹೇಗೆ ಹೊಸ ಸಂಸ್ಥೆಗಳು ಹುಟ್ಟಿಕೊಂಡವು ಎನ್ನುವುದರ ಅರಿವಾಗುತ್ತದೆ. ಕುಟುಂಬ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ರಾಜ್ಯ ವ್ಯವಸ್ಥೆ, ಸಾಂಸ್ಕೃತಿಕ ವ್ಯವಸ್ಥೆ ಎಂಬ ಹೊಸ ಮಾದರಿಗಳು ರೂಪಗೊಂಡವು. ಹೀಗೆ ಭಿನ್ನ ಗುಣಗಳ ಮನುಷ್ಯರು ಒಟ್ಟಿಗೆ ಬದುಕುವ ಅನಿವಾರ್ಯತೆಯನ್ನು ಕಂಡುಕೊಂಡರು. ಈ ಪ್ರಕ್ರಿಯೆಗಳು ಸಾವಿರಾರು ವರ್ಷಗಳಿಂದ ನಡೆದುಬಂದವು. ಈ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಕರ್ನಾಟಕದಲ್ಲಿ ಹಲವಾರು ಸಾಮ್ರಾಜ್ಯಗಳು ತಲೆಯೆತ್ತಿ ಆಡಳಿತ ನಡೆಸಿದವು. ಅವುಗಳಲ್ಲಿ ಮುಖ್ಯವಾಗಿ ಮೌರ್ಯರು, ಶಾತವಾಹರು, ಕದಂಬರು, ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರ ಅರಸರು ಇನ್ನೂ ಮುಂತಾದವರು ಈ ಪರಿಸರ ಸೇರಿದಂತೆ ಈ ರಾಜ್ಯದ ಆಚೆಯು ಅಧಿಕಾರ ನಡೆಸಿರುವರು. ಇಂತಹ ಸಾಮ್ರಾಜ್ಯಗಳ ಸಾವಿರಾರು ವರ್ಷಗಳ ಇತಿಹಾಸದ ಕಥನವನ್ನು ಅಧ್ಯಯನ ಮಾಡುವುದೇ ಒಂದು ದೊಡ್ಡ ಸೃಷ್ಟಿಯ ಅನುಭವ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕು ಕನ್ನಡ ನಾಡಿನಲ್ಲಿ ಆಳಿದ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಡುತ್ತಾ ಬಂದಿರುವದು ಪ್ರಾಚೀನ ಕಾಲದ ಶಾಸನ, ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳಿಂದ ಮನದಟ್ಟಾಗುವುದು. ಈ ಬಾದಾಮಿ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಈ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿದ್ದ ವಿವಿಧ ಅರಸು ಮನೆತನಗಳು ಹಾಗೂ ಪ್ರಾಚೀನ ಆಡಳಿತ ವಿಭಾಗಗಳನ್ನು ಕುರಿತು ಸಹ ನಿರೂಪಿಸಲಾಗಿದೆ. ಈ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿದ್ದ ಅರಸರು, ರಾಣಿಯರು, ಮಹಾ ಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ದೇವಾಲಯಗಳ ನಿರ್ಮಾಣಕ್ಕೆ ಉದಾರವಾಗಿ ದಾನ-ದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿರುವುದನ್ನು ತಿಳಿಯಯಬಹುದು.

೧. ನಂದರು ಮತ್ತು ಮೌರ್ಯರು :

ಬಾದಾಮಿಯ ದಕ್ಷಿಣ ದಿಕ್ಕಿನಲ್ಲಿರುವ ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳು ಹಾಗೂ ಆಗ್ನೆಯಕ್ಕಿರುವ ಬಳ್ಳಾರಿ ಜಿಲ್ಲೆಗಳಲ್ಲಿ ಮೌರ್ಯ ಸಾಮ್ರಾಟನಾದ ಅಶೋಕ ಮಹಾಶಯನ ಶಾಸನಗಳು ದೊರೆತಿವೆ. ಹಾಗಾಗಿ ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳ ಪರಿಸರವು ಮೌರ್ಯರ ಆಳ್ವಿಕೆಗೆ ಒಳಪಟ್ಟಿರಬಹುದಾಗಿದೆ. ಮಗಧದ ನಂದ ಮನೆತನವು ಕ್ರಿ.ಪೂ. ಸುಮಾರು ನಾಲ್ಕನೆಯ ಶತಮಾನದಲ್ಲಿ ಪಾಟಲೀಪುತ್ರದಿಂದ ಆಳುತ್ತಿದ್ದರು. 'ಕುಂತಳ ನಾಡು' ಎಂದೇ ಕರೆಯಲ್ಪಡುತ್ತಿದ್ದ ಕನ್ನಡ ನಾಡಿನ ಉತ್ತರ ಭಾಗವು ಅವರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಸಿಂಗಿರಾಜನು 'ಸಿಂಗಿ ರಾಜ ಪುರಾಣ'ದಲ್ಲಿ ಹೇಳಿದೆ.[೧] ಮೌರ್ಯಮನೆತನದ ಚಂದ್ರಗುಪ್ತನು (ಕಿ.ಪೂ. ೩೨೩-ಕಿ.ಪೂ. ೨೯೮) ಕೌಟಿಲ್ಯನ ಸಹಾಯದಿಂದ ನಂದರನ್ನು ನಾಶಮಾಡಿ ಮಗಧದ ಅಧಿಪತಿಯಾದನು. ಆಗ ಕನ್ನಡ ನಾಡು ಮೌರ್ಯ ಪ್ರಭುತ್ವಕ್ಕೆ ಒಳಪಟ್ಟಿತ್ತು.[೨] ಚಂದ್ರಗುಪ್ತನು ತನ್ನ ಜೀವನದ ಕೊನೆಗಾಲದಲ್ಲಿ ಜೈನ ಧರ್ಮವನ್ನು ಸ್ವೀಕರಿಸಿ ಶ್ರುತ ಕೇವಲಿ ಭದ್ರಬಾಹು ಮುನಿಯೊಂದಿಗೆ ಈ ನಾಡಿನ ಶ್ರವಣಬೆಳಗೊಳಕ್ಕೆ ಬಂದನೆಂದು ಶಾಸನಗಳು ಮತ್ತು ಸಾಹಿತ್ಯ ಆಕರಗಳಿಂದ ಸ್ಪಷ್ಟವಾಗುತ್ತದೆ.[೩] ಚಂದ್ರಗುಪ್ತನ ಮೊಮ್ಮಗ ಅಶೋಕ ಚಕ್ರವರ್ತಿಯ (ಕ್ರಿ.ಪೂ. ೨೭೩ ರಿಂದ ೨೩೨) ಆಳ್ವಿಕೆ ಕಾಲದ ೧೭ ಶಾಸನಗಳು ಈ ನಾಡಿನ (ಬ್ರಹ್ಮಗಿರಿ, ಸಿದ್ದಾಪುರ, ಜಟ್ಟಿಂಗರಾಮೇಶ್ವರ, ನಿಟ್ಟೂರು, ಉದಯಗೋಳಂ, ಮಸ್ಕಿ, ಕೊಪ್ಪಳ, ಸನ್ನತಿ)ಲ್ಲಿ ದೊರೆತಿವೆ. ಕನ್ನಡ ನಾಡಿನಲ್ಲಿ ಈ ಶಾಸನಗಳೇ ಅತ್ಯಂತ ಪ್ರಾಚೀನವಾಗಿವೆ. ಹೀಗಾಗಿ ಈ ನಾಡಿನ ಚಾರಿತ್ರಿಕ ಕಾಲಘಟ್ಟವನ್ನು ಮೌರ್ಯರ ಕಾಲದಿಂದ ಗುರುತಿಸಲಾಗುತ್ತದೆ.[೪] ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ಈ ಎರಡು ಮನೆತನಗಳಿಗೆ ಸಂಬಂಧಿಸಿದ ಕುರುಹುಗಳು ದೊರೆತಿಲ್ಲವಾದರೂ ಇತರೆಡೆಗಳಲ್ಲಿ ದೊರೆತ ಆ ಎರಡು ಮನೆತನಗಳ ಕುರುಹುಗಳಿಂದ ಈ ಪರಿಸರ ಆ ಮನೆತನಗಳ ಆಳ್ವಿಕೆಯ ಪ್ರಭಾವದಲ್ಲಿತ್ತೆಂಬುದು ಸ್ಪಷ್ಟ.

ಶಾತವಾಹನರು :

ಶಾತವಾಹನರು ಮೌರ್ಯರ ಅವನತಿಯ ನಂತರ ದಕ್ಷಿಣಭಾರತದಲ್ಲಿ ತಮ್ಮ ಅಧಿಕಾರವನ್ನು ಪ್ರಾರಂಭಿಸಿದರು. ಇವರ ಮೂಲ ಪುರುಷ 'ಸಿಮುಖ', ಈ ಸಾಮ್ರಾಜ್ಯದ ಪ್ರಖ್ಯಾತದೊರೆ 'ಗೌತಮಿಪುತ್ರ ಶಾತಕರ್ಣಿ' ಇವನು ತನ್ನ ದಿಗ್ವಿಜಯ ನೀತಿಯಿಂದಾಗಿ 'ತ್ರಿ ಸಮುದ್ರ ತೋಯಪೀತವಾಹನ' ಎಂಬ ಬಿರುದು ಪಡೆದುಕೊಂಡಿದ್ದಾನೆ. ಇದು ಅವನ ಸಾಮ್ರಾಜ್ಯದ ವಿಸ್ತಾರವನ್ನು ತಿಳಿಸಿಕೊಡುತ್ತದೆ. ಅಂದರೆ, ಪೂರ್ವಕ್ಕೆ ಬಂಗಾಳಕೊಲ್ಲಿ, ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ದಕ್ಷಿಣಕ್ಕೆ, ಹಿಂದೂ ಮಹಾಸಾಗರದವರೆಗಿನ ಭೂಮಂಡಲದ ಅಧಿಪತಿಯಾದ್ದನೆಂಬುದಾಗಿದೆ.[೫]

ಕನ್ನಡ ನಾಡಿನ ಉತ್ತರ ಭಾಗದಲ್ಲಿ ಅವರ ರಾಜಕೀಯ ಹಿಡಿತ ಸ್ಪಷ್ಟವಿದೆ. ಬನವಾಸಿ ಮತ್ತು ಸನ್ನತಿ, ಅವರ ಆಡಳಿತದ ಪ್ರಧಾನ ಕೇಂದ್ರಗಳಾಗಿದ್ದವು. ಚಂದ್ರವಳ್ಳಿ, ವಡಗಾಂವ್, ಮಾದವಪೂರ ಮುಂತಾದ ಇತರೆ ಕೇಂದ್ರಗಳು

ಅಸ್ತಿತ್ವದಲ್ಲಿದ್ದವು. ಆ ಕಾಲದಲ್ಲಿ ಸಂಸ್ಕೃತಿ ನೆಲೆಗೊಂಡಿದ್ದು ೨೫೦ನೆಲೆಗಳು ನಾಡಿನಾದ್ಯಂತ ಬೆಳಕು ಕಂಡಿವೆ.[೬] ಇವರ ಕಾಲಕ್ಕೆ ಸಂಬಂಧಿಸಿದ ಅನೇಕ ಸಾಂಸ್ಕೃತಿಕ ನೆಲೆಗಳು ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಪತ್ತೆಯಾಗಿವೆ.

ಪ್ರಸ್ತುತ ಹುಲಿಗೆಮ್ಮನಕೊಳ್ಳ ಪರಿಸರದ ವಾಪ್ತಿಯಲ್ಲಿ ಬರುವ ಬಾಚಿನಗುಡ್ಡ ಗ್ರಾಮದ ಪೂರ್ವ ದಿಕ್ಕಿನಲ್ಲಿ ಈ ಕಾಲಘಟ್ಟದ ಸಾಂಸ್ಕೃತಿಕ ನೆಲೆಯೊಂದು ಪತ್ತೆಯಾಗಿ (೨೦೦) ಉತ್ಖನನಗೊಂಡಿದೆ. ಈ ನೆಲೆಯು ಹುಲಿಗೆಮ್ಮನಕೊಳ್ಳದಿಂದ ದಕ್ಷಿಣಕ್ಕೆ ಸುಮಾರು ಕಿ.ಮೀ. ಅಂತರದಲ್ಲಿದೆ. (ಮಲಪ್ರಭಾ ನದಿಯ ಎಡದಂಡೆಯ ಮೇಲೆ) ಮತ್ತು ಬಾದಾಮಿ ಪಟ್ಟದಕಲ್ಲು ಮಾರ್ಗವಾಗಿ ಪಟ್ಟದಕಲ್ಲಿನಿಂದ ೧.೫ ಕಿ.ಮೀ. ಅಂತರದಲ್ಲಿ ಪಶ್ಚಿಮ ದಿಕ್ಕಿನಲ್ಲಿದೆ.

ಈ ನೆಲೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ, ಕನ್ನಡ ಸಂಶೋಧನ ಸಂಸ್ಥೆಯು ಬೆಳಕಿಗೆ ತಂದಿತ್ತು. (೧೯೪೧) ಈ ನೆಲೆಯು ಭೌಗೋಳಿಕವಾಗಿ ಎತ್ತರವಾದ ಪ್ರದೇಶದಲ್ಲಿದ್ದು ಗುಡ್ಡಕ್ಕೆ (ಮರಡಿಗೆ) ಹತ್ತಿಕೊಂಡಿದೆ. ಇಲ್ಲಿ ಸ್ಥಳೀಯರು ಹಾಳು ಮಣ್ಣಿಗಾಗಿ ಅಗೆದ ಗುಂಡಿಗಳಲ್ಲಿ ಆ ಕಾಲದ ಜನವಸತಿಯ ಕುರುಹುಗಳಾದ ಹಾಳು ಮಣ್ಣು, ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆಯ ಚೂರುಗಳು, ಬಿಳಿಯ ಬಣ್ಣದ ರೇಖಾಚಿತ್ರಗಳಿಂದ ಅಲಂಕೃತವಾದ ಪಾತ್ರೆಗಳು ಮತ್ತು ಮೃತ್ ಪಾತ್ರೆಯ ಅವಶೇಷಗಳು ಹೇರಳವಾಗಿ ದೊರೆತಿವೆ (ಅ.ಸುಂದರ).

ಈ ಹಾಳುಮಣ್ಣಿನ ನೆಲೆಯಲ್ಲಿ ಇಟ್ಟಿಗೆಯ ಚೂರುಗಳು ಹೊಳಪಾದ ಕೆಂಪು, ಕಪ್ಪು, ದ್ವಿವರ್ಣದ ಮತ್ತು ಬರಿ ಕಪ್ಪು ಇಲ್ಲವೇ ಕೆಂಪು ಬಣ್ಣದ ವಿವಿಧ ಮೃತ್ ಪಾತ್ರೆಗಳು, ಕಬ್ಬಿಣದ ಕಿಟ್ಟ ಮುಂತಾದವುಗಳು ವಿಪುಲವಾಗಿವೆ. ದ್ವಿವರ್ಣ ಪಾತ್ರೆಗಳು, ಬಿಳಿಯ ಬಣ್ಣದ ರೇಖಾಚಿತ್ರಗಳಿಂದ (Early Historical Period) ಅಲಂಕೃತವಾಗಿರುತ್ತವೆ. ಬ್ರಹ್ಮಗಿರಿ ಮತ್ತು ಮಸ್ಕಿಯಲ್ಲಿನ ಉತ್ಖನನಗಳ್ಲಲಿ ಕಂಡುಬಂದ ಇತಿಹಾಸ ಪ್ರಾರಂಭಕಾಲ (Early Historical Period) ದ ಸಾಂಸ್ಕೃತಿಕ ವಸ್ತುಗಳಿಗೂ ಈ ನೆಲೆಯಲ್ಲಿಯ ವಸ್ತುಗಳಿಗೂ ಬಹಳ ಹೋಲಿಕೆ ಇದ್ದು, ಈ ಸ್ಥಳಗಳ ಮತ್ತು ನೆಲೆಗಳಲ್ಲಿಯ ಜನವಸತಿಯ ಸಮಕಾಲೀನತೆಯನ್ನು ಸೂಚಿಸುತ್ತದೆ.[೭] ಅಂದಿನ ಜನಜೀವನದ ಬಗೆಗೆ ಕೆಲವೊಂದು ವಿಷಯಗಳು ಈ ಉತ್ಖನನಗಳಿಂದ ತಿಳಿದುಬಂದಿದೆ. ಇದರಿಂದಾಗಿ ಈ ಸಾಂಸ್ಕೃತಿಕ ನೆಲೆಯ ಕಾಲಮಾನವನ್ನು ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೩-೪ನೆಯ ಶತಮಾನದ ವರೆಗೆ ಎಂದು ಸ್ಥೂಲವಾಗಿ ಹೇಳಲಾಗಿದೆ.[೮]

ಆದರೆ, ಈ ಸ್ಥಳದಲ್ಲಿ ನಡೆದ ಉತ್ಖನನದಲ್ಲಿ ಟಂಕಿಸಿದ ನಾಣ್ಯಗಳು ದೊರೆತಿದ್ದು ಈ ಪ್ರದೇಶ ಶಾತವಾಹನರ ಮತ್ತು ಅವರ ಮಾಂಡಳೀಕರಾಗಿದ್ದ ಆನಂದ ವಂಶದ ಅರಸರಿಗೆ ಸೇರಿತ್ತೆಂದು ಹೇಳಲಾಗಿದೆ.[೯] ಈ ನಗರವು ಈಗಿನ

ಬಾಚಿನಗುಡ್ಡದಿಂದ ಪಟ್ಟದಕಲ್ಲಿನ ನದಿಯ ಸಮೀಪದವರೆಗೂ ಸುಮಾರು ೧. ೧.೫೦ ಕಿ.ಮೀ.ನಷ್ಟು ವಿಸ್ತಾರವಾಗಿತ್ತು ಎಂದು ಅಲ್ಲಲ್ಲಿಯ ಈ ಕುರುಹುಳಿಂದ ತೋರುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಮತ್ತು ಕಾಲಮಾನವನ್ನು ಗಮನಿಸಿದಾಗ ಗ್ರೀಕ್ ದೇಶದ ಪ್ರವಾಸಿ ಭೂಗೋಳ ತಜ್ಞನಾದ ಟಾಲೆಮಿಯು ಬರೆದ ''A Guide to Geography'' ಎಂಬ ಕೃತಿಯಲ್ಲಿ ಉಲ್ಲೇಖಿಸಿದ ಪೇತರಗಲ್ (ಪಟ್ಟದಕಲ್) ಮೂಲತಃ ಇದೇ ಸ್ಥಳವಾಗಿದ್ದು ಆ ಕಾಲದ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತೆಂದು ಅಭಿಪ್ರಾಯವಾಗಿದೆ.

ಅಷ್ಟೇ ಅಲ್ಲದೆ, ಈ ಕಾಲದ ನೆಲಗಳು ಬಾದಾಮಿಯಲ್ಲಿ ೧ನೇ ಪುಲಿಕೇಶಿಯ ಬಂಡೆಗಲ್ಲು ಶಾಸನದ ಹತ್ತಿರ ಎ. ವಿ. ನರಸಿಂಹ ಮೂರ್ತಿಯವರು ಗುರುತಿಸಿದ್ದಾರೆ. ಹತ್ತಿರದ ಪಟ್ಟದಕಲ್ಲಿನಲ್ಲಿ ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿ ಕಂಬಗಳಿಂದ ಕೂಡಿದ ಇಟ್ಟಿಗೆಯ ಮಂಟಪವಿದ್ದುದು ಉತ್ಖನನದಿಂದ ಶೋಧವಾಗಿದೆ ಮತ್ತು ಇಲ್ಲಿಯ ಜೈನ ನಾರಾಯಣ ದೇವಾಲಯದ ಹಿಂಭಾಗದಲ್ಲಿ ಖಡ್ಗಾಸನದಲ್ಲಿ ಕುಳಿತಿರುವ ತೀರ್ಥಂಕರ ಮೂರ್ತಿ ಮತ್ತು ಇಟ್ಟಿಗೆಯ ಜಿನಾಲಯ ದೊರೆತಿದೆ. ಗಳಗನಾಥ ಗುಡಿಯಿಂದ ೨೦೦ ಮೀಟರ್ ಅಂತರದಲ್ಲಿ ಈ ಕಾಲದ ಮಡಿಕೆಯ ಪಾತ್ರೆಗಳು ದೊರೇತಿವೆ.[೧೦] ಅಲ್ಲದೇ ಇದರ ಸುತ್ತಲಿನ ಪ್ರದೇಶಗಳಾದ ಐಹೊಳೆ, ಮಹಾಕೂಟ, ನಾಗನಾಥನಕೊಳ್ಳ ಮುಂತಾದ ಸ್ಥಳಗಳಲ್ಲಿ ಈ ಕಾಲದ ಸಾಂಸ್ಕೃತಿಕ ಅವಶೇಷಗಳು ದೊರೆತಿರುವುದು ಗಮನಿಸಬಹುದಾಗಿದೆ.

ಕದಂಬರು :

ಕರ್ನಾಟಕ ಇತಿಹಾಸದಲ್ಲಿ ಶಾತವಾಹನರ ನಂತರ ಪ್ರಬಲರಾದವರು. ಕದಂಬರು, ಇವರು ಕ್ರಿ.ಶ. ೪ನೇ ಶತಮಾನದಿಂದ ೬ನೇ ಶತಮಾನದವರೆಗೆ ಸ್ವತಂತ್ರವಾಗಿ ಆಳ್ವಿಕೆ ನಡೆಸಿದರು. ಈ ವಂಶದ ಸ್ಥಾಪಕ ಮಯೂರಶರ್ಮ ಕದಂಬರ ಆಳ್ವಿಕೆಯ ದಾಖಲೆಗಳು ಈ ಪರಿಸರದಲ್ಲಿ ಕಂಡುಬರದಿದ್ದರು ಹತ್ತಿರದ ಐಹೊಳೆಯಲ್ಲಿ ದುಂಡು ಶಿಲ್ಪದ ದ್ವಿಭುಜ ಬಾಹುವಿನ ಗಣಪತಿಯ ಶಿಲ್ಪದ ಲಕ್ಷಣಗಳನ್ನು ಆಧರಿಸಿ ಇದರ ಕಾಲವನ್ನು ಕ್ರಿ.ಶ. ಸುಮಾರು ೫ನೇ ಶತಮಾನವಾಗಿದ್ದು ಕದಂಬರದೆಂದು ತಿಳಿಯಲಾಗಿದೆ.[೧೧] ಇದರಿಂದಾಗಿ ಕದಂಬರ ಆಳ್ವಿಕೆಯಲ್ಲಿ ಈ ಪರಿಸರವು ಒಳಪಟ್ಟಿರಬಹುದೆಂದು ಹೇಳಬಹುದು. ಇವರ ಆಳ್ವಿಕೆಯಲ್ಲಿ ವಿಷಯ, ಮಂಡಲ, ರಾಷ್ಟ್ರ ಎಂಬ ವಿಭಾಗಗಳಿದ್ದವು. ಕ್ರಿ.ಶ. ಸುಮಾರು ೫೫೦ರ ವೇಳೆಗೆ ಕದಂಬರ ಆಳ್ವಿಕೆ ಕೊನೆಗೊಂಡು ಬಾದಾಮಿ ಚಲುಕ್ಯರ ಆಡಳಿತ ಪ್ರಾರಂಭಖವಾಯಿತು.

ಬಾದಾಮಿ ಚಾಲುಕ್ಯರು :

ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿರತಕ್ಕಂತ ಚಲುಕ್ಯ ಮನೆತನವನ್ನು ಬಾದಾಮಿ ಚಲುಕ್ಯರು ಎಂದು ಕರೆಯಲಾಗಿದೆ. ಈ ನಾಡಿನ ಸ್ಪಷ್ಟವಾದ ಚರಿತ್ರೆಯು ಚಲುಕ್ಯರ ಸಾಮ್ರಾಜ್ಯ ಸ್ಥಾಪನೆಯಿಂದ ಪ್ರಾರಂಭವಾಯಿತೆನ್ನಬಹುದು. ಕ್ರಿ.ಶ. ೬ನೇ ಶತಮಾನದ ಆದಿಯಲ್ಲಿ ಸಾಮ್ರಾಜ್ಯ ಸ್ಥಾಪನೆ ಮಾಡಿದ ಇವರು ೮ನೇ ಶತಮಾನದ ಉತ್ತರಾರ್ಧದವರೆಗೆ ಆಳ್ವಿಕೆ ನಡೆಸಿದರು. ಇದರಿಂದಾಗಿ ಬಾದಾಮಿ ನಾಡಿನ ಇತಿಹಾಸವೆಂದರೆ ಈ ಚಲುಕ್ಯರ ಇತಿಹಾಸವೇ ಆಗಿದೆ. ಇವರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲಿ ವಿಶಾಲವಾಗಿ ಹಬ್ಬಿದ್ದು ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದರೊಂದಿಗೆ ಭಾರತದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದ್ದಾರೆ.

ಮೂಲ : ಬಾದಾಮಿ ಚಲುಕ್ಯರ ಲಿಖಿತ ದಾಖಲೆಗಳು ತಮ್ಮ ಮೂಲದ ಕುರಿತು ಮೌನವಾಗಿವೆ. ಇವರ ವಂಶದ ಶಾಖೆಯಾಗಿ, ಬೆಳೆದು ಬಂದ ಕಲ್ಯಾಣದ ಚಾಲುಕ್ಯರ ಶಾಸನಗಳು ಮತ್ತು ಬಿಲ್ಹಣನ 'ವಿಕ್ರಮಾಂಕ ದೇವಚರಿತಂ' ಎಂಬ ಕೃತಿಗಳಿಂದ ತಿಳಿಯುವಂತೆ ಚಾಲುಕ್ಯ ಎಂಬ ಹೆಸರು ಬಂದಿದ್ದು ಚುಲುಕ ಎಂಬುದರಿಂದ. ಅದಕ್ಕೆ ಅಂಗೈ ಹಳ್ಳ ಎಂದು ಅರ್ಥ. ಸಂಧ್ಯೋಪಾಸನೆ ಮಾಡುತ್ತಿದ್ದಾಗ ಭೂಮಿಯಲ್ಲಿ ಒಂದೇ ಸಮನೇ ಕೆಡಕು ಹೆಚ್ಚುತ್ತಿರುವುದರಿಂದ ಅದನ್ನು ಕೊನೆಗೊಳಿಸಲು ಒಬ್ಬ ವೀರನನ್ನು ಅನುಗ್ರಹಿಸಬೇಕೆಂದು ಇಂದ್ರನು ಬ್ರಹ್ಮನನ್ನು ಕೋರಿದನು. ಬ್ರಹ್ಮನು ತನ್ನ ಚುಲಕ ಅಂದರೆ (ಬೊಗಸೆ) ಅಂಗೈಯನ್ನು ನೋಡಿದನು. ಅಲ್ಲಿಂದ ಒಬ್ಬ ಪರಾಕ್ರಮಿ ಚಾಲುಕ್ಯನು ಹುಟ್ಟಿ ಬಂದನು. ಇವನೇ ಚಾಲುಕ್ಯರ ಮೂಲಪುರುಷ ಎಂದು ಹೇಳುತ್ತವೆ.[೨]

ಪೂರ್ವ ಚಾಲುಕ್ಯರ ಶಾಸನಗಳು ಇನ್ನೊಂದು ಪೌರಾಣಿಕ ಸಂದರ್ಭವನ್ನು ವಿವರಿಸುತ್ತವೆ. ಭಗವಾನ್ ನಾರಾಯಣನಿಂದ ೫೨ ಜನ ರಾಜರು ವಿಜಯಾದಿತ್ಯನವರೆಗೆ ಆಯೋಧ್ಯೆಯಲ್ಲಿ ಆಳಿದರು. ಆಮೇಲೆ ಅಲ್ಲಿಂದ ದಕ್ಷಿಣಕ್ಕೆ ಬಂದರು. ಅಲ್ಲಿ ದಕ್ಷಿಣಪಥದಲ್ಲಿ ೧೬ ಜನ ರಾಜರು ಆಳಿದರು. ಆಮೇಲೆ ಅವರು ಕಳೆಗುಂದಿದರು. ಜಯಸಿಂಹನೆನ್ನುವವನು ಬಲವನ್ನು ಕೂಡಿಸಿಕೊಂಡು ರಾಷ್ಟ್ರಕೂಟನ ಮಗ ಇಂದ್ರನನ್ನು ಸೋಲಿಸಿದನು. ಆದರೆ ಇಂತಹ ಕತೆಗಳು ತರ್ಕ ಸಮ್ಮತವಲ್ಲ.[೧೩]

ಚಲುಕ್ಯ ಅಥವಾ ಚಾಲುಕ್ಯ ಎಂಬ ಹೆಸರು ಸ್ಥಳೀಯವಾಗಿ ರೈತಾಪಿ ಕುಟುಂಬ ಒಂದರಿಂದ ಬಂದಿದೆ ಎಂಬುದನ್ನು ಎಲ್ಲರೂ ಸೇರಿದಂತೆ ವಿದ್ವಾಂಸರೂ ಒಪ್ಪಿಕೊಳ್ಳುವ ಮಾತಾಗಿದೆ. ಬಾದಾಮಿ ಚಲುಕ್ಯರು ಸ್ಥಳೀಯ ರೈತಾಪಿ ಕುಟುಂಬದವರಾಗಿದ್ದು ಇವರ ಬಹುಸಂಖ್ಯಾತ ಶಾಸನಗಳಲ್ಲಿ ಉಲ್ಲೇಖವಾಗಿರುವ ಚಲ್ಕಿ, ಚಲ್ಕ್ಯ, ಚುಳುಕ, ಚಲುಕಿ, ಚಲುಕಿನ್ ಎಂಬ ಪದಗಳು ಕೃಷಿ ಉಪಕರಣವಾದ ಸಲುಕಿ, ಸಲುಕೆಯಿಂದ ಬಂದಿರುವುದಾಗಿದೆ. ಆದ್ದರಿಂದ

ಈ ಚಲುಕ್ಯರು ಮೂಲತಃ ಕೃಷಿಕರಾಗಿದ್ದು ಹಂತಹಂತವಾಗಿ ಅಧಿಕಾರಕ್ಕೆ ಬಂದಿದ್ದು ಈ ಉಪನಾಮವೇ ಮೂಲ ನಾಮಾಂಕಿತವಾಗಿ ಪರಿವರ್ತನೆಗೊಂಡುದಾಗಿದೆ. ಇವರು ವೈದಿಕ ಧರ್ಮದ ಆರಾಧಕರಾಗಿದ್ದು, ಇವರ ರಾಜಲಾಂಛನವು ವರಾಹವಾಗಿದೆ. ಇವರ ಸೈನ್ಯವನ್ನು ರಾಷ್ಟ್ರಕೂಟರು ''ಕರ್ನಾಟಕ ಬಲ'' ಎಂದು ಮಾನ್ಯ ಮಾಡಿದ್ದಾರೆ.[೧೪]

ಜಯಸಿಂಹ :

ಚಲುಕ್ಯ ಮನೆತನದ ಇತಿಹಾಸವು ಜಯಸಿಂಹನಿಂದ (ಕ್ರಿ.ಶ. ಸು. ೫೦೦-೫೨೦) ಪ್ರಾರಂಭವಾಗುತ್ತದೆ. ಮಹಾಕೂಟ ಸ್ತಂಭ ಶಾಸನವು[೧೫] ಈತನನ್ನು ಕುಬೇರ (ವೈಶ್ರವಣ)ನಿಗೆ ಹೋಲಿಸಿದೆ. ಐಹೊಳೆಯ ಪ್ರಸಸ್ತಿ ಶಾಸನವು, ಮಹಾಯೋಧನೆಂದೂ, ಚಂಚಲೆಯಾದ ರಾಜಲಕ್ಷ್ಮಿಯನ್ನು ನಿಗ್ರಹಿಸಿದವನೆಂದೂ ಹೇಳಿದೆ.[೧೬]

ರಣರಾಗ :

ರಣರಾಗನು ಜಯಸಿಂಹನ ಮಗನಾಗಿದ್ದು ಈತನ ನಂತರ ಅಧಿಕಾರವಹಿಸಿಕೊಂಡನು. (ಕ್ರಿ.ಶ. ೫೨೦ ರಿಂದ ೫೪೦) ಮಹಾಕೂಟ ಸ್ತಂಭಶಾಸನವು ಈತನನ್ನು ತಂದೆಯಂತೆ ಯೋಧನೂ, ಸದ್ಗುಣಿಯೂ ಆಗಿದ್ದನೆಂದು ಹೊಗಳಿದೆ. ಐಹೊಳೆಯ ಪ್ರಶಸ್ತಿ ಶಾಸನವು ಇವನನ್ನು ದಿವ್ಯಶಕ್ತಿ ಸಮನ್ವಯಿತ, ಜಗದೇಕನಾಥ ಎಂಬ ಅನೇಕ ವಿಶೇಷಣಗಳಿಂದ ಬಣ್ಣಿಸಿದೆ. ಪ್ರಾಯಶಃ ಜಯಸಿಂಹ ರಣರಾಗ ಕದಂಬರ ಸೈನ್ಯಾಧಿಕಾರಿಗಳಾಗಿ ಐಹೊಳೆಯಲ್ಲಿ ಆಡಳಿತ ನಡೆಸಿರಬಹುದು.[೧೭]

ಒಂದನೆಯ ಪುಲಕೇಶಿ :

ಇವನು ರಣರಾಗನ ಮಗನಾಗಿದ್ದು, ಚಲುಕ್ಯ ಸಾಮ್ರಾಜ್ಯದ ನಿಜವಾದ ಸ್ಥಾಪಕ ಎಂದು ಕರೆಯಲಾಗಿದೆ. ಶಾಸನಗಳಲ್ಲಿ ಇವನನ್ನು ಪೊಲಿಕೇಶಿ, ಪೊಲೆಶೇಶಿ, ಪುಲಿಕೇಶಿ ಎಂದು ಕರೆಯಲಾಗಿದೆ. ಕದಂಬರ ದೌರ್ಬಲ್ಯದ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಬಾದಾಮಿಯಲ್ಲಿ ಕ್ರಿ.ಶ. ೫೪೩[೧೮]ರಲ್ಲಿ ಅಬೇಧ್ಯ ಕೋಟೆಯೊಂದನ್ನು ನಿರ್ಮಿಸಿಕೊಂಡು ಸ್ವತಂತ್ರವಾಗಿ ಆಳ್ವಿಕೆ ನಡೆಸಿದನ. ಈತನು ಯುದ್ಧತಂತ್ರದಲ್ಲಿ ನಿಪುಣನಾಗಿದ್ದನೆಂಬುದಕ್ಕೆ ಆಯಕಟ್ಟಿನ ಸ್ಥಳವಾದ ಬಾದಾಮಿಯ ಕಲ್ಬೆಟ್ಟವನ್ನು ರಾಜಧಾನಿಯಾಗಿ ಆಯ್ಕೆ ಮಾಡಿಕೊಂಡಿರುವುದೆ ಸಾಕ್ಷಿಯಾಗಿದೆ. ಈತನು ನಿರ್ಮಿಸಿದ ಬಾದಾಮಿ ಕೊಟೆಯು ದಕ್ಷಿಣ ಭಾರತದ ಪ್ರಾಚೀನ ದುರ್ಗಗಳಲ್ಲಿ ಒಂದಾಗಿದೆ. ಇವನು 'ಅಶ್ವಮೇಧ' ಮೊದಲಾದ ಯಾಗಗಳನ್ನು ನೆರವೇರಿಸಿದನು. ಇವನ ಆಳ್ವಿಕೆಯಲ್ಲಿ ಬಾದಾಮಿ ಮತ್ತು ಅದರ ಪರಿಸರದಲ್ಲಿ ಕೊರೆದು ಮಾಡಿದ ಮತ್ತು ರಾಚನಿಕ ದೇವಾಲಯಗಳನ್ನು ನಿರ್ಮಿಸಿರಬಹುದಾಗಿದೆ. ಅಗಸ್ತ್ಯಕೆರೆ ಪ್ರಾಯಶಃ ಈತನ ಅವಧಿಯದು.[೧೯] ಒಂದನೆಯ ಪುಲಕೇಶಿಗೆ ಸೇಂದ್ರಕ ವಂಶದ ಶ್ರೀ ವಲ್ಲಭದೇವಿ ಮತ್ತು

ಇಂದುಕಾಂತಿ ಎಂಬ ರಾಣಿಯರಿದ್ದು, ಕೀರ್ತಿವರ್ಮ ಮತ್ತು ಮಂಗಳೇಶ ಈತನ ಮಕ್ಕಳಾಗಿದ್ದಾರೆ. ಇವನಿಗೆ ಪುರರಣ ಪರಾಕ್ರಮ ಮತ್ತು ಶ್ರೀಪೃಥ್ವಿ ವಲ್ಲಭ ಎಂಬ ಬಿರುದುಗಳಿದ್ದವು.[೨೦]

ಕೀರ್ತಿವರ್ಮ I :

ಒಂದನೇ ಪುಲಿಕೇಶಿಯ ಜೇಷ್ಠ ಪುತ್ರನಾದ ಕೀರ್ತಿವರ್ಮನು ತಂದೆಯಿಂದ ಪಡೆದುಕೊಂಡ ಸಾಮ್ರಾಜ್ಯವನ್ನು ವಿಸ್ತರಿಸುವ ಕಾರ್ಯ ಕೈಗೊಂಡನು. ಈ ಸಾಮ್ರಾಜ್ಯಕ್ಕೆ ತಂದೆಯು ಅಡಿಪಾಯ ಹಾಕಿದರೆ, ಅದನ್ನು ಬಹುಮುಖವಾಗಿ ಅಭಿವೃದ್ಧಿಗೊಳಿಸಿದ ಕೀರ್ತಿ, ಕೀರ್ತಿವರ್ಮನದಾಗಿದೆ. ಸುಮಾರು ಮೂರು ದಶಕಗಳ ಕಾಲ ಆಡಳಿತ ನಡೆಸಿದ ಈತನನ್ನು ರವಿಕೀರ್ತಿ ರಚಿಸಿದ ಐಹೊಳೆಯ ಪ್ರಶಸ್ತಿ ಶಾಸನವು ''ವಾತಾಪ್ಯ ಪ್ರಥಮ ವಿದಾತಾ''[೨೦] ಎಂದು ಹೊಗಳಿದೆ. ತನ್ನ ಸಾಮ್ರಾಜ್ಯದ ಸುತ್ತಲಿನ ಅರಸರುಗಳಾದ ನಳ, ಮೌರ್ಯ, ಕದಂಬರಿಗೆ ಕಾಳರಾತ್ರಿಯಾಗಿದ್ದನು.[೨೨] ಕದಂಬರಿಂದ ಉತ್ತರ ಕರ್ನಾಟಕದ ಭಾಗವನ್ನು ಮೌರ್ಯರಿಂದ ಕೊಂಕಣ ರಾಜ್ಯವನ್ನು, ಪೂರ್ವಕ್ಕೆ ನೆಲವಡಿ (ಬಳ್ಳಾರಿ-ಕರ್ನೂಲ) ಪ್ರದೇಶವನ್ನು ನಳರಿಂದ ವಶಪಡಿಸಿಕೊಂಡು ರಾಜ್ಯವನ್ನು ನಾಲ್ಕು ದಿಕ್ಕುಗಳಲ್ಲಿ ವಿಸ್ತರಿಸಿದನು. ಇವನು ಬಹುಸುವರ್ಣ, ಅಗ್ನಿಷ್ಟೋಮ ಮೊದಲಾದ ಯಜ್ಞಗಳನ್ನು ಆಚರಿಸಿದನು ಇವನ ಸಹೋದರನಾದ ಮಂಗಳೇಶನು ಬಾದಾಮಿಯಲ್ಲಿ ಒಂದು ಬೃಹತ್ ವಿಷ್ಣುಗೃಹವನ್ನು ನಿರ್ಮಿಸಿದನು. ಅದರಿಂದ ಬರುವ ಪುಣ್ಯವು ತನ್ನ ಅಣ್ಣನಿಗೆ ಸೇರಲಿ ಎಂದು ಬಯಸಿದನು. ಈ ವಿಷ್ಣುಗೃಹದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ೧೬ ಜನ ಬ್ರಾಹ್ಮಣರಿಗೆ ಸತ್ರ ನಡೆಸಲು 'ಲಾಂಜಿಗೇಶ್ವರ' (ನಂದಿಕೇಶ್ವರ) ಗ್ರಾಮವನ್ನು ದಾನವಾಗಿ ನೀಡಿದ ಉಲ್ಲೇಖವು ಈ ಗುಹಾಲಯದಲ್ಲಿ ಕಂಡುಬರುತ್ತದೆ.[೨೩]

ಈ ನಂದಿಕೇಶ್ವರ ಗ್ರಾಮವು ಹುಲಿಗೆಮ್ಮನಕೊಳ್ಳದಿಂದ ದಕ್ಷಿಣಕ್ಕೆ ೫ ಕಿ.ಮೀ. ಅಂತರದಲ್ಲಿದ್ದು, ಮಲಪ್ರಭಾ ನದಿಯ ಎಡ ದಂಡೆಯ ಮೇಲಿದೆ. ಫಲವತ್ತಾದ ಭೂ ಪ್ರದೇಶವನ್ನು ಹೊಂದಿರುವ ಈ ಪ್ರದೇಶವು ಬಾದಾಮಿ ಚಲುಕ್ಯರ ಕಾಲದಲ್ಲಿ ಮಹತ್ವದ ಆರ್ಥಿಕತೆಯ ನಾಡಾಗಿತ್ತು. ಈ ಗ್ರಾಮವನ್ನು ನಾರಾಯಣನ ಬಲಿಗಾಗಿ ಹಾಗೂ ೧೬ ಜನ ಬ್ರಾಹ್ಮಣರಿಗಾಗಿ ಸತ್ರ ನಡೆಸಲು ದಾನ ನೀಡಿರುವುದು ಈ ಪ್ರದೇಶದ ಫಲವತ್ತತೆ ಮತ್ತು ಕಂದಾಯದ ಆರ್ಥಿಕ ಮೂಲದ ಪ್ರಮುಖ ಪ್ರದೇಶವಾಗಿತ್ತೆಂದು ಹೇಳಬಹುದಾಗಿದೆ.

ರಾಜ್ಯ ವಿಸ್ತರಣೆಯ ಜೊತೆಗೆ ವಾತಾಪಿಯನ್ನು ಗುಹಾಲಯಗಳಿಂದ ಮತ್ತು ದೇವಾಲಯಗಳಿಂದ ಅಲಂಕರಿಸುವ ಕಲಾತ್ಮಕ ಚಟುವಟಿಕೆಗಳನ್ನು ಈತನೇ ಪ್ರಾರಂಭಿಸಿದನು. ಇಲ್ಲಿಯ ಬೃಹತ್ತಾದ ಮತ್ತು ಸುಂದರವಾದ ವಿಷ್ಣು ಗುಹಾಲಯವು ಈತನ ಕಾಲದಲ್ಲಿ ನಿರ್ಮಾಣವಾಗಿದೆ.

ಮಂಗಳೇಶ :

ಕೀರ್ತಿವರ್ಮನ ಮರಣಾನಂತರ ಮಕ್ಕಳು ಅಪ್ರಾಪ್ತವಯಸ್ಕರಾಗಿದ್ದರಿಂದ ಸಹೋದರನಾದ ಮಂಗಳೇಶನು ಅಧಿಕಾರಕ್ಕೆ ಬಂದನು. ಇವನನ್ನು ಸಿಂಹವಿಕ್ರಮನೆಂದು, ರಾಜನ ಶಕ್ತಿತ್ರಯ[೨೪] (ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿ)ಗಳನ್ನು ಹೊಂದಿದ್ದನೆಂದು ಕೊಂಡಾಡಲಾಗಿದೆ. ತನ್ನ ಆಳ್ವಿಕೆ ಪ್ರಾರಂಭಿಸುತ್ತಲೆ ಕಳಚೂರಿ ರಾಜ್ಯದ ಬುದ್ಧರಾಜನನ್ನು ಸದೆಬಡಿದು ಅಪಾರ ದ್ರವ್ಯವನ್ನು ವಶಪಡಿಸಿಕೊಂಡು ಮಹಾಕೂಟದ ಮುಕುಟೇಶ್ವರ ದೇವನಿಗೆ ಅರ್ಪಿಸಿ ಅಲ್ಲಿಯೇ ಧರ್ಮಸ್ತಂಭವನ್ನು ಸ್ಥಾಪಿಸಿದನು.[೨೫] ಮಂಗಳೇಶನು ದೃಢನಿರ್ಧಾರ, ಬಲ, ಸತ್ವ, ಧೈರ್ಯ, ಸ್ಥಿರಚಿತ್ತ, ಪೌರುಷ ಮತ್ತು ತ್ಯಾಗಗಳನ್ನು ಉಳ್ಳವನಾಗಿದ್ದು, ಮಾಧುರ್ಯ ಮತ್ತು ಗಾಂಭೀರ್ಯಗಳನ್ನು ಹೊಂದಿದ್ದನು. ಇವನು ತನ್ನ ಅಣ್ಣ ಕೀರ್ತಿವರ್ಮನಿಗೆ ಪುಣ್ಯ ಲಭಿಸಲಿ ಎಂದು ಬಾದಾಮಿಯ ಭವ್ಯವಾದ ವಿಷ್ಣುಗೃಹವನ್ನು ಕ್ರಿ.ಶ. ೫೭೮ರಲ್ಲಿ ನಿರ್ಮಿಸಿದನು.

ಅಧಿಕಾರ ದಾಹ ಹೆಚ್ಚಿದ ಮಂಗಳೇಶನು ತನ್ನ ಅಣ್ಣನ ಮಗ ಇಮ್ಮಡಿ ಪುಲಿಕೇಶಿಗೆ ಅಧಿಕಾರ ಬಿಟ್ಟುಕೊಡದೆ ತನ್ನ ಮಗನಿಗೆ ಬಿಟ್ಟುಕೊಡುವ ಆಲೋಚನೆಯಲ್ಲಿದ್ದನು. ಇದನ್ನರಿತ ಇಮ್ಮಡಿ ಪುಲಿಕೇಶಿಯು ರಾಜ್ಯದಿಂದ ಹೊರನಡೆದು ಬಾಣರ ಆಶ್ರಯ ಪಡೆದುಕೊಂಡು ಬೆಂಬಲಿಗರನ್ನು ಕಟ್ಟಿಕೊಂಡನು. ಮಂಗಳೇಶನಿಂದ ಪೆಟ್ಟುತಿಂದಿದ್ದ ಗಂಗ, ದಮಿಳ, ಚೋಳ, ಆಳುಪ ರಾಜರು ಇವನಿಗೆ ಸಹಾಯ ಮಾಡಿದರು. ನಂತರ ಕ್ರಿಶ. ೬೦೯-೧೦ರಲ್ಲಿ ಇವರೆಲ್ಲರ ಸಹಾಯದೊಂದಿಗೆ ನಾಡನೂರಿನ ಎಳ್ಪತ್ತು ಸಿಂಬಗ ಎಂಬಲ್ಲಿ ಮಂಗಳೇಶನ್ನು ಕೊಂದು ಚಲುಕ್ಯ ರಾಜ್ಯದ ಸಿಂಹಾಸನವೇರಿದನು.[೨೬]

ಇಮ್ಮಡಿ ಪುಲಿಕೇಶಿ :

ಇಮ್ಮಡಿ ಪುಲಿಕೇಶಿಯ ಕಾಲದ ಕೆಲವು ತಾಮ್ರ ಶಾಸನಗಳು ಬೇರೆ ಬೇರೆ ಕಡೆ ದೊರೆತಿದ್ದು, ಐಹೊಳೆಯಲ್ಲಿ ಇವನ ಕಾಲದ್ದೇ ಆದ ದೀರ್ಘ ಪಾಠ ಹೊಂದಿದ ಶಿಲಾಶಾಸನವು ಜಿನ ದೇವಾಲಯದ ಪೂರ್ವದ ಗೋಡೆಯ ಮೇಲೆ ದೊರೆತಿದೆ. ಈ ಶಾಸನದಲ್ಲಿ ಚಲುಕ್ಯವಂಶಾವಳಿಯನ್ನು ನೀಡಲಾಗಿದೆ. ಜಿನಸ್ತೋತ್ರದಿಂದ ಆರಂಭಿಸಲಾಗಿರುವ ಈ ಶಾಸನದಲ್ಲಿ ತಾನು ರಾಜನಾದ ಬಗೆಯನ್ನು ತಿಳಿಸುತ್ತಾ, ಸತ್ಯಾಶ್ರಯನಿಂದ ಆರಂಭಿಸಿ ತನ್ನ ತಂದೆ ಕೀರ್ತಿವರ್ಮನು ಸುರಲೋಕವನ್ನು ಸೇರಿದಾಗ ಮಂಗಳೇಶನು ರಾಜ್ಯವನ್ನು ನೋಡಿಕೊಂಡಂತೆಯೂ ಶತ್ರುಗಳ ಮೇಲೆ ಯುದ್ಧಗಳನ್ನು ಮಾಡಿ ಗೆದ್ದಂತೆಯು ವರ್ಣಿಸಿದೆ. ಮಂಗಳೇಶನು ತನ್ನ ಮಗನನ್ನು ರಾಜ್ಯಕ್ಕೆ ಉತ್ತರಾಧಿಕಾರಿ ಮಾಡಬೇಕೆಂದು ಹವಣಿಸಿದಾಗ ನಡೆದ ಘರ್ಷಣೆಯಲ್ಲಿ ಮಂಗಳೇಶನು ಮೃತನಾದನೆಂದು ತಿಳಿಸಿದೆ. ಇಮ್ಮಡಿ ಪುಲಿಕೇಶಿಯು ತಾನು ರಾಜ್ಯ ಪಡೆದ ಮೇಲೆ ಮಾಡಿದ ಯುದ್ಧಗಳ ವಿವರಗಳಿವೆ. ಪುಲಿಕೇಶಿಯು ಆರಂಭದಲ್ಲಿ ಅಪ್ಪಾಯಿಕ ಮತ್ತು

ಗೋವಿಂದರನ್ನು ಸೋಲಿಸಿದ್ದು, ವರದಾ ನದಿ ತೀರದಲ್ಲಿಯ ವನವಾಸಿಯನ್ನು ಗೆದ್ದುದ್ದು, ಗಂಗ, ಆಳುಪ, ಕೊಂಕಣ ನಂತರ ಲಾಟ, ಮಾಳವ, ಗೂರ್ಜರನ್ನು ಗೆದ್ದು ಮುಂದೆ ಉತ್ತರದ ದೊರೆಯಾದ ಹರ್ಷನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿದಂತೆ ಶಾಸನ ಮತ್ತು ಚೀನಾದೇಶದ (ಬೌದ್ಧ) ಪ್ರವಾಸಿಯಾದ ಹುಯೆನ್‌ತ್ಸಾಂಗ್ 'ಸಿಯುಕಿ' ಗ್ರಂಥ ಮತ್ತು ಹರ್ಷನ ಆಸ್ತಾನ ಕವಿಯಾದ ಬಾಣನ 'ಹರ್ಷಚರಿತೆ'ಯು ಹೇಳುತ್ತವೆ.[೨೭] ಮೂರು ಮಹಾರಾಷ್ಟ್ರಗಳಿಗೆ ಈತನೇ ಒಡೆಯನಾಗಿದ್ದಂತೆ ಐಹೊಳೆ ಶಾಸನ ಉಲ್ಲೇಖಿಸುತ್ತದೆ. ಸುತ್ತಮುತ್ತಲ ಮತ್ತು ಉತ್ತರದ ದಿಗ್ವಿಜಯಗಳು ಮುಗಿದ ಕೂಡಲೇ ಪೂರ್ವದ ದಿಗ್ವಿಜಯಗಳನ್ನು ಕೈಗೊಂಡು, ಕೋಸಲ, ಕಲಿಂಗ, ಪಿಷ್ಠಪುರವನ್ನು ಆಕ್ರಮಿಸಿದ. ಮುಂದೆ ದಕ್ಷಿಣದ ದಿಗ್ವಿಜಯದಲ್ಲಿ ಮುಖ್ಯವಾಗಿ ಕಂಚಿಯ ಪಲ್ಲವರಲ್ಲದೆ ಚೋಳ, ಕೇರಳ, ಪಾಂಡ್ಯರನ್ನು ಗೆದ್ದು ವಾತಾಪಿಯನ್ನು ಆಳುತ್ತಿದ್ದಂತೆ ಹೇಳಿದೆ. ಐಹೊಳೆ ಶಾಸನದ ಕಾಲವು ಕ್ರಿ.ಶ. ೬೩೪ ಆಗಿದ್ದು, ಇದನ್ನು ರಚಿಸಿದವನು ಪುಲಿಕೇಶಿಯ ಆಸ್ಥಾನಕವಿ ರವಿಕೀರ್ತಿ[೨೮]ಯಾಗಿದ್ದಾನೆ. ಪುಲಿಕೇಶಿಯ ಪ್ರಮುಖ ಸಾಧನೆಗಳಲ್ಲಿ ಉತ್ತರಾಪಥೇಶ್ವರನಾದ ಹರ್ಷನನ್ನು ಸೋಲಿಸಿದ್ದಾಗಿದೆ.

ಚಲುಕ್ಯರಾಜ್ಯದ ದಕ್ಷಿಣ ಭಾಗದಲ್ಲಿ ಆಳುತ್ತಿದ್ದ ಪಲ್ಲವರ ಮಹೇಂದ್ರ ವರ್ಮನನ್ನು ಸೋಲಿಸಿದನು. ನಂತರ ಈತನ ಮಗನಾದ ನರಸಿಂಹವರ್ಮನು ತನ್ನ ಆಳ್ವಿಕೆಯ ೧೩ನೇ ವರ್ಷದಲ್ಲಿ ಚಲುಕ್ಯ ಇಮ್ಮಡಿ ಪುಲಿಕೇಶಿಯ ಮೇಲೆ ದಾಳಿ ಮಾಡಿ ಚಲುಕ್ಯ ಸಾಮ್ರಾಜ್ಯವನ್ನು ವಶಪಡಿಸಿಕೊಂಡನು (೬೪೨) ಇದರಿಂದಾಗಿ ಕ್ರಿ.ಶ ೬೪೨ರಿಂದ ೬೫೫ರವರೆಗೆ ೧೩ ವರ್ಷಗಳ ಕಾಲ ಬಾದಾಮಿ ಚಲುಕ್ಯರ ಸಾಮ್ರಾಜ್ಯವು ಪಲ್ಲವರ ಅಧೀನದಲ್ಲಿತ್ತು. ಇದರಿಂದಾಗಿ ಪಲ್ಲವ ನರಸಿಂಹವರ್ಮನು ವಾತಾಪಿಗೊಂಡ[೨೯] ಎಂಬ ಬಿರುದು ಧರಿಸಿದನು. ಇದನ್ನು ಉಲ್ಲೇಖಿಸುವ ಶಾಸನ ಬಾದಾಮಿಯ ವಸ್ತು ಸಂಗ್ರಹಾಲಯದ ಹತ್ತಿರ ಬಂಡೆಯ ಮೇಲೆ ಕಂಡುಬರುತ್ತದೆ.

ಇಮ್ಮಡಿ ಪುಲಿಕೇಶಿಯು ತನ್ನ ಪೂರ್ವಜರು ಸ್ಥಾಪಿಸಿದ ಸಾಮ್ರಾಜ್ಯವನ್ನು ಸಾಕಷ್ಟು ವಿಸ್ತಾರಗೊಳಿಸಿದನು. ಇವನ ರಾಜ್ಯವು ಉತ್ತರದಲ್ಲಿ ನರ್ಮದೆಯಿಂದ, ದಕ್ಷಿಣದಲ್ಲಿ ಕಾವೇರಿಯವರೆಗೆ ವಿಸ್ತರಿಸಿತ್ತು. ಇವನು ಮಾಡಿದ ವಿಸ್ತಾರ ಮುಂದೆ ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯರವರೆಗೆ ಗಡಿಯಾಗಿ ನಿಲ್ಲುತ್ತದೆ.[೩೦] ಇವನು 'ರಣವಿಕ್ರಮ', 'ದಕ್ಷಿಣಪಥೇಶ್ವರ ಪೃಥ್ವಿವ್ಯಾಃ ಸ್ವಾಮಿ', 'ಸತ್ಯಾಶ್ರಯ' ಮುಂತಾದ ಬಿರುದುಗಳನ್ನು ಪಡೆದಿದ್ದನು.

ವಿಕ್ರಮಾದಿತ್ಯ Iನೇ :

ಮೊದಲನೆಯ ವಿಕ್ರಮಾದಿತ್ಯನು ಪಲ್ಲವರ ವಶದಲ್ಲಿದ್ದ ಚಲುಕ್ಯ ರಾಜ್ಯಲಕ್ಷ್ಮೀಯನ್ನು ಕ್ರಿ.ಶ. ೬೫೫ರಲ್ಲಿ ಬಿಡುಗಡೆ ಮಾಡಿದನು.[೩೧] ನಿಸ್ತೇಜವಾಗಿದ್ದ ಸಮ್ರಾಜ್ಯಕ್ಕೆ ಜೀವಕಳೆ ತಂದನು. ಈ ಸಾಹಸದಲ್ಲಿ 'ಚಿತ್ರಕಂಠ' ಎಂಬ ಕುದುರೆ ಹಾಗೂ 'ಖಡ್ಗ' ಮಾತ್ರ ಆತನಿಗೆ ನೆರವಾದವು.[೩೨] ಪಲ್ಲವ ನರಸಿಂಹವರ್ಮ, ಆತನ ಮಗ IIನೇ

ಮಹೇಂದ್ರವರ್ಮ ಮತ್ತು ಆತನ ಮಗನಾದ ೧ನೇ ಪರಮೇಶ್ವವರ್ಮ ಹೀಗೆ ಮೂರು ತಲೆಮಾರಿನ ಪಲ್ಲವರನ್ನು ವಿಕ್ರಮಾದಿತ್ಯನು ಸೋಲಿಸಿದನು. ವಿಕ್ರಮಾದಿತ್ಯನು ಸುದರ್ಶನಾಚಾರ್ಯರಿಂದ ಶಿವಮಂಡಲ ದೀಕ್ಷೆಯನ್ನು ಪಡೆದಿದ್ದು ಒಂದು ಮಹತ್ವದ ಘಟನೆ, ತನ್ನ ತಂದೆ, ಅಜ್ಜಂದಿರು ಪರಮ ಭಾಗವತರೆಂದು ಹೆಸರಾದಂತೆ ವಿಕ್ರಮಾದಿತ್ಯನು ಪರಮ ಮಾಹೇಶ್ವರನೆಂದು ಖ್ಯಾತನಾದ ಈತನ ನಂತರ ಬಂದ ಚಲುಕ್ಯ ಅರಸರೂ ಶೈವ ಧರ್ಮಕ್ಕೆ ಹೆಚ್ಚಿನ ಒಲವು ತೋರಿದ್ದರಿಂದ ಬಾದಾಮಿ ಪರಿಸರವು ಶೈವ ಕೇಂದ್ರವೆನಿಸಿತು.[೩೩] ವಿಕ್ರಮಾದಿತ್ಯನ ಅಣ್ಣನಾದ ಚಂದ್ರಾದಿತ್ಯನ ರಾಣಿಯಾದ ವಿಜಯಭಟ್ಟಾರಿಕೆಯು ತನ್ನ ಪತಿ ಚಂದ್ರಾದಿತ್ಯನ್ನು 'ಪ್ರಥ್ವೀವಲ್ಲಭ' ಮಹಾರಾಜ' ಎಂದು ಸಂಬೋಧಿಸಿದ್ದರೆ ವಿಕ್ರಮಾದಿತ್ಯನನ್ನು 'ಪೃಥ್ವೀವಲ್ಲಭ ಮಹಾರಾಜಾಧಿರಾಜ' ಎಂದು ಸಂಬೋಧಿಸಿದ್ದಾಳೆ.[೩೪]

ವಿನಯಾದಿತ್ಯ :

ವಿಕ್ರಮಾದಿತ್ಯನ ನಂತರ ಆತನ ಮಗನಾದ ವಿನಯಾದಿತ್ಯನು ಪಟ್ಟವೇರಿದನು. ಈತನ ಆಳ್ವಿಕೆಯು ಶಾಂತಿಯುತವಾಗಿತ್ತು. ಆದ್ದರಿಂದ ದೇವಾಲಯ ನಿರ್ಮಾಣ ಮತ್ತು ಧರ್ಮಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಯುವರಾಜನಿರುವಾಗಲೇ ಇವನು ರಾಜ್ಯ ರಕ್ಷಣೆಯಲ್ಲಿ ತಂದೆಗೆ ನೆರವಾಗಿದ್ದನು. ಕಾಂಚಿ, ಕೇರಳ, ಚೋಳ ಮೊದಲಾದ ಅರಸರನ್ನು ಸೋಲಿಸಿದುದಾಗಿ ಶಾಸನಗಳು ತಿಳಿಸುತ್ತವೆ. ವಿನಯಾದಿತ್ಯನ ಅರಸಿ ಮಹಾದೇವಿಯ ಗೌರವಾರ್ಥ ಲೋಕಾದಿತ್ಯ ಎಳಾ ಅರಸನು ಅಲಂಪುರದ ಸ್ವರ್ಗಬ್ರಹ್ಮ ದೇವಾಲಯವನ್ನು ನಿರ್ಮಿಸಿದನೆಂದು ಆ ದೇವಾಲಯದ ಕನ್ನಡ ಶಾಸನದಿಂದ ತಿಳಿದುಬರುತ್ತದೆ. ಇಟಗಿಯ ತೋರಣದ ಗುಡಿಯು ವಿನಯಾದಿತ್ಯನ ಕಾಲದ ವಾಸ್ತು ನಿರ್ಮಾಣ, ವಿನಯಾದಿತ್ಯನು ಉತ್ತರದ ಅರಸನೊಬ್ಬನನ್ನು ಗೆದ್ದು ಗಂಗಾ, ಯಮುನಾ ಹಾಗೂ ಪಾಲಿಧ್ವಜ ಚಿಹ್ನೆಗಳನ್ನು ಗೆಲುವಿನ ಪ್ರತೀಕವಾಗಿ ತಂದುದನ್ನು ಆತನ ಮಗನಾದ ವಿಜಯಾದಿತ್ಯನ ಶಾಸನಗಳು ಹೇಳುತ್ತವೆ.[೩೫] ವಿನಯಾದಿತ್ಯನ ಅರಸಿ ವಿನಯವತಿಯು ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರಿಗಾಗಿ ಕ್ರಿ.ಶ. ೬೯೯ರಲ್ಲಿ ತ್ರಿಕೂಟಾಲಯವನ್ನು ಕಟ್ಟಿಸಿದಳು. ಇದು ಕರ್ನಾಟಕ ದಕ್ಷಿಣ ಭಾರತದ ಪ್ರಪ್ರಥಮ ತ್ರಿಕೂಟ ದೇವಾಲಯವಾಗಿದೆ.[೩೬]

ವಿಜಯಾದಿತ್ಯ :

ವಿಜಯಾದಿತ್ಯನು ಸುಮಾರು ೩೮ ವರ್ಷಗಳ (ಕ್ರಿ.ಶ. ೬೯೬-೭೩೩) ಕಾಲ ಆಳ್ವಿಕೆ ಮಾಡಿದನು. ಅನೇಕ ಧರ್ಮಗಳನ್ನು ಪೋಷಿಸಿದ ಖ್ಯಾತಿ ಈತನದು. ಈತನ ತಾಯಿ ವಿನಯವತಿಯು ಬಾದಾಮಿಯ ತ್ರಿಕೂಟದೇವಾಲಯ ನಿರ್ಮಿಸಿದರೆ, ತಂಗಿಯಾದ ಕುಂಕುಮ ಮಹಾದೇವಿಯು ಲಕ್ಷ್ಮೇಶ್ವರದಲ್ಲಿ ಆನೆಸಜ್ಜೆ ದೇವಾಲಯ ಕಟ್ಟಿಸಿದಳು. ಇವನು ಪಟ್ಟದಕಲ್ಲಿನಲ್ಲಿ ವಿಜಯೇಶ್ವರ (ಸಂಗಮೇಶ್ವರ) ದೇವಾಲಯ ನಿರ್ಮಿಸಿದನು. ಈತನ ಪ್ರಾಣವಲ್ಲಭೆಯಾದ ವಿನಾಪೋಟೆಯು ಮಹಾಕೂಟೇಶ್ವರನಿಗೆ ರತ್ನ, ಪೀಠ, ರಜತಛತ್ರ ಮತ್ತು ಭೂದಾನ ಮಾಡಿದಳು.[೩೭] ವಿಜಯಾದಿತ್ಯನ

ಬ್ರಾಹ್ಮಣರಿಗೆ ಮಾತ್ರವಲ್ಲದೆ ದೀನ, ಅನಾಥ, ದರಿದ್ರ ಪ್ರಜೆಗಳಿಗೆ ಸಾವಿರಾರು ದಾನ ಮಾಡಿದ ಪ್ರಭುವೆಂದು ಹೊಗಳಲಾಗಿದೆ. ಅಷ್ಟುಮಾತ್ರವಲ್ಲದೆ ವೈಷ್ಣವ, ಬೌದ್ಧ, ಜೈನಧರ್ಮದ ಅನುಯಾಯಿಗಳಿಗೆ ರಕ್ಷಣೆ ನೀಡಿ ಪೃಥ್ವಿಯನ್ನು ಪಾವನಗೊಳಿಸಿದನೆಂದು ವರ್ಣಿಸಲಾಗಿದೆ. ಇವನು ನೃತ್ಯ ಸಂಗೀತದ ಕಲಾವಿದರಿಗೆ ಗೌರವ ನೀಡಿದ ಸಂಗತಿಯು ಪಟ್ಟದಕಲ್ಲಿನ ಶಾಸನವೊಂದರಿಂದ ತಿಳಿದುಬರುತ್ತದೆ.[೩೮]

ಇಮ್ಮಡಿ ವಿಕ್ರಮಾದಿತ್ಯ :

ವಿಜಯಾದಿತ್ಯನ ನಂತರ ಮಗನಾದ ಇಮ್ಮಡಿ ವಿಕ್ರಮಾದಿತ್ಯನು ಕ್ರಿ.ಶ. ೭೩೩ ರಿಂದ ಕ್ರಿ.ಶ. ೭೪೪ರವರೆಗೆ ಆಳ್ವಿಕೆ ನಡೆಸಿದನು. ಪಲ್ಲವರೊಂದಿಗೆ ಇವರ ವೈರತ್ವ ಎಂದಿನಂತೆ ನಡೆದೆ ಇತ್ತು. ಅವರನ್ನು ನಿರ್ಮೂಲನಗೊಳಿಸಬೇಕೆಂಬ ಉದ್ದೇಶದಿಂದ ಇಮ್ಮಡಿ ವಿಕ್ರಮಾದಿತ್ಯನು ತುಂಡಾಕ ವಿಷಯವನ್ನು ಹೊಕ್ಕು ನಂದಿಪೋತವರ್ಮನನ್ನು ಹೊಡೆದೋಡಿಸಿದನು ಮತ್ತು ರಾಜ ಚಿಹ್ನೆಗಳಾದ ಕುಟುಮುಖವಾದಿತ್ರ ಮತ್ತು ಸಮುದ್ರಘೋಷ ಎಂಬ ವಿಶೇಷ ವಾದ್ಯಗಳನ್ನು ಖಟ್ವಾಂಗ ಪತಾಕೆಯನ್ನು ಆನೆಗಳನ್ನೂ ಚಿನ್ನ ಮಾಣಿಕ್ಯ ರಾಶಿಯನ್ನು ವಶಪಡಿಸಿಕೊಂಡನು. ಇಮ್ಮಡಿ ವಿಕ್ರಮಾದಿತ್ಯನು ಕಂಚಿಯನ್ನು ವಶಪಡಿಸಿಕೊಂಡನಾದರೂ ಅದನ್ನು ನಾಶಮಾಡದೆ ಅಲ್ಲಿಯ ರಾಜಸಿಂಹೇಶ್ವರಿ ದೇವಾಲಯಕ್ಕೆ ಸುವರ್ಣರಾಶಿಯನ್ನು ಬಿಟ್ಟುಕೊಟ್ಟು ತನ್ನ ಔದಾರ್ಯವನ್ನು ತೋರಿದನು.[೩೯] ಪಾಂಡ್ಯ, ಚೋಳ, ಕೇರಳ, ಕಲಭ್ರರನ್ನು ಸೋಲಿಸಿ ದಕ್ಷಿಣ ಸಮುದ್ರ ತೀರದಲ್ಲಿ ಜಯಸ್ಥಂಭವನ್ನು ಸ್ಥಾಪಿಸಿದನು.

ಇವನ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿಯರು ಹೈಹಯ ವಂಶದ ರಾಜಕುಮಾರಿಯರಾಗಿದ್ದು ತಮ್ಮ ಪತಿಯು ಕಂಚಿಯನ್ನು ಮೂರು ಸಾರಿ ಜಯಿಸಿದ ಸವಿನೆನಪಿಗಾಗಿ ಪಟ್ಟದಕಲ್ಲಿನಲ್ಲಿ ಲೋಕೇಶ್ವರ (ವಿರೂಪಾಕ್ಷ) ಮತ್ತು ತ್ರೈಲೋಕೇಶ್ವರ (ಮಲ್ಲಿಕಾರ್ಜುನ) ದೇವಾಲಯಗಳನ್ನು ನಿರ್ಮಿಸಿದರು. ಸ್ಥಪತಿಗಳಾದ ಸರ್ವಸಿದ್ಧಿ ಆಚಾರಿ ಮತ್ತು ಗುಂಡ ಅನಿವಾರಿತಾಚಾರಿ ಇಬ್ಬರಿಗೂ 'ಪೆರ್ಜೆರೆಪು' ಎಂಬ ಬಿರುದು ನೀಡಿ ಸನ್ಮಾನಿಸಿದರು.[೪೦]

ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ಚಲುಕ್ಯರ ಕಲೆ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ಪಟ್ಟದಕಲ್ಲಿನ ಪಾಪನಾಥ, ಐಹೊಳೆಯ ಸುಪ್ರಸಿದ್ಧ ದುರ್ಗದ ದೇವಾಲಯ ನಿರ್ಮಾಣವಾದವು. ಮಹಾಕೂಟದಲ್ಲಿಯೂ ದೇವಾಲಯಗಳ ರಚನಾ ಕಾರ್ಯವು ತೀವ್ರಗೊಂಡಿತು. ಅಲ್ಲಿಯ ಪ್ರಾಕಾರದಲ್ಲಿಯ ರೇಖಾ ನಾಗರ ಶಿಖರ ವಿನ್ಯಾಸದ ಗುಡಿಗಳು ಈತನ ಕಾಲದಲ್ಲಿಯೇ ನಿರ್ಮಾಣಗೊಂಡವು.[೪೧]

ಇಮ್ಮಡಿ ಕೀರ್ತಿವರ್ಮ :

ಇಮ್ಮಡಿ ವಿಕ್ರಮಾದಿತ್ಯನ ನಂತರ ಅವನ ಮಗನಾದ ಇಮ್ಮಡಿ ಕೀರ್ತಿವರ್ಮನು ಸಿಂಹಾಸನವೇರಿದನು. ಇವನು ಕ್ರಿ.ಶ. ೭೪೪ರಿಂದ ಕ್ರಿ.ಶ. ೭೫೭ರವರೆಗೆ ಆಳ್ವಿಕೆ ನಡೆಸಿದನು. ಇವನ ಆಡಳಿತದ ಸಂದರ್ಭದಲ್ಲಿ ಸಾಮಂತರುಗಳು,

ಮಾಂಡಳೀಕರುಗಳು ಸ್ವತಂತ್ರರಾಗಲು ಪ್ರಯತ್ನಿಸುತ್ತಿದ್ದರು. ಇವರಲ್ಲಿ ರಾಷ್ಟ್ರಕೂಟರ ದಂತಿದುರ್ಗನು ಚಲುಕ್ಯರ 'ಕರ್ನಾಟಕಬಲ' ಸೈನ್ಯವನ್ನು ಸೋಲಿಸುವಲ್ಲಿ ಯಶಸ್ವಿಯಾದನು.[೪೩] ಇದರಿಂದ ಸುಮಾರು ಎರಡು ಶತಮಾನಗಳ ಕಾಲ ವೈಭವೋಪೇತ ಸಾಮ್ರಾಜ್ಯವಾಳಿದ ಬಾದಾಮಿ ಚಲುಕ್ಯರು ರಾಜಕೀಯ ತೆರೆಯಿಂದ ಕಣ್ಮರೆಯಾದರು.

ಪಲ್ಲವರು :

ಬಾದಾಮಿ ಚಲುಕ್ಯರ ಸಾಮ್ರಾಜ್ಯವನ್ನು ಪಲ್ಲವರು ಕೆಲವು ವರ್ಷಗಳವರೆಗೆ ವಶಪಡಿಸಿಕೊಂಡು ಆಳ್ವಿಕೆ ನಡೆಸಿದರು. ಇಮ್ಮಡಿ ಪುಲಕೇಶಿಯನ್ನು ಕ್ರಿ.ಶ. ೬೪೨ರಲ್ಲಿ ಪಲ್ಲವ ನರಸಿಂಹವರ್ಮನು ಪರಾಭವಗೊಳಿಸುವ ಮೂಲಕ ಈ ಸಾಮ್ರಾಜ್ಯ ವಶಪಡಿಸಿಕೊಂಡನು. ಬಾದಾಮಿಯಲ್ಲಿ ದೊರೆತ ಶಾಸನವೊಂದು ಪಲ್ಲವ ಗ್ರಂಥಲಿಪಿಯ ಸಂಸ್ಕೃತ ಭಾಷೆಯಲ್ಲಿರುವುದು ಕಂಡುಬರುತ್ತದೆ. ಈ ಶಾಸನವು (ನರ)ಸಿಂಹ ಮಹಾಮಲ್ಲನ ಉಲ್ಲೇಖವಿರುವುದನ್ನು ತಿಳಿಸುವುದು.[೪೪] ಇದರಿಂದಾಗಿ ಇಮ್ಮಡಿ ಪುಲಕೇಶಿಯ ಮಗ ಒಂದನೆಯ ವಿಕ್ರಮಾದಿತ್ಯನು ಪಲ್ಲವರನ್ನು ಸದೆಬಡೆಯುವವರೆಗೆ ಬಾದಾಮಿ ಚಲುಕ್ಯರ ಸಾಮ್ರಾಜ್ಯ ಪಲ್ಲವರ ಆಳ್ವಿಕೆಗೆ ಒಳಪಟ್ಟಿದ್ದು ಇದರಿಂದಾಗಿ ಹುಲಿಗೆಮ್ಮಕೊಳ್ಳ ಪರಿಸರವು ಪಲ್ಲವರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದಾಗಿದೆ.

ರಾಷ್ಟ್ರಕೂಟರು :

ಕರ್ನಾಟಕದ ರಾಜಕೀಯದಿಂದ ಬಾದಾಮಿ ಚಲುಕ್ಯರು ಅಧಪತನಗೊಂಡ ನಂತರ ಇಲ್ಲಿ ರಾಷ್ಟ್ರಕೂಟರು ಆಳ್ವಿಕೆ ಪ್ರಾರಂಭಿಸುತ್ತಾರೆ. ಬಾದಾಮಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದ ಚಲುಕ್ಯರನ್ನು ರಾಷ್ಟ್ರಕೂಟರ ದೊರೆಗಳಾದ ದಂತಿದುರ್ಗ (ಕ್ರಿ.ಶ. ೭೫೪) ಮತ್ತು ಒಂದನೆಯ ಕೃಷ್ಣ (ಕ್ರಿ.ಶ. ೭೫೭) ಪದಚ್ಯುತಗೊಳಿಸಿ ಸ್ವತಂತ್ರವಾದ ಆಳ್ವಿಕೆಯನ್ನು ಪ್ರಾರಂಭಿಸಿದರು. ಇವರಿಗೆ ಸಂಬಂಧಿಸಿದ ಶಾಸನಾಧಾರಗಳು ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ದೊರೆತಿಲ್ಲವಾದರೂ ಸುತ್ತಲಿನ ಪರಿಸರದಲ್ಲಿ ಕಂಡುಬಂದಿದೆ. ಮಾನ್ಯಖೇಟವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿರ ತಕ್ಕಂತ ಇವರು ಬಾದಾಮಿ ಚಲುಕ್ಯರ ಆಡಳಿತ ಪದ್ಧತಿಗಳನ್ನೇ ಮುಂದುವರೆಸಿದರು. ಇವರಿಗೆ ಸಂಬಂಧಿಸಿದ ಶಾಸನಗಳು ಹುಲಿಗೆಮ್ಮಕೊಳ್ಳದಿಂದ ಸುಮಾರು ೫ ಕಿ.ಮೀ. ದೂರದಲ್ಲಿರುವ ಪಟ್ಟದಕಲ್ಲು ಮತ್ತು ೭ ಕಿ.ಮೀ. ದೂರದಲ್ಲಿರುವ ಮಹಾಕೂಟ ಹಾಗೂ ಬಾದಾಮಿ, ಐಹೊಳೆಗಳಲ್ಲಿ ದೊರೆತಿವೆ.

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಶಾಸನದಲ್ಲಿ ಧಾರಾವರ್ಷ ಕಲಿವಲ್ಲಭನ ಉಲ್ಲೇಖ ಬಂದಿದೆ. ಈ ಧಾರಾವರ್ಷ ಕಲಿವಲ್ಲಭ ಎಂಬ ವಿಶೇಷಣಗಳು ರಾಷ್ಟ್ರಕೂಟ ಒಂದನೆಯ ಕೃಷ್ಣನ ಮಗನಾದ ಧ್ರುವನಿಗೆ ಇತ್ತು. ಈತ ಕ್ರಿ.ಶ. ೭೮೦ ರಿಂದ ೭೯೩ರವರೆಗೆ ರಾಜ್ಯಭಾರ ಮಾಡಿದ ಇವನ ಆಳ್ವಿಕೆಯ ಕಾಲದಲ್ಲಿದ್ದ ಸೂಳೆ ಗೋಯಿನ್ದಪೊಡ್ಡಿಯ

ಮಗಳು ಬಾದಿವೊಡ್ಡಿ ಎಂಬುವವಳು ಶ್ರೇಷ್ಠವಾದ ಗೋಸಾಸವೇ ಮೊದಲಾದವುಗಳನ್ನು ದೇವಾಲಯಕ್ಕೆ ನೀಡಿದಂತೆ ಹೇಳಿದೆ.[೪೫]

ಐಹೊಳೆಯ ಶಾಸನವೊಂದರಲ್ಲಿ ಅಮೋಘವರ್ಷನ ಉಲ್ಲೇಖವಿದ್ದು ಅವನು ನವರಾಜ್ಯವನ್ನು ಆಳುತಿದ್ದಂತೆ (ನವರಾಜ್ಯಂಗೆಯೇ) ಹೇಳಿದೆ. ಈ ಶಾಸನ ಕಾಲ ಕ್ರಿ.ಶ. ೮೧೪-೮೧೫ ಇರಬಹುದು. ಇವನ ನಂತರ ಇಮ್ಮಡಿ ಕೃಷ್ಣನು ಪಟ್ಟಕ್ಕೆ ಬರುತ್ತಾನೆ (೮೭೮-೯೧೪). ಇವನ ಶಾಸನಗಳು ಐಹೊಳೆಯಲ್ಲಿ ದೊರೆತಿದ್ದು ಇವನಿಗೆ ಅಕಾಲವರ್ಷ ಎಂಬ ವಿಶೇಷಣವೂ ಇರುತ್ತದೆ. ಇದೇ ವಿಶೇಷಣ ಮೂರನೆಯ ಕೃಷ್ಣನಿಗೂ ಇತ್ತು. ಐಹೊಳೆಯ ಹುಚ್ಚಿಮಲ್ಲಿಗುಡಿಯ ಬಳಿ ಇರುವ ವೀರಗಲ್ಲಿನಲ್ಲಿ ಇವನ ಹೆಸರು ಉಲ್ಲೇಖವಾಗಿದ್ದು, ವಿವರಗಳು ಹಾಳಾಗಿವೆ. ಐಹೊಳೆಯ ಗಳಗನಾಥ ಗುಡಿಯ ಬಳಿ ಇರುವ ಕ್ರಿ.ಶ. ೯೦೯ರ ಶಾಸನದಲ್ಲಿ ನಗರ ಸಮುದಾಯವು ಮೋನಿಭಟಾರರಿಗೆ ದಾನ ನೀಡಿದಂತೆ ಹೇಳಿದೆ.[೪೬]

ಮಹಾಕೂಟ ಮತ್ತು ಬಾದಾಮಿಯ ಶಾಸನದಲ್ಲಿ ಜಗತುಂಗ ನೆಂಬುವನನ ಉಲ್ಲೇಖವಿದ್ದು ಇವನು ಇಮ್ಮಡಿ ಕೃಷ್ಣನ ಆಳ್ವಿಕೆಯಲ್ಲಿ ಇದ್ದಂತೆ ತೋರುತ್ತದೆ. ಈ ಎರಡು ಸ್ಥಳಗಳಲ್ಲಿ ದೊರೆತ ಶಾಸನದ ಪಾಠ ಒಂದೇ ಆಗಿದ್ದು 'ಉತ್ತಮಗಳ್ಳ' ಎಂಬುವವನು ಕಡಿತಲೆಯನ್ನು ಹಿಡಿದು ಕಾಳಗದಲ್ಲಿ ಹೋರಾಡಿ ೧೯೫೬ ಜನರನ್ನು ಕೊಂದಂತೆ ಹೇಳಿದೆ. ಆದರೆ ಇದರಲ್ಲಿ ಎಲ್ಲಿ ? ಏಕೆ ? ಎಂಬ ವಿವರಗಳಿಲ್ಲಿ ಇವನಿಗೆ 'ನಿತ್ಯವರ್ಷ' ಎಂಬ ವಿಶೇಷಣವಿದ್ದುದ್ದನ್ನು ಕೆಲವು ಶಾಸನಗಳಿಂದ ತಿಳಿಯಬಹುದು. ಈ ಕೃಷ್ಣನ ಆಳ್ವಿಕೆಯ ನಂತರ ರಾಜ್ಯಭಾರ ಮಾಡಿದ ಕೊಟ್ಟಿಗನ ಶಾಸನವೊಂದು ಕ್ರಿ.ಶ. ೯೭೨ರಲ್ಲಿ ದೊರೆತಿದ್ದು ಅದೊಂದು ಗೋಸಾಸನ ವೀರಗಲ್ಲಾಗಿದೆ.[೪೭]

ಕ್ರಿ.ಶ. ೯೩೩ರ ಕಾಲಕ್ಕೆ ಸಂಬಂಧಿಸಿದ ''ಬಪ್ಪವರಸ''ನೆಂಬುವವನ ಶಾಸನ ದೊರೆತಿದ್ದು. ಇದರಲ್ಲಿ ತನ್ನನ್ನು ಮಹಾಸಾಮಂತನೆಂದು ಕರೆದುಕೊಂಡಿದ್ದಾನೆ. ಇವನಿಗೆ ರತ್ನಾವಳೋಕ, ರಣಧುರಧವಳ, ಕಟಕದಿವಾಕರ, ವೀರಗೋಪಾಳ ಕಿರಿಯ ಭೈರವ ಮುಂತಾದ ವಿಶೇಷಣಗಳಿರುವುದು ಕಂಡುಬರುತ್ತವೆ.[೪೮] ಇದರಿಂದಾಗಿ ಇವನು ಪ್ರಮುಖ ಮಾಂಡಳೀಕನಾಗಿದ್ದಾನೆಂಬುದರಲ್ಲಿ ಸಂಶಯವಿಲ್ಲ. ಇದನ್ನು ಅವಲೋಕಿಸಿದಾಗ ಈ ಮಹಾಕೂಟಕ್ಕೆ ಹತ್ತಿಕೊಂಡಿರುವ ಈ ಪರಿಸರ (ಹುಲಿಗೆಮ್ಮನಕೊಳ್ಳ ಪರಿಸರ)ವು ಈ ಮಹಾಮಾಂಡಳೀಕನ ಆಡಳಿತಕ್ಕೆ ಒಳಪಟ್ಟಿರಬಹುದೆಂದು ಹೇಳಬಹುದಾಗಿದೆ. ಆದರೆ ಈ ಶಾಸನದಲ್ಲಿ ಅಲ್ಲಿ ಆಳುತ್ತಿದ್ದ ರಾಜನ ಹೆಸರು ಉಲ್ಲೇಖಿಸಿಲ್ಲ.

ಕಲ್ಯಾಣದ ಚಾಲುಕ್ಯರು :

ಕ್ರಿ.ಶ. ೧೦ನೇ ಶತಮಾನ ಉತ್ತರಾರ್ಧದಲ್ಲಿ ರಾಷ್ಟ್ರಕೂಟ ಆಳ್ವಿಕೆಯು ಕುಂಠಿತವಾಗುತ್ತಲೇ ಕಲ್ಯಾಣದ ಚಾಲುಕ್ಯರ ಇಮ್ಮಡಿ ತೈಲನು ಕ್ರಿ.ಶ. ೯೭೩ರಲ್ಲಿ ಆಳ್ವಿಕೆ ಪ್ರಾರಂಭಿಸುತ್ತಾನೆ.[೪೯] ಇವನ ಆರಂಭ ಕಾಲದ ಶಾಸನವೊಂದು

ಹುಲಿಗೆಮ್ಮನಕೊಳ್ಳ ಪರಿಸರಕ್ಕೆ ಹತ್ತಿರದ ಐಹೊಳೆಯಲ್ಲಿ ದೊರೆತಿದೆ. ಇದರ ಕಾಲಾವಧಿ ಕ್ರಿ.ಶ. ೯೯೦ ಆಗಿದೆ. ನಂತರ ಈ ಚಾಲುಕ್ಯರ ಪ್ರಮುಖ ಅರಸನಾಗಿರತಕ್ಕಂತ ಇಮ್ಮಡಿ ಜಯಸಿಂಹ ಶಾಸನವೊಂದು ಹುಲಿಗೆಮ್ಮನಕೊಳ್ಳದಿಂದ ದಕ್ಷಿಣಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿ ಬನಶಂಕರಿಯಲ್ಲಿ ದೊರೆತಿದೆ. ಇದರ ಕಾಲವು ಕ್ರಿ.ಶ. ೧೦೧೯ ಆಗಿದೆ. ಈ ಶಾಸನವು ಜಯಸಿಂಹನ ಮಹಾಮಂಡಳೇಶ್ವರನೆಂದು ಹೇಳಿಕೊಂಡಿರುವ ಭೀಮದೇವ ಎಂಬುವವನನ್ನು ಉಲ್ಲೇಖಿಸುತ್ತದೆ. ಇವನನ್ನು ''ರಾಷ್ಟ್ರಕೂಟ ಕುಲತಿಲಕ'' ಎಂದು ಕರೆಯಲಾಗಿದೆ. ಆದರೆ ಇವನು ರಾಷ್ಟ್ರಕೂಟರ ಯಾವ ಸಾಖೆಯವನೆಂದು ಹೇಳಿಲ್ಲ. ಇದರಿಂದ ರಾಷ್ಟ್ರಕೂಟರು ಅಧಿಕಾರ ತ್ಯಜಿಸಿದ್ದರೂ ಅಲ್ಲಲ್ಲಿ ರಾಷ್ಟ್ರಕೂಟ ವಂಶದವರು ಇದ್ದಿರಬಹುದು[೫೦] ಮತ್ತೊಂದು ಶಾಸನದಲ್ಲಿ ಮಹಾಸಾಮಂತನಾಗಿದ್ದ ಕೇತಿಮಯ್ಯನ ಉಲ್ಲೇಖವಿದ್ದು ಇವನನ್ನು ಸಾಹಸಭೀಮ, ನೆಲುಗೋಟೆಮಲ್ಲ, ಪ್ರಭು, ಮಂತ್ರ, ಉತ್ಸಾಹ, ಶಕ್ತಿತ್ರಯಸಂಪನ್ನ, ಯಿಡುವರಾದಿತ್ಯ ಮುಂತಾಗಿ ಕರೆದಿದೆ.[೫೧]

ಇಮ್ಮಡಿ ಜಯಸಿಂಹನ ನಂತರ ಅವನ ಮಗನಾದ ಒಂದನೆಯ ಸೋಮೇಶ್ವರನು ಅಧಿಕಾರಕ್ಕೆ ಬರುತ್ತಾನೆ. ಇವನು ಕ್ರಿ.ಶ. ೧೦೪೬ ರಿಂದ ೧೦೬೮ ರವರೆಗೆ ಆಳ್ವಿಕೆ ಮಾಡುತ್ತಾನೆ. ಇವನಿಗೆ ತ್ರೈಲೋಕ್ಯಮಲ್ಲ ಎಂಬ ವಿಶೇಷಣವಿತ್ತು. ಇವನ ಕಾಲಕ್ಕೆ ಸಂಬಂಧಿಸಿದ (ಕ್ರಿ.ಶ. ೧೦೬೭) ಶಾಸನವೊಂದು ಐಹೊಳೆ[೫೨]ಯಲ್ಲಿ ದೊರೆತಿದೆ. ಇವನ ನಂತರ ಹಿರಿಯ ಮಗನಾದ ಭುವನೈಕ್ಯಮಲ್ಲ ಸೋಮೇಶ್ವರನು ಅಧಿಕಾರಕ್ಕೆ ಬರುತ್ತಾನೆ. ಪಟ್ಟದಕಲ್ಲಿನ ಕ್ರಿ.ಶ. ೧೦೭೦ರ ಶಾಸನದಲ್ಲಿ ಇವನ ಆಳ್ವಿಕೆಯಲ್ಲಿ ನೊಳಂಬರ ಬಿರುದುಗಳನ್ನು ಧರಿಸಿದ್ದ ಸಿಂಹಣನು (ಜಯಸಿಂಹ-IV) ಕಿಸುಕಾಡೆಪ್ಪತ್ತು ಕಿಸುವೊಳಲು ಆರುಗ್ರಾಮಗಳನ್ನು ತ್ರಿಭೋಗಾಭ್ಯಂತರ ಸಿದ್ಧಿಯಾಗಿ ಆಳುತ್ತಿದ್ದಂತೆ ಉಲ್ಲೇಖವಿದೆ.[೫೩] ನಂತರ ಕಲ್ಯಾಣದ ಚಾಲುಕ್ಯರ ಶ್ರೇಷ್ಠ ಅರಸನಾದ ೬ನೇ ವಿಕ್ರಮಾದಿತ್ಯನನ್ನು ಕುರಿತು ಐಹೊಳೆ ಮತ್ತು ಕಟಗೇರಿಯಲ್ಲಿ ಶಾಸನಗಳು ದೊರೆತಿವೆ. ಐಹೊಳೆಯ ಕ್ರಿ.ಶ. ೧೧೧೯ರ ಶಾಸನವು ವಿಕ್ರಮಾದಿತ್ಯನ ಕಾಲದಲ್ಲಿ ಬಸದಿಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.[೫೪] ಇವನನಂತರ ಮೂರನೆಯ ತೈಲ (ಕ್ರಿ.ಶ. ೧೧೪೯-೬೨) ನಿಗೆ ಸಂಬಂಧಿಸಿದ ಶಾಸನವೊಂದು ಪಟ್ಟದಕಲ್ಲಿನಲ್ಲಿ ದೊರೆತಿದೆ. ಈ ಶಾಸನವು ಚಾವುಂಡನು ಕಿಸುಕಾಡು ಬಾಗಡೆಗೆ, ಕೆಳವಾಡಿ, ನಾಡುಗಳನ್ನು ಆಳುತ್ತಿದ್ದಂತೆಯೂ ರಾಜಧಾನಿಪಟ್ಟಣ, ಪಟ್ಟದ ಕಿಸುವೊಳಲನ್ನು ದೇಮಲದೇವಿ ಮತ್ತು ಆಚಿದೇವ ಕುಮಾರನು ಕುಮಾರವೃತ್ತಿಯಿಂದ ಆಳುತ್ತಿದ್ದಂತೆ ಹೇಳಿದೆ.[೫೫] ಈ ರೀತಿಯಾಗಿ ಕಲ್ಯಾಣದ ಚಲುಕ್ಯರ ಶಾಸನಗಳು ಅವರ ಆಡಳಿತವನ್ನು ಕುರಿತು ಈ ಭಾಗದಲ್ಲಿ ತಿಳಿಸಿಕೊಡುತ್ತವೆ. ಹಾಗೇ ಇವರ ಕಾಲ ದೇವಾಲಯಗಳ ನಿರ್ಮಾಣದ ದೃಷ್ಟಿಯಿಂದ ಕರ್ನಾಟಕದ ಸಮೃದ್ಧಿಯ ಕಾಲವೆಂದು ಹೇಳಬಹುದು. ಈ ಪರಿಸರದ ಸುತ್ತಮುತ್ತಲಿನ ಪ್ರದೇಶಗಳಾದ ಬಾದಾಮಿಯಲ್ಲಿ ವಿರೂಪಾಕ್ಷ ದೇವಾಲಯ, ಅಗಸ್ತ್ಯ ತೀರ್ಥದ ಉತ್ತರ ದಂಡೆಯ ಮೇಲಿರುವ ಮಲ್ಲಿಕಾರ್ಜುನ ಪಂಚಲಿಂಗೇಶ್ವರ ಘಡಿಯ ಗುಡಿಗಳು ಇವರ ಕಾಲದ ನಿರ್ಮಾಣವಾಗಿವೆ.

ಸಿಂಧರು :

ಕಲ್ಯಾಣ ಚಾಲುಕ್ಯರ ಮಾಂಡಳಿಕರಾಗಿ ಸಿಂಧರು ಈ ಭಾಗವನ್ನಾಳಿದರು. ಸಿಂಧ ಕುಲದ ಇಮ್ಮಡಿಸಿಂಗನು ಇಮ್ಮಡಿ ಸೋಮೇಶ್ವರನ ಮಹಾಮಂಡಲೇಶ್ವರನಾಗಿ ಕಿಸುಕಾಡು ೭೦ ಪ್ರದೇಶವನ್ನು ಕ್ರಿ.ಶ. ೧೦೭೬ರಲ್ಲಿ ಆಳುತ್ತಿದ್ದನು. ಆತನ ಮಗನಾದ ಇಮ್ಮಡಿ ಆಚುಗಿ ಹಾಗೂ ಮೊಮ್ಮಗನಾದ ಒಂದನೆಯ ಪೆರ್ಮಾಡಿ ಈ ಪ್ರದೇಶವನ್ನು ಆರನೆಯ ವಿಕ್ರಮಾದಿತ್ಯ ಮತ್ತು ಇಮ್ಮಡಿ ಜಗದೇಕಮಲ್ಲನ ಮಾಂಡಲೀಕರಾಗಿ ಆಳಿದರು. ಒಂದನೆಯ ಪೆರ್ಮಾಡಿಯ ತಮ್ಮನಾದ ಇಮ್ಮಡಿಚಾವುಂಡನು ಮುಮ್ಮಡಿ ತೈಲನ ಮಾಂಡಲೀಕನಾಗಿದ್ದನು. ಇವನು ಕಿಸುಕಾಡನ್ನು ಆಳುತ್ತಿದ್ದನು. ಈ ಕುರಿತು ಪಟ್ಟದಕಲ್ ಶಾಸನದಿಂದ ತಿಳಿಯುತ್ತದೆ. ಬಾದಾಮಿಯ ಕ್ರಿ.ಶ ೧೧೫೫ರ ಶಾಸನದಲ್ಲಿ ಸಿಂಧ್ ಚಾಮುಂಡನ ಪತ್ನಿ ಲಕ್ಷ್ಮಿದೇವಿಯ ವರ್ಣನೆಯಿದ್ದು ಆಕೆಯ ಸೂಂಡಿ (ಸೂಡಿ), ಹೊಸವೂರು (ಹೊಸುರು), ಕಡಕೆರೆ ಮೊದಲಾದ ಗ್ರಾಮಗಳನ್ನು ಆಳುತ್ತಿದ್ದಂತೆ ಹೇಳಿದೆ. ಪಟ್ಟದಕಲ್ಲಿನ ಕ್ರಿ.ಶ. ೧೧೬೩ರ ಶಾಸನದಲ್ಲಿ ಈ ಸಿಂಧರ ವಂಶಾವಳಿಯನ್ನು ಹೇಳಿ ಚಾವುಂಡನ ಪತ್ನಿ ಆಳುತ್ತಿದ್ದಂತೆ ಹೇಳಿದೆ. ಐಹೊಳೆ ಕ್ರಿ.ಶ. ೧೧೯೯ರ ಶಾಸನದಲ್ಲಿ ಇದೇ ಚಾವುಂಡನ ಪತ್ನಿ ಸಿರಿಯಾದೇವಿಯ ಮಕ್ಕಳು ವೀರಬಿಜ್ಜಳದೇವ ಮತ್ತು ವಿಕ್ರಮಾದಿತ್ಯರು ಕಿಸುಕಾಡು-೭೦, ಬಾಗಡೆಗೆ-೭೦, ಕೆಳವಾಡಿ-೩೦೦ನ್ನು ಆಳುತ್ತಿದ್ದಂತೆ ಹೇಳಿದೆ.

ವಿಜಯನಗರ ಸಾಮ್ರಾಜ್ಯ :

ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೩೩೬ರಲ್ಲಿ ಸಂಗಮನ ಮಕ್ಕಳಾದ ಹಕ್ಕಬುಕ್ಕರ ನೇತೃತ್ವದಲ್ಲಿ ಸ್ಥಾಪಿತವಾಯಿತು. ಬಾದಾಮಿಯಲ್ಲಿ ಈ ವಿಜಯನಗರ ಅರಸರ ಶಾಸನಗಳು ದೊರೆತಿದ್ದು ಈ ಪ್ರದೇಶವು ಅವರ ಆಳ್ವಿಕೆಗೆ ಒಳಪಟ್ಟಿರುವುದನ್ನು ಅವುಗಳು ದೃಢಪಡಿಸುತ್ತವೆ. ಈ ಕಾಲಕ್ಕೆ ಸಂಬಂಧಿಸಿದ ಒಂದನೆಯ ಹರಿಹರನು ಅರಿರಾಯವಿಭಾಡ, ಭಾಷೆಗೆ ತಪ್ಪುವ ರಾಯರಗಂಡ, ಪೂರ್ವಪಶ್ಚಿಮ ಸಮುದ್ರಾಧಿಪತಿ ಎಂಬ ವಿಶೇಷಣಗಳನ್ನು ಪಡೆದಿದ್ದ, ಇವನು ಬಾದಾಮಿಯ ಕೋಟೆಯ ಪೂರ್ವದ ಭಾಗವನ್ನು ಕಟ್ಟಿಸಿದಂತೆ ಹೇಳಿದೆ.[೫೭] ನಂತರ ಇವರ ಶಾಸನಗಳು ಬನಶಂಕರಿದೇವಾಲಯದ ಜೀರ್ಣೋದ್ಧಾರ, ಬಾದಾಮಿ ಕೋಟೆಯ ಜೀರ್ಣೋದ್ಧಾರ ಮತ್ತು ವೈಷ್ಣವ ಗುಹೆಯಲ್ಲಿ ವಿಠಲದೇವರನ್ನು ಪ್ರತಿಷ್ಠಾಪಿಸಿದ ಸಂಗತಿಗಳು (ಕ್ರಿ.ಶ. ೧೫೩೭) ಕಂಡು ಬರುತ್ತವೆ. ಬಾದಾಮಿ ಪರಿಸರದಲ್ಲಿ ಸದಾಶಿವರಾಯನ ಕಾಲದ ಶಾಸನಗಳು ಹೆಚ್ಚಾಗಿ ದೊರೆಯುತ್ತವೆ. ಕ್ರಿ.ಶ. ೧೫೩೭ರಲ್ಲಿ ಬಾದಾಮಿಯ ಬನಶಂಕರಿ ದೇವಾಲಯವನ್ನು ಚಿಕ್ಕಚನ್ನಪ್ಪನಾಯಕ ಎಂಬುವವನು ಜೀರ್ಣೋದ್ಧಾರ ಮಾಡಿಸುತ್ತಾನೆ. ಬಾದಾಮಿಯ ಕೋಟೆಯನ್ನು ಬಲಪಡಿಸುತ್ತಾನೆ.[೫೮] ಕ್ರಿ.ಶ. ೧೫೪೭ರ ಸುಮಾರಿಗೆ ಇಲ್ಲಿ ರಚನಾ ಚಟುವಟಿಕೆಗಳು ಹೆಚ್ಚಾಗಿ ನಡೆದಿರುವುದು ಇಲ್ಲಿಯ ಶಾಸನಗಳಿಂದ ತಿಳಿದು ಬರುತ್ತದೆ. ಇದರಿಂದಾಗಿ ಬಾದಾಮಿಯು ಈ ಭಾಗದ ಆಡಳಿತದ

ಕೇಂದ್ರವಾಗಿ ಪರಿಗಣಿತವಾಗಿತ್ತೆಂದು ತಿಳಿಯಬಹುದಾಗಿದೆ. ನಂತರ ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸತಂಗಡಗಿ ಕದನದ ತರುವಾಯ ಈ ಸಾಮ್ರಾಜ್ಯವು ಅಸ್ತಂಗತವಾಗಿ ಈ ಪ್ರದೇಶ ಆದಿಲ್‌ಶಾಹಿಗಳ ರಾಜ್ಯಕ್ಕೆ ಒಳಪಟ್ಟಿತು.

ಆದಿಲ್ ಶಾಹಿಗಳ ನಂತರ ಈ ಪ್ರದೇಶವು ಸವಣೂರಿನ ನವಾಬನ ಅಧೀನವಾಯಿತು. ಕ್ರಿ.ಶ. ೧೭೪೬ರ ಒಪ್ಪಂದದ ಮೇರೆಗೆ ನವಾಬನು ಬಾದಾಮಿಯನ್ನು ಮೂರನೆಯ ಪೇಶ್ವೆನಿಗೆ ಬಿಡಬೇಕಾಯಿತು. ಆದರೆ ನವಾಬನು ಬಿಡಲಿಲ್ಲ. ಆಗ ಮರಾಠಾ ಪೇಶ್ವೆಯು ನಿಜಾಮನೊಂದಿಗೆ ಕೂಡಿಕೊಂಡು ಬಾದಾಮಿಯನ್ನು ಕ್ರಿ.ಶ. ೧೭೫೬ರಲ್ಲಿ ಕಸಿದುಕೊಂಡನು. ಈ ರಾಜಕೀಯ ಒತ್ತಡಗಳಲ್ಲಿ ಬಾದಾಮಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಜರ್ಝರಿತವಾಯಿತು. ಕ್ರಿ.ಶ. ೧೭೭೪-೭೮ರ ಅವಧಿಯಲ್ಲಿ ಕೃಷ್ಣಾ ನದಿಯ ದಕ್ಷಿಣಕ್ಕಿರುವ ಮರಾಠಾ ರಾಜ್ಯದ ಭಾಗಗಳನ್ನು ಹೈದರ ವಶಪಡಿಸಿಕೊಂಡನು. ನಾನಾ ಫಡ್ನವೀಸನ ನಿಜಾಮನ ಜೊತೆಗೂಡಿದ ಸೈನ್ಯದಿಂದ ೧೭೮೬ ಮೇ ೧ರಂದು ಬಾದಾಮಿ ಪ್ರದೇಶವನ್ನು ಆಕ್ರಮಿಸಿದ. ಯುದ್ಧದಲ್ಲಿ ಟಿಪ್ಪು ಜಯಗಳಿಸಿದ. ಆದರೆ, ೧೭೮೭ರ ಶಾಂತಿ ಒಪ್ಪಂದವು ಮರಾಠರಿಗೆ ಲಭದಾಯಕವಾಯಿತು. ಬಾದಾಮಿ, ನರಗುಂದ, ಗಜೇಂದ್ರಗಡ ಮತ್ತು ಕಿತ್ತೂರುಗಳನ್ನು ಟಿಪ್ಪು ಕೊಡಬೇಕಾಯಿತು. ಮುಂದೆ ೧೮೧೮ರಲ್ಲಿ ನಡೆದ ಮರಾಠಾ ಯುದ್ಧದಲ್ಲಿ ಜನರಲ್ ಮನ್ರೋ ಬಾದಾಮಿಯನ್ನು ವಶಪಡಿಸಿಕೊಂಡ. ಬಾದಾಮಿ ಬ್ರಿಟಿಷರ ಆಡಳಿತಕ್ಕೆ ಸೇರಿತು.

ಸಾತಾರಾದ ರಾಜಾ ಪ್ರತಾಪಸಿಂಗನನ್ನು ಬ್ರಿಟಿಷ ಸರಕಾರವು ೧೮೩೯ರಲ್ಲಿ ಪದಚ್ಯುತಗೊಳಿಸಿತು. ರಾಜನಲ್ಲಿ ನಿಷ್ಠೆಯುಳ್ಳ ಒಂದು ಕಣ್ಣಿನ ಯುವಕನಾದ ನರಸಿಂಹ ದತ್ತಾತ್ರೆಯ ಪೇಟ್ಕರನು ಬಂಡೆದ್ದನು. ೧೨೫ ಅರಬ ಸೈನಿಕರನ್ನು ಕೂಡಿಕೊಂಡು ಬಾದಾಮಿಯನ್ನು ಮುತ್ತಿದನು. ತಾನೇ ಅರಸನೆಂದು ಸಾರಿದನು ಆದರೆ ಒಂದು ವಾರದೊಳಗೆ ಎ.ಬೆಟ್ಟಿಂಗ್‌ಟನ್ ನೇತೃತ್ವದಲ್ಲಿ ಧಾವಿಸಿದ ಬ್ರಿಟಿಷ್ ಸೈನ್ಯವು ಬಾದಾಮಿಯನ್ನು ಮರಳಿ ದಕ್ಕಿಸಿಕೊಂಡಿತು. ನರಸಿಂಹ (ನರಸಪ್ಪ) ಸೆರೆಯಾದನು. 'ಬಾದಾಮಿಯ ಬಂಡಾಯ' ವಿಫಲವಾಯಿತು. ಬ್ರಿಟಿಷರ ಸಂಕೋಲೆಗಳಿಂದ ಬಾದಾಮಿ ೧೯೪೭ರಲ್ಲಿಯೇ ಬಿಡುಗಡೆಯಾಯಿತು.

ಅಡಿ ಟಿಪ್ಪಣಿಗಳು :

೧. ಸಿಂಗಿರಾಜ ಪುರಾಣ, ಪು. ೪೨.

೨. ಬಿ. ಷೇಕ್ ಅಲಿ (ಸಂ), ೧೯೯೭, ಕರ್ನಾಟಕ ಚರಿತ್ರೆ, ಸಂಪುಟ- II, ಪ್ರ.ಸ.ವಿ.ವಿ., ಹಂಪಿ, ಪು. ೨೮೭.

೩. ಅದೇ, ಪು. ೨೮೭.

೪. ಲಕ್ಷ್ಮಣ ತೆಲಗಾವಿ, ಮೌರ್ಯ ಮತ್ತು ಶಾತವಾಹನ ಯುಗ, ಪು. ೧೩.

೫. ಕರ್ನಾಟಕ ಚರಿತ್ರೆ, ಸಂಪುಟ-೧, ಪು. ೩೦೩.

೬. ಮೌರ್ಯ ಮತ್ತು ಶಾತವಾಹನ ಯುಗ, ಪು. ೧೩.

೭. ಕರ್ನಾಟಕ ಭಾರತಿ-೧೯೭೨, ಪುಟ, ೩೬ (ಸಪುಟ-೫-೧).

೮. ಅದೇ, ಪು. ೩೬.

೯. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ೨೦೦೬, ಪ್ರ.ಕ.ವಿ.ವಿ., ಹಂಪಿ, ಪು.

೧೦. ಕರ್ನಾಟಕ ಭಾರತಿ, ೧೯೭೨, ಪು. ೩೫, (ಸಂಪುಟ೫-೨).

೧೧. ಕರ್ನಾಟಕ ಚರಿತ್ರೆ, ಸಂ-೧, ಪು.೪೧೩.

೧೨. ಅದೇ, ಪು. ೪೩೫.

೧೩. ಅದೇ, ಪು. ೪೩೬.

೧೪. ಅದೇ, ಪು. ೪೩೬.

೧೫. I.A., XIX, 185.

೧೬. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ, ಸಾಂಸ್ಕೃತಿಕ ಅಧ್ಯಯನ, ಪ್ರ.ಕ.ವಿ.ವಿ., ಹಂಪಿ, ಪು. ೧೯.

೧೭. ಅದೇ, ಪು. ೧೯-೨೦.

೧೮. ಬಾಗಲಕೋಟ ಜಿಲ್ಲೆ, ಶಾಸನ ಸಂಪುಟ-೯, ಪು. ೩೩೭.

೧೯. ಶೀಲಾಕಾಂತ ಪತ್ತಾರ, ಪೂರ್ವೋಕ್ತ, ಪು. ೨೦.

೨೦. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. XXX.

೨೧. I.A. Vol. viii, 55.

೨೨. I.A. Vol. viii, 237.

೨೩. ಬಾಗಲಕೋಟ ಜಿಲ್ಲೆ ಶಾಸನ ಸಂಪುಟ, ಪು. ೨೬೩-೬೪.

೨೪. I.A. x, 82, p. 57.

೨೫. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. ೩೪೬-೪೭.

೨೬. ಶ್ರೀನಿವಾಸ ಪಾಡಿಗಾರ, ೨೦೦೪, ಭಾರತೀಯ ಇತಿಹಾಸದ ಸಾಸನ ಆಕರಗಳು, ರಾಮಾಶ್ರಯ ಪಬ್ಲಿಕೇಷನ್ಸ್, ಧಾರವಾಡ, ಪು. ೯೧.

೨೭. ಎ. ಮುರಿಗೆಪ್ಪ (ಪ್ರ. ಸಂ.), ೨೦೦೯, ಬಾದಾಮಿ ಚಾಲುಕ್ಯರು, ಪ್ರ.ಕ.ವಿ.ವಿ., ಹಂಪಿ, ಪು. ೬೫.

೨೮. ಶ್ರೀನಿವಾಸ ಪಾಡಿಗಾರ, ೨೦೦೪, ಭಾ. ಇ. ಶಾಸನ ಆಕರಗಳು, ೯೦.

೨೯. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. ೨೮೮.

೩೦. ಅದೇ ಪು. XXXii

೩೧. E.I. IX, p. 99.

೩೨. EI, IX, p. 205.

೩೩. ಶಿಲಾಕಾಂತ ಪತ್ತಾರ, ಪೂರ್ವೋಕ್ತ, ಪು.೨೨.

೩೪. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. XXXii.

೩೫. ಶಿಲಾಕಾಂತ ಪತ್ತಾರ, ಪೂರ್ವೋಕ್ತ, ಪು.೨೩.

೩೬. K.I.I., 2.

೩೭. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. ೩೪೧.

೩೮. ಅದೇ, ಪು. ೨೧೧.

೩೯. E.I. XXVIII, No. 23.

೪೦. E.I. V, No. 22.

೪೧. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. ೧೯೯-೨೦೦.

೪೨. ಶಿಲಾಕಾಂತ ಪತ್ತಾರ, ಪೂರ್ವೋಕ್ತ, ಪು.೨೪.

೪೩. I. A. XVIII, P.38.

೪೪. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪು. ೨೮೮.

೪೫. ಅದೇ, ಪು. ೨೧೦.

೪೬. ಅದೇ, ಪು. XXXii.

೪೭. ಅದೇ, ಪು. ೨೨೪ ಮತ್ತು ೩೪೧.

೪೮. ಅದೇ, ಪು. ೩೪೩.

೪೯. ಅದೇ, ಪು. XXXii.

೫೦. ಅದೇ, ಪು. ೩೩೬.

೫೧. ಅದೇ, ಪು. ೩೩೭.

೫೨. ಅದೇ, ಪು. ೩೯೮-೩೯೯.

೫೩. ಅದೇ, ಪು. ೧೯೭-೧೯೮.

೫೪. ಅದೇ, ಪು. ೩೭೩.

೫೫. ಅದೇ, ಪು. xii.

೫೬. ಅದೇ, ಪು. ೨೧೮.

೫೭. ಅದೇ, ಪು. ೩೧೬.

೫೮. ಅದೇ, ಪು. ೩೩೪.

ಅಧ್ಯಾಯ-ನಾಲ್ಕು

ಸಾಮಾಜಿಕ, ಧಾರ್ಮಿಕ, ಆರ್ಥಿಕ ವ್ಯವಸ್ಥೆ

ಸಾಮಾಜಿಕ ವ್ಯವಸ್ಥೆ :

ಮಾನವನು ಸಮಾಜಜೀವಿ. ಇವನು ಸಾಮಾಜಿಕ ಜೀವನದ ವಿವಿಧ ಮೌಲ್ಯಗಳಿಗೆ ಪ್ರಭಾವಿತನಾಗಿರುತ್ತಾನೆ. ಧರ್ಮವು ಜನಜೀವನದ ಸ್ವರೂಪಕ್ಕೆ ನಿರ್ಣಾಯಕ ಶಕ್ತಿ. ಧರ್ಮ ಜೀವನದ ಎಲ್ಲಾ ರಂಗಗಳಲ್ಲೂ ಹಾಸು ಹೋಕ್ಕಾಗಿದೆ. ಇದರಿಂದ ಸಾಮಾಜಿಕ ಜೀವನವನ್ನು ಹಸನುಗೊಳಿಸುವ ಪ್ರಯತ್ನ ನಡೆಯಿತು. ಪ್ರಸ್ತುತ ಹುಲಿಗೆಮ್ಮನಕೊಳ್ಳ ಪರಿಸರವು ಬಾದಾಮಿ ಕ್ಷೇತ್ರದೊಳಗಿನ ಒಂದು ಭಾಗವಾಗಿದ್ದರಿಂದ ಈ ಕ್ಷೇತ್ರದ ಸಾಹಿತ್ಯಿಕ, ಶಾಸನ, ವಿದೇಶಿ ಪ್ರವಾಸಿಗರ ಬರಹಗಳು ಇಲ್ಲಿಯ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಲು ಬಹಳ ಸಹಾಯಕಾರಿಯಾಗಿವೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶದ ಸಮಕಾಲೀನ ಸಾಮಾಜಿಕ ವ್ಯವಸ್ಥೆಯನ್ನು ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಚಾತುರ್ವರ್ಣಗಳು :

ಪ್ರಾಚೀನ ಭಾರತದಲ್ಲಿ ವ್ಯಕ್ತಿಗಳನ್ನು, ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಕೈಗೊಳ್ಳುವ ಉದ್ಯೋಗ ಮತ್ತು ವೃತ್ತಿಗಳ ಹಿನ್ನೆಲೆಯಲ್ಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನು ವಿಂಗಡಿಸಲಾಗಿದ್ದ ವಿಚಾರ ಋಗ್ವೇದದ 'ಪುರುಷ ಸೂಕ್ತ' ಮತ್ತು ಸಮಕಾಲೀನ ಸಾಹಿತ್ಯಿಕ ಕುರುಹುಗಳು ಮನದಟ್ಟು ಮಾಡುತ್ತವೆ.[1] ಕರ್ನಾಟಕದಲ್ಲಿ ಪ್ರಾದೇಶಿಕತೆಯಂತೆ ಜಾತಿ ಅಥವಾ ವರ್ಣ ವ್ಯವಸ್ಥೆ ಒಂದು ವಿಧ. ಶ್ರೀಮಂತ-ಬಡವ, ಮೇಲು-ಕೀಳು ಒಟ್ಟಾರೆ ಆರ್ಥಿಕ ಅಸಮಾನತೆಯೂ ಅನೇಕ ತರಹದ ಸಾಮಾಜಿಕ ವ್ಯವಸ್ಥೆಗೆ ಎಡೆಮಾಡಿಕೊಟ್ಟಿದೆ.[2] ಸಮಾಜ ಎಂದ ಮೇಲೆ ಪ್ರಮುಖವಾಗಿ ನಾಲ್ಕು ತರಹದ ವರ್ಣ ವ್ಯವಸ್ಥೆಯು ಇರುತ್ತದೆ. ಸಾಮಾಜಿಕವಾಗಿ ಒಟ್ಟಾರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ವಿಂಗಡಿಸಿದರೂ, ಪ್ರಸ್ತುತ ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ಇದರ ಜೊತೆಗೆ ಇತರೆ ಕೋಮುವಾರು ಜನರು ಇದ್ದಾರೆ.

ಬ್ರಾಹ್ಮಣರು :

ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ಸಮಾಜದಲ್ಲಿ ಬ್ರಾಹ್ಮಣರು ಅತ್ಯಂತ ಗೌರವಾನ್ವಿತರೆನಿಸಿದ್ದರು. ಅತ್ಯಂತ ಪ್ರಭಾವ ಶಾಲಿಗಳು ಆಗಿದ್ದರು. ಹುಯೆನ್‌ತ್ಸಾಂಗನು ಅಂದಿನ ಸಮಾಜದಲ್ಲಿದ್ದ ನಾಲ್ಕು ವರ್ಣಗಳ ಬಗೆಗೆ ಬರೆಯುತ್ತಾ ಬ್ರಾಹ್ಮಣರು ಪರಿಶುದ್ಧ ಜೀವನ ನಡೆಸುತ್ತಿದ್ದರು. ತತ್ವಗಳನ್ನು ಆಚರಣೆಯಲ್ಲಿ ತರುತ್ತಿದ್ದರೆಂದೂ,

ಧರ್ಮಾಚರಣೆಯಲ್ಲಿ ತೊಡಗುತ್ತಿದ್ದಾರೆಂದು ಉಲ್ಲೇಖಿಸಿದ್ದಾನೆ.[೩] ಬ್ರಾಹ್ಮಣರು ವರ್ತಕರಾಗಿಯೂ, ಮಂತ್ರಿಗಳಾಗಿಯೂ, ಮಾಡಲೀಕರಾಗಿಯೂ, ದಂಡನಾಯಕರಾಗಿಯೂ ಇದ್ದ ನಿದರ್ಶನಗಳು ಇಲ್ಲದಿಲ್ಲ. ಆದರೆ ಹೆಚ್ಚಿನ ಮಟ್ಟಿಗೆ ಬ್ರಾಹ್ಮಣರ ಕರ್ತವ್ಯ ಪುರೋಹಿತ ಮತ್ತು ಅರ್ಚನಾ ವೃತ್ತಿಗಳಿಗೆ ಮೀಸಲಾಗಿತ್ತು.

ಕ್ಷತ್ರಿಯರು :

ಬ್ರಾಹ್ಮಣರ ತರುವಾಯ ಸಮಾಜದಲ್ಲಿ ಕ್ಷತ್ರಿಯರ ಸ್ಥಾನ ಹಿರಿಯದಾಗಿತ್ತು. ಅಂದಿನ ಸಮಾಜದ ಧಾರ್ಮಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣ ಸರ್ವೋತ್ತಮವೆನಿಸಿದರೆ, ಆಡಳಿತ ವ್ಯವಸ್ಥೆಯಲ್ಲಿ ಕ್ಷತ್ರಿಯ ರಾಜನು ಸರ್ವಾಧಿಕಾರಿ ಎನಿಸಿದ್ದನು. ಬ್ರಾಹ್ಮಣರು ಆರ್ಥಿಕವಾಗಿ, ಕ್ಷತ್ರಿಯರನ್ನು ಅವಲಂಬಿಸಿದ್ದರೆ,[೪] ಅದಕ್ಕೆ ಪ್ರತಿಯಾಗಿ ಕ್ಷತ್ರಿಯರು ತಮ್ಮ ಪುಣ್ಯಾರ್ಜನೆಯ ವೈದಿಕ ಆಚರಣೆಗಳಿಗಾಗಿ ಬ್ರಾಹ್ಮಣರನ್ನು ಅವಲಂಬಿಸಿದ್ದರು. ಕ್ಷತ್ರಿಯ ಎಂದರೆ 'ವೀರ' ಎಂದರ್ಥ. ಇವರ ಕರ್ತವ್ಯ ಹೆಚ್ಚಿನ ಮಟ್ಟಿಗೆ ವ್ಯಾಪಾರ, ವ್ಯವಸಾಯ ಮತ್ತು ರಾಜ್ಯ ರಕ್ಷಣೆಯಾಗಿದೆ.

ವೈಶ್ಯರು :

ಮೂರನೆಯ ವರ್ಗದವರಾದ ವೈಶ್ಯರು ವರ್ತಕರು, ಬ್ರಾಹ್ಮಣರು ನಾಡಿನ ಧಾರ್ಮಿಕ ಜೀವನ ರೂಪಿಸಿದರೆ, ಕ್ಷತ್ರಿಯರು ರಾಜ್ಯದ ಆಡಳಿತ ಸೂತ್ರವನ್ನು, ವೈಶ್ಯರು ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವವರಾಗಿದ್ದರು. ಇವರು ವರ್ತಕ ವರ್ಗದವರಾದ ಶೆಟ್ಟರ ಜನಾಂಗದವರು.[೫] ಮನುಸ್ಮೃತಿಯಲ್ಲಿ ವೈಶ್ಯರ ಕರ್ತವ್ಯಗಳನ್ನು ಈ ರೀತಿ ಹೇಳಲಾಗಿದೆ. ಪಶುಪಾಲನೆ, ದಾನಕೊಡುದು, ಯಜ್ಞಮಾಡುವುದು, ಅಧ್ಯಯನ ಮಾಡುವುದು, ನೆಲೆ-ಜಲಗಳಲ್ಲಿ ವ್ಯಾಪಾರ ಮಾಡುವುದು, ಬಡ್ಡಿಸಾಲ ಕೊಡುವುದು ಮತ್ತು ಕೃಷಿಯಲ್ಲಿ ತೊಡಗುವುದು.[೬] ಆದರೆ ಪ್ರಸ್ತುತ ಈ ನಾಡಿನಲ್ಲಿ ವ್ಯಾಪಾರಿಗಳು (ವರ್ತಕರು) ಮಾತ್ರ ತಮ್ಮನ್ನು ವೈಶ್ಯರೆಂದು ಹೇಳಿಕೊಂಡಿದ್ದಾರೆ. ಇವರು ಸಮಾಜದಲ್ಲಿ ಗಮನಾರ್ಹ ಸೇವೆಯನ್ನು ನಿರ್ವಹಿಸುತ್ತಿದ್ದರು. ವಣಿಕ ಸಮಾಜದ ಅಥವಾ ಶ್ರೇಣಿಯ ಮುಖ್ಯಸ್ಥ ಇಲ್ಲಿ ವೈಶ್ಯ ಜನಾಂಗಕ್ಕೆ ಸೇರಿ ಸಮಾನ ಪ್ರಾಮುಖ್ಯತೆಯನ್ನು ಪಡೆದಿದ್ದವರು, ವೀರ ಪಾಂಚಾಳರು.[೬]

ಶೂದ್ರರು :

ಆರ್ಥಿಕವಾಗಿ ದುರ್ಬಲರೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ನಿಸ್ವಾರ್ಥ ಸೇವೆ ಮಾಡಿಕೊಂಡಿರುವುದೇ ಈ ಶೂದ್ರರ ಕರ್ತವ್ಯವೆಂದು 'ಮನುಸ್ಮೃತಿ' ಉಲ್ಲೇಖಿಸುತ್ತದೆ.[೭] ಆದರೂ ಇವರಲ್ಲಿ ಡೊಂಬ, ನಾವಿದ, ಹಾವಾಡಿಗರು ಮೊದಲಾದವರು ತಮ್ಮ ಹಕ್ಕು-ಬಾಧ್ಯತೆಗಳನ್ನು ಕಾಪಾಡಿಕೊಂಡಿದ್ದರು. ಈ ದಿಶೆಯಲ್ಲಿ ಪ್ರಾಚೀನ ಕಾಲದ ಶಿಲ್ಪಗಳು ಈ ವರ್ಗದ ಸ್ಥಿತಿಗತಿಗಳನ್ನು ಗುರುತಿಸಲು ಸ್ವಲ್ಪ ನೆರವಾಗುತ್ತವೆ. ಆನೆಯನ್ನೇರಿದ ಮಾವುತ, ಹಾವಾಡಿಸುವ ಹಾವಾಡಿಗ, ವಿಲಕ್ಷಣ ಮುಖವಾಡ ಧರಿಸಿ ಕುಣಿಯುವ ವೇಷಗಾರ, ಕಸರತ್ತು ಮಾಡುವ ಡೊಂಬ, ದ್ವಾರಪಾಲಕರು,

ಅರಮನೆಯ ಸೇವಕರು ಮೊದಲಾದವರು ಚಲುಕ್ಯ ಶಿಲ್ಪಗಳಲ್ಲಿ ಕಾಣಸಿಗುತ್ತಾರೆ. ಅವರ ಸಾದಾ ವೇಷಭೂಷಣಗಳು, ಸಣ್ಣಪುಟ್ಟ ಆಭರಣಗಳು ಅವರ ಆರ್ಥಿಕ ಸ್ಥಿತಿಯನ್ನು ಸಂಕೇತಿಸುತ್ತವೆ. ಹೀಗೆ ವರ್ಣ ಎಂಬ ಶಬ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಕುರಿತು ಅನೇಕ ಸಾಹಿತ್ಯಿಕ ಕೃತಿಗಳೂ, ಇವರ ಲಕ್ಷಣಗಳನ್ನು ನಿರೂಪಿಸುತ್ತವೆ. ವೇದಾಧ್ಯಯನ ವಿಪ್ರರಿಗೂ, ಧರಣಿ ಪಾಲನ ಕ್ಷತ್ರಿಯರಿಗೂ, ವ್ಯಾಪಾರ ವ್ಯವಹಾರ ವೈಶ್ಯರಿಗೂ, ಕೃಷಿ ಮುಂತಾದ ಸೇವಾ ವೃತ್ತಿಗಳು ಶೂದ್ರರಿಗೂ ಹೇಳಿಸಿದ್ದವು.[೯] ಈ ನಾಲ್ಕು ವರ್ಣಗಳ ಮೂಲ ಏನೇ ಇರಲಿ, ಇವು ಪ್ರಾಚೀನ ಸಮಾಜದಲ್ಲಿನ ಅಸಮಾನತೆಯನ್ನು ನಿದರ್ಶಿಸುತ್ತವೆ. ಶಿವಶರಣರು, ದಾಸಕೂಟದವರು ತಮ್ಮ ವಚನ ಕೀರ್ತನೆಗಳ ಮೂಲಕ ಈ ವ್ಯವಸ್ಥೆಗೆ ಹೊಸ ತಿರುವನ್ನು ನೀಡಿದರು.[೧೦] ಒಟ್ಟಾರೆಯಾಗಿ ಮೇಲೆ ಹೇಳಿದ ಲಕ್ಷಣದಲ್ಲಿ ನಾಲ್ಕು ವರ್ಣವ್ಯವಸ್ಥೆಯನ್ನು ಸೂಚಿಸಿದರೂ ಇಲ್ಲಿನ ಈಗಿನ ಪ್ರಾದೇಶಿಕ ವ್ಯವಸ್ಥೆಯಲ್ಲಿ ಈಗಲೂ ಅನೇಕ ಉಪಜಾತಿಗಳು ಇಲ್ಲಿವೆ. ಉದಾ : ಲಿಂಗಾಯತ, ಕುರುಬರ, ಗಾಣಿಗ, ಶೆಟ್ಟರ, ಕಂಬಾರ, ಬಡಿಗ.

ಸ್ತ್ರೀಯರ ಸ್ಥಾನಮಾನ :

ಸುದೀರ್ಘವಾದ ಇತಿಹಾಸ ಹೊಂದಿದ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ತೆರತೆರನಾಗಿದೆ. ವೇದಕಾಲದಲ್ಲಿ ಸ್ತ್ರೀಯರಿಗಿದ್ದ ಸ್ವಾತಂತ್ರ್ಯ, ಮನ್ನಣೆಗಳು ಅನಂತರದ ಕಾಲದಲ್ಲಿ ಕಡಿಮೆಯಾದವು. ಭಾರತೀಯಅದರಲ್ಲೂ ಹೆಚ್ಚಾಗಿ ಕರ್ನಾಟಕದ ಸ್ತ್ರೀಗೆ ಗೌರವಸ್ಥಾನವಿದ್ದರೂ[೧೧] ''ಅರ್ಥೋಹಿ ಕನ್ಯಾಪರಕೀಯ ಏವಾ'' ಹೆಣ್ಣು ಮನೆಬಿಟ್ಟು ಹೋಗುವವಳು ಅಥವಾ ಪರಕೀಯ ಎಂಬ ವಾಡಿಕೆಯೂ ಇತ್ತು.[೧೨] ಧಾರ್ಮಿಕ, ರಾಜಕೀಯ, ಆರ್ಥಿಕ, ಕಲೆ, ಸಾಹಿತ್ಯ ಮುಂತಾದ ವಿವಿಧ ರಂಗಗಳಲ್ಲಿ ಮಹಿಳೆಯರು ವಹಿಸಿದ್ದ ಪಾತ್ರ, ಗಳಿಸಿದ ಸಾಧನೆ ಅತಿ ಮಹತ್ವದ್ದು.[೧೩] ಸಾಮಾಜಿಕ ರಂಗಗಳಲ್ಲಿ ಹೆಣ್ಣು, ತಾಯಿ, ಪತ್ನಿ, ಸಹೋದರಿ ಮತ್ತು ಮಗಳಾಗಿ ಪಾತ್ರಳಾಗಿದ್ದಾಳೆ. ಇದಕ್ಕೆ ಶಾಸನಗಳು ಪೂರಕ ಮಾಹಿತಿಯನ್ನು ನೀಡುತ್ತವೆ. ಬಾದಾಮಿ ಚಲುಕ್ಯರ ಚಂದ್ರಾದಿತ್ಯನ ಮಡದಿ ವಿಜಯ ಭಟ್ಟಾರಿಕೆ ಚಲುಕ್ಯ ರಾಣಿಯರಲ್ಲಿ ಅತ್ಯಂತ ಗೌರವಕ್ಕೆ ಪಾತ್ರಳಾದ ವಿದ್ವಾಂಸೆ. ವಿನಯವತಿಯು ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ತ್ರಿಕೂಟಾಲಯವನ್ನು ಕಟ್ಟಿಸಿದಳು. ಪಟ್ಟದಕಲ್ಲಿನಲ್ಲಿ ಚಲುಕ್ಯ ವೈಭವದ ಸಂಕೇತಗಳಾದ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳನ್ನು ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ನಿರ್ಮಿಸಿರುವುದು ಇಲ್ಲಿ ಉಲ್ಲೇಖಾರ್ಹವಾಗಿದೆ.

ವಿದ್ಯಾಭ್ಯಾಸ :

ಪ್ರಾಚೀನ ಭಾರತೀಯರು ವಿದ್ಯೆಯ ಮಹತ್ವವನ್ನು ಅರಿತವರಾಗಿದ್ದರು. ವೇದ-ಉಪನಿಷತ್ತು, ವ್ಯಾಕರಣ, ಜೋತಿಷ್ಯ, ತರ್ಕ, ಮೀಮಾಂಸೆ ಮೊದಲಾದ ಶಾಸ್ತ್ರಗಳ ಜೊತೆಗೆ ಶಾಸ್ತ್ರ ಸಂಗೀತ, ನಾಟ್ಯ ಮೊದಲಾದ ವಿದ್ಯೆಗಳನ್ನು

ಬೋಧಿಸಲಾಗುತ್ತಿತ್ತೆಂಬುದನ್ನು ರಾಮಾಯಣ, ಮಹಾಭಾರತ ಕಾವ್ಯಗಳಿಂದ ತಿಳಿಯಬಹುದು. ಕರ್ನಾಟಕದಲ್ಲಿ ವಿದ್ಯಾಭ್ಯಾಸಕ್ಕೆ ಶಾತವಾಹನರ ಕಾಲದಿಂದಲೂ ಪ್ರಾಧಾನ್ಯತೆ ಇದ್ದಿತು. ಶಾತವಾಹನರ ಕಾಲದಲ್ಲಿ ಅರಸು ಮನೆತನದ ಸ್ತ್ರೀಯೊಬ್ಬಳು ವಿಹಾರವೊಂದಕ್ಕೆ ದಾನ ನೀಡಿದುದು ಶಾಸನವೊಂದರಿಂದ ವಿಧಿತವಾಗುತ್ತದೆ.[೧೪] ಕದಂಬ ವಂಶದ ಮಯೂರಶರ್ಮನು ಕಂಚಿಗೆ ವಿದ್ಯಾಭ್ಯಾಸಕ್ಕೆಂದು ಅಲ್ಲಿಯ ಘಟಿಕಾ ಸ್ಥಾನಕ್ಕೆ ಹೋಗಿದ್ದನು.[೧೫]

ಚಲುಕ್ಯ ರಾಜಕುವರರ ವಿದ್ಯಾಭ್ಯಾಸದ ಬಗೆಗೆ ನಿರ್ದಿಷ್ಟ ವಿವರಗಳಿಲ್ಲ. ಆದರೆ, ಅವರು ಶಿಕ್ಷಣ ಮತ್ತು ಪ್ರಶಿಕ್ಷಣಗಳ ಬಗೆಗೆ ಹೆಚ್ಚಿನ ಕಾಳಜಿ ವಹಿಸಿದ್ದರೆಂಬುದನ್ನು ಮನಗಾಣಬಹುದು. ಮೊದಲನೆಯ ಪುಲಿಕೇಶಿಯು ಮನುಪುರಾಣ, ರಾಮಾಯಣ, ಮಹಾಭಾರತ, ಇತಿಹಾಸ ಕುರಿತು ಅಧ್ಯಯನ ಮಾಡಿದ್ದನು.೧೬ ರಾಜನೀತಿಯಲ್ಲಿ ಆತ ಬೃಹಸ್ಪತಿಗೆ ಸಮನಾಗಿದ್ದನೆಂದು ಹೊಗಳಲಾಗಿದೆ.[೧೭] ಬೆಪ್ಲೂನ ಶಾಸನವು ಇಮ್ಮಡಿ ಪೊಲಿಕೇಶಿಯನ್ನು ವಿವಿಧ ಶಸ್ತ್ರಾಸ್ತ್ರ ತತ್ವ ವಿಚಾರ ಕ್ಷಮ, ಸೂಕ್ಷ್ಮ ಬುದ್ಧಿವುಳ್ಳವನೆಂದು ಬಣ್ಣಿಸಿದೆ.[೧೮] ಇಮ್ಮಡಿಕೀರ್ತಿವರ್ಮನು ಬಾಲ್ಯದಲ್ಲಿಯೇ ಶಾಸ್ತ್ರ, ಶಸ್ತ್ರ ವಿದ್ಯೆಗಳಲ್ಲಿ ಶಿಕ್ಷಣ ಪಡೆದಿದ್ದನು.[೧೯]

ಸಹಗಮನ ಪದ್ಧತಿ :

ಇದು ಹಿಂದು ಸಾಂಸ್ಕೃತಿಯ ಒಂದು ಆಚರಣೆ. ಮರಣ ಹೊಂದಿದ ಗಂಡನ ಜೊತೆಗೆ ಚಿತೆಗೆ ಹಾರಿ ಹೆಂಡತಿಯು ಪ್ರಾಣ ತ್ಯಾಗ ಮಾಡುವ ಪದ್ಧತಿಯಾಗಿದೆ. ಈ ಪದ್ಧತಿ ಹೆಚ್ಚು ಪ್ರಚಲಿತದಲ್ಲಿತ್ತು. ಇಂದು ನಮಗೆ ಇದು ನಿಕೃಷ್ಟವೆನಿಸಿದರೂ ಈ ಪದ್ಧತಿ ಅಂದಿನ ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.[೨೦]

ಸಾಮಾಜಿಕ ಕಾರ್ಯಗಳು :

ಸಮಾಜದ ಜನ ಜೀವನಕ್ಕೆ ಧರ್ಮವೇ ನಿರ್ಣಾಯಕ ಶಕ್ತಿ. ಇದು ಜನರ ಜೀವನದ ಎಲ್ಲಾ ರಂಗಗಳಲ್ಲಿಯೂ ಪಸರಿಸಿದೆ. ಧರ್ಮವನ್ನು ಅವಲಂಭಿಸಿದ ಮನುಜ ಸದ್ಗತಿಯನ್ನು ಸಂಪಾದಿಸುತ್ತಾನೆ.[೨೧] ಮಾನವ ಮನಸ್ಸಿನಲ್ಲಿ ಬೇರೂರಿದ ಕೆಲವು ಭಾವನೆಯಲ್ಲಿ ಧರ್ಮವು ಒಂದು. ''ಧರ್ಮೋರಕ್ಷಕ ರಕ್ಷತಿ'' ಅಂದರೆ, ಧರ್ಮವನ್ನು ನಾವು ರಕ್ಷಣೆ ಮಾಡಿದರೆ, ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂಬ ಭಾವನೆಯಿಂದ ಸಮಾಜದ ಒಳಿತಿಗಾಗಿ ಧಾರ್ಮಿಕಾರ್ಯಗಳನ್ನು ಮಾಡುವುದು ಅಥವಾ ದಾನ ಮಾಡುವುದು ಪುಣ್ಯ ಸಂಪಾದನೆಗಾಗಿ ಹೀಗಾಗಿ ಸಮಾಜದಲ್ಲಿ ದೇವಾಲಯಗಳ ನಿರ್ಮಾಣ, ಕೆರೆ ನಿರ್ಮಿಸುವುದು, ಅರವಟ್ಟಿಗೆ ಮತ್ತು ಛತ್ರ ನಿರ್ಮಿಸುವುದು ಇವು ಸಾಮಾಜಿಕ ಕಾರ್ಯಗಳಾಗಿದ್ದವು.

ಧಾರ್ಮಿಕ ಜೀವನ :

ಧರ್ಮವು ಸಾಂಸ್ಕೃತಿಯ ಜೀವಾಳ. ಒಂದು ನಾಡಿನ ಜನತೆಯ ಜೀವನದ ರೀತಿಯನ್ನು ರೂಪಿಸುವಲ್ಲಿ ಇದು ತನ್ನದೇ ಆದ ಮಹತ್ವದ ಪಾತ್ರ ನಿರ್ವಹಿಸುತ್ತದೆ. 'ಧರ್ಮ' ಎಂದರೆ, ದೈವಗಳು ಹಾಗೂ ಭಕ್ತರು ಧರ್ಮದ ಅರ್ಥ 'ಧೃ' ಎಂಬ ಧಾತುವಿಗೆ 'ಮೃ' ಎಂಬ ಪ್ರತ್ಯಯವನ್ನು ಸೇರಿಸುವುದರಿಂದ ರೂಪಗೊಳ್ಳುತ್ತದೆ. ಧರ್ಮದ ಅರ್ಥವನ್ನು ಹುಡುಕಿದರೆ, ಜಾತಿ-ಪಂಗಡಗಳಿಗೆ ಸೇರಿದ, ಆಚಾರ, ವಿಚಾರ ಹಾಗೂ ಭಕ್ತಿ ಔಚಿತ್ಯವೆಂದರ್ಥವಾಗುತ್ತದೆ.[೨೨] ಆಂಗ್ಲ ಭಾಷೆಯ ರಿಲಿಜನ್ ಎಂಬ ಪದಕ್ಕೆ ಇಂಗ್ಲಿಷ್ ಕನ್ನಡ ನಿಘಂಟಿನಲ್ಲಿ ''ಮಾನವನ ತಾನು ಒಂದು ಅತಿ ಮಾನುಷ ಶಕ್ತಿಯ ಅಧೀನನೆಂದೂ, ಮುಖ್ಯವಾಗಿ ತನ್ನ ವಿಧೇಯತೆಗಳು ಸಲ್ಲಿಸತಕ್ಕ ದೇವನೊಬ್ಬನು ಇದ್ದಾನೆಂದೂ ಇಟ್ಟುಕೊಂಡಿರುವ ತಿಳುವಳಿಕೆ ಅಥವಾ ನಂಬಿಕೆಯಾಗಿದೆ.[೨೩]

ಪ್ರಪಂಚದಾದ್ಯಂತ ಕಾಲ, ದೇಶ, ಪರಿಸರಗಳಿಗೆ ಅನುಗುಣವಾಗಿ ಹಲವಾರು ಧರ್ಮಾಚರಣೆಗಳು ಬೆಳೆದು ಬಂದಿದೆ. ಕೆಲವು ಧರ್ಮಗಳು ಕಾರಣಾಂತರಗಳಿಂದಾಗಿ ಕಾಲಗರ್ಭದಲ್ಲಿಯೇ ಲೀನವಾಗಿವೆ. ಇನ್ನು ಕೆಲವು ತಮ್ಮ ತತ್ವದರ್ಶನ ಆಚಾರ-ವಿಚಾರಗಳಲ್ಲಿ ಬಲಸಂವರ್ಧಿಸಿಕೊಂಡು ಸಮಕಾಲೀನ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗಿಸಿಕೊಳ್ಳುತ್ತಾ ಜೀವಂತವಾಗಿ ಮುನ್ನಡೆದಿವೆ. ಇದು ಮಾನವನ ಸಹಜವಾದ ನೈತಿಕ ಪ್ರವೃತ್ತಿ ಬೆಳೆವಣಿಗೆ ಮತ್ತು ನಂಬಿಕೆಗಳ ಮೂಲ ಆಕರ. ಮಾನವ ಧರ್ಮಬಿಟ್ಟು ಬದುಕಲಾರ. ಜನನದಿಂದಲೇ ಅದರ ಜೊತೆಯಲ್ಲಿಯೇ ಬೆಳೆದು ಬಂದಿದ್ದಾನೆ. ಈ ಧರ್ಮದ ಉಗಮಕ್ಕೆ ಮುಖ್ಯವಾಗಿ ಜೀವನದ ಅಗತ್ಯ ಮತ್ತು ಬುದ್ಧಿ ಶಕ್ತಿಯ ಫಲ. ಇವೆರಡರ ಸಮ್ಮಿಲನವೇ ಕಾರಣ. ಇದು ಸಂಸ್ಕೃತಿಯ ವಾಹಕ. ಇದರ ಮೂಲಕ ಜನಜೀವನಕ್ಕೆ ಒಂದು ಆಶಾದಾಯಕವಾದ ಮತ್ತು ಸುಸಂಬದ್ಧವಾದ ಸಾಮಾಜಿಕ ಪರಿಸರವನ್ನು ಒದಗಿಸಿಕೊಡುತ್ತದೆ. ಧರ್ಮ ಆಯಾ ನಾಡಿನ ಜನರ ಸಾಮಾಜಿಕ, ಆರ್ಥಿಕ ಜೀವನದ ಕಥನ.[೨೪] 'ಧರ್ಮೋರಕ್ಷತಿ ರಕ್ಷಿತ' ಅಂದರೆ, ನಾವು ಧರ್ಮವನ್ನು ರಕ್ಷಿಸಿದರೆ, ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂದು ಎಲ್ಲಾ ಧರ್ಮಗಳು ಸಾರಿ ಹೇಳುತ್ತವೆ.[೨೫] ಇಲ್ಲಿ ಪ್ರಮುಖವಾಗಿ ಶೈವ, ವೈಷ್ಣವ, ಜೈನ, ಬೌದ್ಧ, ಧರ್ಮಗಳು ಪ್ರಾಚೀನ ಕಾಲದಲ್ಲಿ ಪ್ರಚಲಿತದಲ್ಲಿದ್ದವು.

ಬೌದ್ಧ ಧರ್ಮ :

ಬೌದ್ಧಧರ್ಮವು ಕರ್ನಾಟಕದಲ್ಲಿ ಮೌರ್ಯ ದೊರೆ ಅಶೋಕನ ಕಾಲದಲ್ಲಿ ಕಾಣಿಸಿಕೊಂಡಿತಾದರೂ ಬಾದಾಮಿ ಚಲುಕ್ಯರು ಬೌದ್ಧ ಧರ್ಮದೊಂದಿಗೆ ಧಾರ್ಮಿಕ ಸಂಬಂಧವನ್ನಿಟ್ಟುಕೊಂಡದ್ದು ಯಾವ ಶಾಸನದಲ್ಲಿಯೂ ವ್ಯಕ್ತವಾಗಿಲ್ಲ. ವೈದಿಕ ಧರ್ಮದ ಅನುಯಾಯಿಗಳಾಗಿದ್ದು ಇವರು ಪರಧರ್ಮಸಹಿಷ್ಣುಗಳಾಗಿದ್ದರು. ಇದರ ಫಲವಾಗಿ ಇತರ ಧರ್ಮಗಳು ಬೆಳೆದಂತೆ ಬೌದ್ಧ ಧರ್ಮವು ಬೆಳೆಯಿತು. ಇದಕ್ಕೆ ಆಧಾರವೆಂಬಂತೆ ಬಾದಾಮಿ ಮತ್ತು

ಐಹೊಳೆಗಳಲ್ಲಿ ಚಲುಕ್ಯರ ಕಾಲದ ಬೌದ್ಧ ಸ್ಮಾರಕಗಳು ಕಂಡುಬರುತ್ತವೆ. ಕ್ರಿ.ಶ. ೬೪೦ರಲ್ಲಿ ಚಲುಕ್ಯ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದು ಹುಯೆನ್‌ತ್ಸಾಂಗನು ಈ ನಾಡಿನಲ್ಲಿ ನೂರು ಸಂಘರಾಮಗಳು ಮತ್ತು ಐದು ಸಾವಿರ ಭಿಕ್ಷುಗಳು ಇದ್ದ ಬಗ್ಗೆ ವರದಿ ಮಾಡಿದ್ದಾನೆ. ಅಲ್ಲದೇ ಹೀನಾಯಾನ ಮತ್ತು ಮಹಾಯಾನ ಶಾಖೆಗಳೆರಡೂ ಇಲ್ಲಿರುವುದನ್ನು ದಾಖಲಿಸಿದ್ದಾನೆ.[೨೬] ಕ್ರಿ.ಶ. ಏಳನೆಯ ಶತಮಾನದಲ್ಲಿ ಬೌದ್ಧ ಧರ್ಮಕ್ಕಿಂತ ಜೈನಧರ್ಮವು ಹೆಚ್ಚು ಪ್ರಭಾವಿಯಾಗಿದ್ದ ಸಂಗತಿ ಆತನ ಬರವಣಿಗೆಯಲ್ಲಿ ವ್ಯಕ್ತವಾಗಿದೆ. ಇತ್ಸಿಂಗನು ಸಹ ಇಮ್ಮಡಿ ಪುಲಿಕೇಶಿಯು ತನ್ನ ಸಾಮ್ರಾಜ್ಯದ ಉತ್ತರ ಅಂಚಿನಲ್ಲಿ ಬೌದ್ಧ ವಿಹಾರವೊಂದನ್ನು ಕಟ್ಟಿಸಿದನೆಂದು ಹೇಳಿದ್ದಾನೆ.[೨೭]

ಬಾದಾಮಿಯಲ್ಲಿ ಎರಡು ಮತ್ತು ೩ನೆಯ ಗುಹೆಯ ಮಧ್ಯದಲ್ಲಿರುವಂತ ನೈಸರ್ಗಿಕ ಗುಹೆಯಲ್ಲಿ ಒಂದು ಬೌದ್ಧ ಶಿಲ್ಪವು ಕಂಡುಬರುತ್ತದೆ. ಇದನ್ನು ಬೋಧಿಸತ್ವ ಪದ್ಮಪಾಣಿಯೆಂದು ಗುರುತಿಸಲಾಗಿದೆ.[೨೮] ಪಕ್ಕದ ಪುಟ್ಟ ಶಿಲ್ಪಗಳು 'ಅಷ್ಟಭಯ'ಗಳ ದೃಶ್ಯವನ್ನು ಚಿತ್ರಿಸಿವೆ. ಬೌದ್ಧ ಸಂಪ್ರದಾಯಕ್ಕೆ ಸಂಬಂಧಿಸದಂತ ಏಕಮಾತ್ರ ವಾಸ್ತು ರಚನೆ ಐಹೊಳೆಯಲ್ಲಿದೆ. ಈ ಬೌದ್ಧ ಗುಹೆಯು ಕರ್ನಾಟಕದ ಗುಹೆಗಳಲ್ಲಿಯೇ ಅತೀ ಪ್ರಾಚೀನವಾದುದಾಗಿದೆ. ಇಲ್ಲಿ ವ್ಯಾಖ್ಯಾನ ಮುದ್ರೆಯ ಬುದ್ಧನ ಸುಂದರವಾದ ಉಬ್ಬುಚಿತ್ರವಿದೆ. ಕೆಳಗಿನ ಅಂತಸ್ತಿನ ಬಾಗಿಲುವಾಡದ ಶಾಖೆಗಳಲ್ಲಿಯ ಉಬ್ಬುಚಿತ್ರಗಳಲ್ಲಿ ಬುದ್ಧನ ಜೀವನದ ಕೆಲವು ಘಟನೆ ಮತ್ತು ಬೌತಿಕ ಕತೆಗಳ ಸನ್ನಿವೇಶಗಳು ಕಂಡುಬರುತ್ತದೆ. ಆದ್ದರಿಂದ ಇಲ್ಲಿ ಮಹಾಯಾನ ಶಾಖೆಯು ರೂಢಿಯಲ್ಲಿದ್ದಿತೆಂದು ತಿಳಿಯಬಹುದು.[೨೯]

ವೈಷ್ಣವ ಧರ್ಮ:

ವೈಷ್ಣವ ಧರ್ಮವು ಪ್ರಾಚೀನವಾದ ಧರ್ಮಗಳಲ್ಲಿ ಒಂದಾಗಿದೆ. ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವಾದ ಹಲ್ಮಡಿ ಶಾಸನವು (ಕ್ರಿ.ಶ. ೪೫೦) ವಿಷ್ಣುವಿನ ಸ್ತುತಿ[೩೦]ಯೊಂದಿಗೆ ಪ್ರಾರಂಭವಾಗುತ್ತದೆ. ಅದೇ ರೀತಿಯಾಗಿ ಚಲುಕ್ಯರ ಶಾಸನಗಳ ಮಂಗಲ ಶ್ಲೋಕದಲ್ಲಿ ವರಾಹ ಅವತಾರದ ವಿಷ್ಣುವಿನ ಸ್ತುತಿ ಇದೆ.[೩೧] ವರಾಹ ಅವರ ಲಾಂಛನವಾಗಿತ್ತು. ಪರಮಭಾಗವತ ಶ್ರೀ ಪೃಥ್ವಿವಲ್ಲಭ, ಶ್ರೀವಲ್ಲಭ ಎಂಬ ಉಪಾಧಿಗಳು ಚಲುಕ್ಯರ ಪ್ರಾರಂಭದ ಅರಸರ ಶಾಸನಗಳಲ್ಲಿ ಉಪನಾಮಗಳಾಗಿಯೇ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಚಲುಕ್ಯ ವಂಶದ ಪ್ರಾರಂಭದ ಅರಸರು ವೈಷ್ಣವರಾಗಿದ್ದರೆಂಬುದು ನಿಸ್ಸಂಶಯ.

ಬಾದಾಮಿಯಲ್ಲಿ ಒಂದನೆಯ ಕೀರ್ತಿವರ್ಮನ ಕಾಲಾವಧಿಯಲ್ಲಿ ನಿರ್ಮಿತವಾದ ವಿಷ್ಣು ಗುಹಾಲಯ ಬಾದಾಮಿ ಚಲುಕ್ಯರ ಆಳ್ವಿಕೆಯ ಅವಧಿಯಲ್ಲಿ ವೈಷ್ಣವ ಧರ್ಮದ ಪ್ರಭಾವವನ್ನು ಕುರಿತು ತಿಳಿಸಿಕೊಡುತ್ತದೆ. ಮಂಗಳೇಶನು 'ನಾರಾಯಣ ಬಲಿ'ಯನ್ನು ನೆರವೇರಿಸಿ ಆ ಸಂದರ್ಭದಲ್ಲಿ ಉಪಹಾರಾರ್ಥ ಹದಿನಾರು ಬ್ರಾಹ್ಮಣರ ಸತ್ರಕ್ಕಾಗಿ ಮತ್ತು ಪರಿವ್ರಾಜಕರ ಭೋಜನಕ್ಕಾಗಿ ಹುಲಿಗೆಮ್ಮನಕೊಳ್ಳ ಪಕ್ಕದ ನಂದಿಕೇಶ್ವರ ಗ್ರಾಮವನ್ನು ದಾನ

ಮಾಡಿದನು. ಇದರಿಂದಾಗಿ ಬಾದಾಮಿ ಚಲುಕ್ಯರು ಈ ಪರಿಸರದಲ್ಲಿ ಮತ್ತು ಸುತ್ತಮುತ್ತಲು ಗುಹಾಲಯ ಮತ್ತು ರಾಚನಿಕ ದೇವಾಲಯಗಳನ್ನು ನಿರ್ಮಿಸಿದ್ದು ಇವರು ವೈಷ್ಣವ ಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರೆಂದು ತಿಳಿಯುತ್ತದೆ.

ಶೈವಧರ್ಮ :

ಶೈವಧರ್ಮ ಭಾರತದ ಧರ್ಮಗಳಲ್ಲಿ ಅತೀ ಪ್ರಾಚೀನವಾದ ಧರ್ಮವಾಗಿದೆ. ಶಿವನನ್ನು ಆರಾಧಿಸುವ ಶೈವ ಧರ್ಮ ಇತಿಹಾಸವು ವೇದಗಳ ಕಾಲಕ್ಕಿಂತಲೂ ಹಿಂದೆ ಸರಿಯುತ್ತದೆ. ಕ್ರಿ.ಪೂ. ೩೦೦೦ ವರ್ಷಗಳ ಹಿಂದಿನ ಹರಪ್ಪಾ ಮಹೆಂಜೋದಾರೋ ಉತ್ಖನನದಲ್ಲಿ ದೊರೆತ ಪಳೆಯುಳಿಕೆಗಳು ಶೈವ ಧರ್ಮದ ಇತಿಹಾಸವು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಧರ್ಮ ಎಂಬುದನ್ನು ವ್ಯಕ್ತಪಡಿಸುತ್ತದೆ.[೩೨] ಇಲ್ಲಿ ಕೊಂಬುಗಳಿರುವ ದೇವತೆಯ ಚಿತ್ರವಿರುವ ಲಿಂಗಗಳು ಲಭ್ಯವಾಗಿವೆ. ಇವುಗಳನ್ನು ಶೈವ ಧರ್ಮದ ಕುರುಹುಗಳೆಂದು ಸರ್ ಜಾನ್ ಮಾರ್ಷಲ್ ಅಭಿಪ್ರಾಯಪಟ್ಟಿದ್ದಾರೆ.[೩೩]

ಋಗ್ವೇದದಲ್ಲಿ ಪಶುಪತಿಯು ರುದ್ರನೆಂದು ಪೂಜೆಗೊಳ್ಳುತ್ತಾನೆ.[೩೪] ಯಜುರ್ವೇದ ಕಾಲಕ್ಕೆ ರುದ್ರನೆ ಶಿವನ ರೂಪ ಪಡೆದು ಶೈವರ ಅಧಿದೇವತೆಯಾದನೆಂದು ತಿಳಿದುಬರುತ್ತದೆ. ಈ ಕಾಲದಲ್ಲಿ ಶಿವನಿಗೆ ಶಂಕರ ಮಹಾದೇವ, ಹೀಗೆ ಹಲವು ಹೆಸರುಗಳು ಬಂದಿವೆ. ಪುರುಷಸೂಕ್ತ ಉಪನಿಷತ್ತುಗಳು ಕೆಲವು ಪುರಾಣಗಳಲ್ಲಿ ಶಿವನ ವರ್ಣನೆಗಳಿವೆ.[೩೫]

ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ಧರ್ಮವು ಕ್ರಿಸ್ತಶಕದ ಪ್ರಾರಂಭದಿಂದಲೇ ಪ್ರಚಲಿತದಲ್ಲಿದೆ. ಈವರೆಗೆ ತಿಳಿದಿರುವಂತೆ ಕರ್ನಾಟಕದಲ್ಲಿಯ ಅತೀ ಪ್ರಾಚೀನ ಶೈವ ದೇವಾಲಯದ ಉಲ್ಲೇಖವು ಬಾದಾಮಿಗೆ ಸಮೀಪದಲ್ಲಿರುವ ವಾಸನದಲ್ಲಿ ದೊರೆತ ಕ್ರಿ.ಶ. ೨-೩ನೇ ಶತಮಾನದ ಶಾಸನದಿಂದ ತಿಳಿದುಬರುತ್ತದೆ.[೩೬] ಕದಂಬರ ಕಾಲದಲ್ಲಿ ಶೈವಧರ್ಮವು ಪ್ರಮುಖವಾಗಿತ್ತು. ಅದರ ಮೂಲ ಪುರುಷನಾದ ತ್ರಿಲೋಚನ ಕದಂಬನು ತ್ರಿಪುರ ಸಂಹಾರದ ನಂತರ ದಣಿದಿದ್ದ ಶಿವನ ಹಣೆಯಿಂದ ಕದಂಬ ಮರದ ಬುಡದಲ್ಲಿ ಬಿದ್ದ ಬೆವರಿನಿಂದ ಹುಟ್ಟಿದನಂತೆ.[೩೭]

ಬಾದಾಮಿ ಚಲುಕ್ಯರ ಕಾಲದಲ್ಲಿಯು ಈ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಇವರು ನಿರ್ಮಿಸಿದ ಗುಹಾಲಯ ಮತ್ತು ರಾಚನಿಕ ದೇವಾಲಯಗಳು ಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹದ ಪ್ರತೀಕವಾಗಿವೆ. ಅವುಗಳಲ್ಲಿ ಪ್ರಮುಖವಾದವು ಬಾದಾಮಿ ಒಂದನೆಯ ಶೈವ ಗುಹಾಲಯ, ಮೇಗಣ ಶಿವಾಲಯ, ಕೆಳಗಿನ ಶಿವಾಲಯ, ಪಟ್ಟದಕಲ್ಲಿನ ಲೋಕೇಶ್ವರ ಮತ್ತು ತ್ರೈಲೋಕೇಶ್ವರ. ಹುಲಿಗೆಮ್ಮನಕೊಳ್ಳದಲ್ಲಿಯೂ ಸಹ ಶೈವ ದೇವಾಲಯಗಳು ಕಡುಬಂದಿವೆ.

ಜೈನಧರ್ಮ :

ಮೌರ್ಯ ಸಾಮ್ರಾಜ್ಯ ಸ್ಥಾಪಕ ಚಂದ್ರಗುಪ್ತ ಮೌರ್ಯನ ಪಾದಾರ್ಪಣೆಯಿಂದಲೇ ಕ್ರಿ.ಪೂ. ಕಾಲದಲ್ಲಿ ಜೈನಧರ್ಮವು ಕರ್ನಾಟಕವನ್ನು ಪ್ರವೇಶಿಸಿತು. ಮೊದಲು ದಕ್ಷಿಣ ಕರ್ನಾಟಕದ ಶ್ರವಣಬೆಳಗೊಳದಲ್ಲಿ ಬಂದು ನೆಲೆಯೂರಿದ ಈ ಧರ್ಮ ಕಾಲಕ್ರಮೇಣ ಇಡೀ ಕರ್ನಾಟಕವನ್ನೇ ವ್ಯಾಪಿಸಿರಬಹುದು. ಬಾದಾಮಿ ಪರಿಸರದಲ್ಲಿ ಈ ಧರ್ಮವು ಬಹಳ ಹೆಮ್ಮರವಾಗಿ ಬೆಳೆದಿತ್ತು ಎಂಬುದಕ್ಕೆ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಬಾದಾಮಿಯ ಜೈನ ಗುಹಾಲಯ ಮತ್ತು ಐಹೊಳೆಯಲ್ಲಿರುವ ರವಿಕೀರ್ತಿ ನಿರ್ಮಿಸಿದ ಮೇಗುತಿ ದೇವಾಲಯಗಳು[೩೮] ಪ್ರತ್ಯಕ್ಷ ಸಾಕ್ಷಿಯಾಗಿವೆ.

ಬಾದಾಮಿಯ ಜೈನ ಗುಹಾಲಯವು ಪ್ರಾಯಶಃ ಆರನೆಯ ಶತಮಾನದ್ದಾಗಿದ್ದು ಅದರ ಗರ್ಭಗೃಹದಲ್ಲಿ ಮಹಾವೀರ ಮತ್ತು ಮೊಗಸಾಲೆಯ ಗೋಡೆಗಳ ಮೇಲೆ ಪಾರ್ಶ್ವನಾಥ ತೀರ್ಥಂಕರರ ಮತ್ತು ಬಾಹುಬಲಿಯ ಬೃಹತ್ ವಿಗ್ರಹಗಳಿವೆ. ಇಲ್ಲಿಯ ಬಾಹುಬಲಿ ಶಿಲ್ಪವು ಭಾರತದಲ್ಲಿಯೇ ಅತ್ಯಂತ ಪ್ರಾಚೀನವಾದುದೆಂದು ತಿಳಿಯಲಾಗಿದೆ.[೩೯]

ಈ ಪ್ರಕಾರವಾಗಿ ಈ ಪರಿಸರದಲ್ಲಿ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಎಲ್ಲಾ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳು, ಶಾಸನಗಳು, ಶಿಲ್ಪಗಳು ಕಂಡುಬರುತ್ತವೆ. ಇವುಗಳು ಇಲ್ಲಿಯ ಧರ್ಮ ಸಮನ್ವಯತೆಯನ್ನು ತಿಳಿಸಿಕೊಡುವುದರೊಂದಿಗೆ ವ್ಯಾಪಕವಾಗಿ ಪ್ರಚಲಿತದಲ್ಲಿರುವುದನ್ನು ಸ್ಪಷ್ಟಪಡಿಸುತ್ತವೆ.

ಆರ್ಥಿಕ ಸ್ಥಿತಿ :

ಮಾನವನ ಜೀವನ ಮುಖ್ಯವಾಗಿ ಕೃಷಿ ಉತ್ಪನಗಳನ್ನು ಅವಲಂಬಿಸಿದೆ. ಆದ್ದರಿಂದ ಭೂಮಿಯು ಪ್ರಧಾನ ಆರ್ಥಿಕ ಮೌಲ್ಯವಾಯಿತು. ಭೂದಾನಗಳ ಸಂಖ್ಯೆಯೇ ಹೆಚ್ಚಾಗಿದ್ದುದು ಇದನ್ನು ಸಮರ್ಥಿಸುತ್ತದೆ. ಚಲುಕ್ಯ ಅರಸ-ಅರಸಿಯರು ಮತ್ತು ಯುವರಾಜರು, ಬ್ರಾಹ್ಮಣರಿಗೆ, ಆಚಾರ್ಯರಿಗೆ, ಯೋಧರಿಗೆ ಭೂದಾನ ಮಾಡಿದುದನ್ನು ಶಾಸನಗಳು ತಿಳಿಸುತ್ತವೆ. ಹೆಚ್ಚುಚ್ಚು ಭೂಮಿಯನ್ನು ಸಾಗುವಳಿಗೆ ಒಳಪಡಿಸುವುದೇ ಚಲುಕ್ಯರ ಆರ್ಥಿಕ ಧೋರಣೆಯಾಗಿತ್ತು. ಭೂದಾನಗಳು ನಾಡಿನ ಆರ್ಥಿಕ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟವು.

ಕೃಷಿ :

ಕೃಷಿಯು ಗ್ರಾಮೀಣ ಜನರ ಮುಖ್ಯ ಮೂಲ ಉದ್ಯೋಗವಾಗಿತ್ತು. ಕೃಷಿಗೆ ಭೂಮಿಯಷ್ಟೇ ನೀರೂ ಅವಶ್ಯವಾಗಿದ್ದರಿಂದ ರಾಜರು ಕೆರೆ, ಬಾವಿಗಳನ್ನು ಕಟ್ಟಿಸಲು ಮುಂದಾದರು. ಕದಂಬ ಮಯೂರ ಶರ್ಮನ ಚಂದ್ರವಳ್ಳಿ ಶಾಸನದಲ್ಲಿ ಮತ್ತು ಕಾಕುತ್ಸವರ್ಮನ ತಾಳಗುಂದ ಶಾಸನದಲ್ಲಿ ಕೆರೆ ನಿರ್ಮಾಣದ ಪ್ರಸ್ತಾಪವಿದೆ.[೪೦] ಚಲುಕ್ಯರೂ ಸಹ

ಕೆರೆ, ಕಟ್ಟೆಗಳನ್ನು ಕಟ್ಟಿಸಿದ ಉಲ್ಲೇಖಗಳು ಶಾಸನಗಳಿಂದ ತಿಳಿದುಬರುತ್ತದೆ. ಮೊದಲನೆಯ ಪುಲಿಕೇಶಿಯ ಆಲ್ತೆಂ ಶಾಸನದಲ್ಲಿ[೪೧] ನಾಲ್ಕಾರು ತಟಾಕಗಳ ಉಲ್ಲೇಖವಿದೆ. ಈ ಅರಸರನೆ ಬಾದಾಮಿಯ ಪ್ರಸಿದ್ಧ ಅಗಸ್ತ್ಯ ಕೆರೆಯನ್ನು ನಿರ್ಮಿಸಿರಬಹುದು. ಇಮ್ಮಡಿ ಪುಲಕೇಶಿಯ 'ಮೊಡ್ಲಿಂಬ' ಶಾಸನವು[೪೨] ಕೆರೆಯ ನಿರ್ಮಾಣಕ್ಕೆಂದು ದೇವಗಣಸ್ವಾಮಿಗೆ ಗ್ರಾಮ ದಾನವನ್ನು ಮಾಡಲಾಯಿತೆಂದು ಹೇಳುತ್ತದೆ. ಅಲಂಪುರದ ಬಾಲಬ್ರಹ್ಮ ದೇವಸ್ಥಾನದ ವಿಜಯಾದಿತ್ಯಪ್ರಶಸ್ತಿಯು[೪೩] ಆತನ ಸಾಮ್ರಾಜ್ಯದ ಎಲೆಡೆಗಳಲ್ಲೂ ಕೆರೆಗಳನ್ನು ನಿರ್ಮಿಸಿದುದನ್ನು ವರ್ಣಿಸುತ್ತದೆ. ಈ ರೀತಿಯಾಗಿ ಅರಸರು ಅನುಕೂಲತೆಗೆ ಅನುಗುಣವಾಗಿ ಅಲ್ಲಲ್ಲಿ ಕೃಷಿಗೆ ಯೋಗ್ಯವಾಗುವಂತೆ ತಟಾಕಗಳನ್ನು ನಿರ್ಮಿಸಿ ಆರ್ಥಿಕವಾಗಿ ಅಬಿವೃದ್ಧಿ ಹೊಂದಲು ಅನುಕೂಲತೆಗಳನ್ನು ಒದಗಿಸುತ್ತಿದ್ದರು.

ಭೂ-ವಿಧಗಳು :

ಪ್ರಾಚೀನ ಕಾಲದಿಂದಲೂ ರಾಜ್ಯದ ಆರ್ಥಿಕ ಅಭಿವೃದ್ಧಿಯ ಮೂಲವಾದ ಕೃಷಿಯ ಭೂಮಿಯನ್ನು ಫಲವತ್ತತೆಗೆ ಅನುಗುಣವಾಗಿ ವಿಂಗಡಿಸಿರುವದು ತಿಳಿದುಬರುತ್ತದೆ. ಚಲುಕ್ಯರ ಶಾಸನಗಳಲ್ಲಿ ನಾಲ್ಕು ಬಗೆಯ ಭೂವಿಧಗಳನ್ನು ಕಾಣುತ್ತೇವೆ. ೧) ಗರ್ದೆ (ಹಸಿನೆಲ), ೨) ಬೆದ್ದಲೆ (ಒಣನೆಲ), ೩) ತೋಟದ ನೆಲ, ೪) ಬರಡು ನೆಲ ಎಂದು ವಿಜಯಾದಿತ್ಯನ ಬೆಟಪಳ್ಳಿ[೪೪] ಶಾಸನದಲ್ಲಿ ಕಂಡುಬರುತ್ತದೆ. ೩೬ ಮಡಿ ಕಾಡನ್ನು ಒಂದು ಮತ್ತರ (ಹಸಿನೆಲ) ಮತ್ತು ೨ ಮತ್ತರ ತೋಟವನ್ನು ಒಳಗೊಂಡಿದೆ. ಮಣ್ಣಿನ ಗುಣ, ನೀರಾವರಿ ಸೌಲಭ್ಯ ಹಾಗೂ ಬೆಳೆಯ ಆಧಾರದ ಮೇಲೆ ಭೂ ಪ್ರಕಾರಗಳನ್ನು ವಿಂಗಡಿಸಿದುದು ಇದರಿಂದ ಗೊತ್ತಾಗುತ್ತದೆ. ಇಲ್ಲಿ ಕೊಡಲಾದ ಭೂದಾನವು ೨೫ ಮತ್ತರ ಕಪ್ಪುಮಣ್ಣು, ೫೦ ಮತ್ತರ ಕೆಂಪುಮಣ್ಣು, ೩೬ ಮಡಿ ಕಾಡನ್ನು ನೀಡಿದುದು ಕೃಷಿ ವಿಸ್ತರಣಾ ನೀತಿಯನ್ನು ಸೂಚಿಸುತ್ತದೆ.[೪೫] ಗದ್ದೆಯನ್ನು ಮಾತ್ರ ಕೇವಲ ಒಂದು ಮತ್ತರ ನೀಡಿದುದು ಅದು ಹೆಚ್ಚು ಮೌಲಿಕವಾಗಿತ್ತೆಂಬುದನ್ನು ಸೂಚಿಸುತ್ತದೆ. ಸಂಜಾನ ಶಾಸನವು[೪೬] ೧೦ ನಿವರ್ತನ ಮಾವಿನ ಗದ್ದೆಯನ್ನು ಬ್ರಾಹ್ಮಣನಿಗೆ ದಾನ ಮಾಡಿದುದನ್ನು ತಿಳಿಸುತ್ತದೆ. ವಿಜಯಾದಿತ್ಯನ ಕಾರುವ ಶಾಸನದಲ್ಲಿ[೪೭] ಆಮ್ರಪಟ್ಟಿಕೆ ದಾನದ ಉಲ್ಲೇಖವಿದೆ. ಆಮ್ರಪಟ್ಟಿಕೆ ಎಂದರೆ ಮಾವಿನ ತೋಟ ಎಂದು ಗ್ರಹಿಸಬಹುದು. ಹೀಗೆ ಹೂದೋಟಗಳ ಕುರಿತು ಉಲ್ಲೇಖಗಳು ಕಂಡುಬರುತ್ತವೆ. ಇದರಿಂದ ಚಲುಕ್ಯರ ಕಾಲದಲ್ಲಿಯ ಫಲ-ಪುಷ್ಪಗಳ ಸಮೃದ್ಧಿಯನ್ನು ಗುರುತಿಸಬಹುದು. ಶಿಲ್ಪಗಳಲ್ಲಿಯ ಗಿಡ-ಮರಗಳು, ಫಲ-ಪುಷ್ಪಗಳು ಈ ಶ್ರೀಮಂತಿಕೆಯನ್ನು ತಿಳಿಸುತ್ತದೆ.

ಉತ್ಪನ್ನಗಳು :

ಚಲುಕ್ಯರ ಕಾಲದ ಕೃಷಿ ಉತ್ಪನ್ನಗಳನ್ನು ತಿಳಿದುಕೊಳ್ಳಲು ಶಾಸನಗಳು ನೆರವಾಗುತ್ತವೆ. ಈ ಶಾಸನಗಳಲ್ಲಿ ಭತ್ತ, ಜೋಳ, ರಾಗಿ, ಗೋದಿ ಮೊದಲಾದ ಧಾನ್ಯಗಳು, ಮಾವು, ಹಲಸು, ಹುಣಸೆ, ದಾಳಿಂಬೆ, ತೆಂಗು ಮೊದಲಾದ

ಹಣ್ಣುಗಳನ್ನು ಹೆಸರಿಸುತ್ತವೆ. ಖರ್ಜೂರವೂ ಶಾಸನದಲ್ಲಿ ಕಾಣಿಸಿಕೊಂಡಿದೆ.ಇದನ್ನು ಬೇರೆ ದೇಶದಿಂದ (ಪರ್ಶಿಯಾದಿಂದ ?) ಆಮದು ಮಾಡಿಕೊಂಡಿರಬಹುದು.[೪೮] ಮೊದಲನೆ ಪುಲಿಕೇಶಿಯ ಅಳ್ತೆಂ ಶಾಸನದಲ್ಲಿ[೪೯] ಕುಹುಂಡೀ ವಿಷಯದ ಅಲಕ್ತರ (ಅಲ್ತೆ) ನಗರದ ವರ್ಣನೆ ಇದೆ. ಅದರಲ್ಲಿ ಭತ್ತ, ಕಬ್ಬು, ಬಟಗಡ್ಲಿ, ನವಣೆ, ಗೋದಿ ಮೊದಲಾದ ಧಾನ್ಯದಿಂದ ಪ್ರಾಂತವು ಸಮೃದ್ಧವಾಗಿತ್ತೆಂದು ಹೇಳಲಾಗಿದೆ. ದುರ್ಲಭಾ ದೇವಿಯು ಮುಕುಟೇಶ್ವರ ಗುಡಿಗೆ ಕೊಡಮಾಡಿದ ದತ್ತಿ ಗ್ರಾಮಗಳಲ್ಲಿ ವ್ರೀಹ ಮುಖಗ್ರಾಮ ಎಂಬುದು ಒಂದು. ವ್ರೀಹಿ ಎಂದರೆ ನೆಲ್ಲು. ವ್ರಿಹಮುಖ ಗ್ರಾಮ ಎಂದರೆ ನೆಲ್ಲಿನ ಮೊಗದಂತಿರುವ ಗ್ರಾಮ. ಈಗಲೂ ಈ ಗ್ರಾಮವು ನೆಲುವಿಗೆ[೫೦] ಎಂದೇ ಕರೆಯಲ್ಪಡುತ್ತಿದೆ. ಮಲಪ್ರಭಾ ನದಿ ದಂಡೆಗುಂಟ ಈ ಗ್ರಾಮದ ಎಡಬಲಗಳಲ್ಲಿ ಈಗಲೂ ನೆಲ್ಲು ಬೆಲೆಯುತ್ತಾರೆ.

ವ್ಯಾಪಾರ ವಾಣಿಜ್ಯ :

ಒಂದು ದೇಶದ ಆರ್ಥಿಕ ಅಭಿವೃದ್ಧಿಗೆ ಫಲವತ್ತಾದ ಭೂಮಿ ಹಾಗೂ ಅದರ ಉತ್ಪನ್ನಗಳು ಕಾರಣವಾಗಿರುತ್ತವೆ. ಚಲುಕ್ಯರ ಕಾಲದಲ್ಲಿ ಐಹೊಳೆಯಲ್ಲಿ ೫೦೦ ಜನ ಸದಸ್ಯರ ವರ್ತಕ ಸಂಘವೊಂದು ವ್ಯಾಪಾರದ ಹುಟ್ಟುಹಾಕಿತು. ಪ್ರಸಿದ್ಧವಾದ ವರ್ತಕ ಸಂಘವು ವ್ಯಾಪಾರ ಶಾಹಿ ಪ್ರಭುತ್ವವನ್ನು ಸ್ಥಾಪಿಸಿದಂತೆ ತಿಳಿದುಬರುತ್ತದೆ. ಈ ಸಂಘದಲ್ಲಿ ಶೆಟ್ಟಿಗಳು, ಸೆಟ್ಟಿಗುತ್ತರುಂ, ನಾನಾದೇಶಿಗಳುಂ, ನಖರಂಗಳುಂ, ಗವರೆ, ಮುಮ್ಮುರಿದಂಡ ಎಂದು ಮುಂತಾಗಿ ಉಪಸಮಿತಿಗಳಿದ್ದವು. ಐಹೊಳೆಯ ಗೌಡರ ಗುಡಿಯ ತೊಲೆಯ ಮೇಲೆ ಚಲುಕ್ಯರ ಕಾಲದ ಎಂಟು ವ್ಯಾಪಾರಿ ಸಂಘಗಳ ಉಲ್ಲೇಖವಿದೆ.[೫೧] ಅಯ್ಯಾವೊಳೆ ಅಯ್ನೂರರ ವ್ಯಾಪಾರವು ದೇಶ-ವಿದೇಶಳಿಗೆ ವ್ಯಾಪಿಸಿತ್ತು. ಆನೆಗಳು, ಕುದುರೆಗಳು, ಮುತ್ತು, ರತ್ನಗಳು, ಮಸಾಲೆ ಸಾಮಾನುಗಳು, ಸುಗಂಧ ದ್ರವ್ಯಗಳು, ಔಷಧಿ ಮೊದಲಾದ ವ್ಯಾಪಾರದ ಸರಕುಗಳಾಗಿದ್ದವು. ಸರಕು ಸಾಗಾಣಿಕೆಗಾಗಿ ಬಂಡಿಗಳನ್ನು ಮತ್ತು ಕುದುರೆ, ಕೋಣ, ಎತ್ತು, ಕತ್ತೆಗಳನ್ನು ಬಳಸುತ್ತಿದ್ದರು.[೫೨]

ತೆರಿಗೆಗಳು :

ಚಲುಕ್ಯರ ಆಳ್ವಿಕೆಯ ಕಾಲದ ದಾನ ಶಾಸನಗಳನ್ನು ಅವಲೋಕಿಸಿದರೆ, ಆ ಕಾಲದಲ್ಲಿ ಪ್ರಚಲಿತವಿದ್ದ ತೆರಿಗೆ, ಸುಂಕಗಳ ಬಗ್ಗೆ, ಹೆಚ್ಚಿನ ವಿವರಗಳು ಲಭ್ಯವಾಗುತ್ತವೆ. ಭೂಕಂದಾಯದ ಜೊತೆಗೆ ಆಸ್ತಿ ತೆರಿಗೆ, ವೃತ್ತಿ ತೆರಿಗೆ, ವಾಣಿಜ್ಯ ತೆರಿಗೆ, ಸಾಮಾಜಿಕ ತೆರಿಗೆ ಮೊದಲಾದವುಗಳು ಅಸ್ತಿತ್ವದಲ್ಲಿ ಇದ್ದುದನ್ನು ಮನಗಾಣುತ್ತೇವೆ. ರಾಜ್ಯದ ಭೂ ತೆರಿಗೆ ನೀತಿ ಸಂಗ್ರಹಣೆಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಸೂಚನೆಗಳಿವೆ. ಪಟ್ಟದಕಲ್ಲಿನ ಎರಡು ಶಾಸನಗಳಲ್ಲಿ ಬಳ್ಳಿಗವರ್ತಿ ಎಂಬ ತೆರಿಗೆಯನ್ನು ವಿನಾಯಿತಿ ಮಾಡಿದುದನ್ನು ಉಲ್ಲೇಖಿಸಲಾಗಿದೆ.[೫೩]

ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರಿಗಳಿದ್ದುದು ಶಾಸನಗಳಿಂದ ಸ್ಪಷ್ಟವಾಗಿದೆ. ಇಮ್ಮಡಿ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ರೇವಡಿ ಎಂಬಾತನು ಬಡ್ಡರಾವುಳ (ವಡ್ಡರಾವುಳ) ತೆರಿಗೆಗೆ ಸಂಬಂಧಿಸಿದ ಅಧಿಕಾರಿಯಾಗಿದುದು

ಐಹೊಳೆಯ ದುರ್ಗಗುಡಿ ಶಾಸನದಿಂದ ತಿಳಿದುಬರುತ್ತದೆ. ಸ್ವಂತ ಮನೆಯುಳ್ಳವರು ಮತ್ತು ಜಾಗೆಯುಳ್ಳವರು ತಮ್ಮ ಆಸ್ತಿಯ ಮೇಲೆ ತೆರಿಗೆ ಕೊಡಬೇಕಾಗುತ್ತಿತ್ತು. ಯುವರಾಜ ವಿಕ್ರಮಾದಿತ್ಯನ ಲಕ್ಷ್ಮೇಶ್ವರ[೫೫] ಶಾಸನವು ಪ್ರಜೆಗಳು ಕೊಡಬೇಕಾದ ಮನೆ ತೆರಿಗೆಗಳ ಬಗೆಗೆ ಸೂಚನೆ ನೀಡುತ್ತದೆ. ಮನೆ ಇಲ್ಲದವರು ಕೂಡ ತಮ್ಮ ಅಂತಸ್ತಿಗೆ ಅನುಗುಣವಾಗಿ ಪ್ರತಿವರ್ಷ ೧೫, ೧೦, ೭ ಇಲ್ಲವೆ ೫ ಪಣಗಳನ್ನು ತೆರಿಗೆಯಾಗಿ ನೀಡಬೇಕಾಗಿತ್ತು. ಪಟ್ಟದಕಲ್ಲಿನ ಲೋಕೇಶ್ವರ ಗುಡಿಗೆ ನೆರೆಯಂಗಲ್-೫೦ನ್ನು ನೀಡಿದ ಲೋಕ ಮಹಾದೇವಿ ಅರಸಿಯು ಒಂದು ಮತ್ತರಿಗೆ ಎರಡು ಕೊಳಗ (ಇಕ್ಕುಳ) ಜೋಳ, ಕೊಡಬೇಕೆಂದು ಆಜ್ಞಾಪಿಸಿದ್ದಾಳೆ.[೫೬] ಈ ರೀತಿ ಸಾಮ್ರಾಜ್ಯದ ಅಭಿವೃದ್ಧಿಗಾಗಿ ಹಲವಾರು ತೆರಿಗೆಗಳನ್ನು ವಸೂಲಿ ಮಾಡುತ್ತಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ನಾಣ್ಯಗಳು :

ಆರ್ಥಿಕ ವ್ಯವಸ್ಥೆಯನ್ನು ತಿಳಿಯುವಲ್ಲಿ ನಾಣ್ಯಗಳ ಪಾತ್ರ ಬಹುಪ್ರಮುಖವಾದುದು. ಚಲುಕ್ಯರ ಆಡಳಿತ ಕಲೆ ಮೊದಲಾದವುಗಳ ಬಗೆಗೆ ವಿವರಗಳು ಲಭ್ಯವಿರುವಂತೆ ನಾಣ್ಯಗಳ ಬಗೆಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ವಿಷಯದಲ್ಲೂ ಅಷ್ಟೇ. ಹೆಚ್ಚಿನ ಸಂಖ್ಯೆಯಲ್ಲಿ ಈ ಅರಸರ ನಾಣ್ಯಗಳು ದೊರೆಯದೇ ಇದ್ದುದಕ್ಕೆ ಅವರು ಹೆಚ್ಚಾಗಿ ಚಿನ್ನದ ನಾಣ್ಯಗಳಿರುವುದೇ ಕಾಣವಾಗಿರಬಹುದು.[೫೭]

ಚಲುಕ್ಯರ ಶಾಸನಗಳು ಗದ್ಯಾಣ, ಸುವರ್ಣ, ಧರಣ, ನವಿಲಪೋನ್, ಪಣ, ವಿಸ ಮೊದಲಾದ ನಾಣ್ಯಗಳನ್ನು ಹೆಸರಿಸಿವೆ. ಐಹೊಳೆಯ ಲಾಡಖಾನ ದೇವಾಲಯದ ಶಾಸನವೊಂದರಲ್ಲಿ[೫೮] ಗದ್ಯಾಣ (ಗದ್ಯಾಣ) ಪ್ರಸ್ತಾವಿತವಾಗಿದೆ. ಮೂವತ್ತು ನಿವರ್ತನ ಭೂಮಿಯನ್ನು ಮೂವತ್ತು ಗದ್ಯಾಣಗಳಿಗೆ ಕೊಂಡು ಜ್ಞಾನ ಶಿವಾಚಾರ್ಯನು ಪಟ್ಟದಕಲ್ಲಿನ ವಿಜಯೇಶ್ವರ ದೇವಾಲಯದ ಪೂಜಾವಿಧಿಗಳಿಗಾಗಿ ಕೊಟ್ಟನೆಂಬುದು ತಿಳಿದು ಬರುತ್ತದೆ.[೫೯] ಈ ರೀತಿಯಾಗಿ ಆಯಾ ಅರಸರುಗಳ ಶಾಸನಗಳಲ್ಲಿ ನಾಣ್ಯಗಳ ಹೆಸರುಗಳು ಉಲ್ಲೇಖವಾಗಿರಿವುದರಿಂದ ಈ ಕಾಲದಲ್ಲಿ ಆರ್ಥಿಕ ಸ್ಥಿತಿ ಚೆನ್ನಾಗಿತ್ತು ಎಂದು ತಿಳಿದುಬರುತ್ತದೆ.

ಧಾರ್ಮಿಕ ವಿಧಿವಿಧಾನಗಳು / ನಂಬಿಕೆ ಆಚರಣೆಗಳು :

ಧಾರ್ಮಿಕ ಆಚಣೆಗಳು ಮಾನವನ ಜೀವನವನ್ನು ರೂಪಿಸುವಲ್ಲಿ, ನಾಗರಿಕತೆಯನ್ನು ಬೆಳೆಸುವಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ಪೋಷಿಸಿ ಕ್ರಿಯಾಶೀಲಗೊಳಿಸುವಲ್ಲಿ ತನ್ನದೆಯಾದ ಪ್ರಮುಖ ಸ್ಥಾನ ಪಡೆದುಕೊಂಡಿವೆ. ಇವು ಮಾನವನ ಜೀವನದ ಅವಿಭಾಜ್ಯ ಅಂಗಗಳಾಗಿದ್ದು ಸಮಾಜವನ್ನು ಒಂದುಗೂಡಿಸುವ ಮತ್ತು ಅಭಿವೃದ್ಧಿಪಡಿಸುವ ಶಕ್ತಿ ಪುಂಜಗಳಾಗಿವೆ. ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆ ಹೆಸರುಗಳಿಂದ ಕರೆದರೂ ಇವುಗಳ ಉದ್ದೇಶ ಒಂದೇ ಆಗಿರುತ್ತದೆ. ತಮ್ಮ ರೋಗರುಜಿನಗಳನ್ನು ಗುಣಪಡಿಸುವದು ಮತ್ತು ತಮ್ಮ ಇಷ್ಟಾರ್ಥಗಳನ್ನು

ಈಡೇರಿಸಿಕೊಳ್ಳುವುದಾಗಿದೆ. ಈ ನಂಬಿಕೆ ಆಚರಣೆಗಳು ಇಂದು ಗ್ರಾಮೀಣ ಪ್ರದೇಶಗಳಲ್ಲಿ ಬಹುವಾಗಿ ಪ್ರಚಲಿತದಲ್ಲಿವೆ. ಇವುಗಳು ಬಹುತೇಕ ಪ್ರಕೃತಿ ಮೂಲವಾಗಿ ಹುಟ್ಟಿಕೊಂಡುವುಗಳಾಗಿದ್ದು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿವೆ.

ಆಚರಣೆಗಳು : ಮನುಷ್ಯ ಹುಟ್ಟಿನಿಂದ ಸಾವಿನವರೆಗೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತಾನೆ. ಈ ಆಚರಣೆಗಳು ಮಾನವನ ಜೀವನದಲ್ಲಿ ಎಂದಿನಿಂದ ಪ್ರಾರಂಭವಾದವು ಎಂದು ಹೇಳುವುದು ಕಷ್ಟ, ಆದರೆ ಅವುಗಳು ಪರಂಪರಾಗತವಾಗಿ ನಡೆದುಕೊಂಡು ಬಂದವುಗಳೆಂದು ಹೇಳುವುದು ಸ್ಪಷ್ಟ. ನಾಗರಿಕ ಸಮಾಜಕ್ಕಿಂತ ಆದಿಮಾನವನ ಸಮಾಜದಲ್ಲಿ, ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ವಾಸಮಾಡುವ, ಸುಶಿಕ್ಷಿತರಿಗಿಂತ ನಿರಕ್ಷರಿಗಳಲ್ಲಿ ಸಂಪ್ರದಾಯಗಳು ಪ್ರಬಲವಾಗಿರುತ್ತವೆ. ನಗರವಾಸಿಗಳಿಗಿಂತ ಹಳ್ಳಿಗಳಲ್ಲಿ ವಾಸಿಸುವ ಜನರಲ್ಲಿ ಸಂಪ್ರದಾಯ ಆಚಣೆಗಳಲ್ಲಿ ಹೆಚ್ಚು ಸಂಕೀರ್ಣವನ್ನು ಕಾಣಬಹುದು. ಅಲ್ಲದೇ ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ಮತೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮವನ್ನು ಅವಲಂಭಿಸಿ ಸಂಪ್ರದಾಯಗಳು ಉಗಮಗೊಂಡಿವೆ. ಇವು ನಾನಾ ರೀತಿಯ ಸಂಪರ್ಕಗಳಿಂದಾಗಿ ಪ್ರದೇಶದಿಂದ ಪ್ರದೇಶಕ್ಕೆ ಪ್ರಚಾರಗೊಳ್ಳುತ್ತವೆ.

ಈ ಸಂಪ್ರದಾಯ ಆಚರಣೆಗಳು ಜಾತಿಯಿಂದ ಜಾತಿಗೆ, ಪಂಗಡದಿಂದ ಪಂಗಡಕ್ಕೆ ವ್ಯತ್ಯಾಸವಾಗುತ್ತ ಹೋಗುತ್ತವೆ. ಅಲ್ಲದೆ ಕಾಲದಿಂದ ಕಾಲಕ್ಕೆ ತನ್ನ ಆಂತರಿಕ ಕಾರಣಗಳಿಂದ ಕೆಲವು ಸಂಪ್ರದಾಯಗಳು ಬದಲಾವಣೆಗಳಾಗುತ್ತವೆ.

ಒಂದು ನಿರ್ದಿಷ್ಟ ಸ್ಥಳ, ಅಥವಾ ಸಮಾಜದಲ್ಲಿ ನಡೆಯುವ ನಾಮಕರಣ, ಜವಳ, ಗಂಗೆಪೂಜೆ, ವಿವಾಹ, ದೇವದಾಸಿ ಪದ್ಧತಿ, ಅರ್ಚನೆ ಇತ್ಯಾದಿ ಆಚರಣೆಗಳು ಜೊತೆಗೆ ಹುಟ್ಟಿನಿಂದ ಸಾವಿನವರೆಗೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತಾ ಬಂದಿದ್ದಾರೆ. ಅವುಗಳಲ್ಲಿ ಕೆಲವು ವಿಶಿಷ್ಟವಾದ ಹಾಗೂ ಮುಖ್ಯವಾದ ಧಾರ್ಮಿಕ ವಿಧಿ ವಿಧಾನಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಅರ್ಚನೆ ವಿಧಾನ :

ಹುಲಿಗೆಮ್ಮನಕೊಳ್ಳ ಪರಿಸರದ ಪ್ರತಿಯೊಂದು ಊರುಗಳಲ್ಲಿ ಬಸವೇಶ್ವರ, ಮಾರುತೇಶ್ವರ (ಆಂಜನೆಯ) ಕರಿಯಮ್ಮ, ಲಕ್ಕಮ್ಮ, ಹುಲಿಗೆಮ್ಮ, ದ್ಯಾಮವ್ವ, ದುರಗಮ್ಮ, ಭರಮದೇವರು, ಬಾಚಲಿಂಗೇಶ್ವರ, ಬಸವಲಿಂಗೇಶ್ವರ, ತಾಯಮ್ಮ ಇನ್ನು ಮುಂತಾದ ದೇವರಿಗೆ ಪ್ರತಿದಿನ ಭಕ್ತಾದಿಗಳು ಪೂಜೆಯನ್ನು ಮಾಡುತ್ತಾರೆ. ಈ ಪೂಜೆಗೆ ಮನೆಯಿಂದ ಇಲ್ಲವೇ ಪಕ್ಕದ ಕೆರೆ, ಬಾವಿ, ನದಿಗಳ ನೀರು ತಂದು ಹಾಕಿ, ವಿಭೂತಿಯನ್ನು, ಕುಂಕುಮವನ್ನು ಹಚ್ಚಿ ಪತ್ರೆ ಮರದ ಎಲೆಯನ್ನು ಮತ್ತು ಕರಿಕೆ ಪತ್ರೆ, ಬನ್ನಿಪತ್ರೆ, ಆರಿಪತ್ರೆ, ಅಥವಾ ನಾನಾ ತರಹದ ಹೂಗಳನ್ನು ದೇವರಿಗೆ ಮುಡಿಸಿ ಅಲಂಕರಿಸುತ್ತಾರೆ.

ಕೆಲವು ದೇವಾಲಯಗಳಲ್ಲಿ, ಗಂಡು ದೇವರಾದರೆ, ಪ್ರತಿವಾರದಲ್ಲಿ ಮೂರು ದಿನ ಅಂದರೆ ಸೋಮವಾರ, ಗುರುವಾರ, ಶನಿವಾರ ಮತ್ತು ಸ್ತ್ರೀದೇವತೆಯಾದರೆ, ಮಂಗಳವಾರ, ಶುಕ್ರವಾರ ಪೂಜೆಯನ್ನು ಮಾಡುತ್ತಾರೆ. ಇದರಲ್ಲಿ ಕೆಲವು ನಿಯಮಗಳನ್ನು ಬಳಸುತ್ತಾರೆ. ಇವರ ಪೂಜೆಯ ಸಂದರ್ಭದಲ್ಲಿ ಘಂಟೆ ಭಾವಿಸುತ್ತಾರೆ. ಆರತಿಯನ್ನು ಬೆಳಗುತ್ತಾರೆ. ಈ ರೀತಿಯಲ್ಲಿ ಶ್ರಾವಣ ಮಾಸದಲ್ಲಿ ಕೆಲವು ದೇವರುಗಳಿಗೆ ಅದ್ದೂರಿಯಾಗಿ ಅಭಿಷೇಕ, ರುದ್ರಾಭಿಷೇಕ, ನಡೆಯುತ್ತವೆ. ಭಜನೆ, ಪುರಾಣ, ಪ್ರವಚನಗಳು ಈ ಒಂದು ಪರಿಸರದಲ್ಲಿ ಆಚರಣೆಯಲ್ಲಿವೆ ಹೀಗೆ ಈ ಪರಿಸರದಲ್ಲಿಯ ದೇವಾಲಯಗಳಲ್ಲಿ ಈ.ಎಲ್ಲಾ ಆಚರಣೆಗಳು ಕಂಡುಬರುತ್ತವೆ.

ಹರಕೆಗಳು :

ಧಾರ್ಮಿಕ ವಿಧಿ-ವಿಧಾನಗಳಲ್ಲಿ ಮತ್ತು ಪ್ರಾಚೀನ ಸಂಪ್ರದಾಯಗಳಲ್ಲಿ ಇದು ಪ್ರಮುಖವಾಗಿದೆ. ಈ ಜಗತ್ತಿನಲ್ಲಿ ಜನಿಸಿದ ಮಾನವ ಯಾವಾಗ ದೇವರ ಮೊರೆಹೋದನೋ ಆಗಲೇ ಹರಕೆ-ನಂಬಿಕೆಗಳು ಜನನವಾದವು. ಅಂದಿನಿಂದ ಇಂದಿನವರೆಗೆ ಈ ಸಂಪ್ರದಾಯಗಳು ಬೆಳೆದುಬಂದಿವೆ. ಅಂದರೆ ನಂಬಿಕೆ ಮತ್ತು ಹರಕೆಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಮಾನವನಿಗೆ ಆಪತ್ತು, ತೊಂದರೆಗಳು ಬಂದಾಗ ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಮುಡುಪು ಕಟ್ಟುವುದು, ಬೆತ್ತಲೆ ಸೇವೆ ಮಾಡುವುದು, ದೀಡುನಮಸ್ಕಾರ ಹಾಕುವುದು, ಒಡವೆಳನ್ನು ದೇವರಿಗೆ ಕೊಡುವುದು ಮತ್ತು ವಿವಿಧ ರೀತಿಯ ಪೂಜೆ, ಪುನಸ್ಕಾರ, ಅಭಿಷೇಕ ಮಾಡಿಸುವುದು, ಹುಂಡಿಗಳಲ್ಲಿ ಕಾಣಿಕೆ ಹಾಕುವುದು, ದೇವರು ನೆಲೆಸಿದ ಸ್ಥಳಕ್ಕೆ ಪಾದಯಾತ್ರೆ ಮಾಡುವುದು, ಕಾಯಿ ಮತ್ತು ಕರ್ಪೂರ ಮಾಡಿಸುವುದು, ಇನ್ನು ಮುಂತಾದವುಗಳನ್ನು ಮಾಡುತ್ತಾರೆ. ಈ ರೀತಿ ಮಾನವನು ಹರಕೆಯನ್ನು ಕಟ್ಟಿಕೊಳ್ಳುವುದು ಈಗಲೂ ಪರಂಪರೆಯಾಗಿ ಬೆಳೆದು ಬಂದಿದೆ.

ವಿವಾಹ ಪದ್ಧತಿ :

ಸಾಮಾಜಿಕ ಜೀವನದಲ್ಲಿ 'ವಿವಾಹಕ್ಕೆ' ಮಹತ್ವದ ಸ್ಥಾನವಿದೆ. ವಿವಾಹವು ವ್ಯಕ್ತಿಗೆ ಸಾಮಾಜಿಕ ಸ್ಥಾನಮಾನವನ್ನು ಕೊಡುತ್ತದೆ. ವಿವಾಹವೆಂಬ ಆಚರಣೆಯ ಮೂಲಕ ಗಂಡು-ಹೆಣ್ಣು ದಂಪತಿಗಳಾಗಿ ಸಂಸಾರಸ್ಥರಾಗುತ್ತಾರೆ. ವಿವಾಹದ ಅಂತಿಮ ನಿರ್ಣಯ ಹಿರಿಯರಿಗೆ ಸೇರಿರುತ್ತದೆ. ವಿವಾಹವಾಗುವ ಪೂರ್ಣ ನಿರ್ಣಯ ತೆಗೆದುಕೊಳ್ಳುವುದು ಗಂಡಸು. ಆದರೆ, ಹಿರಿಯರೇ ಗಂಡಸಿಗೆ ಮದುವೆಯಾಗುವುದಕ್ಕೆ ಒತ್ತಾಯ ಮಾಡುವದೂ ಇದೆ. ಈ ರೀತಿ ಒತ್ತಡ ಬಂದಾಗಲೂ ನಿರ್ಧಾರ ತೆಗೆದುಕೊಳ್ಳುವದು ಗಂಡಿನ ಕೈಯಲ್ಲಿರುತ್ತದೆ. ಹೀಗೆ ನಿರ್ಧರಿಸಿದ ಹುಡುಗ ತನ್ನ ಹಿರಿಯರೊಂದಿಗೆ ವಧು ಅನ್ವೇಷಣೆಗೆ ಹೊರಡುತ್ತಾನೆ. ಇವರ ಜೊತೆ ತನ್ನ ಕುಟುಂಬದವರು (ಅಕ್ಕ, ತಂಗಿ, ತಂದೆ, ತಾಯಿ ಸಬಂಧಿಗಳು) ಇರುತ್ತಾರೆ. ಇವರು ತಮ್ಮ ಜಾತಿಗೆ ಸೇರಿದ ಬೇರೆ ಬೆಡಗಿನ ನಿರ್ದಿಷ್ಟ ಮನೆಯ ಹೆಣ್ಣನ್ನು

ಒಪ್ಪುತ್ತಾರೆ. ಒಪ್ಪಿದ ಮೇಲೆ ಹೆಣ್ಣಿನ ಕಡೆಯವರು ಗಂಡಿನ ಮನೆತನ ನೋಡವುದಕ್ಕೆ ಗಂಡಿನ (ವರ) ಮನೆಗೆ ಬರುತ್ತಾರೆ. ಅಲ್ಲಿ ಮನಸ್ಸಿಗೆ ಬಂದರೆ, ಗಂಡು ಮತ್ತು ಹೆಣ್ಣಿನ ಕಡೆಯವರು ಸೇರಿ ನಿಶ್ಚಯ ಮಾಡುತ್ತಾರೆ. ನಿಶ್ಚಯದ ದಿನದಂದು ಮದುವೆಯ ದಿನವನ್ನು ಗೊತ್ತುಪಡಿಸಲಾಗುತ್ತದೆ.

ಎಲ್ಲ ಕಡೆಗಳಲ್ಲಿ ವಾಡಿಕೆಯಲ್ಲಿರುವಂತೆ ಈ ಪರಿಸರದಲ್ಲಿಯೂ ಸಹ ಸಾಮಾನ್ಯವಾಗಿ ವಿವಾಹ ಮಂಗಳ ಕಾರ್ಯಗಳು ಬಹಳ ವ್ಯಾಪಕವಾಗಿ ನಡೆಯುತ್ತವೆ. ಮನೆಯಲ್ಲಿನ ಶಾಸ್ತ್ರ ಸಮ್ಮತ ಅಥವಾ ಸಂಪ್ರದಾಯಬದ್ಧ ಕಾರ್ಯಗಳು ಒಂದೆರಡು ದಿನಗಳಲ್ಲಿ ಮುಗಿಯದೆ, ಮದುವೆಯ ಪ್ರಾರಂಭದಿಂದ ಮಂಗಳದವರೆಗೆ ಏನಿಲ್ಲವೆಂದರೂ, ೫ರಿಂದ ೮ ದಿನಗಳ ಅವಧಿಯವರೆಗೂ ನಡೆಯುತ್ತಿತ್ತು. ಈಗಲೂ ಎಷ್ಟೇ ಅವಸರದ ಮದುವೆ ಐದು ದಿನಗಳಾದರೂ ಬೇಕಾಗುವುದು. ಸಾಮಾನ್ಯವಾಗಿ ಹೆಚ್ಚಿನ ಸಂಖ್ಯೆಯ ಮದುವೆಗಳೆಲ್ಲ ಗಂಡಿನ ಮನೆಯ ಮುಂದೆ ಇಲ್ಲವೇ ದೇವಸ್ಥಾನಗಳಲ್ಲಿ ನಡೆಯುತ್ತವೆ.

ಈ ಮದುವೆಯಲ್ಲಿ ನಡೆಯುವ ಕಾರ್ಯಗಳು ಅನೇಕವಾಗಿವೆ, ಇವು ಹಂತಹಂತವಾಗಿ ನಡೆಯುತ್ತವೆ. ಇವುಗಳಲ್ಲಿ ಮೊದಲನೆಯದು 'ವೀಳ್ಯದ ಶಾಸ್ತ್ರ' ಈ ವೀಳ್ಯದ ಶಾಸ್ತ್ರವು ಉಭಯ ಕುಟುಂಬಗಲ್ಲಿ ನಡೆಯಬೇಕಾಗಿರುವ ನೆಂಟಸ್ತಿಕೆಯನ್ನು ಸ್ಥಿರಗೊಳಿಸುವುದಕ್ಕಾಗಿ ನಡೆಯುವ ಮಾದರಿ ಶಾಸ್ತ್ರ, ನಂತರದ ಶಾಸ್ತ್ರ 'ದೇವಧೃತ' ಈ ಶಾಸ್ತ್ರವು ಪಿತೃ ದೇವತೆಗಳ ಮತ್ತು ಸ್ವರ್ಗ ದೇವತೆಗಳ ಆಶೀರ್ವಾದಗಳನ್ನು ವಧುವರರು ಪಡೆಯುವುದು, 'ಚಪ್ಪರ' ಶಾಸ್ತ್ರವು (ಎಲೆವಾಸ ಶಾಸ್ತ್ರ) ಮದುವೆಯ ಮನೆಯ ಮುಂದೆ ಮತ್ತು ಧಾರೆಮಂಟಪದ ಬಳಿ ಚಪ್ಪರ (ಹಂದರವನ್ನು) ಸ್ಥಾಪಿಸುವುದು ತಾಳಿ ಕಟ್ಟುವ ಶಾಸ್ತ್ರವು ನಡೆಯುತ್ತಿದ್ದಂತೆಯೇ ಮದುವೆಯ ವ್ಯವಹಾರವು ಧರ್ಮದ ಮುದ್ರೆಯನ್ನು ವಹಿಸಿದಂತಾಗಿ ಪುಣ್ಯ ಸಂಸ್ಕಾರವೆನಿಸುತ್ತದೆ.

'ಧಾರೆ' ಎನ್ನುವುದು ವಿವಾಹ ಮಂಟಪದಲ್ಲಿ ವಧುವರರ ಕೈಗಳನ್ನು ಜೋಡಿಸಿ ಹಿಡಿದು ಹಾಲಿನ ಧಾರೆಯನ್ನು ಎರೆಯುವುದು 'ಸೇಸೆ' ಎಂಬ ಶಾಸ್ತ್ರವು ವಧುವರರು ಪರಸ್ಪರ ಬೊಗಸೆಗಳ ತುಂಬ ಅಕ್ಕಿ (ಅಕ್ಷತೆ)ಯನ್ನು ಅಥವಾ ಧಾರೆ: ಅಕ್ಕಿಯನ್ನು ತೆಗೆದುಕೊಂಡು ಪರಸ್ಪರ ತಲೆಗಳ ಮೇಲೆ ಸುರಿಯುವ ಪದ್ಧತಿ 'ಭೂಮ'ವೆನ್ನುವುದು ಧಾರೆಯಾದ ದಿನ ನೂತನ ವಧೂವರು ಒಟ್ಟಿಗೆ ಕುಳಿತು ಸಿಹಿಯನ್ನು ಊಟಮಾಡುವ ಶಾಸ್ತ್ರ 'ನಾಗವಲಿ' (ನಾಗ ಬಲಿ, ನಾಗೋಲಿ) ಎಂಬುದು ವಧುವರರ ಮುಂದೆ ಎದುರುಬದಿರುನಲ್ಲಿ ಕಳಸಗಳನ್ನು ಹೂಡಿ ಅವುಗಳಲ್ಲಿನ ಓಕುಳಿ ಕಳಸವನ್ನು ಅರಸುವದು ಮತ್ತು ಆನೆಗಳ ಆಕೃತಿಗಳನ್ನು ಉಪ್ಪು ಮತ್ತು ಅಕ್ಕಿಗಳಲ್ಲಿ ಬರೆಯಿಸಿ ಪರಸ್ಪರ ವಿನಿಮಯ ಮಾಡಿಕೊಂಡು ವಿವಾಹ ಬಂಧನವನ್ನು ಸರಸಮಯವನ್ನಾಗಿ ಮಾಡುವುದು.

'ಕಂಕಣ ವಿಸರ್ಜನೆ' ಎಂಬುದು ವಧೂವರರ ಬಲ ಮುಂಗೈ ಮಣಿಕಟ್ಟಿನ ಬಳಿ ಪರಸ್ಪರರು ಕಟ್ಟಿಕೊಂಡ ಅರಸಿಣ ದಾರ ಮತ್ತು ಉಣ್ಣೆದಾರದ ಜೋಡಿ ಹುರಿಯನ್ನು ಪರಸ್ಪರರು ಬಿಚ್ಚುವುದು. ಅಂದರೆ, ಇದುವರೆಗೆ ನಡೆದ ಕೆಲಸ

ಶಾಸ್ತ್ರಗಳನ್ನು ನಿರ್ವಹಿಸುವುದಕ್ಕಾಗಿ ಧರಿಸಿದ್ದ ದೀಕ್ಷೆಯನ್ನು ಬಿಚ್ಚಿದ ಗುರುತಿಗಾಗಿ ಈ ಕಂಕಣ ವಿಸರ್ಜನೆ ನಡೆಯುತ್ತದೆ. ವಿವಾಹ ವಿಧಿಯ ಕೊನೆಯ ಅಂಗವಾಗಿ 'ಗದ್ದಿಗೆ' ಅಥವಾ 'ಸಿಂಹಾಸನ ಹೂಡಿ ಪೂಜೆ' ಮಾಡುವುದು. ವಿವಾಹ ವಿಧಿಯಲ್ಲಿ ಅತ್ಯಂತ ಮಹತ್ವಪೂರ್ಣವೂ, ಅತಿ ಮುಖ್ಯವಾದ ಕರ್ತವ್ಯವೆಂದರೆ 'ತಾಳಿ' ಕಟ್ಟುವುದು, ಧಾರೆಯೆರೆಯುವುದು.

ಈ ಹುಲಿಗೆಮ್ಮನಕೊಳ್ಳ ಪರಿಸರದಾದ್ಯಂತ ಸೇರಿದಂತೆ ಇಲ್ಲಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಲ್ಲಾ ಜಾತಿಗಳಲ್ಲಿ ನಡೆಯುವ ಆಚರಣೆಯ ಒಟ್ಟು ಸ್ವರೂಪವಿದು. ಮೇಲೆ ಹೇಳಿದ ವಿವರಗಳಲ್ಲಿ ಕೆಲವು ಜಾತಿಯಿಂದ ಜಾತಿಗೆ ಅಲ್ಪಸ್ವಲ್ಪ ವ್ಯತ್ಯಾಸವಾಗುವುದುಂಟು. ಮುಸ್ಲಿಂ ಮತ್ತು ಕ್ರಿಶ್ಚಿಯನ್ ವಿವಾಹಗಳಲ್ಲಿ ಬೇರೆ ಬೇರೆ ರೀತಿಯ ಆಚರಣೆಗಳನ್ನು ಕಾಣಬಹುದು. ಈ ಪರಿಸರದಾದ್ಯಂತ ಹಿಂದುಗಳಲ್ಲಿ ಏಕಪತ್ನಿತ್ವ ಹೆಚ್ಚು ಪ್ರಚಲಿತವಿದೆ.

ಸೀಮಂತ ಕಾರ್ಯ :

ವಿವಾಹವಾದ ಸ್ತ್ರೀಯು ಮೊದಲ ಸಲ ಗರ್ಭಿಣಿಯಾದರೆ ಅವಳು ಹೆರಿಗೆಯಾಗುವ ಪೂರ್ವದಲ್ಲಿ ಸೀಮಂತ ಕಾರ್ಯ ಮಾಡುವರು. ಈ ಪದ್ಧತಿಯು ಎಲ್ಲ ಜನಾಂಗದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಈ ಆಚಣೆಯು ಮಹಿಳೆಯ ಗಂಡನ ಮನೆಯಲ್ಲಿ ನಡೆಯುತ್ತದೆ. ಇದಕ್ಕೆ ನೆಂಟರು, ಬಂಧು-ಬಳಗದವರು ಆಗಮಿಸುತ್ತಾರೆ. ಸ್ತ್ರೀಗೆ ಹಸಿರುಬಳೆ, ಹಸಿರು ಸೀರೆ, ರವಿಕೆ ತೊಡಿಸಿ ಗಂಡಿಗೂ ಹೊಸ ಬಟ್ಟೆಗಳನ್ನು ತೊಡಿಸಿ ಸತಿಪತಿಗಳಿಬ್ಬರಿಗೂ ಆರತಿಯನ್ನು ಬೆಳಗುತ್ತಾರೆ. ಈ ರೀತಿಯ ಆಚರಣೆಯು ಈ ಪರಿಸರದ ಎಲ್ಲ ಗ್ರಾಮಗಳಲ್ಲಿಯೂ ಕಂಡುಬರುತ್ತದೇ.

ಗಂಗೆ ಪೂಜೆ :

ಸ್ತ್ರೀಯ ಹೆರಿಗೆಯಾದ ನಂತರ ಬಾಣಂತಿಯು ಕೆಲವು ದಿನ ವಿಶ್ರಾಂತಿ ಪಡೆದುಕೊಳ್ಳಬೇಕಾಗುತ್ತದೆ. ಅವಳ ಮತ್ತು ಮಗುವಿನ ಆರೋಗ್ಯದ ದೃಷ್ಟಿಯಿಂದ ಇದು ಮುಖ್ಯವಾಗಿದೆ. ಈ ಸಂದರ್ಭದಲ್ಲಿ ಅವಳು ಮನೆಯಲ್ಲಿ ಯಾವುದೇ ಕೆಲಸವನ್ನು ಮಾಡುವಂತಿಲ್ಲ. ಅವಳು ವಿಶ್ರಾಂತಿ ತೆಗೆದುಕೊಳ್ಳುವ ದಿನಗಳ ಸಂಖ್ಯೆಯು ಕನಿಷ್ಟ ೨೦ರಿಂದ ೩೦ ದಿನಗಳವರೆಗೆ ಆಗಿರುತ್ತದೆ. ಈ ಸಂದರ್ಭದಲ್ಲಿ ಅವರವರ ಮನೆತನಕ್ಕೆ ಸಂಬಂಧಿಸಿದಂತೆ ನಡೆಯುತ್ತದೆ. ಈ ವೇಳೆಯಲ್ಲಿ ಅವಳಿಗೆ ದಿನಕ್ಕೆ ಎರಡು ಸಾರಿ ಅಂದರೆ, ಮುಂಜಾನೆ ಮತ್ತು ಸಾಯಂಕಾಲ ಬಿಸಿನೀರಿನ ಸ್ನಾನ ಮತ್ತು ಕುಪ್ಪಡಿಗೆ (ಬೆಂಕಿ ಕಾಯಿಸುವುದು) ನಡೆಯುತ್ತದೆ. ಇವರು ತಣ್ಣೀರು ಉಪಯೋಗಿಸುವಂತಿಲ್ಲ. ಇವಳ ಬಾಣಂತಿತನ ಮುಗಿಯುವ ವೇಳೆಗೆ ಗಂಗೆಗೆ ಅಂದರೆ, ಕೆರೆ, ಬಾವಿ, ನದಿಗೆ ಹೋಗಿ ಪೂಜೆ ಸಲ್ಲಿಸಿ ಅಲ್ಲಿಂದ ಒಂದು ಕೊಡ ನೀರನ್ನು ಮನೆಗೆ ತಂದಮೇಲೆ ಅವರು ಯಾವುದೇ ಕೆಲಸವಾದರೂ ಮಾಡಬಹುದು. ಈ ಒಂದು ಪದ್ಧತಿಯನ್ನು ಈ ಪರಿಸರದಲ್ಲಿ

ಗಂಗೆಯ ಪೂಜೆ ಅಥವಾ ಬಾವಿಗೆ ಕಳಿಸುವುದು ಎಂದು ಕರೆಯುವರು. ಈ ಪರಂಪರೆಯು ಈ ಪರಿಸರದಲ್ಲಿ ಅನಾದಿಕಾಲದಿಂದಲೂ ನಡೆದುಬಂದಿದೆ.

ಜವಳ ತೆಗೆಸುವದು :

ಈ ಪದ್ಧತಿಯು ಸಾಮಾನ್ಯವಾಗಿ ಎಲ್ಲಾ ಜನಾಂಗದವರಲ್ಲಿಯೂ ಪ್ರಚಲಿತದಲ್ಲಿದೆ. ಹುಟ್ಟುಕೂದಲನ್ನು ಮೊದಲಸಲ ತೆಗೆಸುವಂತಹದ್ದನ್ನು ಜವಳ ತೆಗೆಸುವುದು ಎಂದು ಕರೆಯುತ್ತಾರೆ. ಈ ಕೂದಲನ್ನು ತೆಗೆಸುವಾಗ ಕೆಲವು ವಿಧಿ-ವಿಧಾನಗಳನ್ನು ಆಚರಿಸುತ್ತಾರೆ. ಇದನ್ನು ಮಾಡುವಲ್ಲಿ ಕೆಲವು ಸಂಪ್ರದಾಯ, ನಿಯಮಗಳು ಇವೆ. ಇದನ್ನು ಒಂದು ವರ್ಷ ಮುಗಿಯುವದರೊಳಗೆ ತೆಗೆಸುತ್ತಾರೆ. ಆಯಾ ಕುಟುಂಬದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಾಗೂ ಕೆಲವು ಇತರ ಕಾರಣಗಳಿಂದ ಈ ಅವಧಿಯಲ್ಲಿ ಜವಳ ತೆಗೆಯುವದು ವ್ಯತ್ಯಾಸವಾಗುತ್ತದೆ.

ಈ ಒಂದು ಕಾರ್ಯವನ್ನು ಆಯಾ ಕುಟುಂಬಗಳು ಅವರ ಮನೆ ದೇವರ ಸನ್ನಿಧಿಯಲ್ಲಿ ಅಥವಾ ಅವರು ಹರಕೆ ಬೇಡಿಕೊಂಡ ದೇವರ ಸನ್ನಿಧಿಯಲ್ಲಿ ಹೋಗಿ ಪೂಜೆ ಮಾಡಿಸಿ ತೀರ್ಥ ತಂದುಹಾಕಿ ಹುಟ್ಟು ಕೂದಲನ್ನು ತೆಗೆಯಿಸುತ್ತಾರೆ. ನಂತರ ಕಸಬುದಾರನಿಂದ (ಹಡಪದ ಜನಾಂಗ) ಕೂದಲು ತೆಗೆದ ಮೇಲೆ ಅವನಿಗೆ ಶಾಸ್ತ್ರದ ಅನುಸಾರವಾಗಿ ಹೊಸ ವಸ್ತು ಮತ್ತು ಬಟ್ಟೆಕೊಟ್ಟು ಅದರಲ್ಲಿ ತೆಂಗಿನಕಾಯಿ, ಬಾಳೆಹಣ್ಣು, ಎಲೆ, ಅಡಿಕೆ ಮತ್ತು ದಕ್ಷಿಣೆ ಕೊಡುತ್ತಾರೆ. ಕೂದಲು ತೆಗೆದ ನಂತರ ಆ ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ತೊಡಿಸುತ್ತಾರೆ. ಈ ಪದ್ಧತಿಯಲ್ಲಿ ಆಯಾ ಜಾತಿಗೆ, ಧರ್ಮಕ್ಕೆ ಅನುಗುಣವಾಗಿ ಧಾರ್ಮಿಕ ವಿಧಿವಿಧಾನಗಳು ನಡೆಯುತ್ತವೆ.

ದೇವದಾಸಿ ಪದ್ಧತಿ :

ಈ ದೇವದಾಸಿ ಪದ್ಧತಿಯು ಈಗ ಈ ಪರಿಸರದಲ್ಲಿ ಕಂಡುಬರುವುದು ವಿರಳ. ಈ ಮೊದಲಿನ ದಿನಗಳಲ್ಲಿ ಸಂಪ್ರದಾಯಸ್ತ ಕೆಳ ಜನಾಂಗದವರು ಯಾವುದೇ ತೊಂದರೆಗೆ ಸಿಲುಕಿದಾಗ ದೇವರಿಗೆ ಹರಕೆ ಕೇಳುವುದು ಒಂದು ನಂಬಿಕೆಯಾಗಿತ್ತು. ಮಕ್ಕಳು ಆಗದೇ ಇರುವಾಗ, ಮಕ್ಕಳು ಅನಾರೋಗ್ಯಕ್ಕೆ ಒಳಗಾದಾಗ, ಆಪತ್ತಿಗೆ ಸಿಲುಕಿದಂತಹ ಸಂದರ್ಭದಲ್ಲಿ ದೇವರಿಗೆ ಹರಕೆ ಕಟ್ಟಿಕೊಂಡು ದೇವರ ಹೆಸರಿನಲ್ಲಿ ಮುತ್ತು ಕಟ್ಟಿಸಿ ಸ್ತ್ರೀಯರನ್ನು ಬಿಡುತ್ತಿದ್ದರು. ಈ ಸಂಪ್ರದಾಯಕ್ಕೆ ದೇವದಾಸಿ ಪದ್ಧತಿ ಎಂದು ಕರೆಯುವರು. ಆದರೆ ಇದು ಈ ಪರಿಸರದಲ್ಲಿ ಇಂದು ಕಂಡುಬರುವುದು ತುಂಬಾ ವಿರಳ.

ಅಂತ್ಯ ಸಂಸ್ಕಾರ :

''ಹುಟ್ಟು ಉಚಿತ ಸಾವು ಖಚಿತ'' ಎನ್ನುವಂತೆ, ಹುಟ್ಟು ಮತ್ತು ಸಾವು (ಮಾನವನ) ಪ್ರತಿಯೊಂದು ಜೀವಿಯಲ್ಲಿ ನಡೆಯುವಂತ ಸಾಮಾನ್ಯ ಕ್ರಿಯೆ. ಭೂಮಿಯ ಮೇಲೆ ಜನಿಸಿದ ಪ್ರತಿಯೊಂದು ಜೀವಿಯು ಸಾಯಲೇಬೇಕು. ಇದು ಸೃಷ್ಟಿಯ ನಿಯಮವು ಹೌದು. ಈ ಜನನ ಮತ್ತು ಮರಣ ಒಂದು ನಾಣ್ಯದ ಎರಡು ಮುಖಗಳಿದ್ದಂತೆ.

ಈ ಪರಿಸರದಲ್ಲಿ ಶವಸಂಸ್ಕಾರ ಪದ್ಧತಿಯು ಎರಡು ರೀತಿಯಲ್ಲಿ ನಡೆಯುತ್ತದೆ. ೧) ಶವ ಹೂಳುವುದು, ೨) ಚಿತೆಯನ್ನು ಹಚ್ಚುವುದು (ಸುಡುವುದು). ಮನುಷ್ಯ ಮರಣ ಹೊಂದಿದಾಗಿನಿಂದ ಹಿಡಿದು ಅಂತ್ಯಕ್ರಿಯೆಯಾಗುವವರೆಗೆ, ಅನೇಕ ರೀತಿಯ ವಿಧಿ-ವಿಧಾನಗಳು ಆಚರಿಸಲ್ಪಡುತ್ತವೆ. ಆದರೆ ಈ ಸಂಪ್ರದಾಯ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜಾತಿಯಿಂದ ಜಾತಿಗೆ, ಬುಡಕಟ್ಟಿನಿಂದ ಬುಡಕಟ್ಟಿಗೆ ಇದರ ವಿಧಿ-ವಿಧಾನಗಳು ವ್ಯತ್ಯಾಸದಿಂದ ಕೂಡಿರುತ್ತವೆ ಎಂದು ಹೇಳಬಹುದು.

ಸಮಾಧಿ ಮಾಡುವುದು (ಶವ ಹೂಳುವುದು) ಬ್ರಾಹ್ಮಣ ಮತ್ತು ಮುಸ್ಲಿಂ ಜನಾಂಗದಲ್ಲಿ ಕಂಡುಬರುತ್ತದೆ. ಇತರ ಜನಾಂಗದಲ್ಲಿಯು ಸಹ ಚಿಕ್ಕ ಮಕ್ಕಳನ್ನು ಮತ್ತು ಹಿರಿಯರನ್ನು ಸಮಾಧಿ ಮಾಡುವ ಪದ್ಧತಿಯು ರೂಢಿಯಲ್ಲಿದೆ. ಆದರೆ ರೋಗದಿಂದ ನರಳಿದವರನ್ನು, ಗರ್ಭಿಣಿ ಸ್ತ್ರೀಯರನ್ನು, ಬಾಣಂತಿಯರನ್ನು ಮತ್ತು ವಿಷವನ್ನು ಕುಡಿದವರನ್ನು, ದುರ್ಮರಣ ಹೊಂದಿದವರನ್ನು ಸುಡುವ ಪದ್ಧತಿಯು ಈ ಪರಿಸರದಲ್ಲಿ ರೂಢಿಯಲ್ಲಿದೆ. ಇವರ ಚಿತಾಭಸ್ಮವನ್ನು ೩ನೇ ದಿನಕ್ಕೊ ಅಥವಾ ೫ನೆ ದಿನಕ್ಕೊ ಒಂದು ಮಡಿಕೆಯಲ್ಲಿ ಸ್ವಲ್ಪ ಹಾಕಿ ಅದನ್ನು ತಮ್ಮ ಜಮೀನಿನಲ್ಲಿ ಹುಗಿದು ಅದರ ಮೇಲೆ ಒಂದು ಕಲ್ಲು ಇಟ್ಟು ಅಥವಾ ಗದ್ದುಗೆ ಕಟ್ಟಿಸಿ ಅವರ ಹೆಸರಿನಲ್ಲಿ ಪೂಜಿಸುವರು. ಇನ್ನುಳಿದ ಭಸ್ಮವನ್ನು ಗಂಗೆಗೆ ಅಂದರೆ, ನದಿಗೆ, ಹಳ್ಳಕ್ಕೆ ತಂದು ಹಾಕುವರು. ಈ ರೀತಿಯಾಗಿ ಶವಸಂಸ್ಕಾರ ಈ ಪರಿಸರದಲ್ಲಿ ನಡೆಯುತ್ತದೆ.

ಆಷಾಢ ಪರು :

ಈ ಒಂದು ಆಚರಣೆಯನ್ನು ಮಳೆಗಾಲದ ಸಂದರ್ಭದಲ್ಲಿ ವಿಶೇಷವಾಗಿ ಆಷಾಢ ಮಾಸದಲ್ಲಿ ಆಚರಿಸುವರು. ಊರಿನಲ್ಲಿ ಪ್ರತಿಯೊಂದು ಮನೆಗೆ ಹೋಗಿ ಜೋಳ, ಕಾಳುಕಡಿಗಳನ್ನು ಸಂಗ್ರಹಿಸಿ ಊರ ಹತ್ತಿರದ ದೇವಸ್ಥಾನಕ್ಕೆ ಹೋಗಿ ಅಲ್ಲಿಯೇ ಅಡುಗೆಯನ್ನು ತಯಾರಿಸಿ ದೇವರಿಗೆ ಪೂಜೆಸಲ್ಲಿಸುತ್ತಾರೆ. ಈ ಆಚರಣೆಯ ಸಂದರ್ಭದಲ್ಲಿ ದೇವಾಲಯದ ಮುಂದೆ ಕಂಬಳಿಯಲ್ಲಿ ಶಾನಕ್ಕಿ ಹೋಯ್ದು ಅದರಲ್ಲಿ ನೀರು ತುಂಬಿದ ಕೊಡವನ್ನು ಇರಿಸಿ ಪೂಜೆ ಸಲ್ಲಿಸುವರು. ನಂತರ ಎಲ್ಲರೂ ಊಟಮಾಡಿ ಮನೆಗೆ ಬರುವಾಗ ''ನುಚ್ಚು ಐತಿ ನೀರಿಲ್ಲ'' ಎಂದು ಹೊಯ್ದುಕೊಳ್ಳುತ್ತಾ ಬರುತ್ತಾರೆ. ಈ ಒಂದು ಆಚರಣೆಯು ಹುಲಿಗೆಮ್ಮಕೊಳ್ಳದಲ್ಲಿ ಪ್ರಮುಖವಾಗಿ ಪ್ರತಿವರ್ಷವು ಕಂಡುಬರುತ್ತದೆ. ಇದು ಮಳೆಗಾಲದ ಸಂದರ್ಭದಲ್ಲಿ ಆಷಾಢ ಮಾಸದಲ್ಲಿ ಮಳೆಯು ಬಾರದೆ ಇದ್ದಾಗ ಆಚರಣೆ ಮಾಡುವ ಒಂದು ನಂಬಿಕೆಯಾಗಿದೆ.

ಜಾತ್ರೆಗಳು :

ಜಾತ್ರೆಗಳು ದೇಶದ ಎಲ್ಲಾ ಜನಾಂಗದವರಲ್ಲಿ ಕಂಡುಬರುವ ಒಂದು ಪರಂಪರೆಯಾಗಿದೆ. ಯಾತ್ರೆಯ ತದ್ಭವ ರೂಪವೇ ಜಾತ್ರೆಯಾಗಿದ್ದು ಇದು ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. 'ಯಾನೇನತ್ರಾಯತೇ ಇತಿಯಾತ್ರಾ'

ಅಂದರೆ, ಪುಣ್ಯ ಕ್ಷೇತ್ರದ ದರ್ಶನಕ್ಕೆ ಹೋಗುವದರ ರಕ್ಷೆಯೆ ಯಾತ್ರೆಯಾಗಿದೆ. ಈ ಯಾತ್ರೆಯು ಪ್ರಾಚೀನ ಕಾಲದಿಂದಲೂ ನಂಬಿಕೊಂಡು, ನಡೆದುಕೊಂಡು ಬಂದ, ದೇವಾನು ದೇವತೆಗಳನ್ನು ಭಯಭಕ್ತಿಯಿಂದ ಸಾಮೂಹಿಕವಾಗಿ ಪೂಜಿಸಿ, ಪ್ರಾರ್ಥಿಸಿ, ಸಂಭ್ರಮಿಸುವ ಒಂದು ಜನಸಮೂಹವಾಗಿದೆ.

ಸಮಾಜದೊಂದಿಗೆ ಒಂದಾಗಿ ಬದುಕನ್ನು ಸಾಗಿಸುತ್ತಾ ಬಂದಿರುವ ಮಾನವನ ವೈಯಕ್ತಿಕ ಮತ್ತು ಸಾಂಘಿಕ ಜೀವನದ ಹಿತರಕ್ಷಣೆಗಾಗಿಯೂ, ಮೂಕಪ್ರಾಣಿಗಳ ಸುಖಕ್ಕಾಗಿಯೂ, ರೋಗ-ರುಜಿನಗಳು ಬಾರದಂತೆ, ಮಳೆ-ಬೆಳೆ ಸರಿಯಾಗಿ ಬರುವಂತೆ ಪ್ರಾರ್ಥಿಸುವ ಉದ್ದೇಶ ಈ ಜಾತ್ರೆಯದಾಗಿದೆ. ಅದಕ್ಕೆ ಮುಂಚಿತವಾಗಿಯೇ ಹರಕೆ ಹೊತ್ತುದನ್ನು ಕಾರ್ಯರೂಪದಲ್ಲಿ ತರುವ ಆಚರಣೆಯೇ ಜಾತ್ರೆಯಾಗಿದೆ.

ಉತ್ತರ ಕರ್ನಾಟಕದ ಜಾತ್ರೆಗಳು ತಮ್ಮದೇ ಆದ ಪ್ರಾದೇಶಿಕ ವೈಶಿಷ್ಟ್ಯದಿಂದ ಕೂಡಿವೆ. ಈ ಪ್ರದೇಶದ ಜನರಆಚಾರ, ವಿಚಾರ, ಉದ್ಯೋಗ ಮೊದಲಾದ ಜೀವನಕ್ರಮ ಹೆಚ್ಚುಕಡಿಮೆ ಒಂದೇ ಬಗೆಯಾಗಿರುತ್ತವೆ. ಉಳಿದೆಡೆಗಳಂತೆಯೇ ಈ ಹುಲಿಗೆಮ್ಮನಕೊಳ್ಳ ಪರಿಸರದಲ್ಲಿ ಗ್ರಾಮೀಣ ದೇವತೆಗಳ ಹಾಗೂ ಶಿಷ್ಟ ದೇವತೆಗಳ ಪೂಜೆ -ಪುನಸ್ಕಾರಗಳು ಜಾತ್ರೆಗಳು ನಡೆಯುತ್ತವೆ.

ತಾವು ನಂಬಿಕೊಂಡು ಬಂದಿರುವ ದೇವಾನುದೇವತೆಗಳ ಹೆಸರಿನಲ್ಲಿ ಗುಡಿ ಗುಂಡಾರಗಳನ್ನು ನಿರ್ಮಿಸಿರುವ ವರ್ಷಕ್ಕೊಮ್ಮೆ ಇಲ್ಲವೇ ತಮಗೆ ಅನುಕೂಲವಾದಾಗ ಜಾತ್ರೆ ನೆರವೇರಿಸುವರು. ಗ್ರಾಮಗಳಲ್ಲಿ, ನಗರಗಳಲ್ಲಿ ಇಂತಹ ಗುಡಿ-ಗುಂಡಾರಗಳನ್ನು ಈಗಲೂ ಕಾಣಬಹುದು. ಮಳೆಗಾಲ ಮತ್ತು ಸುಗ್ಗಿಕಾಲದಲ್ಲಿ ಹೊರತುಪಡಿಸಿ ಉಳಿದ ಅವಧಿಯಲ್ಲಿ ಈ ಜಾತ್ರೆಗಳನ್ನು ನೆರವೇರಿಸುರು. ದೇವಾನುದೇವತೆಗಳನ್ನು ಪಲ್ಲಕ್ಕಿಯಲ್ಲಿ ಅಥವಾ ರಥದಲ್ಲಿ ಕೂರಿಸಿ ಜಾತ್ರೆಮಾಡುವ ಪರಿಪಾಠ ಬೆಳೆದುಬಂದಿದೆ. ಪ್ರಭಾವಿ ದೇವರುಗಳ ಜಾತ್ರೆಗಳನ್ನು ಮಾಡಲು ಹಣ ಹೆಚ್ಚು ಸಂದಾಯವಾಗುತ್ತ ಬಂದಿರುವುದರಿಂದ ಇವು ರಥೋತ್ಸವದ ಜಾತ್ರೆಗಳಾಗಿ ನೆರವೇರುತ್ತಾ ಬಂದಿರುತ್ತವೆ.

ಜಾತ್ರೆಯ ಪೂರ್ವಭಾವಿ ತಯಾರಿ :

ಈ ಪರಿಸರದಲ್ಲಿ ಜಾತ್ರೆಗಳನ್ನು ಮಾಡಲು ಮೊದಲು ಪೂರ್ವ ತಯಾರಿಯನ್ನು ನಡೆಸುತ್ತಾರೆ. ಕೆಲವು ಜಾತ್ರೆಗಳು ಒಂದು ನಿರ್ದಿಷ್ಟವಾದ ಕಾಲದಂದು ನಡೆಯುವುದಿಲ್ಲ. ಈ ಪರಿಸರದಲ್ಲಿ ಮಳೆ ಮತ್ತು ಬೆಳೆಯು ಚೆನ್ನಾಗಿ ಆದ ವರ್ಷದ ಕೊನೆಯಲ್ಲಿ ಒಂದು ದಿವಸ ಊರಿನ ಪ್ರಮುಖರು ಸಭೆಸೇರಿ ನಿಶ್ಚಯಮಾಡಿ ಆ ಗ್ರಾಮದಲ್ಲಿ ವಾಸಿಸುವ ಎಲ್ಲ ಜನಾಂಗದವರು ಮನೆಗೆ ಒಬ್ಬರಂತೆ ಹಿರಿಯರು ಸೇರುತ್ತಾರೆ. ದೇವ-ದೇವಿಯರ ಜಾತ್ರೆಯನ್ನು ಯಾವ ರೀತಿಯಲ್ಲಿ ಆಚರಿಸಬೇಕು ? ಕಾರ್ಯಕ್ರಮಗಳನ್ನು ಹೇಗೆ ಮಾಡಬೇಕು ? ಅದರ ಜವಾಬ್ದಾರಿಯನ್ನು ಯಾರು ವಹಿಸಿಕೊಳ್ಳಬೇಕು? ಈ ಜಾತ್ರೆಯ ಸ್ವರೂಪ ಹೇಗಿರಬೇಕು ? ಹೀಗೆ ಹಲವಾರು ವಿಷಯಗಳನ್ನು

ಚರ್ಚಿಸುವುದರೊಂದಿಗೆ ಜಾತ್ರೆಯನ್ನು ಮಾಡಲು ತೀರ್ಮಾನಿಸುತ್ತಾರೆ. ಈ ವಿಷಯವು ಅಂತಿಮ ತೀರ್ಮಾನವಾದ ಕೂಡಲೇ ಆ ಗ್ರಾಮದ ಹರಿಜನರಲ್ಲಿ ಒಬ್ಬನು ಹಲಗೆಯನ್ನೋ, ಅಥವಾ ಡಂಗುರವನ್ನೋ ಬಾರಿಸುವದರ ಮೂಲಕ ಸಾರುತ್ತ ಈ ಜಾತ್ರೆಯು ಮುಗಿದ ಕೆಲವು ದಿನಗಳ ನಂತರ ಮುಂದಿನ ಜಾತ್ರೆಗಳಲ್ಲಿ ಬಲಿಕೊಡುವುದಕ್ಕೆಂದು ಒಂದು ಕೋಣವನ್ನು ತಂದು ದೇವರ ಗುಡಿಯ ಮುಂದೆ ಪೂಜೆ ಮಾಡಿ ಗುಡಿಯ ಸುತ್ತಲು ಮೂರು ಅಥವಾ ಐದು ಸುತ್ತು ಪ್ರದಕ್ಷಣೆ ಮಾಡಿಸಿ ಕೋಣವನ್ನು ಬಿಡುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಈ ಪರಿಸರದಲ್ಲಿಯ ಗ್ರಾಮಗಳಾದ ನಂದಿಕೇಶ್ವರ, ಬಾಚಿನಗುಡ್ಡ, ಭದ್ರನಾಯಕನ ಜಾಲಿಹಾಳ, ನೆಲವಿಗಿ, ಮಂಗಳೂರು, ಶಿರಬಡಗಿ, ಗೋನಾಳ, ಹಾನಾಸೂರ ಎಲ್. ಟಿ. (ಸರಸ್ವತಿ ನಗರ) ಹುಲ್ಲಿಕೇರಿ, ಹುಲ್ಲಿಕೇರಿ ಎಲ್. ಟಿ. ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ಗ್ರಾಮ ದೇವತೆಗಳ ಜಾತ್ರೆಯು ಒಂದೇ ಸಂಪ್ರದಾಯ, ಆಚರಣೆಯಲ್ಲಿ ಜರುಗುತ್ತವೆ.

ಈ ಪರಿಸರದಲ್ಲಿ ಕಂಡುಬರುವ ಜಾತ್ರೆಗಳೆಂದರೆ, ಭದ್ರನಾಯಕನ ಜಾಲಿಹಾಳದ ಬಸವೇಶ್ವರ ಜಾತ್ರೆ, ಬಾಚಿನಗುಡ್ಡ ಶ್ರೀ ಬಸವಲಿಂಗೇಶ್ವರ ಜಾತ್ರೆ ನೆಲವಿಗಿಯ ಲಕ್ಕಮ್ಮನ ಜಾತ್ರೆ, ಹೀಗೆ ಆಯಾ ಗ್ರಾಮಗಳಲ್ಲಿ ದುರಗಮ್ಮ, ತಾಯವ್ವ ಮುಂತಾದ ಗ್ರಾಮ ದೇವರುಗಳ ಜಾತ್ರೆಗಳು ನಡೆಯುತ್ತವೆ. ಈ ಜಾತ್ರೆಗಳಿಗೆ ಸುತ್ತಮುತ್ತಲಿನ ಗ್ರಾಮಸ್ಥರು ಕಾಲುನಡಿಗೆ ಮೂಲಕ, ಬಂಡಿಯ ಮೂಲಕ, ಟ್ರ್ಯಾಕ್ಟರ್ ಮುಂತಾದ ವಾಹನಗಳ ಮೂಲಕವು ಬಂದು ಜಾತ್ರಾಮಹೋತ್ಸವವನ್ನು ಆಚರಿಸುತ್ತಾರೆ. ರಥೋತ್ಸವದ ಸಂದರ್ಭಕ್ಕೆ ಸುಮಾರು ೬ ಗಂಟೆಯ ಸಮಯದಲ್ಲಿ ಪಲ್ಲಕ್ಕಿಯಲ್ಲಿ ದೇವರನ್ನು ಮತ್ತು ಕಳಸವನ್ನು ವಾದ್ಯಮೇಳಗಳೊಂದಿಗೆ ರಥದ ಹತ್ತಿರಕ್ಕೆ ತಂದು ಅದರಲ್ಲಿರುವ ದೇವರ ಮೂರ್ತಿಯನ್ನು ರಥದಲ್ಲಿ ಇಡುತ್ತಾರೆ. ನಂತರ ದೇವರ ನಾಮಾವಳಿಗಳ ಘೋಷಣೆಯೊಂದಿಗೆ ಮತ್ತು ವಾದ್ಯಮೇಳದೊಂದಿಗೆ ಎಲ್ಲರೂ ಸೇರಿ ರಥವನ್ನು ಎಳೆಯುವರು.

ಇಂತಹ ಸಂದರ್ಭದಲ್ಲಿ ಸಮಸ್ತ ಜನರೆಲ್ಲರೂ ಆಯಾ ವೃತ್ತಿ ಪರಂಪರೆಗೆ ಅನುಗುಣವಾಗಿ ದೇವರಿಗೆ ತಮ್ಮ ಸೇವೆ ಮತ್ತು ಹರಕೆಗಳನ್ನು ಪೂರೈಸಿ ಆ ಸಂವತ್ಸರದಲ್ಲಿ ಮಳೆ-ಬೆಳೆ ಚೆನ್ನಾಗಿ ಬರಲಿ, ಊರಲ್ಲಿ ಯಾರಿಗೂ ಯಾವುದೇ ರೀತಿಯ ಕಾಯಿಲೆ ಬಾರದಿರಲಿ, ಊರಿನ ತುಂಬ ಶಾಂತಿ ನೆಲೆಸಿ ಸಮೃದ್ಧಿಯು ತುಂಬಲಿ ಎಂದು ಹರಕೆ ಬೇಡಿಕೊಳ್ಳುತ್ತಾರೆ.

ಈ ಜಾತ್ರೆಗಳ ಆಚರಣೆಯ ಸಂದರ್ಭದಲ್ಲಿ ಊರಿನ ಎಲ್ಲಾ ದೇವಾಲಯಗಳಿಗೆ ಸುಣ್ಣ-ಬಣ್ಣ ಬಳಿಯುತ್ತಾರೆ. ಜಾತ್ರೆಯನ್ನು ವಿಶೇಷವಾಗಿ ವಿಜೃಂಭಣೆಯಿಂದ ಆಚರಿಸುವುದರಿಂದ ಹಣದ ಅವಶ್ಯಕತೆ ಹೆಚ್ಚಾಗಿರುತ್ತದೆ. ಈ ಜಾತ್ರೆಯನ್ನು ನಡೆಸಲು ಪ್ರತಿ ಮನೆಯಿಂದ ಕನಿಷ್ಟ ಹಣವನ್ನು ನಿಗದಿಮಾಡಿ ಸಂಗ್ರಹಿಸುತ್ತಾರೆ. ಇದು ಅವರವರ

ಮನೆತನದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನಿಗದಿಯಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಎಲ್ಲ ಮನೆಯವರು ಮನಗೆ ಸುಣ್ಣ-ಬಣ್ಣ ಬಳಿಯುವರು. ಹಾಗೇ ಹೊಸ ಬಟ್ಟೆಗಳನ್ನು ಖರೀದಿಸಿ ತೊಡುವರು. ಜಾತ್ರೆಯ ಆರ್ಥಿಕತೆಯನ್ನು ನೀಗಿಸುವ ಸಲುವಾಗಿ ಪಕ್ಕದ ಊರುಗಳಿಂದ ದೇವಿಯ ಜಾತ್ರೆಗೆ ಬರುವ ಭಕ್ತರಿಂದ ಧನ ಸಹಾಯವನ್ನು ಪಡೆಯುತ್ತಾರೆ. ಆ ಊರಿನ ಜನರು ಆ ದೇವಿಯ ಹೆಸರಿನಲ್ಲಿ ಬಿಟ್ಟಕೋಣವನ್ನು ಹಿಡಿದು ತಂದು ಒಂದು ಮರಕ್ಕೆ ಕಟ್ಟಿ ಇದರ ಗರ್ವವನ್ನು ಕಡಿಮೆ ಮಾಡುವುದಕ್ಕೆ ಸುಣ್ಣದ ನೀರನ್ನು ಕುಡಿಸಿ ಮದವನ್ನು ಕರಗಿಸುತ್ತಾರೆ. ಆ ಸಮಯದಲ್ಲಿ ಈ ಕೋಣದ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಹರಿಜರಿಗೆ ಸೇರಿರುತ್ತದೆ.

ಸ್ತ್ರೀ ದೇವತೆಯ ಜಾತ್ರೆಯನ್ನು ಸುಮಾರು ಮೂರರಿಂದ ಐದು ದಿನಗಳವರೆಗೆ ಆಚರಿಸುತ್ತಾರೆ. ಈ ಜಾತ್ರೆಗಾಗಿ ಸಕಲ ಸಿದ್ಧತೆ ಮಾಡಿಕೊಂಡು ಮಂಗಳವಾರ ಗ್ರಾಮದೇವತೆಗೆ ಅಲಂಕಾರ, ವಾದ್ಯಮೇಳದೊಂದಿಗೆ ಉಡಿಯನ್ನು ತುಂಬಿಸಿ ಜಾತ್ರೆಯನ್ನು ಆರಂಭಿಸುತ್ತಾರೆ. ಅದೇ ಮಂಗಳವಾರ ರಾತ್ರಿ ಕಳೆದಮೇಲೆ ಬುಧವಾರ ಬೆಳಗಿನ ಜಾವ ಸುಮಾರು ೩ ಗಂಟೆಗೆ ದೇವರನ್ನು ಕೂರಿಸುವ ಪಾದಕಟ್ಟೆಯ ಹತ್ತಿರ ಗ್ರಾಮದವರು ಕಟ್ಟಿಹಾಕಿದ ಪಟ್ಟದ ಕೋಣವನ್ನು ಬಹಳ ವಿಜೃಂಭಣೆಯಿಂದ ಬಲಿಕೊಡುತ್ತಾರೆ. ನಂತರ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಸಿಹಿ ಕಡಬು ಮಾಡಿ, ಎಲ್ಲ ದವಸ ಧಾನ್ಯಗಳನ್ನು ಒಂದು ಕೊಪ್ಪರಿಗೆಯಲ್ಲಿ ಬೇಯಿಸಿ ಚರಗವನ್ನು ಊರಿನ ಸುತ್ತ ಗ್ರಾಮದ ಹರಿಜನರ ವ್ಯಕ್ತಿಗಳು ಚಲ್ಲುತ್ತಾ ಸಾಗುತ್ತಾರೆ. ನಂತರ ಆ ಗ್ರಾಮದ ಜನರೆಲ್ಲರೂ ಒಟ್ಟಿಗೆ ಸೇರಿಕೊಂಡು ದೇವಸ್ಥಾನಕ್ಕೆ ಹೋಗಿ ದೇವಿಯ ದರ್ಶನ ಪಡೆದುಕೊಳ್ಳುತ್ತಾರೆ.

ಹಬ್ಬಗಳು :

ಇತ್ತೀಚೆಗೆ ಮಾನವನ ಬಾಳು ತೀರ ಯಾಂತ್ರಿಕವಾಗಿದೆ. ನಿರಂತರ ಕ್ರಿಯೆಗಳು ಮತ್ತೆ ಮತ್ತೆ ಉರುಳಿ ಬರುತ್ತಲೇ ಇರುತ್ತವೆ. ಏಕಾಗ್ರತೆಯ ಈ ಬದುಕಿಗೆ ಬದಲಾವಣೆಬೇಕು. ವೈವಿಧ್ಯತೆಬೇಕು, ಅದಿಲ್ಲದಿದ್ದರೆ ಬದುಕು ನೀರಸ. ಆದುದರಿಂದಲೇ ಮಾನವ ಸಮುದಾಯ ಅನಾದಿಕಾಲದಿಂದಲೂ ಹೊಸತನವನ್ನು ಹುಡುಕುತ್ತ ಬಂದ ಈ ಅನ್ವೇಷಣೆಯ ಫಲವೇ ನಾವು ಆಚರಿಸುವ ಹಬ್ಬಗಳು. ಮಹಾಕವಿ ಕಾಳಿದಾಸ ಹೇಳಿದ ಹಾಗೆ ಮನುಷ್ಯರೆಲ್ಲ ಉತ್ಸಾಹಪ್ರಿಯರು, ನಿತ್ಯದ ಬದುಕಿನ ಜಂಜಾಟದಿಂದ ಒಂದಿಷ್ಟು ಬಿಡುವು ಪಡೆದುಕೊಳ್ಳಲು, ಬಾಳಿಗೆ ಹೊಸ ಉತ್ಸಾಹ ಪಡೆದುಕೊಳ್ಳಲು ಇಂತಹ ಹಬ್ಬಗಳು ಬೇಕೇಬೇಕು. ಅವುಗಳಿಲ್ಲದಿದ್ದರೆ, ಬದುಕು ಬಲು ಘೋರ, ನಿಂತ ನೀರಾಗುತ್ತದೆ. ಆದ್ದರಿಂದ ಹಬ್ಬವೆಂದರೆ, ಮಾನವ ಜೀವಿಗಳಿಗೆಲ್ಲ ಚೈತನ್ಯದ ಚಿಲುಮೆಯಾಗಿದೆ. ಹೊಸ ಉತ್ಸಾಹ ಕಾರಂಜಿಯಾಗುತ್ತದೆ.

ಭಾರತೀಯರೆಲ್ಲ ಅದರಲ್ಲೂ ಹಿಂದೂಗಳಲ್ಲಿ ಪ್ರತಿವರ್ಷಕ್ಕೊಮ್ಮೆ, ತಿಂಗಳಿಗೊಮ್ಮೆ, ಹದಿನೈದು ದಿನಕ್ಕೊಮ್ಮೆ ನಡೆಯುವ ಹಬ್ಬಗಳೆಲ್ಲ ಒಂದು ಅರ್ಥದಲ್ಲಿ ಧಾರ್ಮಿಕ ಉತ್ಸವಗಳೇ, ಧಾರ್ಮಿಕ ಶ್ರದ್ಧೆ, ಕ್ರಿಯೆ ಮತ್ತು ಭಾವನೆಗಳಿಗೆ

ಅಲ್ಲಿ ಪ್ರಾಧ್ಯಾನ್ಯತೆ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಸೇರಿಕೊಂಡಿವೆ. ನಮ್ಮ ಕೆಲವು ಹಬ್ಬಗಳು, ಸವಂತ್ಸರ ಚಕ್ರದ ಮಾರ್ಗದ ಬದಲಾವಣೆಗೆ ಸಂಬಂಧಿಸಿವೆ. ಉದಾ : ಮಕರ ಸಂಕ್ರಾತಿ ಮತ್ತು ಋತುಗಳ ಬದಲಾವಣೆಗೆ ಸಂಬಂಧಪಟ್ಟ ಹಬ್ಬಗಳು, ಗಣಪತಿ ಹಬ್ಬ, ನಾಗರ ಪಂಚಮಿ, ವಿಜಯದಶಮಿ, ದೀಪಾವಳಿ, ಶಿವರಾತ್ರಿ, ಯುಗಾದಿ, ಹೋಳಿಹಬ್ಬ, ಮೋಹರಂ ಮುಂತಾದವು ಇಲ್ಲಿ ಮುಸ್ಲಿಂ ಸಮುದಾಯದವರು ತಮ್ಮ ಹಬ್ಬಗಳನ್ನು ಆಚರಿಸುತ್ತಾರೆ.

ಯುಗಾದಿ ಹಬ್ಬ :

ಯುಗಾದಿ ಎಂದೊಡನೆ ನೆನಪಿಗೆ ಬರುವುದು ಬೇವುಬೆಲ್ಲ. ಬೇವಿನ ಚಿಗುರಿನ ಕಹಿ, ಬೆಲ್ಲದ ಸಿಹಿ, ಇವೆರಡು ಬದುಕಿನ ಪ್ರತೀಕ. ಆದ್ದರಿಂದ ಈ ಯುಗಾದಿ ಹಬ್ಬದ ಆಚರಣೆಯು ಹಳೆಯ ಮತ್ತು ಹೊಸ ವರ್ಷಗಳನ್ನು ಜೋಡಿಸುವ ಸುವರ್ಣ ಸೇತುವೆಯಾಗಿದೆ. ಯುಗಾದಿಯು ಪಾಲ್ಗುಣ ಬಹುಳ ಅಮವಾಸ್ಯೆಯ ದಿನ, ಹಳೆಯ ವರ್ಷಕ್ಕೆ ವಿದಾಯ ಹೇಳಿ ಮರುದಿನ ಚೈತ್ರ ಶುಕ್ಲ ಪ್ರತಿಪದೆಯೆಂದು ಹೊಸ ವರ್ಷವನ್ನು ಸ್ವಾಗತಿಸುತ್ತೇವೆ. ಈ ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ಈ ಪರಿಸರದ ಜನರಿಗೆ ಒಂದು ಗಾದೆ ಮಾತು ಇದೆ, ಅದು, ಉಂಡದ್ದೇ ಉಗಾದಿ ಮಿಂದದ್ದೇ ದೀಪಾವಳಿ, ದೀಪಾವಳಿಯಲ್ಲಿ ಅಭ್ಯಂಜನ ಸ್ನಾನಕ್ಕೆ ಪ್ರಾಮುಖ್ಯವಾದರೆ, ಯುಗಾದಿಯಲ್ಲಿ ಭೋಜನಕ್ಕೆ ಆದ್ಯತೆ ಎಂದು ಹೇಳಬಹುದು. ನೋವು ನಲಿವುಗಳ ಸಂಕೇತ, ಅದೃಷ್ಟ ಪ್ರತಿಬಿಂಬಗಳ ಈ ಯುಗಾದಿ ಹಬ್ಬ ಹೊಸ ಕಾಲದಲ್ಲಿ ಭಗವಂತನನ್ನು ಸ್ಮರಿಸುತ್ತ ಬಲಮಗ್ಗುಲಲ್ಲಿ ಏಳಬೇಕು. ಅಭ್ಯಂಜನ ಸ್ನಾನ ಮಾಡಿ ಹೊಸ ಬಟ್ಟೆ ತೊಟ್ಟು ಪ್ರಸನ್ನವದನರಾಗಿ ದೇವರ ಪೂಜೆ ನಡೆಸಿ, ಗುರು-ಹಿರಿಯರಿಗೆ ನಮಸ್ಕಾರ ಮಾಡಿ ಮೊದಲು ಬೇವುಬೆಲ್ಲ ತಿಂದು, ಅನಂತರ ಹೋಳಿಗೆ ಪಾಯಸಗಳನ್ನು ಊಟ ಮಾಡುವುದು ರೂಢಿ. ಸಾಯಂಕಾಲ ಗ್ರಾಮದ ಜನರು ಸೇರಿಕೊಂಡು ವಿವಿಧ ಕ್ರೀಡೆಗಳನ್ನು ನಡೆಸುತ್ತಾರೆ. ಸಂಜೆ ಸಮಯದಲ್ಲಿ ಪಂಚಾಂಗ ಶ್ರವಣ, ಚಂದ್ರೋದಯ ಕಾಲದಲ್ಲಿ ಪೂರ್ವ ದಿಗಂತದಲ್ಲಿ ಮೂಡಿ ಬಂದಿರುವ ಒಂದು ಕಲೆಯಿಂದ ಬೆಳಗಿಸುವ ಚಂದ್ರನನ್ನು ಕಂಡು ನಮಸ್ಕರಿಸುವುದು ಈ ಪರಿಸರದ ವಿಶೇಷ ಎನ್ನಲಾಗಿದೆ.

ನಾಗರ ಪಂಚಮಿ :

ಭಾರತದಲ್ಲಿ ನಾಗಾರಾಧನೆಯು ವಿಶೇಷವಾಗಿ ಬೆಳೆದು ಬಂದಿದೆ. ವೇದ, ಪುರಾಣ, ಮಹಾಕಾವ್ಯ ಜನಪದ ಕಾವ್ಯ ಸಾಹಿತ್ಯಗಳಲೆಲ್ಲ ನಾಗನಿಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳು ಕಂಡುಬಂದಿವೆ. ಋಗ್ವೇದದ ಸರ್ಪಸೂಕ್ತದಲ್ಲಿ ನಾಗವರ್ಣನೆ ಕಂಡುಬರುತ್ತದೆ. ಹರಪ್ಪ ಸಂಸ್ಕೃತಿಯಲ್ಲಿ ನಾಗಾರಾಧನೆಗೆ ಬಹಳ ಮಹತ್ವ ನೀಡಲಾಗಿದೆ. ಶೈವ, ವೈಷ್ಣವ, ಜೈನ, ಬೌದ್ಧ ಮುಂತಾದ ಮತಗಳಲ್ಲಿಯೂ ನಾಗನಿಗೆ ವಿಶೇಷ ಪ್ರಾಧಾನ್ಯತೆ ನೀಡಲಾಗಿದೆ. ಪಾರ್ಶ್ವನಾಥ ತೀರ್ಥಂಕರನ ತಲೆ ಮೇಲ್ಭಾಗದಲ್ಲಿ ನಾಗನ ಹೆಡೆಯ ಲಾಂಛನವಿದೆ. ನಾಗನು ವಿಷ್ಣುವಿಗೆ

ಹಾಸಿಗೆ, ಶಿವನಿಗೆ ಕಂಠಾಭರಣ, ಗಣಪತಿಗೆ ಹೆಟ್ಟೆಗೆ ಪಟ್ಟಿಯಾಗಿ, ಸ್ವತಃ ಭೂಭಾರವನ್ನು ಹೊತ್ತ ಅಸಾಧಾರಣ ಶಕ್ತಿಶಾಲಿಯಾಗಿದ್ದಾನೆ.

ಈ ಪರಿಸರದಲ್ಲಿ ಈ ಹಬ್ಬವನ್ನು ವಿಶೇಷವಾದ ರೀತಿಯಲ್ಲಿ ಆಚರಣೆ ಮಾಡುವರು. ಈ ಎಲ್ಲಾ ಗ್ರಾಮಗಳಲ್ಲಿ ಹಿಂದಿನಿಂದಲೂ ಬೆಳೆದು ಬಂದಂತಹ ಹಬ್ಬ ಇದಾಗಿದೆ. ಯಾವುದೇ ದೇವಾಲಯದ ಪಕ್ಕದಲ್ಲಿ ನೋಡಿದರೂ ಸುಮಾರು ೮ರಿಂದ ೧೦ ನಾಗಶಿಲ್ಪಗಳು ಕಂಡುಬರುತ್ತವೆ. ಈ ಹಬ್ಬವನ್ನು ಸುಮಾರು ೩ ದಿನಗಳ ಕಾಲ ಆಚರಿಸಲಾಗುವುದು. ಮೊದಲನೆಯ ದಿನ ಅಮವಾಸ್ಯೆ ಆಚರಿಸುವುದು, ಎರಡನೆಯ ದಿನ ನಾಗರಶಿಲ್ಪಕ್ಕೆ ಹಾಲು ಹಾಕುವುದು ನಂತರ ಕೈಗೆ ಅಥವಾ ಕೊರಳಿಗೆ ದಾರವನ್ನು ಹಾಕಿಕೊಳ್ಳುವುದು ಮತ್ತು ಕೊಬ್ಬರಿಯ ಬಗರಿಯನ್ನು ಕಟ್ಟಿಕೊಳ್ಳುವುದು, ಮೂರನೆಯ ದಿನ ಈ ನಾಗರ ಶಿಲ್ಪಕ್ಕೆ ಹೋಳಿಗೆ ನೈವೇದ್ಯ ಮಾಡುವುದು.

ಈ ಮೂರು ದಿನಗಳ ಕಾಲ ಸಾಯಂಕಾಲ ಮತ್ತು ಬೆಳಗಿನ ಜಾವದಲ್ಲಿ ವಿವಿಧ ಕ್ರೀಡೆಯನ್ನು ಜಿದ್ದು ಕಟ್ಟುವುದರ ಮೂಲಕ ಆಡುತ್ತಾರೆ. ನಿಂಬೆ ಹಣ್ಣು ಎಸೆಯುವುದು, ಕಣ್ಣುಕಟ್ಟುವುದು ಇತ್ಯಾದಿ ಮನರಂಜನೆ ನಡೆಯುತ್ತವೆ.

ದೀಪಾವಳಿ :

ದೀಪಾವಳಿಯು ಒಂದು ರಾಷ್ಟ್ರೀಯ ಹಬ್ಬವಾಗಿದೆ. ರಾಷ್ಟ್ರಮಟ್ಟದಲ್ಲಿ ಆಚರಿಸಲ್ಪಡುವ ಈ ಹಬ್ಬವು ಹಿಂದೂಗಳು ಆಚರಿಸುವ ದೊಡ್ಡ ದೊಡ್ಡ ಹಬ್ಬಗಳಲ್ಲಿ ಮಹತ್ವದ ಹಬ್ಬವಾಗಿದೆ. ಇದು ಪ್ರಾಂತೀಯ ಬೇಧವಿಲ್ಲದೆ ಭಾರತದ ಎಲ್ಲಾ ಮೂಲೆಗಳಲ್ಲೂ ಆಚರಿಸಲ್ಪಡುತ್ತದೆ. ''ಹಬ್ಬಗಳ ರಾಜ'' ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ. ದೀಪಾಲಿ, ದೀಪಾಲಿಕಾ, ದೀಪಾವಳಿ, ಇವೆಲ್ಲ ಇದರ ನಾಮಾಂತರಗಳು. ಪೌರಾಣಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಇದು ತುಂಬ ಮಹತ್ವದ ಹಬ್ಬ. ದೀಪಾವಳಿ ಕತ್ತಲೆ ಬೆಳಕುಗಳ ನಿರಂತರ ಹೋರಾಟದಲ್ಲಿ ಬೆಳಕು ಚೆಲ್ಲುವುದರ ಸಂಕೇತ. ಎಲ್ಲ ಜೀವಿಗಳ ಆಧಾರ, ಸಕಲ ಕ್ರಿಯೆಗಳ ಪ್ರೇರಕ, ಒಂದರ್ಥದಲ್ಲಿ 'ಬೆಳಕೇ ಬದುಕು'. ಭಾರತೀಯರು ಬೆಳಕಿನ ಆರಾಧಕರು. ''ತಮಸೋಮ ಜೋತಿರ್ಗಮಯ'' ಎಂಬಂತೆ ಕತ್ತಲೆಯಿಂದ ಬೆಳಕಿನ ಕಡೆಗೆ ನಮ್ಮ ಪ್ರಯಾಣ. ಈ ಕರುಣಾಳು ಬೆಳಕನ್ನು ಜ್ಞಾನ ಎಂದು ಉಪಾಸನೆ ಮಾಡುತ್ತಾರೆ.

ಈ ಹಬ್ಬದ ಆಚರಣೆ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲು ಒಂದೇ ರೀತಿಯಾಗಿದೆ. ಈ ಪರಿಸರದಲ್ಲಿ ದೀಪಾವಳಿ ಹಬ್ಬದ ಸಡಗರ ಸಂಭ್ರಮದಲ್ಲಿ ಶ್ರೀಮಂತರು, ಮಧ್ಯಮವರ್ಗದವರು, ಸಾಮಾನ್ಯ ಜನರು ಎಲ್ಲ ಜಾತಿಯ ವರ್ಗದವರು ಧನಲಕ್ಷ್ಮಿಯನ್ನು ಹರಸಿ ಪೂಜಿಸುವ ಒಂದು ಸಂಪ್ರದಾಯ.

ವರ್ಣರಂಜಿತವಾದ ಈ ದೀಪಾವಳಿ ಹಬ್ಬವು ಹೊಸ ಬಟ್ಟೆಗಳ ಜೊತೆ ಹೊಸ ಚೈತನ್ಯವನ್ನು ತುಂಬಿರುತ್ತದೆ. ಈ ಪರಿಸರದಲ್ಲಿ ಎಲ್ಲರೂ ತಮ್ಮ ತಮ್ಮ ತೋಟ-ಹೊಲಗಳಲ್ಲಿರುವ ನೀರೆತ್ತುವ ಪಂಪಸೆಟ್‌ಗಳಿಗೆ ಲಕ್ಷ್ಮಿ ಪೂಜೆಯನ್ನು

ಐದು ಜನ ಮುತ್ತೈದೆಯರನ್ನು ಇರಿಸಿ ಅವರ ಉಡಿ ತುಂಬಿ ಹಬ್ಬವನ್ನು ಆನಂದ ಉಲ್ಲಾಸದಿಂದ ಆಚರಿಸುತ್ತಾರೆ. ಈ ಹಬ್ಬದಲ್ಲಿ ಯಾರು ಶ್ರೀಮಂತರು, ಯಾರು ಬಡವರು ಎಂಬುದನ್ನು ತಿಳಿಯುವುದು ಕಷ್ಟ. ಅಷ್ಟು ಸಂತೋಷ ಮತ್ತು ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುವರು.

ಕವಿಗಳು ಈ ಹಬ್ಬವನ್ನು ಬಗೆಬಗೆಯಾಗಿ ಬಣ್ಣಿಸಿದ್ದಾರೆ. ಅನುದಿನ ಬದುಕಿಗೆ ದೀಪಾವಳಿ ನೀಡುವ ಪ್ರೇರಣೆ, ಸಂದೇಶಗಳನ್ನು ನಿರೂಪಿಸಿದ್ದಾರೆ. ಕನ್ನಡದ ಹಿರಿಯ ಕವಿ ಡಾ. ಡಿ. ಎಸ್. ಕರ್ಕಿಯವರು ಹಬ್ಬಗಳ ಹಬ್ಬವಾದ ದೀಪಾವಳಿಯನ್ನು 'ಸಂಸ್ಕೃತಿಯ ಹಬ್ಬ'ವೆಂದು ಬಣ್ಣಿಸಿರುವರು.

ದಸರಾ ಹಬ್ಬ :

ನಾಡ ಹಬ್ಬವೆಂದು ಪ್ರಸಿದ್ಧಿ ಪಡೆದುಕೊಂಡಿರುವ ದಸರಾ ಹಬ್ಬ ನವರಾತ್ರಿ ಆರಂಭವಾಗುವದು ಆಶ್ವಿಜ ಪಾಡ್ಯದಂದು. ನವಮಿಯವರೆಗೆ ಇದರ ವ್ಯಾಪ್ತಿ. ಈ ವೃತ್ತವನ್ನು ಆಶ್ವಿಜ ಶುಕ್ಲ ಪ್ರತಿಪದೆಯಿಂದ ಆರಂಭಿಸಿ ನವಮಿಯವರೆಗೆ ಒಂಬತ್ತು ದಿನ ಆಚರಿಸುತ್ತಾರೆ. ಕೆಲವರು ತದಿಗೆಯಿಂದ ಪ್ರಾರಂಭಮಾಡಿ ಏಲು ದಿನ ಆಚರಿಸುತ್ತಾರೆ. ಕೆಲವರು ಪಂಚಮಿಯಿಂದ ಐದು ದಿನ, ಸಪ್ತಮಿಯಿಂದ ಮೂರು ದಿನ ಹೀಗೆ ಆಚರಿಸುವರು. ಕೆಲವರು ಅಷ್ಟಮಿ ಮೊದಲ್ಗೊಂಡು ಎರಡು ದಿನ ಅಥವಾ ಅಷ್ಟಮಿ-ನವಮಿ ಇವುಗಳಲ್ಲಿ ಒಂದು ದಿನ ಆಚರಿಸುವರು. ಕನ್ನಡಗರ ಪಾಲಿಗೆ ನವರಾತ್ರಿ ನಾಡಹಬ್ಬ. ಈ ಹಬ್ಬದಲ್ಲಿ ದುರ್ಗೆಯ ಪೂಜೆ ವಿಶೇಷವಾಗಿ ಆಚರಿಸಲ್ಪಡುತ್ತದೆ. ಈ ಪರಿಸರದ ಜನರು ಈ ಹಬ್ಬದಲ್ಲಿ ''ಖಂಡಾಪೂಜೆಯನ್ನು'' ಮಾಡುವರು. ಅಂದು ಅವರವರ ಮನೆತನದ ವೃತ್ತಿಯ ವಸ್ತುಗಳನ್ನು ಪೂಜಿಸಿ ಅವುಗಳಿಗೆ ಬನ್ನಿಯ ಮತ್ತು ಆರಿಯ ಗಿಡದ ಪತ್ರಿಯನ್ನು (ಎಲೆಗಳನ್ನು) ಅರ್ಪಿಸಿ ಹೊಲಗಳಲ್ಲಿ ಬೆಳೆದ ಜೋಳದ ತೆನೆಯಿರುವ ದಂಟುಗಳನ್ನು ತಂದು ಪೂಜಿಸಿ ನಂತರ ರಾತ್ರಿ ಆ ದಂಟುಗಳನ್ನು ತೆಗೆದುಕೊಂಡು ಹೋಗಿ ದೇವರು ಇರುವ ಬನ್ನಿಮರಕ್ಕೆ ಅದನ್ನು ಮುಡಿಸಿಕೊಂಡು ಬಂದು ಊರಿನ ಎಲ್ಲ ದೇವರಿಗೆ ಬನ್ನಿಯನ್ನು ಅರ್ಪಿಸಿ ಸ್ವಾಮಿಗಳಿಗೆ ಮತ್ತು ಹಿರಿಯರಿಗೆ ಮೊದಲು ಬನ್ನಿಯನ್ನು ಕೊಡುವರು. ಬನ್ನಿ ಮುಡಿದು ತಂದ ದಂಟಿನಿಂದ ಮಕ್ಕಳಾಗದವರಿಗೆ ಬಡಿದರೆ, ಮಕ್ಕಳು ಆಗುತ್ತವೆ ಎಂಬುದು ಇಲ್ಲಿಯ ಜನರ ನಂಬಿಕೆ. ಹೀಗೆ ಈ ಹಬ್ಬವನ್ನು ಸಂತೋಷ ಸಂಭ್ರಮದಿಂದ ಆಚರಿಸುವರು.

ಮಹಾಶಿವರಾತ್ರಿ :

ಶಿವಶಿವ ಎಂದರೆ, ಭಯವಿಲ್ಲ, ಶಿವ ನಾಮಕೆ ಸಾಟಿ ಬೇರಿಲ್ಲ, ಎಂಬಂತೆ, ಶಿವನ ಧ್ಯಾನ ನಿರತರಾಗಿದ್ದರೆ, ಯಾವುದೇ ಆಪತ್ತು ಬರಲಾರದು. ನಮ್ಮ ಪ್ರಾಚೀನರ ನಂಬಿಕೆಯಂತೆ, ಶಿವನ ಧ್ಯಾನ ಆರಾಧನೆಗಳಿಗೆ ಅತ್ಯಂತ

ಪ್ರಮುಖವಾದ ದಿನವೆಂದು ಈ ಶಿವರಾತ್ರಿ ಅಮವಾಸ್ಯೆಯ ಹಿಂದಿನ ದಿನ ಮಾಸಶಿವರಾತ್ರಿಯಾದರೆ, ಮಾಘ ಬಹುಳ ಚತುರ್ದಶಿ ಮಹಾ ಶಿವರಾತ್ರಿಯಾಗಿದೆ.

ಈ ಪರಿಸರದಲ್ಲಿ ಬರುವ ಎಲ್ಲ ಗ್ರಾಮಗಳಲ್ಲಿ ಶಿವರಾತ್ರಿಯ ದಿನ ಸೂರ್ಯೋಧಯಕ್ಕೆ ಎದ್ದು ಸ್ನಾನ ಮಾಡಿ ಶುಭ್ರ ವಸ್ತ್ರವನ್ನುಟ್ಟು ಸಮಸ್ತ ಪಾಪ ನಿವಾರಣೆಗಾಗಿ ಜ್ಞಾನ, ಮೋಕ್ಷ ಪ್ರಾಪ್ತಿಗಾಗಿ ಶಿವರಾತ್ರಿಯನ್ನು ಆಚರಿಸುವರು. ಅಂದು ಕೆಲವು ಭಕ್ತಾಧಿಗಳು ಒಪ್ಪತ್ತು ಮಾಡುವರು. ಅಸಮರ್ಥರಾಗಿದ್ದರೆ ಕ್ಷೀರಾಹಾರ ಅಥವಾ ಫಲಹಾರ ಪ್ರದೋಕ್ಷ ಕಾಲದಲ್ಲಿ ಶಿವಾಲಯಕ್ಕೆ ಹೋಗಿ ರಾತ್ರಿ ನಾಲ್ಕು ಯಾಮಗಳಲ್ಲಿ ರುದ್ರಾಭಿಷೇಕ ಮಾಡಿಸಿ ನಾನಾ ವಿಧದ ಪಾಪ ಕರ್ಮಗಳಿಂದ ಭವ ಬಂಧನದಲ್ಲಿ ಸಿಲುಕಿದ ನನ್ನ ಹಾಗೂ ನನ್ನ ಕುಟುಂಬದವರಿಗೂ ಸುಖವನ್ನು ನೀಡಿ ನಮ್ಮನ್ನು ಉದ್ಧರಿಸು ಎಂದು ಬೇಡಿಕೊಳ್ಳುವರು.

ಗಣೇಶ ಹಬ್ಬ :

ಗಣೇಶನು ಯಾವುದೇ ಮತ ಅಥವಾ ಸಂಪ್ರದಾಯಗಳ ದೇವತೆಯಲ್ಲ. ಭಾರತೀಯ ಜನಾಂಗದಲ್ಲಿ ಶತ ಶತಮಾನಗಳ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆಯುತ್ತ ಬಂದಿರುವ ರಾಷ್ಟ್ರೀಯ ದೇವತೆ. ಆರಂಭದಿಂದಲೂ ಸರ್ವಕಾಲ ದೇಶಗಳಲ್ಲಿ ನೆಲೆಸಿ ಪೂಜೆಗೊಂಡ ದೇವತೆ. ಗಣೇಶನ ಪ್ರಭಾವ ವಿಶ್ವವ್ಯಾಪಿಯಾದುದು. ಗಣೇಶನು ಹಿಂದೂ ಧರ್ಮದ ಎಲ್ಲ ಪಂಥಗಳ ಅಗ್ರಪೂಜೆಗೆ ಪಾತ್ರನಾಗಿರುವ ಏಕೈಕ ದೇವತೆ, ಶಿವನನ್ನೇ ಪೂಜಿಸಬೇಕೆನ್ನುವವರು, ವಿಷ್ಣುವೇ ಸರ್ವೋತ್ತಮ ಎಂದು ನಂಬಿದವರು. ಗಣಪತಿಯನ್ನೇ ಆರಾಧಿಸುವ 'ಗಾಣಪತ್ಯ' ಎಂಬ ಪಂಥವು ನಮ್ಮ ದೇಶದಲ್ಲಿದೆ. ಕವಿಗಳ ಕಲ್ಪನೆ, ಕಲಾವಿದರ ಚಿತ್ರಣ, ಭಕ್ತಾಧಿಗಳ ಸ್ತೋತ್ರ, ರಸಿಕರ ರಸಿಕತೆ, ಇವೆಲ್ಲವೂ ಈ ದೇವರ ಪಾಲಿಗೆ ಸಮೃದ್ಧಿಯಾಗಿ ಸಂದಿವೆ. ಈ ಸಾರ್ವಜನಿಕ ಕಾರ್ಯಕ್ರಮದ ಗಣೇಶೋತ್ಸವ ಬಂದಿತೆಂದರೆ ಸಾಕು ಬಗೆ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಹಾಡುಗಾರರು, ವಾದ್ಯಗಾರರು, ನೃತ್ಯಗಾರರು ಮುಂದಾಗುತ್ತಾರೆ. ಈ ಜನಪ್ರಿಯ ದೇವತೆಯ ಹುಟ್ಟು ಬೆಳವಣಿಗೆಯು ಇಂದು ನಿನ್ನೆಯದಲ್ಲ. ಶತ ಶತಮಾನಗಳಷ್ಟು ಹಳೆಯದು. ಭಾರತದಲ್ಲಿ ಮಾತ್ರವಲ್ಲದೇ ಭಾರತೀಯ ಸಂಸ್ಕೃತಿಯು ವ್ಯಾಪಿಸಿದ ಕಡಲಾಚೆಯ ರಾಷ್ಟ್ರಗಳಲ್ಲಿ ಈ ಗಣೇಶ ಹಬ್ಬ ಅಚ್ಚು ಮೆಚ್ಚು. ವಿಶ್ವವ್ಯಾಪಿಯಾಗಿರುವ ಈ ಹಬ್ಬವು ಎಂದೆಂದಿಗೂ ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದೆ.

ಕಾಮನ ಹಬ್ಬ/ಹೋಳಿ ಹಬ್ಬ :

ಪಾಲ್ಗುಣ ಶುದ್ಧ ಹುಣ್ಣಿಮೆಯಂದು ಆಚರಿಸುವ ಕಾಮನ ಹಬ್ಬಕ್ಕೆ ''ಹೋಳಿಹಬ್ಬ''ವೆಂದು ಕರೆಯುವರು. ಮದನೋತ್ಸವ, ಫಾಲ್ಗುಣೋತ್ಸವ ಎಂದೂ ಕರೆಯಲಾಗುವುದು. ವಸಂತ ವಿಷ್ಣುವತ್ಕಾಲ ಅಂದಿನಿಂದ

ಆರಂಭವಾಗುವುದರಿಂದ ವೈದಿಕ ಕಾಲಮಾನದಂತೆ ನೂತನ ವರ್ಷಾರಂಭವು ಹೌದು. ಪ್ರಥಮ ಚತುರ್ಮಾಸ್ಯ ವ್ರತವೂ ಅಂದಿನಿಂದಲೇ ಆರಂಭವಾಗುತ್ತದೆ.

ಕಾಮನ ಹಬ್ಬ, ಶಿವನು ತನ್ನ ಮೂರನೇ ಕಣ್ಣಿನಿಂದ ಕಾಮನನ್ನು ಸುಟ್ಟು ಪುನಃ ಅವನಿಗೆ ಅಶರೀರದಿಂದ ಚಿರಂಜೀವತ್ವವನ್ನು ಕರುಣಿಸಿದ ಪ್ರಸಂಗದ ನೆನಪಿಗಾಗಿ ಆಚರಿಸುವ ಹಬ್ಬ ಎಂಬ ಭಾವನೆ ಇದೆ. ಅಂದರೆ, ಅದು ಚೈತ್ರ ಮಾಸದಲ್ಲಿ ಬರುವ ಮದನ ಮಹೋತ್ಸವ ಎಂಬ ಬೇರೊಂದು ಹಬ್ಬವೆಂದು ಕೆಲವರ ಅಭಿಮತ. ಈ ಕಾರಣದಿಂದ ಈ ಹಬ್ಬಕ್ಕೆ ಕಾಮನ ಹಬ್ಬವೆನ್ನುವುದಕ್ಕಿಂತ ಹೋಳಿ ಹಬ್ಬ ಎಂದು ಕರೆಯುವರು.

ಈ ಪರಿಸರದಲ್ಲಿ ಬಾಚಿನಗುಡ್ಡವನ್ನು ಹೊರತುಪಡಿಸಿ ಎಲ್ಲಾ ಗ್ರಾಮಗಳಲ್ಲಿ ಈ ಹಬ್ಬವನ್ನು ವಿಶೇಷವಾಗಿ ಆಚರಣೆ ಮಾಡುವರು. ಹುಣ್ಣಿಮೆ ಪೂರ್ವ ಅಥವಾ ಕಾಮನನ್ನು ಸುಡುವಪೂರ್ವ ದಿನದಂದು ಸಾಯಂಕಾಲ ಅಥವಾ ರಾತ್ರಿಯ ವೇಳೆ ತಮ್ಮ ತಮ್ಮ ಕ್ಷೇತ್ರವಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಕಟ್ಟಿಗೆ, ಮರಮಟ್ಟುಗಳನ್ನು ಹೊತ್ತೊಯ್ದು ರಾತ್ರಿಯೆಲ್ಲಾ ಕಾಮನನ್ನು ಸುಟ್ಟು ಮರುದಿನ ಬೆಳಿಗ್ಗೆ ಸಂತೋಷಭರಿತರಾಗಿ ಬಣ್ಣವನ್ನು ಎರಚುವ ಮೂಲಕ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವರು.

ಈ ಹಬ್ಬದ ವಿಶೇಷವೆಂದರೆ, ಅಮವಾಸ್ಯೆಯ ನಂತರ ಬರುವ ಈ ಹಬ್ಬವನ್ನು ಅಮವಾಸ್ಯೆಯ ನಂತರದಿನ ಮುಸ್ಸಂಜೆಯ ವೇಳೆಯಲ್ಲಿ ಚಂದ್ರನು ಕಂಡ ನಂತರದ ದಿನದಿಂದ ಹಲಗೆಬಾರಿಸುವುದು ಮತ್ತು ಹೋಯ್ದುಕೊಳ್ಳುವುದು ಕಂಡುಬರುತ್ತದೆ. ಇದು ಈ ಹಬ್ಬದ ಪ್ರಾರಂಭದ ಸೂಚನೆಯೂ ಕೂಡಾ ಆಗಿದೆ. ಈ ಕಾರ್ಯವು ಕಾಮನನ್ನು ಸುಟ್ಟು ಬಣ್ಣದ ಓಕುಳಿ ಆಡುವವರೆಗೂ ಕಂಡುಬರುತ್ತದೆ.

ಮಕರ ಸಂಕ್ರಾಂತಿ :

ಈ ಹಬ್ಬವನ್ನು ಎಳ್ಳು-ಬೆಲ್ಲದ ಹಬ್ಬ, ಸುಗ್ಗಿಯ ಹಬ್ಬ, ಸಂಕ್ರಮಣದ ಹಬ್ಬ, ಮಕರ ಸಂಕ್ರಮಣದ ಹಬ್ಬ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಸಂಕ್ರಾಂತಿ ಎಂದರೆ ವಿಶಿಷ್ಟವಾದ ಬದಲಾವಣೆ, ಹಾಗೂ ಉಜ್ವಲವಾದ ಬೆಳಕು ಎಂದರ್ಥ. ಬೆಳಕು ಎಂಬುದು ಬದಲಾವಣೆ ಎಂಥಲೂ ಆಗುತ್ತದೆ. ಮೂಲತಃ ಪೌಷ್ಯ ಲಕ್ಷ್ಮೀಯ ಆಗಮನದ ತರುವಾಯ ಸೂರ್ಯನು ದ್ವಾದಶ ರಾಶಿಗಳಲ್ಲೊಂದಾದ ಮಕರ ರಾಶಿಗೆ ಪ್ರವೇಶಿಸಿ ದಕ್ಷಿಣದಿಂದ ಉತ್ತರಾಭಿಮುಖವಾಗಿ ಆರು ತಿಂಗಳು ಕಾಲ ಪ್ರಯಾಣ ಬೆಳೆಸುವನು. ಈ ಪಥ ಬದಲಿಕೆಯ ದಿನವನ್ನು ಮಕರ ಸಂಕ್ರಮಣ ಅಥವಾ ಮಕರ ಸಂಕ್ರಾಂತಿ ಎಂದು ಕರೆಯುವರು. ಈ ಕಾಲವನ್ನು ಭಾರತೀಯರು ಉತ್ತರಾಯಣ ಪುಣ್ಯ ಕಾಲವೆಂದು ಕರೆಯುತ್ತಾರೆ.

ಈ ಕಾಲ ಸುಗ್ಗಿಯ ಸಮಯವಾಗಿದ್ದು, ರೈತರ ಸುಖ-ಸಂತೋಷಗಳ ಆಮೋದ-ಪ್ರಮೋದಗಳ ಕಾಲವೇ ಈ ಸಂಕ್ರಾಂತಿ. ದುಡಿಮೆಯಿಂದ ಬಿಡುವಿನೆಡೆಗೆ ರೈತನ ಬದುಕು ಹೊರಳಿಸುವ ಕಾಲ ಇದಾಗಿದೆ.

ಈ ಹಬ್ಬವನ್ನು ಕೆಲವು ಪ್ರದೇಶಗಳಲ್ಲಿ ಪೊಂಗಲ್ ಹಬ್ಬವೆಂದು ಕರೆಯುತ್ತಾರೆ. ಹೊಸ ಬೆಳೆಯಿಂದ ಬಂದ ತಿನಿಸು ತಿಂಡಿ ಮಾಡಿ ಭೂದೇವಿಗೆ ನೈವೇದ್ಯ ಮಾಡಿ ನಂತರ ಪ್ರಸಾದ ರೂಪದಲ್ಲಿ ನೀಡುವ ಪದ್ಧತಿ ಇದೆ. ಮಕರ ಸಂಕ್ರಮಣದ ಹಿಂದಿನ ದಿನ ಪ್ರಾಥಃ ಕಾಲದಲ್ಲಿ ಎದ್ದು ಮುತ್ತೈದೆಯರಿಗೆ ಮಂಗಳಕರವಾದ ವಸ್ತುಗಳನ್ನು ಇಟ್ಟು ಕೊಡುತ್ತಾರೆ. ಈ ದಿನ ಧನುರ್ಮಾಸದ ಕೊನೆಯ ದಿನವಾದ್ದರಿಂದ ದೇವರಿಗೆ ಹುಗ್ಗಿ ಸಜ್ಜೆಯ ರೊಟ್ಟಿಯನ್ನು ನೈವೇದ್ಯ ಮಾಡುತ್ತಾರೆ. ಮರುದಿನ ಸಂಕ್ರಮಣ, ಈ ದಿನ ಹೆಣ್ಣು ಮಕ್ಕಳು ಹೊಸ ವಸ್ತ್ರ ಧರಿಸಿ ಎಳ್ಳು, ಸಕ್ಕರೆ, ಕಬ್ಬು, ನೆಲಗಡಲೆ, ಬಾಳೆ ಹಣ್ಣುಗಳನ್ನು ಮನೆ-ಮನೆಗೂ ಬೀರುವ ಪದ್ಧತಿ ಇದೆ.

ಈ ಸಂಕ್ರಮಣದ ಮರುದಿನ ಕರಿ ಎರೆಯುವ ಸಂಪ್ರದಾಯವಿದೆ. ಅಂದು ಮಕ್ಕಳಿಗೆ ಹೊಸ ವಸ್ತ್ರ ತೊಡಿಸಿ ಅಲಂಕರಿಸಿ ತಲೆಯ ಮೇಲೆ ಎಳ್ಳನ್ನು ಸುರಿದು ಆರತಿ ಮಾಡುತ್ತಾರೆ. ಈ ಮಕರ ಸಂಕ್ರಮಣಕ್ಕೆ ಈ ಪರಿಸರವನ್ನೊಳಗೊಂಡು ಕರ್ನಾಟಕದ ತುಂಬೆಲ್ಲಾ ಒಂದು ಐತಿಹ್ಯವಿದೆ. ಶರಶಯ್ಯದಲ್ಲಿ ಮಲಗಿದ್ದ ಭೀಷ್ಮ ಪ್ರಾಣ ಬಿಡಲು ಉತ್ತರಾಯಣ ಪುಣ್ಯಕಾಲಕ್ಕಾಗಿ ಹರಿ ಸ್ಮರಣೆ ಮಾಡುತ್ತಾ ಕಾಯುತ್ತಿದ್ದನೆಂದು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ದಕ್ಷಿಣಾಯಣದಲ್ಲಿ ಮುಚ್ಚಿದ ಸ್ವರ್ಗದ ಬಾಗಿಲನ್ನು ಈ ದಿನ ತೆರೆಯುತ್ತಾರಂತೆ. ಅಲ್ಲದೇ ಈ ಉತ್ತರಾಯಣ ಕಾಲವನ್ನು ದೇವತೆಗಳ ಕಾಲವೆಂದು ಯಜ್ಞ-ಯಾಗಾದಿಗಳಿಗೆ ಸಮಸ್ತ ದೇವತಾ ಕಾರ್ಯಗಳಿಗೆ ಶುಭಕಾಲ, ಪುಣ್ಯಕಾಲ ಎಂದಾಗಿದೆ. ಈ ಶುಭಕಾಲವೇ ಸಂಕ್ರಮಣ ಕಾಲವಾಗಿದೆ.

ಲಂಬಾಣಿಗರ ಸಂಸ್ಕೃತಿ :

ಈ ಪರಿಸರದಲ್ಲಿ ಬರುವ ಹುಲ್ಲಿಕೇರಿ ತಾಂಡಾ ಮತ್ತು ಹಾನಾಪೂರ ತಾಂಡಾಗಳಲ್ಲಿ (ಸರಸ್ವತಿಪುರ) ಲಂಬಾಣಿಗರು ನೆಲೆಸಿದ್ದಾರೆ. ಈ ಲಂಬಾಣಿಗರದು ಒಂದು ವಿಶಿಷ್ಟವಾದ ಸಂಸ್ಕೃತಿ. ರಂಗುರಂಗಿನ ಈ ಜನಾಂಗ ಶತಮಾನಗಳಿಂದ ತಮ್ಮ ವಿಶಿಷ್ಟ ಸಂಸ್ಕೃತಿ, ಪರಂಪರೆಯನ್ನು ಕಾಯ್ದುಕೊಂಡು ಬಂದಿದ್ದಾರೆ. ಕಾಡುಮೇಡುಗಳಲ್ಲಿ ವಾಸಿಸುವ ಈ ಜನ ಅತ್ಯಂತ ವರ್ಣರಂಜಿತ ಜೀವನ ಕ್ರಮವನ್ನು ರೂಢಿಸಿಕೊಂಡು ಬಂದಿದ್ದಾರೆ. ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೆ ಅವರು ಇಂದಿಗೂ ತಮ್ಮದೇಯಾದ ವಿಶಿಷ್ಟ ಸಂಸ್ಕೃತಿ ಮತ್ತು ಪರಿಸರದಲ್ಲಿ ಪ್ರತ್ಯೇಕವಾಗಿಯೇ ನೆಲೆಯಾಗಿದ್ದಾರೆ. ದೇಶಾದ್ಯಂತ ಅಲಲ್ಲಿ ಹರಡಿಕೊಂಡಿರುವ ಲಂಬಾಣಿಗಳಲ್ಲಿ ಪ್ರಾದೇಶಿಕವಾಗಿ ಅವರ ಸಾಂಸ್ಕೃತಿಕ ಜೀವನ ವಿಧಾನಗಳಲ್ಲಿ ಸ್ವಲ್ಪಮಟ್ಟಿನ ಬದಲಾವಣೆಗಳೂ ಕಂಡುಬರುವದಿಲ್ಲ. ಸಮಸ್ತ ಲಂಬಾಣಿ ಸಮುದಾಯದಲ್ಲಿ ಒಂದೇ ರೀತಿ, ನೀತಿ, ನಡವಳಿಕೆ, ಸಂಪ್ರದಾಯ, ವೇಷ ಹಾಗೂ ಭಾಷೆಯನ್ನು ಕಾಣುತ್ತೇವೆ. ಯಾವ

ಸಂದರ್ಭದಲ್ಲಿಯೂ ಅವರು ತಮ್ಮ ಸಮಾಜದ ಕಟ್ಟುಪಾಡುಗಳನ್ನು ಬಿಟ್ಟವರಲ್ಲ. ಹೀಗಾಗಿ ಈ ಜನಾಂಗಕ್ಕೆ ತಮ್ಮದೇ ಆದ ಸಮಾಜ ಸಂಪ್ರದಾಯದ ಜೊತೆಗೆ ಸಂಸ್ಕೃತಿಯನ್ನು ಪೋಷಿಸಿಕೊಂಡು ಹೋಗುವ ಒಂದು ವಿಶಿಷ್ಟ ಮನೋಭಾವನೆ ಇದೆ.

ಸಾಮಾಜಿಕ ಜೀವನ :

ಅಲೆಮಾರಿಗಳಾದ ಲಂಬಾಣಿಗಳು ಸಾಮಾನ್ಯವಾಗಿ ಊರುಗಳಿಂದ ದೂರದಲ್ಲಿ ತಮ್ಮದೇ ಆದ ಗುಂಪುಗಳಲ್ಲಿ ವಾಸಿಸುತ್ತಾರೆ. ಪಾರಂಪರಿಕವಾದ ಜೀವನಕ್ರಮು ಅವರಲ್ಲಿ ಇನ್ನು ಉಳಿದುಕೊಂಡು ಬಂದಿದೆ. ನಾಗರಿಕ ಸಮುದಾಯದ ಸೋಗು ಕಂಡರೆ ಇವರಿಗಾಗದು. ಕಾಡುಮೇಡುಗಳಲ್ಲಿ ಸ್ವಚ್ಛಂದವಾದ ಬದುಕು ಸಾಗಿಸುವುದು ಇವರಲ್ಲಿರುವ ಆಸಕ್ತಿ. ತಮ್ಮ ಈ ಸ್ವಚ್ಛಂದವಾದ ಬದುಕಿಗೆ ನಾಗರಿಕ ಸಮುದಾಯದ ನಿರ್ಬಂಧನೆಗಳು, ಕಟ್ಟಳೆಗಳು ಅನ್ವಯವಾಗದಂತೆ ಸಾಮಾನ್ಯವಾಗಿ ಅವರು ದೂರದಲ್ಲಿಯೇ ನೆಲೆಯಾಗುತ್ತಾರೆ. ತಮ್ಮ ಸಮುದಾಯದ ಕಟ್ಟಾಚರಣೆಗಳನ್ನು ತಪ್ಪದೇ ಪಾಲಿಸಿಕೊಂಡು ಹೋಗುತ್ತಾರೆ. ಗುಂಪಿನ ಯಾವುದೇ ವ್ಯಕ್ತಿಯ ಸುಖ-ದುಃಖದಲ್ಲಿ ಕಾರ್ಯಕಲಾಪಗಳಲ್ಲಿ ಮದುವೆ, ಮುಂಜಿವೆಗಳಲ್ಲಿ ಹಾಗೂ ಸಂಸ್ಕಾರಾದಿಗಳಲ್ಲಿ ಈ ಸಮುದಾಯದ ಪ್ರತಿಯೊಬ್ಬ ವ್ಯಕ್ತಿ ಪಾಲ್ಗೊಳ್ಳುತ್ತಾರೆ.

ಕೌಟುಂಬಿಕ ಪದ್ಧತಿ :

ಲಂಬಾಣಿಗಳದು ಪಿತೃಪ್ರಧಾನ ಕುಟುಂಬ. ಇವರಲ್ಲಿ ಅವಿಭಕ್ತ ಜೀವನ ಕ್ರಮವು ಅಲ್ಲಲ್ಲಿ ಕಂಡುಬರುತ್ತದೆ. ಇವರಲ್ಲಿ ಸಾಮಾನ್ಯವಾಗಿ ಹೆಣ್ಣಿಗೆ ಹೆಚ್ಚಿನ ಪ್ರಾಧಾನ್ಯತೆ ಇಲ್ಲ. ವರ್ಷಕ್ಕೊಮ್ಮೆ ಈ ಜನರು ತಮ್ಮ ಪೂರ್ವಿಕರನ್ನು ಪೂಜಿಸುವಾಗ ಪಿತೃಪೂಜೆಯನ್ನು ಮಾತ್ರ ಮಾಡುತ್ತಾರೆ. ಹೀಗಾಗಿ ಈ ಜನಾಂಗದಲ್ಲಿ ಸ್ತ್ರೀಯರ ಸ್ಥಾನಮಾನ ತುಂಬಾ ನಿರ್ಲಕ್ಷಿತವಾಗಿದೆ. ಕುಟುಂಬದ ಪ್ರತಿಯೊಂದು ಆಗು-ಹೋಗುಗಳನ್ನು ಪುರುಷರೇ ನಿರ್ವಹಿಸುತ್ತಾರೆ.

ಆರ್ಥಿಕ ಪರಿಸ್ಥಿತಿ :

ಈ ಜನಾಂಗದಲ್ಲಿ ಪ್ರತಿಯೊಬ್ಬರು ಕಷ್ಟಜೀವಿಗಳಾಗಿದ್ದಾರೆ. ಆರ್ಥಿಕವಾಗಿ ತುಂಬಾ ಹೀನಸ್ಥಿತಿಯಲ್ಲಿರುವ ಇವರು ಸಮಾಜದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನಿಷ್ಠೆಯಿಂದ ನಡೆದುಕೊಳ್ಳುತ್ತಾರೆ. ದುಡಿಯಲು ಎಂದೂ ಹಿಂಜರಿಯುವದಿಲ್ಲ. ಎಂತಹ ಕೆಲಸವಾದರೂ ಹಿಂಜರಿಯುವುದಿಲ್ಲ. ಕಾಡಿನಲ್ಲಿ ಸಿಗುವ ಕವಳೆ ಹಣ್ಣು, ನೆಲ್ಲಿಕಾಯಿ, ಕುಳ್ಳು, ಕಟ್ಟಿಗೆ ಮಾರಿ ಜೀವನ ಸಾಗಿಸುತ್ತಾರೆ. ಆಧುನಿಕ ದಿನಮಾನದಲ್ಲಿ ಸರಕಾರ ನೀಡಿದ ಸವಲತ್ತುಗಳನ್ನು ಸರಿಯಾಗಿ ಸದುಪಯೋಗ ಪಡಿಸಿಕೊಂಡು ಇಂದು ಕೆಲವು ಕುಟುಂಬಗಳು ಆರ್ಥಿಕವಾಗಿ ಸಬಲರಾಗಿದ್ದಾರೆ.

ಅಡಿಟಿಪ್ಪಣಿಗಳು :

೧. ಚಿದಾನಂದ ಮೂರ್ತಿ ಎಂ., ೧೯೭೯ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೪೩೦-೩೧.
೨. ಶ್ರೀಕಂಠಶಾಸ್ತ್ರಿ, ೧೯೮೯, ಭಾರತೀಯ ಸಂಸ್ಕೃತಿ, ಪು. ೨೫೪.
೩. ವಿನೋದ ಪಾಟೀಲ, ೧೯೯೨, ಕರ್ನಾಟಕ ಪರಂಪರೆ, ಸಂ-೧, ಪು. ೨೬೨.
೪. ಶೀಲಾಕಾಂತ ಪತ್ತಾರ, ೨೦೦೦, ಬಾದಾಮಿ-ಸಾಂಸ್ಕೃತಿಕ ಅಧ್ಯಯನ, ಪು. ೬೧.
೫. ಅದೇ, ಪು. ೬೨.
೬. ಶೇಷ ನವರತ್ನ (ಅನು), ಮನುಸ್ಮೃತಿ ೨೦೦೦, ಪು. ೯೦.
೭. ಶಿವರುದ್ರಸ್ವಾಮಿ ಎಸ್. ಎನ್., ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ೨೦೦೦, ಪು. ೨೬೧.
೮. ಶೇಷ ನವರತ್ನ (ಅನು), ಮನುಸ್ಮೃತಿ ೨೦೦೦, ಪು. ೯೦.
೯. ಶ್ರೀಕಂಠಶಾಸ್ತ್ರಿ, ಪುರ್ವೋಕ್ತ, ಪು.೧೯೪.
೧೦. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೧೯೬೮, ಪು. ೧೨, ೧೫.
೧೧. ಕಾಳಿದಾಸ ಅಭಿಜ್ಞಾನ ಶಾಕುಂತಲಾ, ಪು. ೪೨.
೧೨. ಚಿದಾನಂದ ಮೂರ್ತಿ, ಪುರ್ವೋಕ್ತ, ಪು. ೪೮.
೧೩. ಪದ್ಮ ಎಂ. ಬಿ., ವಿ.ಜ.ಅ. ಸಂ.೧, ೧೯೯೬, ಪು.೭೬.
೧೪. SII, XV, 1.
೧೫. E.C, VII, 176.
೧೬. I.A VII, 161.
೧೭. ಅದೇ,
೧೮. EI, III, Pp. 50-53.
೧೯. ಬ್ಯಾಲೇ ಸುಶಿಕ್ಷಿತ ಶಾಸ್ತ್ರ : ಎಕ್ಕಲೇರಿ ತಾಮ್ರ ಸಾಸನ, EI, V. pp. 200-5.
೨೦. ಸರಸ್ವತಿ ಎನ್. ವಿ. ಅ. ಸಂ.-೨, ೧೯೯೬, ಪು. ೭, ೧೪, ೧೬, ೧೭, ೧೮.
೨೧. EC-Vi KD 102 1141 AD
೨೨. ಕನ್ನಡ-ಕನ್ನಡ ಕಸ್ತೂರಿ ಕೋಶ, ಪು. ೫೧೦.
೨೩. ಇಂಗ್ಲೀಷ್-ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾಲಯ, ೧೯೯೯, ಪು. ೭೮೫.
೨೪. ರಹಮತ್ ತರೀಕೆರೆ, ಕರ್ನಾಟಕ ಕನ್ನಡಿ, ೧೯೯೯, ಪು.೧೦೪.
೨೫. ವೆಂಕಟೇಶ ಜೋಯಿಸ್, ಕೆ. ಜ., ವಿಜಯನಗರ ಚರಿತ್ರೆಯಲ್ಲಿ ಕೆಳದಿಯ ಅರಸರು, ೧೯೯೬, ಪು. ೬೬.
೨೬. ಶೀಲಾಕಾಂತ ಪತ್ತಾರ, ೨೦೦೦, ಪೂರ್ವೋಕ್ತ, ಪು. ೧೪೭-೪೮.
೨೭. ಅದೇ, ಪು. ೧೪೮.
೨೮. ಅದೇ,
೨೯. ಅದೇ,
೩೦. ಎಸ್. ವ್ಹಿ. ಪಾಡಿಗಾರ, ಪು. ೧೦೧.
೩೧. ಅದೇ, ಪು. ೧೪೯

೩೨. ಸತೀಶ ಕೆ., ವಿಜಯನಗರ ಕಾಲದ ಶೈವ ದೇವಾಲಯಗಳು, ೨೦೦೪, ಪು.೫೧.

೩೩. ಸರ್ ಜಾನ್ ಮಾರ್ಶಲ್, Mohenjodaro and Indus Civilazation, IP, 52-54.

೩೪. ಕಡಪಟ್ಟಿ ಎಮ್. ಎನ್. , ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ, ಪು. ೧೪-೧೫.

೩೫. ಅದೇ, ಪು೧೭.

೩೬.

೩೭. EC-VII, p. 237.

೩೮. ಕರ್ನಾಟಕ ಚರಿತ್ರೆ ಸಂ-೧, ೧೯೯೭, ಪು. ೪೭೬.

೩೯. I.A., VII, p. 237.

೪೦. SIP, p. 44.

೪೧. IA, VII, p. 209.

೪೨. EI, XXX, VIII, 36.

೪೩. SIP, p. 45.

೪೪. SII, IX (i), 47, p. 27.

೪೫. ರಾಜೇಂದ್ರಪ್ಪ ಶಿ., ೧೯೮೪ , ಬಾದಾಮಿ ಚಲುಕ್ಯರ ಆಳ್ವಿಕೆಯಲ್ಲಿ ಕೃಷಿ, ಮಾನವಿಕ ಕರ್ನಾಟಕ, ಸಂಪುಟ-೧೪, ಸಂಚಿಕೆ-೪, ಮೈಸೂರು ವಿಶ್ವವಿದ್ಯಾಲಯ, ಪು. ೪೧.

೪೬. EI, XIV, pp. 144-47.

೪೭. EI, XXVI, pp. 322-6.

೪೮. SIP-p. 45.

೪೯. IA, VII, p. 209.

೫೦. SIP-p. 46.

೫೧. SII, XV, 463.

೫೨. SIP-p. 46.

೫೩. IA, X, pp. 164-5.

೫೪. AA, X, p. 286.

೫೫. SIP-p. 48.

೫೬. IA, Z, 167.

೫೭. Desai P. B. (Ed) 1970, A History of Karnatak Dharwad, p.13.

೫೮. ಅಣ್ಣಿಗೇರಿ ಎ. ಎಂ., 1971, ಭಾರತದ ಪ್ರಾಚೀನ ನಾಣ್ಯಗಳು, ಧಾರವಾಡ, ಪು. ೬೦-೬೧.

೫೯. EI, III, p. 1.

ಅಧ್ಯಾಯ-ಐದು

ಕಲೆ ಮತ್ತು ವಾಸ್ತುಶಿಲ್ಪ

ವಿಶ್ವದ ಪ್ರತಿಯೊಂದು ದೇಶವು ತನ್ನದೇ ಆದ ಒಂದು ಸಂಸ್ಕೃತಿಯನ್ನು ಹೊಂದಿರುವಂತೆ ಭಾರತ ದೇಶವು ಕೂಡ ವಿಶಿಷ್ಟ ಸಾಂಸ್ಕೃತಿಕ ಕಲಾ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. ಕಲೆ ಎಂಬುದು ಸಂಸ್ಕೃತಿಯ ವಿಶಿಷ್ಟ ಅಂಶವಾಗಿದೆ. ಅದರಂತೆ ಕರ್ನಾಟಕವು ವಾಸ್ತು ಕಲೆಯನ್ನು ತನ್ನ ಸಂಸ್ಕೃತಿಯ ವಿಶಿಷ್ಟವಾದ ಅಂಶವನ್ನಾಗಿರಿಸಿಕೊಂಡು ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಅದನ್ನು ಮುಂದುವರೆಸಿಕೊಂಡು ಬಂದಿದೆ. ಕಲೆಯೆಂಬುದು ಕಾಲದ ದೃಷ್ಟಿಯಿಂದ ಸುಧೀರ್ಘ ಇತಿಹಾಸವನ್ನು ಹೊಂದಿದೆ. ಅದೇ ರೀತಿಯಾಗಿ ಪ್ರದೇಶದ ದೃಷ್ಟಿಯಿಂದಲೂ ಇಡಿ ಭರತ ಖಂಡವನ್ನು ಪ್ರತಿನಿಧಿಸುತ್ತದೆ.

ವಾಸ್ತು ಮತ್ತು ಶಿಲ್ಪಕಲೆಯಲ್ಲಿ ಕರ್ನಾಟಕ ಮೊದಲಿನಿಂದಲೂ ಉತ್ತಮವಾದುದನ್ನೇ ಸಾಧಿಸುತ್ತ ಬಂದಿದೆ. ಇತಿಹಾಸ ಪೂರ್ವ ಕಾಲದಿಂದ ಈವರೆಗೆ ಕರ್ನಾಟಕದ ವಾಸ್ತು ಮತ್ತು ಮೂರ್ತಿ ಶಿಲ್ಪಕಲೆಯಲ್ಲಿ ನಿರಂತರತೆಯನ್ನು ಉಳಿಸಿಕೊಂಡು ಬಂದಿದೆ. ಕರ್ನಾಟಕವನ್ನು ಆಳಿದ ಎಲ್ಲ ರಾಜ ಮನೆತನಗಳು ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗೆ ಪ್ರೋತ್ಸಾಹ ನೀಡಿವೆ. ಇದಕ್ಕೆ ಸಾಕ್ಷಿಯಾಗಿ ಹಲವು ಸ್ವರೂಪದ ದೇವಾಲಯಗಳು ಅದರ ಶಿಲ್ಪಕಲೆಗಳು ಉಳಿದುಕೊಂಡು ಬಂದಿವೆ. ಇವುಗಳ ಅಧ್ಯಯನದಿಂದ ಯಾವುದೇ ಪ್ರದೇಶದ ನಿರ್ದಿಷ್ಟ ಕಾಲದ ಸಂಸ್ಕೃತಿ ಮತ್ತು ಸಾಮಾಜಿಕ ಬದುಕನ್ನು ತಿಳಿಯಲು ಮತ್ತು ಜನರ ಬದುಕನ್ನು ಅರ್ಥೈಸಲು ಸಾಧ್ಯವಾಗುತ್ತದೆ.[1]

ಕರ್ನಾಟಕದ ವಾಸ್ತು ಮತ್ತು ಶಿಲ್ಪಕಲೆ ಅತ್ಯಂತ ಶ್ರೀಮಂತವಾದುದು. ಇಂತಹ ಶ್ರೀಮಂತ ಸಂಸ್ಕೃತಿಕ ಕುರುಹಿನ ಅಧ್ಯಯನ ಅಪಾರವಾದ ಜ್ಞಾನವನ್ನು ತುಂಬಿಕೊಡುತ್ತದೆ. ಕರ್ನಾಟಕದ ಶಿಲ್ಪಕಲೆ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಅತ್ಯಂತ ಚಿಕ್ಕದಾದ ಚಿಕಣಿ ಶಿಲ್ಪಗಳಿಂದ ಹಿಡಿದು ಬೃಹತ್ತಾದ ಗೊಮ್ಮಟ ಶಿಲ್ಪದವರೆಗೆ ಇದರ ವ್ಯಾಪ್ತಿ ಹಬ್ಬಿದೆ. ಇಂತಹ ಶಿಲ್ಪಗಳನ್ನು ಕುರಿತ ಅಧ್ಯಯನ ನಿರ್ದಿಷ್ಟ ಕಾಲಘಟ್ಟಗಳನ್ನು ಗುರುತಿಸಿ ಆದಾಗ ವಿಶೇಷವಾದ ಅಂಶಗಳನ್ನು ಮತ್ತು ಪ್ರಭಾವ ಪ್ರೇರಣೆಗಳನ್ನು ತಿಳಿಯಬಹುದು. ಇಂತಹ ಅಧ್ಯಯನಕ್ಕೆ ಅವಕಾಶ ದೊರೆಯುವುದೇ ಕಷ್ಟ. ಈ ಸಂದರ್ಭದಲ್ಲಿ ''ಕರ್ನಾಟಕ ಶಿಲ್ಪಕಲಾ ಅಕಾಡೆಮಿ''ಯು ಮಹತ್ವದ ಪಾತ್ರವಹಿಸುತ್ತದೆ. ಇದು ನಿರ್ದಿಷ್ಟ ರಾಜಮನೆತನಗಳ ಆಳ್ವಿಕೆಯ ಕಾಲಘಟ್ಟದ ಕಲೆ ಮತ್ತು ವಾಸ್ತು ಶಿಲ್ಪ ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿದೆ.

ಕರ್ನಾಟಕವನ್ನಾಳಿದ ರಾಜಮನೆತನಗಳಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಲುಕ್ಯರೂ, ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು ಕರ್ನಾಟಕ

ಸಂಸ್ಕೃತಿಯ ಕಲಾ ಪಂರಪರೆಯನ್ನು ನಿರ್ಮಿಸಿ ಪೋಷಿಸಿಕೊಂಡು ಬಂದಿವೆ. ಇದರಲ್ಲಿ ಬಾದಾಮಿ ಚಲುಕ್ಯರು ತಮ್ಮದೇ ಆದ ವಿಶಿಷ್ಟ ಕಲಾ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಅದುವೆ 'ವೇಸರ' ಶೈಲಿಯಾಗಿದೆ. ಇಲ್ಲಿ ವಾಸ್ತು ಶಿಲ್ಪಿಗಳು ಬಾದಾಮಿಯ ಸುತ್ತಲಿನ ಪರಿಸರದಲ್ಲಿ ದೇಗುಲಗಳ ನಿರ್ಮಾಣದಲ್ಲಿ ಹಲವು ಶೈಲಿಗಳ ಪ್ರಯೋಗದಲ್ಲಿ ನಿರತರಾಗಿದ್ದಾರೆ. ಆದುದರಿಂದ ಈ ಪ್ರದೇಶವನ್ನು 'ಭಾರತೀಯ ದೇಗುಲ ವಾಸ್ತುವಿನ ತೊಟ್ಟಿಲು' ಎಂದು ಕರೆಯಲಾಗಿದೆ.[೩]

ಬಾದಾಮಿ ಚಲುಕ್ಯರು ಸರ್ವಧರ್ಮ ಸಮನ್ವಯತೆಯನ್ನು ಸಾರಿದ್ದರೆಂದು ತಿಳಿಯಲು ಅವರು ನಿರ್ಮಿಸಿದ ಶೈವ, ಬೌದ್ಧ, ವೈಷ್ಣವ, ಜೈನ ದೇಗುಲಗಳೇ ಸಾಕ್ಷಿಗಳಾಗಿವೆ. ಹೀಗಾಗಿ ನನ್ನ ಅಧ್ಯಯನಕ್ಕೆ ಸಂಬಂಧಿಸಿದ ಬಾದಾಮಿ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟ ಹುಲಿಗೆಮ್ಮನಕೊಳ್ಳದ ಪರಿಸರದಲ್ಲಿರುವ ದೇವಾಲಯಗಳ ಶಿಲ್ಪಕಲೆ ಮತ್ತು ವಾಸ್ತುವಿನ್ಯಾಸವನ್ನು ಈ ಕೆಳಗಿನಂತೆ ಮೊದಲು ಶಿಲ್ಪಕಲೆ ಮತ್ತು ವಾಸ್ತುಕಲೆಯ ಹಿನ್ನೆಲೆಯನ್ನು ಅರಿಯೋಣ.

ಆಧಾರಗಳು :

ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನಕ್ಕೆ ಹಲವು ಆಕರ ಸಾಮಗ್ರಿಗಳು ಸಹಾಯಕವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ-

೧. ಪ್ರಾಚೀನ ನಿರ್ಮಿತಿಗಲು, ಸ್ಮಾರಕಗಳು, ದೇಗುಲಗಳು, ಕೋಟೆ, ಕೊತ್ತಲಗಳು.

೨. ಶಾಸನಗಳು : ಅಶೋಕನ ಶಾಸನಗಳು, ಮಂಡಗಪಟ್ಟ ಶಾಸನ

೩. ವಾಸ್ತುಶಿಲ್ಪ ಗ್ರಂಥಗಳು :

೧. ಮಯಮತ, ಮಾನಸಾರ

೨. ತಂತ್ರಸಮುಚ್ಚಯ (೧೫ನೇ ಶತಮಾನ)

೩. ಕಾಶ್ಯಪಶಿಲ್ಪ -ವಿಮಾನಾರ್ಚನಶಿಲ್ಪ

೪. ಪ್ರಯೋಗ ಮಂಜರಿ (೧೫ನೇ ಶತಮಾನ)

೫. ವಾಸ್ತುವಿದ್ಯಾ, ಶಿಲ್ಪರತ್ನ (೧೦ನೇ ಶತಮಾನ)

ಮುಂತಾದ ಗ್ರಂಥಗಳು ದಕ್ಷಿಣ ಭಾರತದ ವಾಸ್ತುಶಿಲ್ಪಗಳ ರೂಪರೇಷಗಳನ್ನು ಹೇಳುವ ಗ್ರಂಥಗಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಅದರಂತೆ ಅಪರಾಜಿತ ಪೃಚ್ಛ (೧೧ನೇ ಶತಮಾನ), (ಭುವನ ಪ್ರದೀಪ), ಸಮರಾಂಗಣ

ಸೂತ್ರಧಾರ (೧೦-೧೧ನೇ ಶತಮಾನ) (ಭೋಜ) ವಿಶ್ವಕರ್ಮ ಪ್ರಕಾಶ (ವಿಶ್ವಕರ್ಮ) ಇವು ಉತ್ತರ ಭಾರತದ ದೇವಾಲಯಗಳ ಬಗ್ಗೆ ವಿವರಣಾತ್ಮಕವಾಗಿ ವಿಶ್ಲೇಷಿಸಿವೆ. ಇನ್ನು ಅನೇಕ ಸಾಹಿತ್ಯ ಆಕರಗಳು ಕಲೆ ಮತ್ತು ವಾಸ್ತುಶಿಲ್ಪದ ಕುರಿತು ಸಮಗ್ರ ಮಾಹಿತಿಯನ್ನು ನೀಡುತ್ತವೆ.[೪]

ಕಲೆಯ ಅರ್ಥ :

ಮನುಷ್ಯ ತನ್ನ ಸ್ವಪ್ರತಿಮೆಯಿಂದ ಸೃಷ್ಟಿ ಮಾಡುವುದೇ ಕಲೆ. ಕಲೆಯ ಒಂದು ಮನುಷ್ಯನ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಪ್ರಕೃತಿಯಲ್ಲಿ ನಡೆದ ಪ್ರಸಂಗವಾಗಲಿ, ವಸ್ತುಗಳಾಗಲಿ ಅವು ಎಷ್ಟೇ ಸುಂದರವಾಗಿದ್ದರೂ ಕಲೆ ಎನಿಸಿಕೊಳ್ಳಲಾರವು. ಅವುಗಳನ್ನು ಚಿತ್ರಕಲೆ ಮೂಲಕ ಮಾತಿನ ಮೂಲಕ ಬಣ್ಣಿಸಿದಾಗ ಮಾತ್ರ ಅವು ಕಲೆಗಳಾಗಿರುತ್ತವೆ.

''ಯಾವುದೋ ಒಂದು ವಸ್ತುವನ್ನು ಮನುಷ್ಯನು ಚಿತ್ರದ ಮೂಲಕ ಅಥವಾ ಮಾತಿನ ಮೂಲಕ ಬಣ್ಣಿಸಿ ಆಕರ್ಷಕವಾಗಿ ಪುನಃರಚಿಸುವುದೇ ಕಲೆಯಾಗಿದೆ.''

ಕಲೆಯ ಉಗಮ :

ಕಲೆ ಎಂಬುದು ದೈವಿ ಮೂಲದಿಂದ ಉಗಮಗೊಂಡಿದೆ ಎಂದು 'ಚಿತ್ರಸೂತ್ರ' ಎಂಬ ಗ್ರಂಥ ವಿವರಣೆಯನ್ನು ನೀಡಿದೆ. 'ನರ ನಾರಾಯಣರು' ಎಂಬ ಋಷಿ ಮುನಿಗಳು ಬದರಿಕಾಶ್ರಮದಲ್ಲಿ ತಪಸ್ಸನ್ನು ಮಾಡುತ್ತಿದ್ದಾಗ ಅವರ ತಪಸ್ಸನ್ನು ಭಂಗಪಡಿಸಲು ಅಪ್ಸರೆಯರು ಪ್ರಯತ್ನಿಸಿದಾಗ ಋಷಿಗಳು ಅವರ ಗರ್ವವನ್ನು ಮುರಿಯಲು ಒಂದು ಸುಂದರವಾದ ಸ್ತ್ರೀಯ ಚಿತ್ರವನ್ನು ಭೂಮಿಯ ಮೇಲೆ ತಮ್ಮ ಅಮೃತ ಹಸ್ತದಿಂದ ಬಿಡಿಸಿ ಆದಕ್ಕೆ ಜೀವಕಳೆಯನ್ನು ಕೊಟ್ಟರು ಅವಳೇ ''ಊರ್ವಶಿ'' ಇದರಿಂದ ಮುಂದೆ ಅಪ್ಸರೆಯರ ಸೌಂದರ್ಯ ಕಳೆಗುಂದಿತು. ಅನಂತರ ಆ ಚಿತ್ರಕಲೆಯನ್ನು ಬೋಧಿಸುವುದಕ್ಕಾಗಿ ''ಚಿತ್ರಸೂತ್ರ'' ಎಂಬ ಗ್ರಂಥವನ್ನು ಬರೆದು ವಿಶ್ವಕರ್ಮನಿಗೆ ಕೊಟ್ಟರು ಎಂದು ಪುರಾಣಗಳಲ್ಲಿ ಉಲ್ಲೇಖವಿದೆ.

ಒಟ್ಟಿನಲ್ಲಿ ಕಲೆಯೆಂಬುದು ದೇವತೆಗಳಿಂದ, ಋಷಿ-ಮುನಿಗಳಿಂದ ಉಗಮ ತಾಳಿತೆಂದು ಉಲ್ಲೇಖನೀಯ. ಹಾಗೆಯೇ ಪ್ರಾಚೀನತೆಯಿಂದ ಮಾನವನು ಕಲೆಯನ್ನು ರೂಢಿಸಿಕೊಂಡು ಐತಿಹಾಸಿಕವಾಗಿ ಹಲವಾರು ಅರಸು ಮನೆತನಗಳು ದೇಗುಲಗಳನ್ನು ನಿರ್ಮಿಸುವ ಮೂಲಕ ವಿಶಿಷ್ಟ ರೀತಿಯ ಕಲೆಯನ್ನು ಹುಟ್ಟುಹಾಕಿದವು.

ಕಲೆಯ ಸ್ವರೂಪ :

ಕಲೆಯ ಸ್ವರೂಪ ಎನ್ನುವುದು ಅದರ ಬಗೆಗಳನ್ನು ಮತ್ತು ತನ್ನದೇ ಆದ ರೂಪವನ್ನು ಪ್ರತಿನಿಧಿಸುತ್ತದೆ ಮತ್ತು ಈ ಕಲೆ ಎಂಬುದು ಪ್ರಮುಖವಾಗಿ ಶಿಲ್ಪ ಮತ್ತು ವರ್ಣಚಿತ್ರಗಳಲ್ಲಿ ಅತ್ಯಾಕರ್ಷಕವಾಗಿ ವ್ಯಕ್ತವಾಗಿರುತ್ತದೆ.

ಮಾನವನು ತನ್ನ ಸಾಂಸ್ಕೃತಿಕ ಕಲಾ ಪರಂಪರೆಯನ್ನು ಒಂದಲ್ಲೊಂದು ರೀತಿಯಲ್ಲಿ ತನ್ನ ಭಾವನಾತ್ಮಕತೆಯಿಂದ ಕಲಾತ್ಮಕವಾಗಿ ವಿವಿಧ ರೂಪಗಳಲ್ಲಿ ಹಿಡಿದಿಟ್ಟಿರುವುದೇ ಕಲೆಯ ಸ್ವರೂಪವಾಗಿದೆ. ಈ ಕಲೆಯ ರೂಪರೇಷೆಯ ಜೊತೆಗೆ ಅದರ ಲಕ್ಷಣಗಳನ್ನು ವಿವರಿಸುವ ಮೂಲಕ ಅದರ ಸ್ವರೂಪವನ್ನು ಈ ಕೆಳಗಿನಂತೆ ತಿಳಿಯಲಾಗಿದೆ.

೧. ಧಾರ್ಮಿಕ ಸ್ವರೂಪದ್ದಾಗಿದೆ :

ಮೂಲಭೂತವಾಗಿ ಭಾರತೀಯ ಕಲೆಯು ಧಾರ್ಮಿಕ ಸ್ವರೂಪವನ್ನು ಹೊಂದಿದೆ. ಅಂದರೆ ಪ್ರಾಚೀನ ಕಾಲದಿಂದ ಬೆಳೆದು ಬಂದ ಧಾರ್ಮಿಕ ಸಂಪ್ರದಾಯಗಳು ದೈವಿ ಮೂಲವನ್ನು ಪ್ರತಿನಿಧಿಸುತ್ತವೆ. ಇಂತಹ ಪರಂಪರೆಯನ್ನು ಮಾನವನು ಉಳಿಸಿ ಬೆಳೆಸಲು ತನ್ನ ಕಲೆಯನ್ನು ದೇಗುಲಗಳ ಮೂಲಕ ಶಿಲ್ಪಗಳ ಮೂಲಕ ಚಿತ್ರಕಲೆಯ ಮೂಲಕ ನಿರೂಪಿಸಿರುವನು.

ಧಾರ್ಮಿಕ ಸ್ವರೂಪಕ್ಕೆ ತಕ್ಕಂತೆ ಲೌಕಿಕ ಸ್ವರೂಪದ ಹಲವಾರು ಅವಶೇಷಗಳು ಲಭ್ಯವಿದೆ.

ಉದಾ : ಹರಪ್ಪಾ ನಗರದ ಅವಶೇಷಗಳು, ಕೋಟೆಗಳು, ವಿಜಯನಗರದ ಅರಮನೆಗಳನ್ನು ಊದಾಹರಿಸಬಹುದು. ಆದರೆ ಇಲ್ಲಿ ಸಾಮಾನ್ಯವಾಗಿ೯೦ ಕಲಾ ಉದಾಹರಣೆಗಳು ಧಾರ್ಮಿಕ ಸಂದರ್ಭದಲ್ಲಿ ದೊರೆಯುವಂತಹವುಗಳಾಗಿವೆ.

ಶಿಲ್ಪಗಳು :

ದೇವಾಲಯಗಳಲ್ಲಿ ಕಂಡುಬರುವ ಉಬ್ಬುಶಿಲ್ಪಗಳು, ದುಂಡುಶಿಲ್ಪಗಳು ಹೆಚ್ಚಾಗಿ ದೇವತೆಗಳ ಪ್ರತಿರೂಪವಾಗಿ ಕಾಣುತ್ತವೆ. ಬಾದಾಮಿ ಚಾಲುಕ್ಯರ ಕಾಲದ ಹುಲಿಗೆಮ್ಮ ಕೊಳ್ಳದ ಶಿಲಾಶಿಲ್ಪಗಳು ಉಮಾಮಹೇಶ್ವರಿ ಶಿಲ್ಪ, ಲಜ್ಜಾಗೌರಿ, ಸಪ್ತಮಾತೃಕೆಯರ ಶಿಲ್ಪಗಳು ಶೈವಧರ್ಮದ ಪರಿಕಲ್ಪನೆಯನ್ನು ನಿರೂಪಿಸುತ್ತವೆ.

ಚಿತ್ರಕಲೆ :

ಚಿತ್ರಕಲೆಯ ಸಹ ಧಾರ್ಮಿಕತೆಯನ್ನು ಪ್ರತಿಬಿಂಬಿಸುತ್ತದೆ. ಉದಾ : ಅಜಂತಾದ ವರ್ಣ ಚಿತ್ರಗಳು ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಜಾತಕ ಕತೆಗಳನ್ನು ನಿರೂಪಿಸುತ್ತವೆ. ಅದರಂತೆ ಬಾದಾಮಿ ಚಾಲುಕ್ಯರ ಗುಹಾಲಯಗಳಲ್ಲಿ ಮತ್ತು ಹುಲಿಗೆಮ್ಮ ಕೊಳ್ಳದ ಪಶ್ಚಿಮ ಬೆಟ್ಟದಲ್ಲಿ ಶ್ವೇತವರ್ಣದ ಚಿತ್ರಕಲೆ ಕಾಣಸುತ್ತದೆ.

ವಾಸ್ತು :

ಕಟ್ಟಡ ನಿವೇಶನದಲ್ಲಿ 'ವಾಸ್ತುಪುರುಷ' ಇರುತ್ತಾನೆ ಎಂಬುದು ಹಲವು ಜ್ಯೋತಿಶಾಸ್ತ್ರದಿಂದ ತಿಳಿದುಬಂದಿದೆ. ಸಂಪ್ರದಾಯಬದ್ಧವಾಗಿ ಪೂಜಾ ವಿಧಿ-ವಿಧಾನಗಳಿಂದ ಆಯಾ ದೇವತೆಗಳಿಗೆ ತಕ್ಕಂತೆ ದೇಗುಲಗಳನ್ನು ರಚಿಸಿದ್ದಾರೆ. ದೇಗುಲದ ಮುಂದೆ ಒಂದು ಪುಷ್ಕರಣೆ ಇರಬೇಕೆಂದು ವಾಸ್ತುವಿನ್ಯಾಸದ ಅಧ್ಯಯನದಲ್ಲಿ ವಿವರಿಸಲಾಗಿದೆ.

ಉದಾ : ಹುಲಿಗೆಮ್ಮಕೊಳ್ಳದ ಬೃಹತ್ ಬಂಡೆಯ ಆಶ್ರಯದಲ್ಲಿ ದೇಗುಲಗಳ ರಚನೆಯಾಗದ್ದು, ಅವುಗಳ ಎದುರಿಗೆ ನೈಸರ್ಗಿಕ ಪುಷ್ಕರಣಿ ಸೃಷ್ಟಿಕೊಂಡಿದ್ದು ಒಂದ ವಿಶೇಷವಾಗಿದೆ. ಅಲ್ಲದೇ ದೈವಿ ಸ್ವರೂಪಕ್ಕೆ ಸಾಕ್ಷಿಯಾಗಿದೆ. ಹೀಗೆ ಕಲೆಯ ಧಾರ್ಮಿಕ ಸ್ವರೂಪ ತಾಳಿದೆ.

ಆಧ್ಯಾತ್ಮಿಕ ಸ್ವರೂಪ :

ಆಧ್ಯಾತ್ಮಿಕತೆ ಎನ್ನುವುದು ಮೂಲತಃ ಧಾರ್ಮಿಕತೆಯಿಂದ ಹುಟ್ಟಿರುವಂತದ್ದು. ಧಾರ್ಮಿಕ ಸ್ವರೂಪದ ಆಚಾರಕ್ಕೆ ಅಂಗಗಳಾದ ದೇಗುಲಗಳನ್ನು ಉದಾಹರಿಸುವಾಗ ಈ ಆಧ್ಯಾತ್ಮಿಕವಾಗಿ ದೇವಾಲಯ ಎಂದರೆ ದೇವರ ಮನೆ ಎಂಬುದು ಸಾಮಾನ್ಯ ಅರ್ಥವಾದರೆ ದೇವಾಲಯದ ಮುಖ್ಯಭಾಗವಾದ ಗರ್ಭಗೃಹವು ಆಧ್ಯಾತ್ಮಿಕವಾಗಿ ಇದು ವಿಶ್ವಗರ್ಭವನ್ನು ಸೂಚಿಸುತ್ತದೆ.

ಮೂಲತಃ ದೇವಾಲಯದ ರಚನೆ ಎಂಬುದು ಆಧ್ಯಾತ್ಮಿಕ ರಚನೆಯಾಗಿದೆ. ದೇವರ ಮನೆ; ದೇವರ ಅರಮನೆ, ಅವನು 'ವಿಶ್ವದ ಚಕ್ರವರ್ತಿ' ಎಂಬುದಾಗಿಯೂ ಒಬ್ಬ ಅರಸನಿಗೆ ಸಲ್ಲಿಸಬೇಕಾದ ಸೇವೆಗಳೆಲ್ಲಾ ದೇವಾಲಯಕ್ಕೂ ಸಲ್ಲಬೇಕಾಗುತ್ತದೆ. ಈ ರೀತಿಯಾಗಿ ಕಲೆಯು ಆಧ್ಯಾತ್ಮಿಕ ಸ್ವರೂಪ ಪಡೆದಿದೆ.

ಸಾಂಕೇತಿಕ ಸ್ವರೂಪ :

ಸಾಂಕೇತಿಕತೆಯು ಭಾರತೀಯ ಕಲೆಯ ವಿಶಿಷ್ಟ ಸ್ವರೂಪವಾಗಿದೆ. ಭಾರತೀಯ ಕಲಾಕಾರರು ಶಿಲ್ಪಗಳಲ್ಲಿ ಸಾಂಕೇತಿಕತೆಯನ್ನು ಸಾಕಷ್ಟು ಬಳಸಿಕೊಂಡಿದ್ದಾರೆ. ಸಾರಾನಾಥ ವಿಶ್ವದ ಅತ್ಯಂತ ಹೆಚ್ಚು ಸಾಂಕೇತಿಕತೆಯನ್ನು ನಿರೂಪಿಸುವ ಕಲಾ ಸೃಷ್ಟಿಯಾಗಿದೆ. ಭಾರತೀಯ ಕಲಾಕರರು ಬಳಸಿದ ಸಾಂಕೇತಿಕತೆಯನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

ಮುದ್ರೆಗಳು, ಆಸನಗಳು, ಭಂಗಿಗಳು, ಮಂಗಲಕಾರಿ ಚಿಹ್ನೆಗಳು, ಆಯುಧಗಳು, ವಾಹನಗಳು, ಲಾಂಛನಗಳು, ಬುದ್ಧನ ಸಾಂಕೇತಿಕತೆ.

ಕಥಾ ನಿರೂಪಣಾ ತಂತ್ರ :

ಕಥಾ ನಿರೂಪಣೆಯು ಭಾರತೀಯ ಕಲೆಯಲ್ಲಿ ಪ್ರಧಾನವಾಗಿ ಗೋಚರಿಸುವ ಅಂಗವಾಗಿದೆ. ಕಥಾನಿರೂಪಕ ವಸ್ತುಗಳು ಪುರಾಣಗಳಿಂದ ರಾಮಾಯಣ, ಮಹಾಭಾರತ ನೀತಿಕಥೆಗಳು ಮುಂತಾದವುಗಳಿಂದ ನಿರೂಪಿಸಲಾಗಿದೆ. ದೇವತಾ ವ್ಯಾಖ್ಯಾನಗಳು, ಪವಾಡಗಳು, ಸಾಹಿತ್ಯದಲ್ಲಿ ಕಂಡುಬರುತ್ತವೆ. ಉದಾ : ಹುಲಿಗೆಮ್ಮಕೊಳ್ಳದ ಉಮಾಮಹೇಶ್ವರಿ ಶಿಲ್ಪ, ಸಪ್ತಮಾತೃಕೆಯರು, ಗಣೇಶ ಶಿಲ್ಪಗಳು ಕಥೆಯನ್ನು ನಿರೂಪಿಸುವವು.

ದೇಶ, ಕಾಲಗಳಿಗನುಗುಣವಾಗಿ ಭಾರತೀಯ ಕಲಾ ಶೈಲಿಯು ವಿಭಿನ್ನವಾಗಿದೆ. ಕಾಲದ ದೃಷ್ಟಿಯಿಂದ ನೋಡಿದಾಗ ಕಾಲದಿಂದ ಕಾಲಕ್ಕೆ ಒಂದೇ ಪ್ರದೇಶದ ಶಿಲ್ಪಗಳಲ್ಲಿ ವ್ಯತ್ಯಾಸಗಳನ್ನು ಕಾಣಬುದು. ಹೊಯ್ಸಳರ ಕಾಲದ ದೇವಾಲಯದಲ್ಲಿ ಮತ್ತು ಬಾದಾಮಿ ಚಲುಕ್ಯರ ದೇವಾಲಯಗಳಲ್ಲಿ ವ್ಯತ್ಯಾಸಗಳಿವೆ. ಪ್ರದೇಶದ ದೃಷ್ಟಿಯಿಂದ ಉತ್ತರ ಭಾರತ ಶೈಲಿ ಮತ್ತು ದಕ್ಷಿಣ ಭಾರತ ಶೈಲಿ ಎಂದು ಕಲೆಯ ವಾಸ್ತುಶಿಲ್ಪವು ಬೆಳೆದು ಬಂದಿವೆ.

ಅಲಂಕಾರಿಕ ಘಟಕ :

ಕಲೆಯು ಒಂದು ಅಲಂಕಾರಿಕ ಘಟಕವಾಗಿದೆ. ಅಂದರೆ ಕಲೆಯು ಮನುಷ್ಯರೂಪದ ಕೇಂದ್ರಬಿಂದುವಾಗಿದ್ದು ಅದಕ್ಕೆ ಪೂರಕವಾಗಿ ಅಲಂಕಾರಿಕ ವಸ್ತುಗಳು ನಿರ್ಮಾಣವಾಗಿವೆ. ಉದಾ : ಹುಲಿಗೆಮ್ಮ ಕೊಳ್ಳದ ಹಲವು ಶಿಲ್ಪಗಳಲ್ಲಿ ವೇಷಭೂಷಣಗಳಿಂದ ಅಲಂಕೃತಗೊಂಡಿದ್ದು ವಿಶೇಷವಾಗಿದೆ.

ಲಲಿತಕಲೆಗಳೊಂದಿಗೆ ಸಂಬಂಧ :

ಕಲೆಯು ಧಾರ್ಮಿಕವಾಗಿ ಪ್ರಧಾನವಾಗಿರುವುದರಿಂದ ನಾಟಕ, ನೃತ್ಯ ಮೊದಲಾದವುಗಳಲ್ಲಿ ಸೃಷ್ಟಿಗೊಂಡಿದೆ. ಹೀಗಾಗಿ ಲಲಿತಕಲೆಯನ್ನು ಪ್ರತಿಬಿಂಬಿಸುವ ಶಿಲ್ಪಗಳು ಕರ್ನಾಟಕದ ಶಿಲ್ಪ ಕಲಾ ಕೇಂದ್ರಗಳಲ್ಲಿ ಕಾಣಸಿಗುತ್ತವೆ ಉದಾ : ಬಾದಾಮಿ ಗುಹೆಯ ನಟರಾಜನ ಶಿಲ್ಪವು ಭರತನಾಟ್ಯ ಮತ್ತು ಇತರೆ ನಾಟ್ಯ ಶಾಸ್ತ್ರಗಳನ್ನು ತಿಳಿಸಿಕೊಡುವ ಅಪರೂಪದ ಶಿಲ್ಪವಾಗಿದೆ.

ಶಾಸ್ತ್ರೀಯ ತಳಹದಿ :

ಭಾರತೀಯ ಕಲೆಯು ಶಾಸ್ತ್ರೀಯವಾದ ಭದ್ರಬುನಾದಿಯನ್ನು ಹೊಂದಿದೆ. ಹಲವು ಗ್ರಂಥ ಪುರಾಣಗಳು ಶಾಸ್ತ್ರೀಯ ಚಿತ್ರಕಲೆ, ಶಿಲ್ಪಗಳ ಬಗ್ಗೆ ವವರಣೆ ನೀಡುತ್ತವೆ.

ವಿವಿಧ ರೀತಿಯ ದೇವದೇವತೆಗಳ ಶಿಲ್ಪಗಳ ಬಳಕೆ

ಚಿತ್ರಗಾರನಲ್ಲಿ ಇರಬೇಕಾದ ಲಕ್ಷಣಗಳು

ಬಣ್ಣ ತಯಾರಿಕೆ ಮತ್ತು ಅದರ ಬಳಕೆ

ಕುಂಚ ಬಳಸುವಿಕೆ

ಶಿಲ್ಪಕಲೆಗೆ ಅಳತೆಗಳು

ನೆರಳನ್ನು ಹೀಗೆ ತೋರಿಬೇಕೆಂಬ ರೀತಿಯ ಕೆಲವು ಅಂಶಗಳ ಸ್ಪಷ್ಟಣೆ ಗ್ರಂಥಗಳಲ್ಲಿ ಉಲ್ಲೇಖಿತ.

ಕಲೆಯು ಸಾಹಿತ್ಯಿಕ ಕಲ್ಪನೆಗಳ ಪ್ರಭಾವದಿಂದ ಕೂಡಿದೆ.

ಭಾರತೀಯ ಕಲೆಯಲ್ಲಿ ಸಾಹಿತ್ಯಕ ಪರಿಮಳವಿದೆ. ವಿಶೇಷವೆಂದರೆ ಸಾಹಿತ್ಯಕ್ಕೆ ತಕ್ಕಂತೆ ಕಲ್ಪಿಸಿ ಚಿತ್ರಿಸುವಂತಹ ಕೆಲವು ವಿಶಿಷ್ಟ ರೀತಿಯ ಕಲ್ಪನೆಗಳನ್ನು ಸಾಹಿತಿಗಳು ಮಾಡಿದ್ದಾರೆ. ಇದಕ್ಕೆ 'ಕವಿಸಮಯ' ಎನ್ನುವರು. ಉದಾ : ಕುಶಾನರ ಕಾಲದಲ್ಲಿ ಮೊದಲ ಬಾರಿಗೆ ಕವಿ ಸಮಯವನ್ನು ಕಾಣಬಹುದು. ಇದು ಶಿಲ್ಪಗಳಲ್ಲಿ ಬಳಕೆಯಾಗಿದೆ.ಮುಖ ಅಂಡಾಕಾರವಾಗಿರಬೇಕು, ಬಳ್ಳಿಯ ಹಾಗೆ ಬಳಕುವ ಸ್ತ್ರೀ, ಕಮಲದಂತಹ ಕಣ್ಣು ಇವೆಲ್ಲವೂ ಸಾಹಿತ್ಯಿಕ ಪರಿಮಳದಿಂದಲೇ ರೂಪಗೊಂಡಿವೆ.

ಪ್ರಕೃತಿ ಮತ್ತು ಕಲೆ :

ಭಾರತೀಯ ಕಲೆಯಲ್ಲಿ ನಿಸರ್ಗ ಸೌಂದರ್ಯ ಮಹತ್ತರವಾಗಿದೆ. ಪ್ರಕೃತಿಯಿಂದ ಆದರ್ಶ ಸೌಂದರ್ಯ ಆರಿಸಿಕೊಂಡು ಅದನ್ನು ಮನುಷ್ಯ ರೂಪದಲ್ಲಿ ಅಳವಡಿಸಲಾಗಿದೆ. ಕಲೆ ಮತ್ತು ನಿಸರ್ಗಕ್ಕೆ ಅನ್ಯೋನ್ಯ ಸಂಬಂಧವಿದೆ. ನಿಸರ್ಗ ಸೌಂದರ್ಯವನ್ನು ಮಾದರಿಯಾಗಿಟ್ಟುಕೊಂಡು ಭಾರತೀಯ ಕಲಾಕಾರ ಅದನ್ನು ಮೈಗೂಡಿಸಿಕೊಂಡಿದ್ದಾನೆ. ಈ ರೀತಿಯಾಗಿ ಕಲೆಯ ಸ್ವರೂಪವನ್ನು ಮಾರ್ಮಿಕವಾಗಿ ವಿಶ್ಲೇಷಿಸಲಾಗಿದೆ.

ಕಲೆಯ ವಿಧಗಳು :

ಭಾರತೀಯ ಕಲೆಯನ್ನು ಪ್ರಮುಖವಾಗಿ ಎರಡು ರೀತಿಯಾಗಿ ವಿಭಾಗಿಸಲಾಗಿದೆ.

೧. ಶಿಲ್ಪಕಲೆ, ೨. ವರ್ಣಚಿತ್ರಕಲೆ ಇವುಗಳನ್ನು ಒಂದೊಂದಾಗಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧.ಶಿಲ್ಪಕಲೆ :

ಭಾರತೀಯ ಶಿಲ್ಪಕಲಾ ಸಂಪತ್ತು ಅಸಮಾನ್ಯವಾದ್ದದು ಮತ್ತು ಅಸದೃಶ್ಯವಾದದ್ದು. ಶಿಲ್ಪ ತಯಾರಿಕೆಯಲ್ಲಿ ಕಂಡರಣೆಯಲ್ಲಿ ಭಾರತೀಯರು ತೋರಿರುವಷ್ಟು ಉತ್ಸಾಹ, ಕಾಳಜಿ, ಪ್ರಯತ್ನ ಪ್ರಾಯಶಃ ಪ್ರಪಂಚದ ಇನ್ನಾವುದೇ ಶಿಲ್ಪಕಲೆಯಲ್ಲಿ ಕಂಡುಬರುವುದಿಲ್ಲವೆನ್ನುವ ವಿಚಾರ ನಿಜಕ್ಕೂ ಆಶ್ಚರ್ಯಕರ. ಭಾರತೀಯರು ತಯಾರಿಸಿರುವ ಶಿಲಾ ಶಿಲ್ಪಗಳು, ಲೋಹ ಶಿಲ್ಪಗಳು ಅವುಗಳ ಸಂಖ್ಯೆಯಲ್ಲಿ ಪ್ರಪಂಚದ ಯಾವುದೇ ರಾಷ್ಟ್ರದ ಶಿಲ್ಪಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದೆ ಎಂಬುದೂ ಗಮನೀಯ ಅಂಶ. ಇಷ್ಟೊಂದು ಅಗಾಧವಾದ ಶಿಲ್ಪ ಸಂಖ್ಯೆಯನ್ನು ದೀರ್ಘವಾದ ಪರಂಪರೆಯನ್ನು ಭಾರತೀಯ ಶಿಲ್ಪಕಲೆ ಹೊಂದಿದೆ ಎಂದರೆ ಅದು ನಾವೆಲ್ಲರೂ ಹೆಮ್ಮೆ ಪಡಬೇಕಾದ ಅಂಶವೇ ಸರಿ.

ಸುದೀರ್ಘ ಇತಿಹಾಸವನ್ನು ಹೊಂದಿರುವ ಭಾರತೀಯ ಶಿಲ್ಪ ಪರಂಪರೆಯ ವಿಸ್ತೃತ ಅಧ್ಯಯನವು ಇನ್ನು ಹೆಚ್ಚಿನ ಮಟ್ಟದಲ್ಲಿ ಆಗಬೇಕಾಗಿದೆ. ಕ್ರಿ.ಶ. ೧೯-೨೦ನೇ ಶತಮಾನಗಳಲ್ಲಿ ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಶಿಲ್ಪಗಳ ಅಧ್ಯಯನವನ್ನು ಅವರದ್ದೇ ಆದ ರೀತಿಯಲ್ಲಿ ಮಾಡಿದರು. ಅವರ ಹಾದಿಯನ್ನೇ ಭಾರತೀಯರು ಅನುಸರಿಸಿದರು. ಈ ಶಿಲ್ಪಕಲೆಯ ಅಧ್ಯಯನದ ಸಾಂಪ್ರದಾಯಿಕ ರೀತಿಯ ಧಾರ್ಮಿಕ ಶಿಲ್ಪಗಳಿಗೆ ಮಾತ್ರ ಮೀಸಲಾಗಿದೆ ಎನ್ನಬಹುದು.[೫]

ಪಾಶ್ಚಾತ್ಯ ಕಲೆಯ ಅಧ್ಯಯನದಲ್ಲಿ ಇರುವಂತೆ ನಮ್ಮ ಶಿಲ್ಪ ಸಂಪತ್ತಿನ ಅಧ್ಯಯನವೂ ಸಹ ವೈವಿಧ್ಯಮಯ ದೃಷ್ಟಿಕೋನವನ್ನೇ ಹೊಂದಿರಬೇಕಾಗುತ್ತದೆ. ಮೇಲೆ ತಿಳಿಸಿದ ರೀತಿಯ ಅಧ್ಯಯನಗಳು ತೀರಾ ಸಾಂಪ್ರದಾಯಿಕವೆನಿಸಿದರೆ ಹೊಸ ರೀತಿಯ ಅಧ್ಯಯನದಿಂದ ಶಿಲ್ಪಕ್ಕೆ, ಶಿಲ್ಪಿಗೆ, ಶಿಲ್ಪ ಕಂಡರಣಾ ವಿಧಾನಕ್ಕೆ, ಶಿಲ್ಪದ ಉದ್ದೇಶಕ್ಕೆ ಮತ್ತು ಇನ್ನು ಅನೇಕತರವಾದ ವಿಷಯ ಸಂಗ್ರಹಕ್ಕೆ ಅನುಕೂಲವಾಗುತ್ತದೆ. ಕೇವಲ ಧರ್ಮ, ಜಾತಿ, ಲೌಕಿಕ, ಸಾಮಾಜಿಕ, ಚಾರಿತ್ರಿಕ, ಧಾರ್ಮಿಕ ಮುಂತಾದ ಇನ್ನು ಅನೇಕ ವಿಷಯಗಳಿಗೆ ಸಂಬಂಧಿಸಿದ ಸಾಂಕೇತಿಕ ಮತ್ತು ನಿಗೂಢ ಮಾಹಿತಿಗಳನ್ನು ಹೊಸ ರೀತಿಯ ಅಧ್ಯಯನ ವಿಧಾನಗಳಿಂದ ತಿಳಿಯಬಹುದಾಗಿದೆ. ಈ ಹೊಸ ರೀತಿಯ ಅಧ್ಯಯನದ ಕೆಲವೊಂದು ಮಾರ್ಗಗಳನ್ನು, ವಿಧಾನಗಳನ್ನು ಈ ಕೆಳಗೆ ಸೋದಾಹರಣವಾಗಿ ವಿಶ್ಲೇಷಿಸುವಲ್ಲಿ ಪ್ರಯತ್ನ ಮಾಡಲಾಗಿದೆ.

ಶಿಲ್ಪ ಕೆತ್ತನೆಯ ತಾಂತ್ರಿಕ ಅಂಶಗಳ ಅಧ್ಯಯನ :

ಯಾವುದೇ ಒಂದು ವಸ್ತುವಿನ ತಯಾರಿಕೆಯಲ್ಲಿ ಅಥವಾ ನಿರೂಪಣೆಯಲ್ಲಿ ಅದರ ತಯಾರಿಕೆಯ ಹಿಂದಿನ ತಾಂತ್ರಿಕ ಜ್ಞಾನ ಅತ್ಯಂತ ಮುಖ್ಯ. ಶಿಲ್ಪವನ್ನು ಕೆತ್ತನೆ ಮಾಡುವಾಗ ಶಿಲ್ಪದ ಸಂಪೂರ್ಣ ಗುಣಲಕ್ಷಣದ ಒಂದು ಕಲ್ಪನೆ ಶಿಲ್ಪಿಗಿರಬೇಕು. ಅದಕ್ಕಾಗಿ ಪ್ರಾರಂಭದ ಹಂತದಿಂದಲೂ ಆತನು ಮುಂದಾಲೋಚನೆಯಿಂದ ಮುನ್ನಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಎಲ್ಲರಿಗೂ ತಿಳಿದಿರುವಂತೆಯೇ ಶಿಲ್ಪ ಕೆತ್ತನೆಯ ವಿಧಾನದಲ್ಲಿ ಉಬ್ಬು ಶಿಲ್ಪ, ಪೂರ್ಣ ಶಿಲ್ಪ ವಿಧಾನಗಳು ಬಹಳ ಮುಖ್ಯವಾದವು. ಉಬ್ಬು ಶಿಲ್ಪದ ಕೆತ್ತನೆಯಲ್ಲಿ ತಾಂತ್ರಿಕ ಮುಂದಾಲೋಚನೆ ಸ್ವಲ್ಪ ಮಟ್ಟಿಗೆ ಕಡಿಮೆ. ಏಕೆಂದರೆ ಇದರಲ್ಲಿ ಮೂರನೆಯ ಆಯಾಮವಾದ ಆಳ ಅತಿ ಕಡಿಮೆ. ಇದರಿಂದಾಗಿ ಮುಂದೆ ಎದುರಾಗುವ ಎಡರುತೊಡರು ಅಲ್ಪ. ಮೂರು ಆಯಾಮದ ಶಿಲ್ಪಗಳ ಕೆತ್ತನೆಯಲ್ಲಿ ಹೆಚ್ಚು ಪ್ರಯಾಸಕರ. ಶಿಲ್ಪದ ಎತ್ತರ ಅಗಲಕ್ಕನುಗುಣವಾಗಿ ಭಾವಭಂಗಿಗೆ ಅನುಗುಣವಾಗಿ ಅದರ ಆಳವೂ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಶಿಲ್ಪಿಗೆ ಇದೆಲ್ಲದರ ಒಂದು ಪರಿಕಲ್ಪನೆ ಅತ್ಯವಶ್ಯಕ. ಇದಕ್ಕೆ ಅನುಗುಣವಾಗಿ ಆತ ಕೆತ್ತನೆಯ ಕಾಯಕ ಪ್ರಾರಂಭಿಸಬೇಕಾಗುತ್ತದೆ. ಶ್ರವಣಬೆಳಗೊಳದ ಜಗದ್ವಿಖ್ಯಾತ ಬಾಹುಬಲಿಯ ೬೦ ಅಡಿ ಎತ್ತರದ ವಿಗ್ರಹ, ಬೃಹದಾಕಾರದ ಶಿಲ್ಪ ತಯಾರಿಕೆಯಲ್ಲಿ ಭಾರತೀಯ ಶಿಲ್ಪಿಗಳಿಗಿದ್ದ ಆ ಪ್ರತಿಮೆ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.[೬]

ಕರ್ನಾಟಕದಲ್ಲಿ ಈ ಕಲೆಯು ಬಹುದೊಡ್ಡ ಪ್ರಮಾಣದಲ್ಲಿ ಮೊದಲು ಕಾಣಿಸಿಕೊಳ್ಳುವುದು ಬಾದಾಮಿ ಚಲುಕ್ಯರ ಕಾಲದಲ್ಲಿಯೇ ಚಲುಕ್ಯ ಅರಸ ಅರಸಿಯರು ಬಾದಾಮಿ ಪರಿಸರದಲ್ಲಿ ಗುಹಾಲಯ ಮತ್ತು ರಾಚನಿಕ ಮಂದಿರಗಳನ್ನು ಕಟ್ಟಿಸಿ ಅವನ್ನು ಶಿಲ್ಪಗಳಿಂದ ಅಂದಗೊಳಿಸಿದರು.[೯]

ವಾಸ್ತು ಸಂಕೀರ್ಣದಲ್ಲಿ ಶಿಲ್ಪಗಳ ಪಾತ್ರ :

ಈಗ ವಾಸ್ತು ಸಂಕೀರ್ಣದಲ್ಲಿ ಮೂರ್ತಿ ಶಿಲ್ಪಿಯ ಪಾತ್ರವೇನು ಎಂಬುದು ಇಲ್ಲಿ ತಿಳಿಯಬೇಕಾದ ಅಂಶ. ಈ ಪ್ರಕಾರದ ಅಧ್ಯಯನಕ್ಕೆ ಹೊಯ್ಸಳ ದೇಗುಲಗಳು ಒಂದು ಉತ್ತಮ ಭೂಮಿಕೆಯನ್ನು ಒದಗಿಸುತ್ತದೆ ಎನಿಸುತ್ತದೆ. ನಾವು ಅನೇಕ ರೀತಿಯ ಹೊಯ್ಸಳ ದೇವಾಲಯಗಳಲ್ಲಿ ಎತ್ತರವಾದ, ಮಧ್ಯಮವಾರು ಕುಳ್ಳಾದ ದೇವಾಲಯಗಳು ನಿರ್ಮಾಣಗೊಂಡಿದ್ದನ್ನು ಕಾಣುತ್ತೇವೆ. ಮಲ್ಲಿತಮ್ಮ ಎಂಬ ಶಿಲ್ಪಿಯು ಈ ಮೂರು ಪ್ರಮಾಣದ ದೇವಾಲಯಗಳಲ್ಲಿ ಶಿಲ್ಪ ಕೆತ್ತನೆ ಕಾರ್ಯಗಳಲ್ಲಿ ತೊಡಗಿದ್ದನೆಂದು ತಿಳಿಯಲಾಗಿದೆ.

ಅದರಂತೆ ಬಾದಾಮಿ ಚಲುಕ್ಯರ ಕಾಲದಲ್ಲಿ ಆರ್ಯ ಮುಂಚಿ, ಕೊಳಿಮಂಚಿ, ಸಿಂಗಮಂಚಿ ಇತ್ಯಾದಿ ಶಿಲ್ಪಗಳು ಬೃಹತ್ ಮತ್ತು ಮಧ್ಯಮ ಗಾತ್ರದ ಶಿಲ್ಪಗಳನ್ನೇ ಕೆತ್ತನೆಮಾಡಿದ್ದಾರೆಂದು ತಿಳಿಯಬಹುದು.[೧೦]

ಒಟ್ಟಿನಲ್ಲಿ ವಾಸ್ತು ಸಂಕೀರ್ಣದ ನಿರ್ಬಂಧನೆಯಿಂದಾಗಿ ಕೆಲವು ಎತ್ತರವೂ, ಕೆಲವು ಕುಳ್ಳಾಗಿಯೂ ಇನ್ನುಳಿದವು ಪರಿಮಾಣಬದ್ಧವಾಗಿ ಕೆತ್ತನೆಗೊಂಡಿವೆ.

ಇನ್ನು ಮುಂದುವರೆದು ಶಿಲ್ಪಕಲೆಯನ್ನು ವಿವರಿಸುವಲ್ಲಿ ಶಿಲ್ಪ ಪ್ರದರ್ಶನ ವಿಧಾನ ಮತ್ತು ನೆರಳು ಬೆಳಕಿನ ಪ್ರಭಾವ ಭಿತ್ತಿ ಶಿಲ್ಪಗಳ ಉದ್ದೇಶ ಮತ್ತು ಶಿಲ್ಪನಿರೂಪಣೆಯ ತಂತ್ರಜ್ಞಾನದ ಕುರಿತು ಸ್ಪಷ್ಟ ವಿಶ್ಲೇಷಣಾತ್ಮಕ ವಿವರಣೆಯು ರಮೇಶ ನಾಯಕರವರು ಸಂಪಾದಿಸಿದ ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ ಗ್ರಂಥದಲ್ಲಿ ಕಂಡುಬರುತ್ತದೆ.

ವರ್ಣಚಿತ್ರಕಲೆ :

ಭಾರತೀಯ ಕಲಾ ಇತಿಹಾಸದಲ್ಲಿ ಕರ್ನಾಟಕವು ತನ್ನದೇ ಆದ ಒಂದು ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಕರ್ನಾಟಕದ ಸಂಸ್ಕೃತಿಕ ಪರಂಪರೆಯು ಪ್ರಾಚೀನ ಕಾಲದಿಂದಲೂ ಹೊಸತನವನ್ನು ರೂಢಿಸಿಕೊಂಡು ಬೆಳವಣಿಗೆ ಹೊಂದಿದೆ. ಈ ನಾಡಿನ ಚಿತ್ರಕಲೆಯು ಪ್ರಾದೇಶಿಕ ಕಾಲದ ಕಲೆಯಿಂದ ಹಿಡಿದು, ಇತ್ತೀಚಿನ ನವ್ಯ ಕಾಲದ ಕಲಾ ಚಟುವಟಿಕೆಗಳವರೆಗೂ ಹಲವಾರು ಹೊಸತುಗಳನ್ನು ಮೈಗೂಡಿಸಿಕೊಂಡು ಬೆಳವಣಿಗೆ ಹೊಂದಿರುವುದನ್ನು ಆಯಾ ಕಾಲ ಘಟ್ಟಗಳ ಕಲಾ ಚಟುವಟಿಕೆಗಳಿಂದ ತಿಳಿಯಬಹುದಾಗಿದೆ. ಕರ್ನಾಟಕದ ಕಲೆಯು ಭಾರತದ ಇತರ ಭಾಗಗಳ

ಕಲೆಯ ತರದಲ್ಲಿಯೇ ಅದರ ಅವಿಭಾಜ್ಯ ಅಂಗವಾಗಿ ವಿಭಿನ್ನ ಹಂತಗಳನ್ನು ಹೊಂದಿದೆ. ಇಲ್ಲಿಯೂ ಕೂಡಾ ಗವಿಚಿತ್ರಗಳು, ಬಂಡೆಗಲ್ಲುಗಳ ಮೇಲೆ ಕಂಡರಿಸಿ ಕೊರೆದು ಮಾಡಿದ ರೇಖಾಚಿತ್ರಗಳು ಕಂಡುಬರುತ್ತವೆ ಮತ್ತು ಬೃಹತ್ ಶಿಲಾಯುಗದಲ್ಲಿ ಕಂಡುಬರುವ ಮೃತಪಾತ್ರೆಗಳ ಮೇಲಿನ ವರ್ಣ ರೇಖಾ ಚಿತ್ರಗಳು ಕಂಡುಬರುತ್ತವೆ. ಅದರಂತೆ ಇತಿಹಾಸ ಕಾಲದಲ್ಲಿ ಚಿತ್ರಕಲೆಗೆ ಪೂರಕವಾದ ಚಟುವಟಿಕೆಗಳು ನಡೆದಿರುವುದೂ ಕಂಡು ಬರುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವರ್ಣಚಿತ್ರ ಕಲಾ ಪರಂಪರೆಯನ್ನು ವಿವರವಾದ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಕಲೆಯನ್ನು ಕುರಿತು ಸಿ. ಶಿವರಾಮಮೂರ್ತಿ, ಸ್ಟೆಲ್ಲಾಕ್ರೆಮಿಶ್, ಶಿವರಾಮಕಾರಂತ, ಅ. ಸುಂದರ, ಅ. ಲ. ನರಸಿಂಹನ್ ಮುಂತಾದವರು ಅಧ್ಯಯನ ಮಾಡಿದ್ದಾರೆ.[೧೧]

ಮಾನವನು ತನ್ನ ಭಾವನೆಗಳನ್ನು ಅಭಿವ್ಯಕ್ತಪಡಿಸಲು ಆಶ್ರಯಿಸಿದ ಕಲಾ ಪ್ರಕಾರಗಳಲ್ಲಿ ಚಿತ್ರಕಲೆಯೂ ಒಂದು. ತಾನು ಕಂಡುಂಡ ಅನುಭವಗಳ ಅಭಿವ್ಯಕ್ತಿಯಾದ ಯಾವೊಂದು ಕಲೆಯೂ ಇದ್ದಕ್ಕಿದಂತೆ ಶಿಷ್ಟರೂಪದಲ್ಲಿ ಪ್ರಕಟವಾಗಲಾರದು. ಜನಪದರ ಕಲೆಗಳೇ ಸಂಸ್ಕಾರಗೊಳ್ಳುತ್ತ ಶಿಷ್ಟರೂಪಪಡೆಯುತ್ತವೆ. ಶಿಲಾಯುಗದ ಮಾನವನಿಗೆ ತಾನು ಭೇಟಿಯಾಡಿದ ಪ್ರಾಣಿಗಳು, ಬಳಸಿದ ಬಾಣದಂತಹ ಉಪಕರಣಗಳು ಚಿತ್ರಗಳಿಗೆ ವಸ್ತುಗಳಾಗಿವೆ. ಆತನ ಮನೋವಿಲಾಸವನ್ನು ಮತ್ತು ಜೀವನ ರೀತಿಯನ್ನು ಅರ್ಥೈಸುವಲ್ಲಿ ಈ ಚಿತ್ರಗಳು ನೆರವಾಗುತ್ತವೆ.

ಸ್ಪೇನ್ ದೇಶದ ಅಲ್ತಮೀರದಲ್ಲಿ ಆದಿಮಾನವರ ಚಿತ್ರಗಳ ಶೋಧನೆ (೧೮೭೯) ಯಾದದ್ದು ಒಂದು ಮಹತ್ವದ ಘಟನೆ. ಅದು ಭಾರತದಲ್ಲಿ ಚಿತ್ರಶೋಧನೆಗಳಿಗೆ ದಾರಿ ಮಾಡಿಕೊಟ್ಟಿತು. ಸಾವಿರಾರು ಗವಿವರ್ಣಚಿತ್ರಗಳು ಶೋಧಗೊಂಡವು. ಬಹುಶಃ ಇಂತಹ ಚಿತ್ರಗಳ ಸಂಖ್ಯಾದೃಷ್ಟಿಯಿಂದ ಪ್ರಪಂಚದಲ್ಲಿ ಈಗ ಭಾರತವೇ ಅಗ್ರಸ್ಥಾನದಲ್ಲಿದೆ.

ಮಧ್ಯಪ್ರದೇಶದ ಭೀಂಬೆಟ್ಕ ಚಿತ್ರಗಳನ್ನು ಶೋಧಿಸಿದ ವಿಷ್ಣು ಎಸ್. ವಾಕರಣಕರ ಅವರು ಬಾದಾಮಿಯಲ್ಲಿ ಸೀತೆಯ ದೋಣಿಯ ಚಿತ್ರಗಳನ್ನು ಕಂಡುಹಿಡಿದರು. ಬಾದಾಮಿಯ ಉತ್ತರಕ್ಕೆ ಸುಮಾರು ೫ ಕಿ.ಮೀ. ದೂರದಲ್ಲಿರುವ ಸಿಡಲಫಡಿ ವರ್ಣಚಿತ್ರಗಳನ್ನು ಟಿ. ಎನ್. ಪದ್ಮನಾಭನ್ ಶೋಧಿಸಿದರು. ಚಪಘರ ಎಂಬುವರು ಇಲ್ಲಿಯ ಇನ್ನೂ ಕೆಲವು ಚಿತ್ರಗಳನ್ನು ಬೆಳಕಿಗೆ ತಂದಿದ್ದಾರೆ. ಅ. ಸುಂದರ ಅವರು ಮಾಲೆಗಿತ್ತ ಶಿವಾಲಯದ ಉತ್ತರಕ್ಕಿರುವ ಕಲ್ಬೆಟ್ಟ ಮತ್ತು ತಟ್ಟುಕೋಟೆಯ ಚಿತ್ರಗಳನ್ನು ಅನ್ವೇಷಿಸಿದರೆ ಎರ್ವಿನ್ ನ್ಯೂಮೋಯರ ಅವರು ರಂಗನಾಥ ಗುಡ್ಡದ ಮಹತ್ವದ ಚಿತ್ರಗಳನ್ನು ಕಂಡುಹಿಡಿದಿದ್ದಾರೆ.

ಹೀಗೆ ವರ್ಣಚಿತ್ರ ಕಲೆಯು ಪ್ರಾಗೈತಿಹಾಸಿಕ ಕಾಲದಲ್ಲಿಯೂ ಮತ್ತು ಇತಿಹಾಸ ಕಾಲದಲ್ಲಿಯೂ ಬೆಳೆದು ಬಂದಿದೆ ಎಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಬಾದಾಮಿಯ ಸುತ್ತಲಿನ ಪರಿಸರದಲ್ಲಿ ಅಂದರೆ

ಹುಲಿಗೆಮ್ಮ ಕೊಳ್ಳ, ಬಾಚಿನಗುಡ್ಡ, ಅಯ್ಯನಪಡೆ, ಪಟ್ಟದಕಲ್ಲು, ಐಹೊಳೆ, ಮಹಾಕೂಟ, ಬಾದಾಮಿಯ ಗುಹಾಲಯಗಳಲ್ಲಿ ಈ ವರ್ಣಚಿತ್ರಕಲೆಯು ವಿವಿಧ ಪ್ರಾಣಿ, ಪಕ್ಷಿ, ಹೂಬಳ್ಳಿ ಮತ್ತು ದೇವಾನುದೇವತೆಗಳ ಚಿತ್ರಗಳಲ್ಲಿ ಮೂಡಿಬಂದಿದೆ.[೧೨]

ವಾಸ್ತುಶಿಲ್ಪದ ಉಗಮ ಮತ್ತು ಬೆಳೆದುಬಂದ ರೀತಿ :

ಉಗಮ :

ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆ ನಿಲ್ಲಬೇಕೆಂದೂ ಒಂದು ಸುರಕ್ಷಿತ ವಸತಿಯಲ್ಲಿ ವಾಸಿಸಬೇಕೆಂದು, ಎಂದೂ ಪ್ರಯತ್ನಿಸಿದನೋ ಆಗಲೇ ತನ್ನ ಬದುಕಿಗಾಗಿ ಮನೆಯನ್ನು ಕಟ್ಟಲು ಪ್ರಾರಂಭಿಸಿದ. ಸುತ್ತಲೂ ಗೋಡೆ, ಅದರ ಮೇಲೆ ವಿವಿಧ ಆಕಾರದ ಹೊದಿಕೆ ಪ್ರವೇಶಕ್ಕಾಗಿ ಬಾಗಿಲು-ಗಾಳಿ ಬೆಳಕಿಗಾಗಿ ಗವಾಕ್ಷಿ ಅಳವಡಿಕೆ ಹೀಗೆ ಅವನ ವಸತಿ ಗ್ರಹ ರಚನೆಗೊಂಡಿತು. ಇದು ವಾಸ್ತು ಶಿಲ್ಪದ ಪ್ರಾಥಮಿಕ ಹಂತ.[೧೩]

ಈ ವಾಸ್ತು ಕಲೆಯು ಒಂದು ಪ್ರದೇಶಕ್ಕೆ ಸೀಮಿತಗೊಂಡಿದ್ದು ಆ ವಾಸ್ತು ನಿರ್ಮಾಣಕ್ಕೆ ಕಾರಣವಾದ ಜನತೆಯ ಮನೋಧರ್ಮಗಳನ್ನು ಮನೋವಿಲಾಸಗಳನ್ನು ಪ್ರತಿಬಿಂಬಿಸುತ್ತದೆ. ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಯಲ್ಲಿ ವಾಸ್ತು ನಿರ್ಮಿತಿಯು ಮೈದಳೆಯುತ್ತದ್ದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ವಾಸ್ತು ಕಲೆಯು ಮಹತ್ವದ ಪಾತ್ರವಹಿಸುತ್ತದೆ. ಆಯಾ ಭೌಗೋಳಿಕ ಸನ್ನಿವೇಶ, ಸಾಮಾಜಿಕ ಅವಶ್ಯಕತೆ, ರಾಜಕೀಯ ಬದಲಾವಣೆಗಳು ಮತ್ತು ಅರಸ ಅರಸಿಯರ ಧಾರ್ಮಿಕ ನಂಬುಗೆಗಳು ಭಾರತೀಯ ವಾಸ್ತುಶಿಲ್ಪಕಲೆಗೆ ವೈವಿಧ್ಯತೆಯನ್ನು ತಂದಿವೆ.[೧೪]

ಸುತ್ತಲಿರುವ ಪ್ರಕೃತಿಯು ತನ್ನ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸಿರುವುದನ್ನು ಗುರುತಿಸಿದಾಗ ಮಾನವನಿಗೆ ಅದರ ಬಗ್ಗೆ ಗೌರವ, ಭಯ, ಭಕ್ತಿಗಳು ಮೂಡಿದವು. ಈ ದೃಷ್ಟಿಯಿಂದ ಪ್ರಕೃತಿಯ ಎಲ್ಲ ವಸ್ತುಗಳೂ ಅವನಿಗೆ ಪೂಜಾರ್ಹವಾದವು. ಈ ಕಾರಣದಿಂದಲೇ ಗಿಡ, ಮರ, ನದಿ ಇತ್ಯಾದಿಗಳು ಅವನಿಗೆ ಪೂಜನೀಯವಾದುವುದಲ್ಲದೇ ಪೂಜ್ಯ ಸ್ಥಾನಗಳೂ ಆದವು. ಇನ್ನೂ ಮುಂದುವರೆದು ಎಲ್ಲ ಸೃಷ್ಟಿಯ ಹಿನ್ನೆಲೆಯಾಗಿ ನಿಂತು ತನ್ನನ್ನು ನಡೆಸುತ್ತಿರುವ ಯಾವುದೋ ಒಂದು ಅನಂತ ಶಕ್ತಿ ಇದೆ ಎಂಬ ಅರಿವು ಉಂಟಾದಾಗ, ಆ ಶಕ್ತಿಗೆ ಒಂದು ರೂಪ ಕೊಡಲು ಯತ್ನಿಸಿದ. ಹೀಗೆ ನೀಡಿದ ಆ ಒಂದು ರೂಪಕ್ಕೆ ಅಥವಾ ಸಂಕೇತಕ್ಕೆ ರಕ್ಷಣಾರ್ಥವಾಗಿ ಪ್ರತ್ಯೇಕ ಆಲಯವನ್ನು ಕಟ್ಟಲು ಆರಂಭಿಸಿದ. ಇದು ದೇವಾಲಯಗಳ ಉಗಮ ಮತ್ತು ವಾಸ್ತು ಶಿಲ್ಪದ ರಚನೆಗೆ ನಾಂದಿಯಾಯಿತು.

ತನಗಾಗಿ ಕಟ್ಟಿಕೊಂಡ ಮನೆ ''ಗೃಹ ವಾಸ್ತು ಶಿಲ್ಪ'' ಎನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು 'ಧಾರ್ಮಿಕ ವಾಸ್ತುಶಿಲ್ಪ' ಎನಿಸಿತು. ಅಲ್ಲದೇ, ಗೃಹವಾಸ್ತುವಿನ ರಚನೆಯು ದೇವಾಲಯ ವಾಸ್ತು ಶಿಲ್ಪ ರಚನೆಯ ಮೇಲೆ ಪ್ರಭಾವ ಬೀರುತ್ತಾ ಹೋಯಿತು.[೧೫]

ಇನ್ನು ಮುಂದುವರೆದು ದೇವಾಲಯಗಳ ಉಗಮದ ಕುರಿತು ''ಬಾದಾಮಿ ಚಲುಕ್ಯರ'' ಎಂಬ ಲೇಖನ ಸಂಪುಟದಲ್ಲಿಯೂ ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದು ಕಾಣಸಿಗುತ್ತದೆ. ಇಲ್ಲಿ ಹೇಳಿರುವಂತೆ ಕ್ರಿ.ಶ.ಕಕ್ಕೆ ಮುನ್ನ ದೇಗುಲಗಳು ರಚನೆಗೊಂಡವು ಎಂದು ಹೇಳಲು ಸಾಧ್ಯವಿದ್ದರೂ ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಹರಪ್ಪ-ಮಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವಜನಿಕ ಕಟ್ಟಡಗಳನ್ನು ಗುರುತಿಸಬಹುದೇ ಹೊರತು ದೇವಾಲಯಗಳೆನ್ನಬಹುದಾದ ರಚನೆಗಳು ಕಾಣಸಿಗುವುದಿಲ್ಲ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಬಿ.ಸಿ. ೨ನೇ ಶತಮಾನದಲ್ಲಿ ಹೆಲಿಯೋಡೊರಸ್ ಸ್ಥಾಪಿಸಿದ ಗರುಡಸ್ತಂಭದ ಉಲ್ಲೇಖ ವಾಸುದೇವನ ದೇವಾಲಯಕ್ಕೆ ಸಂಬಂಧಿಸಿದ್ದು, ಇದು ದೇವಾಲಯಗಳಿಗೆ ಸಂಬಂಧಿಸಿದ ಅತೀ ಪ್ರಾಚೀನ ಉಲ್ಲೇಖವೆನಿಸಿದೆ. ಕ್ರಿ.ಶ. ೧ನೇ ಶತಮಾನದಲ್ಲಿ ರಾಜಸ್ಥಾನದ ಗೌಸುಂದಿಯಲ್ಲಿ ನಾರಾಯಣನಿಗಾಗಿ ಕಟ್ಟಲ್ಪಟ್ಟ 'ನಾರಾಯಣ ವಾಟಕ'ದ ಸ್ಪಷ್ಟ ಉಲ್ಲೇಖವಿದೆ. ಕಟ್ಟಡಗಳೊಂದಿಗೆ ಗುರುತಿಸಲ್ಪಡುವ ಅತಿಪ್ರಾಚೀನ ದೇವಾಲಯ ಲೆಗುವಾದಲ್ಲಿಯ ವಿಷ್ಣುದೇವಾಲಯ. ಇದರೊಂದಿಗೆ ಸಾಂಚಿಯ ೧೭ನೇ ದೇವಾಲಯವನ್ನು ವಿದ್ವಾಂಸರು ೫ನೇ ಶತಮಾನಕ್ಕೆ ಸೇರಿದ್ದೆಂದು ಪರಿಗಣಿಸಿದ್ದಾರೆ. ಈ ದೇವಾಲಯಗಳಲ್ಲಿ ಚತುಶ್ರಾಕಾರದ ಗರ್ಭಗೃಹವಿದ್ದು, ಮುಂದುಗಡೆ ಸ್ತಂಭಗಳನ್ನಾಧರಿಸಿದ ಮುಖಮಂಟಪವಿದೆ. ಇವೆರಡೂ ಸ್ವತಂತ್ರ ದೇವಾಲಯಗಳ ಮೂಲಸ್ವರೂಪವೆನಿಸಿವೆ. ಈ ರಚನೆಗಳ ಛಾವಣಿ ಸಮತಟ್ಟಾಗಿದ್ದು ನೀರು ಹರಿದುಹೋಗಲು ಅವಕಾಶವಿದೆ.[೧೬]

ಕರ್ನಾಟಕದಲ್ಲಿ ಕ್ರಿ.ಶ. ಆರಂಭದಲ್ಲಿ ಕಟ್ಟಿದ ದೇವಾಲಯಗಳು ಉಳಿದಿಲ್ಲವಾದರೂ ಕ್ರಿ.ಶ. ೧೫೦ರ ಕದಂಬರ ಪ್ರಾಕೃತ ಶಾಸನವು ದೇವಾಲಯಗಳು ರಚನೆಗೊಂಡಿದ್ದನ್ನು ದೃಢಪಡಿಸುತ್ತದೆ. ಕರ್ನಾಟಕದ ಪ್ರಾಚೀನ ದೇವಾಲಯವೆನಿಸಿದ ಕ್ರಿ.ಶ. ೪೫೦ರ ತಾಳಗುಂದದ ದೇವಾಲಯವಾಗಿದೆ. ಇದು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿರುವುದರಿಂದ ದೇವಾಲಯವಿತ್ತೆಂಬ ದಾಖಲೆಯಾಗಿ ಮಾತ್ರ ಗುರುತಿಸಲ್ಪಡುತ್ತದೆ. ಆದ್ದರಿಂದ ದೇವಾಲಯಗಳ (ವಾಸ್ತುಶಿಲ್ಪ) ಉಗಮವನ್ನು ಗುರುತಿಸುವಾಗ ಬಾದಾಮಿ ಚಲುಕ್ಯರ ಆಳ್ವಿಕೆಗೆ ಒಳಪಟ್ಟ ಐಹೊಳೆ, ಬಾದಾಮಿ, ಪಟ್ಟದಕಲ್ಲು ದೇಗುಲಗಳ ಮೊರೆ ಹೋಗಬೇಕು. ಹೀಗಾಗಿ ಬಾದಾಮಿ ಪರಿಸರದ ಸುತ್ತಲಿನ ತಾಣಗಳನ್ನು ದೇವಾಲಯದ ತೊಟ್ಟಿಲು ಎಂದು ವಿದ್ವಾಂಸರು ಕರೆದಿದ್ದಾರೆ.

ಹೀಗೆ ವಾಸ್ತುಶಿಲ್ಪದ ಪರಿಕಲ್ಪನೆಯು ಈ ದೇವಾಲಯಗಳ ಮೂಲಕ ಕಾಣಿಸಿದ್ದು ಇವುಗಳ ನಿರ್ಮಾಣವು ಇಡೀ ಸಮಾಜದ ಧಾರ್ಮಿಕ ಶ್ರದ್ಧೆಯ ಮತ್ತು ಭಕ್ತಿಯ ಪ್ರತೀಕವೆನಿಸಿತು. ಆಯಾಯಾ ಧಾರ್ಮಿಕ ಮತಗಳಿಗೆ ಅನುಗುಣವಾಗಿ ಈ ಪೂಜಾ ಸ್ಥಾನಗಳು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟವು. ಅಂದರೆ ಹಿಂದುಗಳು ದೇವಾಲಯ ಎಂದು ಕರೆದರೆ, ಜೈನರು ಬಸದಿ ಎಂದೂ ಮತ್ತು ಬೌದ್ಧರು ಚೈತ್ಯವೆಂದೂ ಕರೆದರು. ಈ ರೀತಿಯಾಗಿ ವಾಸ್ತು ಕಲೆಯು ಉಗಮ ತಾಳಿ ದೇಗುಲಗಳ ಮೂಲಕ ಬೆಳೆದು ಬಂದಿತು.[೧೮]

ಈ ವಾಸ್ತು ಶಿಲ್ಪಕಲೆಯ ಅಧ್ಯಯನಕ್ಕೆ ನೆರವಾಗುವ ಮುಖ್ಯಸಾಮಗ್ರಿಗಳೆಂದರೆ ಆಯಾ ಪ್ರದೇಶದ ಗುಹಾ ದೇಗುಲಗಳು ರಾಚನಿಕ ನಿರ್ಮಿತಗಳು ಮತ್ತು ಕೋಟೆ ಕೊತ್ತಲಗಳು[೧೯]

ವಾಸ್ತು ಶಿಲ್ಪ ಮಾದರಿ :

ಭಾರತೀಯ ವಾಸ್ತು ಶಿಲ್ಪ/ಕಲೆಯನ್ನು ಪ್ರಮುಖವಾಗಿ ೨ ರೀತಿಯಲ್ಲಿ ವಿಂಗಡಿಸಲಾಗಿದೆ.

೧. ಧಾರ್ಮಿಕ ವಾಸ್ತು ಮಾದರಿ, ೨. ಲೌಕಿಕ ವಾಸ್ತು ಮಾದರಿ ಇವುಗಳ ಕುರಿತು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ಧಾರ್ಮಿಕ ವಾಸ್ತು ಮಾದರಿ : ಈ ಪ್ರಕಾರದ ವಾಸ್ತುಕಲೆಯು ಮುಖ್ಯವಾಗಿ ದೇವಾಲಯಗಳಿಗೆ ಸಂಬಂಧಿಸಿದ್ದಾಗಿದೆ. ಹೀಗಿರಲು ಧಾರ್ಮಿಕ ವಾಸ್ತು ಕಲೆಯನ್ನು ಎರಡು ಭಾಗಗಳಲ್ಲಿ ವಿಂಗಡಿಸಿ ವಿದ್ವಾಂಸರು ಅಧ್ಯಯನ ಕೈಗೊಂಡಿದ್ದಾರೆ. ಗುಹಾಲಯಗಳು, ರಾಚನಿಕ ದೇಗುಲಗಳು.

ಗುಹಾಲಯಗಳು : ದಕ್ಷಿಣ ಭಾರತದಲ್ಲಿ ಮೊದಲಬಾರಿಗೆ ಗುಹಾ ನಿರ್ಮಿತಿಯು ಬಾದಾಮಿ ಚಲುಕ್ಯರಿಂದ ಆರಂಭಗೊಂಡಿದೆ.[೨೦] ಬೃಹತ ಬಂಡೆಯನ್ನು ಕೊರೆದು ನಿರ್ಮಿಸಲಾದ ವಾಸ್ತು ರಚನೆಯೇ ಗುಹಾಲಯಗಳಾಗಿವೆ. ಗುಹಾಲಯಗಳು ದೇವ ಮಂದಿರಗಳಾಗಿದ್ದರಿಂದ ಗುಹಾ ದೇಗುಲಗಳೆಂದು ಕರೆಯುವುದು ವಾಡಿಕೆ.

ರಚನೆಯ ಸ್ವರೂಪ : ಬೃಹತ್ ಬಂಡೆಯಲ್ಲಿನ ಬೇಡವಾದ ಭಾಗವನ್ನು ಕೊರೆದುತೆಗೆದು ಬೇಕೆನಿಸಿದ ಭಾಗಗಳನ್ನು ಉಳಿಸಿಕೊಂಡು ಈ ಗುಹಾಲಯಗಳನ್ನು ಸೃಷ್ಟಿಸಲಾಗುತ್ತದೆ. ಇದು ವ್ಯವಕಲನ ಕ್ರಿಯೆಯಾಗಿದೆ. ಇಂತಹ ಗುಹಾಲಯಗಳ ನಿರ್ಮಾಣ ಕಾರ್ಯವು ಬಂಡೆಯ ಮೇಲ್ಗಡೆಯಿಂದ ಕೊರೆಯುತ್ತ ಭೂಮುಖವಾಗಿ ಇಳಿಯುತ್ತಾ ಅಧಿಷ್ಠಾನದ ಮೊದಲ ಹಂತದವರೆಗೆ ಸಾಗುತ್ತದೆ.

ಮೊದಲು ಗುಹೆಯ ಛತ್ತನ್ನು ನಿರ್ಮಿಸಿ ನಂತರ ಬೃಹತ್ ಕಂಬಗಳನ್ನು ಕೊರೆದು ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ನಿರ್ಮಿಸಲಾಗುತ್ತದೆ. ಇಲ್ಲಿ ಶಿಲ್ಪಿಯು ಅತಿ ಸೂಕ್ಷ್ಮವಾದ ಕೆತ್ತನೆಯ ಕಾರ್ಯ ನಿರ್ವಹಿಸುನು. ಗುಹೆಯ ಒಳ ಉಬ್ಬುಶಿಲ್ಪಗಳನ್ನು ಅತಿ ಸೂಕ್ಷ್ಮತೆಯ ಕೌಶಲ್ಯ ಪೂರ್ಣವಾಗಿ ಕೆತ್ತನೆ ಮಾಡುವನು. ಈ ಗುಹಾಲಯಗಳಿಗೆ ಹೊರಭಾಗದ ಭಿತ್ತಿ ಇರದೆ ಗುಹೆಯ ರೂಪದಲ್ಲಿರುವುದರಿಂದ ಇವುಗಳಿಗೆ ಗುಹಾಲಯಗಳೆಂದು ಕರೆದಿದ್ದಾರೆ. ಗುಹಾಲಯಗಳ ಮೇಲ್ಛಾವಣಿ ಸಮತಟ್ಟಾಗಿರುತ್ತದೆ. ಹೊರಭಾಗವು ಬೃಹತ್ ಬೆಟ್ಟದಲ್ಲಿ ಕಾಣುತ್ತದೆ. ಉದಾ : ಭಾರತದಲ್ಲಿ ಮೊದಲ ಬಾರಿಗೆ ಗುಹಾಲಯಗಳನ್ನು ಸೃಷ್ಟಿಸಿದ ಕೀರ್ತಿ ಆಜೀವಕರಿಗೆ ಮತ್ತು ಬೌದ್ಧರಿಗೆ ಸಲ್ಲುತ್ತದೆ. ಕಾಲಕ್ರಮೇಣ ಜೈನರೂ, ಹಿಂದೂಗಳೂ ಈ ಕಲೆಯನ್ನು ರೂಢಿಸಿಕೊಂಡರು. ಆದರೆ

ಇದಕ್ಕಿಂತ ಮೊದಲು ಶಿಲೆಯಲ್ಲಿ ಆಲಯವನ್ನು ಕೊರೆದವರು ಈಜಿಪ್ತಿಯನ್ನರೇ ಮೊದಲಿಗರು.[೨೧] ಭಾರತದಲ್ಲಿ ಪ್ರಾಚೀನತಮವಾಗಿ ಆಳ್ವಿಕೆ ನಡೆಸಿದ ಪಲ್ಲವರು ನಿರ್ಮಿಸಿದ ಗುಹಾಲಯಗಳು ಮತ್ತು ರಾಷ್ಟ್ರಕೂಟರ ಕಾಲದ ಎಲ್ಲೋರ, ಅಜಂತಾ ಗುಹೆಗಳು ಮತ್ತು ಬಾದಾಮಿ ಚಾಲುಕ್ಯರ ಕಾಲದ ನಾಲ್ಕು ಗುಹಾಲಯಗಳು ಜೀವಂತ ಸಾಕ್ಷಿಗಳಾಗಿವೆ.

ಈ ಗುಹಾಲಯಕ್ಕೆ ಸಂಬಂಧಿಸಿದಂತೆ ಹುಲಿಗೆಮ್ಮನಕೊಳ್ಳದ ಪರಿಸರದಲ್ಲಿ ನೈಸರ್ಗಿಕ ಬೃಹತ್ ಆಕಾರದ ಗುಹೆ ಇದ್ದು ಇದರ ಒಳಭಿತ್ತಿಯಲ್ಲಿ ಉಬ್ಬುಶಿಲ್ಪಗಳು ಮತ್ತು ಪ್ರತ್ಯೇಕ ಚಿಕ್ಕದಾದ ಭೂತಮಾತಾ ದೇಗುಲ, ಹುಲಿಗೆಮ್ಮ ದೇಗುಲಗಳನ್ನು ನಿರ್ಮಿಸಿದ್ದು ವಿಶೇಷವಾಗಿ ಕಾಣಸಿಗುತ್ತದೆ. ಇದಕ್ಕೆ ಒಟ್ಟಾಗಿ ಗುಹಾದೇಗುಲ ಎಂದು ಕರೆಯಬಹುದು. ಈ ರೀತಿಯಾಗಿ ಭಾರತದ ವಾಸ್ತು ಕಲೆಯು ಗುಹಾಲಯಗಳ ಮೂಲಕವು ಬೆಳೆದು ಬಂದಿದೆ.

ರಾಚನಿಕ ದೇಗುಲಗಳು :

ರಾಚನಿಕ ದೇಗುಲಗಳು ಭಾರತೀಯ ವಾಸ್ತು ಪರಂಪರೆಯಲ್ಲಿ ವಿಶಿಷ್ಟ ಪಾತ್ರವಹಿಸುತ್ತವೆ. ಕಟ್ಟಡ ಮಾದರಿಯ ದೇಗುಲಗಳೇ ರಾಚನಿಕ ದೇಗುಲಗಳಾಗಿವೆ. ಅಂದರೆ ಒಂದು ನಿರ್ದಿಷ್ಟ ಭೂಪ್ರದೇಶವನ್ನು ಇಟ್ಟಿಗೆ, ಗಾರೆ ಮತ್ತು ಕಲ್ಲಿನ ಮೂಲಕ ನಾಲ್ಕು ಪಾರ್ಶ್ವಗಳಿಂದ ಬಂಧಿಸುವುದೇ ರಾಚನಿಕ ದೇಗುಲವಾಗಿದೆ.

ರಚನೆ ಮತ್ತು ಸ್ವರೂಪ :

ಈ ದೇಗುಲಗಳ ನಿರ್ಮಾಣ ಕಾರ್ಯವು ತಳಪಾಯದಿಂದ ಆರಂಭವಾಗಿ ಶಿಖರದಂಚಿನವರೆಗೆ ಸಾಗುತ್ತಾ ಹೋಗುತ್ತದೆ. ಶಿಲ್ಪಿಯು ದೇಗುಲವನ್ನು ನಿರ್ಮಿಸುವಾಗ ಆಯಾ ಕಟ್ಟಡಕ್ಕೆ ಸರಿಹೊಂದುವಂತೆ ಮತ್ತು ಬೇಕಾದ ಭಾಗವನ್ನೇ ತಂದು ಜೋಡಿಸುತ್ತಾನೆ. ಇದು ಸಂಕಲನ ಕ್ರಿಯೆಯಾಗಿದ್ದು ಅತಿ ಸರಳ ರೀತಿಯದ್ದಾಗಿದೆ. ಈ ದೇಗುಲಗಳ ಹೊರಭಾಗವು ಸುಂದರ ಕಲಾಕೃತಿಯಿಂದ ಕೂಡಿರುತ್ತದೆ. ರಾಚನಿಕ ದೇಗುಲಗಳು ಪ್ರಮುಖವಾಗಿ ಔತ್ತರೇಯ ಮತ್ತು ದಾಕ್ಷಿಣಾತ್ಯ ಶೈಲಿಯಲ್ಲಿ ಕಂಡುಬರುತ್ತದೆ. ಈ ದೇಗುಲಗಳಲ್ಲಿ ಮುಖ್ಯವಾಗಿ ಅದಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ ಎಂಬು ಇನ್ನು ಅನೇಕ ಬಾಗಗಳಿಂದ ಉರ್ದ್ವಮುಖ ವಿನ್ಯಾಸ ಕಂಡುಬರುತ್ತದೆ. ತಲ ವಿನ್ಯಾಸದಲ್ಲಿಯೂ ಗರ್ಭಗೃಹ ಅಂತರಾಳ, ಸಭಾಮಂಟಪ, ಮುಖಮಂಟಪಗಳಿರುವುದು ಸರ್ವೇಸಾಮಾನ್ಯ.[೨೧]

ಉದಾ : ಪ್ರಾಚೀನ ಭಾರತದಲ್ಲಿ ನಿರ್ಮಾಣಗೊಂಡ ಅಂದರೆ ಗುಪ್ತರ ಕಾಲದ ದೇಗುಲಗಳು ಪಲ್ಲವರ ಕಾಲದ ರಥಗಳು, ಬಾದಾಮಿ ಚಲುಕ್ಯರ ಕಾಲದ ವೇಸರ ಮತ್ತು ಪಾಂಸನ ಶೈಲಿಯ ದೇಗುಲಗಳು ರಾಚನಿಕ ದೇಗುಲಗಳ ದೃಷ್ಟಿಯಿಂದ ಪ್ರಖ್ಯಾತಿ ಪಡೆದಿವೆ.

ಲೌಕಿಕ ವಾಸ್ತು ಮಾದರಿ :

ಲೌಕಿಕ ವಾಸ್ತು ಮಾದರಿಯೆಂಬುದು ಪ್ರಾಚೀನ ರಾಜಮನೆತನದ ಅರಸ-ಅರಸಿಯರು ತಮ್ಮ ಉಪಭೋಗಕ್ಕಾಗಿ ಹಲವು ಮಾದರಿಯಲ್ಲಿ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅವುಗಳೇ ಲೌಕಿಕ ವಾಸ್ತುವಿನ ನಿದರ್ಶನಗಳಾಗಿವೆ. ಲೌಕಿಕ ವಾಸ್ತುವಿನಲ್ಲಿ ಅರಮನೆಗಳು, ಗೃಹಗಳು, ಕೋಟೆ-ಕೊತ್ತಲಗಳು, ಮಂಟಪಗಳು, ಸಭಾಭವನಗಳು ಇತ್ಯಾದಿಗಳು ಕಂಡುಬರುತ್ತವೆ.

ಸ್ವರೂಪ :

೧. ಅರಮನೆಗಳು : ಇವು ಅರಸು ವಂಶಗಳು ವಾಸಿಸುವ ವಿಲಾಸಿ ಗೃಹಗಳಾಗಿವೆ. ಇವು ಬೃಹತ್ ಗಾತ್ರದಲ್ಲಿ ಅತೀ ಆಕರ್ಷಕವಾಗಿದ್ದು ಅವುಗಳಲ್ಲಿ ರಾಜಾಸನ, ರಾಣಿನಿವಾಸ, ಪಾಕಗೃಹ, ಶಯನ ಗೃಹಗಳು ಮುಂತಾದವುಗಳಿಂದ ಕೂಡಿರುತ್ತವೆ. ಈ ಅರಮನೆಗಳು ೨,೩ ಅಂತಸ್ತಿನಲ್ಲಿ ಕಂಡುಬರುತ್ತವೆ. ಇವು ಬೃಹತ್ ಗಾತ್ರದ ಕಟ್ಟಿಗೆ ಕಂಬಗಳಿಂದ ಕೂಡಿರುತ್ತವೆ.

೨. ರಾಜಸಭಾ ಗೃಹಗಳು : ರಾಜಸಿಂಹಾಸನವಿದ್ದು ಎಡಬಲಗಳಲ್ಲಿ ಸೇವಕಿಯರು ನಿಲ್ಲಲು ಮುಂಭಾಗದಲ್ಲಿ ಅನೇಕ ಗಣ್ಯರು ಕುಳಿತು ಕೊಳ್ಳಲು, ನರ್ತಕಿಯರು ನರ್ತನ ಮಾಡಲು ಈ ರಾಜಸಭಾ ಗೃಹಗಳು ವಿಶಾಲವಾಗಿರುತ್ತವೆ.

೩. ಕೋಟೆಗಳು : ಚರಿತ್ರೆಯ ಕಾಲದ ಪ್ರಾರಂಭದಲ್ಲಿ ಮಾನವನ ಸಾಂಘಿಕ ಜೀವನವು ಸಂಕೀರ್ಣವಾದಂತೆ ರಾಜ್ಯಗಳು ಉದಯಿಸಿದವು. ರಾಜ್ಯಗಳ ನಡುವೆ ವ್ಯಾಜ್ಯಗಳು ಪ್ರಾರಂಭವಾದವು. ರಾಜ್ಯಗಳ ಸಂಘರ್ಷಣೆಗಳು ಕೋಟೆಗಳ ರಚನೆಗೆ ಎಡೆಮಾಡಿಕೊಟ್ಟವು. ಕೋಟೆಗಳು ನಗರಗಳ ಸಂರಕ್ಷಣೆ ಸಾಧನಗಳಾದವು. ಕೋಟೆಯ ಸಪ್ತಾಂಗಗಳಲ್ಲಿ ಒಂದೆನಿಸಿತು.

ಅರ್ಥಶಾಸ್ತ್ರ, ಮಾನಸಾರ, ಶುಕ್ರನೀತಿಸಾರ ಮೊದಲಾದ ಪ್ರಾಚೀನ ಕೃತಿಗಳಲ್ಲಿ ದುರ್ಗದ ವಾಸ್ತು ವಿಜ್ಞಾನದ ಬಗ್ಗೆ ವಿವರಗಳಿವೆ. ಮಾನಸಾರವು ಗಿರಿದುರ್ಗ, ವನದುರ್ಗ, ಜಲದುರ್ಗ, ಅರಣ್ಯದುರ್ಗ, ದೇವದುರ್ಗ ಮತ್ತು ಮಿಶ್ರದುರ್ಗ ಎಂಬ ಆರು ಪ್ರಕಾರದ ದುರ್ಗಗಳನ್ನು ಹೆಸರಿಸಿದೆ. ಆದರೆ ಮೊದಲಿನ ೩ ಬಗೆಯ ದುರ್ಗಗಳು ಹೆಚ್ಚು ಪ್ರಚಲಿತವಾಗಿದ್ದವು. ಅವನ್ನು ಒಟ್ಟಾಗಿ ದುರ್ಗತ್ರಯ ಎಂದು ಕರೆಯಲಾಗಿದೆ.

ಉದಾ : ಬಾದಾಮಿ ಚಲುಕ್ಯ ಅರಸ ೧ನೇ ಪುಲಕೇಶಿಯು ಅಭೇದ್ಯಕೋಟೆನ್ನು ನಿರ್ಮಿಸಿದ್ದನೆಂದು ಬಾದಾಮಿ ಬಂಡೆಗಲ್ಲು ಶಾಸನದಲ್ಲಿ ಉಲ್ಲೇಖಿತಗೊಂಡಿದೆ. ಅದೇ ರೀತಿಯಾಗಿ ರಾಷ್ಟ್ರಕೂಟರ ಕೋಟೆ, ವಿಜಯನಗರ ಅರಸರ ಕೋಟೆ, ಹೀಗೆ ರಾಜ್ಯ ರಕ್ಷಣೆಗೆ ಪ್ರಾಚೀನ ರಾಜಮನೆತನಗಳು ಕೋಟೆಗಳನ್ನು ನಿರ್ಮಿಸಿದ್ದರೆಂದು ತಿಳಿದು ಬಂದಿದೆ.[೨೪] ಹೀಗೆ ಇನ್ನು ಲೌಕಿಕ ವಾಸ್ತುಕಲೆಯು ಪ್ರಾಚೀನ ಭಾರತದ ಆಯಾ ರಾಜಮನೆತನಗಳು ರೂಢಿಸಿಕೊಂಡು ಬಂದಿವೆ.

ದೇವಾಲಯಗಳ ಪ್ರಭೇದಗಳು ಮತ್ತು ಅವುಗಳ ವಿನ್ಯಾಸ :

ಪ್ರಬೇಧಗಳು :

ವಿಶಾಲವಾದ ಭರತಖಂಡದಲ್ಲಿ ದೇವಾಲಯಗಳ ರಚನೆ ವೈವಿಧ್ಯಮಯವಾಗಿ ಬೆಳೆಯಿತು. ಶಾಸ್ತ್ರ ಗ್ರಂಥಗಳು ಪ್ರಸ್ತುಪಡಿಸುವ ವಿಧಿ-ನಿಷೇಧಗಳೊಂದಿಗೆ ಪ್ರಾದೇಶಿಕ ಭಿನ್ನತೆ ಪರಸ್ಪರ ಪ್ರಭಾವ, ಪ್ರಾಕೃತಿಕ ಪರಿಸರ, ಕಟ್ಟಡ ಸಾಮಗ್ರಿಗಳ ಅನುಕೂಲ, ಕಾಲಕಾಲಕ್ಕೆ ಪ್ರಬಲವಾಗುತ್ತಿದ್ದ ಬೇರೆ ಬೇರೆ ಮತಗಳು, ಜನರ ಅಭಿರುಚಿ, ರಾಜ ಮಹಾರಾಜರ ಪ್ರೋತ್ಸಾಹ, ಕಟ್ಟಡದ ಅವಶ್ಯಕತೆ, ಶಿಲ್ಪಗಳ ಮನೋಧರ್ಮ ಮತ್ತು ಕೈಚಳಕ ಇತ್ಯಾದಿ ಅಂಶಗಳ ಹಿನ್ನಲೆಯಲ್ಲಿ ದೇವಾಲಯಗಳು ಸ್ಥಳೀಯ ಪ್ರಬೇಧಗಳನ್ನು ಬೆಳೆಸಿಕೊಂಡವು. ಈ ಎಲ್ಲಾ ಕಾರಣಗಳಿಂದ ಆಯಾ ಪ್ರದೇಶದಲ್ಲಿ ಉಗಮಗೊಂಡು ವಿಕಾಸಗೊಂಡ ಹಲವಾರು ಶೈಲಿಯ ದೇವಾಲಯಗಳನ್ನು ಭರತಖಂಡದಲ್ಲಿ ಕಾಣುತ್ತವೆ.

ಭರತ ಖಂಡದ ದೇವಾಲಯಗಳನ್ನು ಪ್ರಧಾನವಾಗಿ ಮೂರು ಪ್ರಬೇಧಗಳಾಗಿ ವಿಂಗಡಿಸಬಹುದು. ೧. ಉತ್ತರ ಭಾರತ ದೇವಾಲಯ ಶೈಲಿ, ದಕ್ಷಿಣಭಾರತ ದೇವಾಲಯ ಶೈಲಿ ಈ ಎರಡು ಶೈಲಿಯಲ್ಲಿ ವ್ಯತ್ಯಾಸಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.[೨೫]

ಅದರಂತೆ ಶಿಲ್ಪಗ್ರಂಥಗಳಲ್ಲಿ ದೇವಾಲಯಗಳನ್ನು ಭೌಗೋಳಿಕ ಪ್ರದೇಶ ರಚನಾ, ವಿನ್ಯಾಸ ಮತ್ತು ಶಿಖರದ ರೀತಿ ಹೀಗೆ ವಿವಿಧ ಆಧಾರಗಳಿಂದ ವಿವಿಧ ಪ್ರಭೇದಗಳಾಗಿ ವರ್ಗೀಕರಿಸಲಾಗಿದೆ.

ಭೌಗೋಳಿಕ ಆಧಾರದಿಂದ ದೇಗುಲದ ಪ್ರಭೇದ:

ಕಾಲುಕಾಶಮ, ಕಾಶ್ಯಲಿಪಿ, ಶಿಲ್ಪರತ್ನ ಮುಂತಾದ ಗ್ರಂಥಗಳಲ್ಲಿ ದೇವಾಲಯಗಳನ್ನೇ ಭೌಗೋಳಿಕವಾಗಿ ವರ್ಗಿಕರಿಸಲಾಗಿದೆ. ಇವುಗಳ ಪ್ರಕಾರ ಹಿಮಾಲಯ ಮತ್ತು ವಿಂದ್ಯ ಪರ್ವತಗಳ ನಡುವಿನ ಪ್ರದೇಶಗಳಲ್ಲಿ ನಾಗರಮಾದರಿ ದೇಗುಲಗಳು. ವಿಂದ್ಯ ಪರ್ವತದಿಂದ ಕೃಷ್ಣ ತೀರದವರೆಗೆ ವೇಸರ ಮಾದರಿ ದೇಗುಲಗಳು, ಕೃಷ್ಣಾ ನದಿಯಿಂದ ಕನ್ಯಾಕುಮಾರಿಯವರೆಗೆ ದ್ರಾವಿಡ ಮಾದರಿ ದೇಗುಲಗಲು ಇದು ಪೂರ್ಣ ಭರತ ಖಂಡವನ್ನು ಗಮನದಲ್ಲಿಟ್ಟುಕೊಂಡು ಮಾಡಿದ ವರ್ಗೀಕರಣ ಎನ್ನಬಹುದು.[೨೬]

ರಚನಾ ವಿನ್ಯಾಸ ಆಧಾರದಿಂದ ದೇಗುಲದ ಪ್ರಬೇಧ :

ವಿಮಾನಾರ್ಚನ ಕಲ್ಪ ದೀಪ್ತಾಗಮ, ಕೌರವಾಗಮ, ಮಯಮತ ಮುಂತಾದ ಶಿಲ್ಪಗ್ರಂಥಗಳಲ್ಲಿ ದೇಗುಲದ ರಚನಾ ವಿನ್ಯಾಸದ ಆಧಾರದ ಮೇಲೆ ವರ್ಗೀಕರಿಸಲಾಗಿದೆ.

ಗರ್ಭಗುಡಿಯ ಮೇಲಿನ ಕಟ್ಟಡವು ಕೆಳಗಿನಿಂದ ಮೇಲಿನವರೆಗೂ ಚೌಕೋನವಾಗಿದ್ದರೆ ಅದು ನಾಗರಶೈಲಿ ಎಂದು, ಗ್ರೀವದಿಂದ ಮೇಲಕ್ಕೆ ಷಟ್ಕೋನ ಮತ್ತು ಅಷ್ಟಕೋನಾಕೃತಿಯಲ್ಲಿ ರಚನೆಗೊಂಡಿದ್ದರೆ ಅದು ದ್ರಾವಿಡ ಶೈಲಿ ಎಂದು. ಅದೇ ಗ್ರೀವದಿಂದ ಮೇಲೆ ವೃತ್ತಾಯತ, ವೃತ, ಅರ್ಧವೃತ್ತವಾಗಿದ್ದರೆ ಅದು ವೇಸರ ಶೈಲಿ ಎಂದು ವರ್ಗೀಕರಿಸಲಾಗಿದೆ.[೨೭]

ಶಿಖರ ರೀತಿ ಆಧಾರದಿಂದ ದೇಗುಲದ ಪ್ರಭೇದ :

ಶಿಖರದ ವಿವಿಧ ಮಾದರಿಗಳ ಹಿನ್ನೆಲೆಯಿಂದ ಕಂಡುಬರುವ ಪ್ರಬೇಧಗಳೆಂದರೆ ರೇಖಾನಾಗರ, ಲತಿನ, ವಿಮಾನ ನಾಗರ, ಕಳಂಗ, ವರಾಟ, ಭೂಮಿಜ ಮುಂತಾದವುಗಳು (ಇದರೊಂದಿಗೆ ಫಾಂಸನಾ ಶೈಲಿಯು ಇದೆ) ಇವುಗಳು ಹೆಚ್ಚಾಗಿ ಉತ್ತರ ಭಾರತಕ್ಕೆ ಅನ್ವಯಿಸುತ್ತವೆ. ಈ ಪ್ರಭೇದಗಳನ್ನು ಶಿಖರಕ್ಕೆ ಅನ್ವಯಿಸಿ ಹೇಳಿದ್ದರೂ, ಅವು ಭಾರತದ ಬೇರೆ ಬೇರೆ ಕಡೆಗಳಲ್ಲಿ ಕಂಡುಬಂದಿದ್ದು ಸ್ಥಳೀಯ ಪ್ರಬೇಧಗಳಾಗಿ ಬೆಳೆದು ಬಂದಿದ್ದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅದರಂತೆ ಲಾಟ, ಭೂಮಿಜ, ಕಳಿಂಗ, ವೈರಾಟ ಈ ಪ್ರಭೇದಗಳು ಕ್ರಮವಾಗಿ ಗುಜರಾತ್, ಮಾಳ್ವ, ಓರಿಸ್ಸಾ ಮತ್ತು ಮಧ್ಯ ಭಾರತಗಳಲ್ಲಿ ಕಂಡುಬರುತ್ತವೆ.[೨೮]

ಮೇಲೆ ವಿವರಿಸಿದ ದೇವಾಲಯಗಳ ಪ್ರಭೇದಗಳನ್ನು ಪ್ರಮುಖವಾಗಿ ಅಧ್ಯಯನದ ದೃಷ್ಟಿಯಿಂದ ಐದು ಭಾಗಗಳಾಗಿ ವಿಂಗಡಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ. ಅದರಲ್ಲಿ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಬಾದಾಮಿ ಚಾಲುಕ್ಯರು ಈ ಐದು ಪ್ರಭೇದಗಳನ್ನು ಅಳವಡಿಸಿಕೊಂಡಿದ್ದಾರೆ. ಅವು ಈ ರೀತಿ ಇವೆ : ೧) ದಕ್ಷಿಣಭಾರತ ಶೈಲಿ (ದ್ರಾವಿಡ), ೨) ಉತ್ತರ ಭಾರತ ಶೈಲಿ (ನಾಗರ). ೩) ಪಂಸನಾ ಶೈಲಿ, ೪) ಮಂಟಪ ಮಾದರಿ ಶೈಲಿ, ೫) ಗಜಪೃಷ್ಠಾಕಾರದ ಶೈಲಿ.

ಇಲ್ಲಿ ಬಾದಾಮಿ ಚಾಲುಕ್ಯರ ಹುಲಿಗೆಮ್ಮಕೊಳ್ಳದ ಪರಿಸರದಲ್ಲಿ ಪಂಸನಾ ಶೈಲಿ ದೇಗುಲಗಳನ್ನು ರಚಿಸಿದ್ದು ಈ ಪ್ರದೇಶದ ಸಾಂಸ್ಕೃತಿಕ ಅಧ್ಯಯನಕ್ಕೆ ಹಿಡಿದ ಗನ್ನಡಿಯಾಗಿದೆ.

ದಕ್ಷಿಣ ಭಾರತ ಶೈಲಿಯ ದೇಗುಲಗಳ ವಿನ್ಯಾಸ :

ವಾಸ್ತು ಗ್ರಂಥಗಳಲ್ಲಿ ದ್ರಾವಿಡ ಶೈಲಿಯ ದೇವಾಲಯಗಳು ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದುವ ಮೂಲಕ ತಮ್ಮ ವಿನ್ಯಾಸವನ್ನು ಬೀರಿವೆ. ಇವುಗಳ ಮುಖ್ಯ ಭಾಗ 'ವಿಮಾನ' ಇದು ಗರ್ಭಗೃಹದ ಹೊರನೋಟವಾಗಿದೆ. ಉರ್ಧ್ವರಚನೆಯಲ್ಲಿ ಸಾಮಾನ್ಯವಾಗಿ ಇದಕ್ಕೆ ಆರು ಭಾಗಗಳಿರುತ್ತವೆ.

ಅಧಿಷ್ಠಾನ : ಇಲ್ಲಿ ಉಪಾನ, ಜಗತಿ, ಕುಮುದ, ಕಪೋತ, ಮಕರಪಟ್ಟಿಕಾ ಭಾಗಗಳು ಬರುತ್ತವೆ ಮತ್ತು ಮುಂಚಾಚು ಹಾಗೂ ಹಿಂಚಾಚುಗಳು ಸಹ ಇವೆ.

ಪಾದ (ಭಿತ್ತಿ) : ಕೂಡ್ಯಸ್ತಂಭ, ದೇವಕೋಷ್ಠಗಳು ಇಲ್ಲಿಯೂ ಮುಖ್ಯಬಧ್ರಕರ್ಣ ಭದ್ರಗಳು ಬರುತ್ತವೆ.

ಪ್ರಸ್ತರ : ಕೂಟ, ಶಾಲ, ಪಂಜರ ಭಾಗಗಳು ಬರುತ್ತವೆ. ಹಾರವು ಪ್ರಸ್ತರದ ಮೇಲಿನ ಭಾಗವಾಗಿದೆ.

ಗ್ರೀವ : ದೇಗುಲದ ಕುತ್ತಿಗೆ ಭಾಗವಾಗಿದೆ. ಇದು ಮಹಡಿಯ ರಚನೆ ಮುಗಿದ ಮೇಲೆ ಬರುತ್ತದೆ.

ಶಿಖರ : ಗ್ರೀವದಿಂದ ಮೇಲಿನ ಗಂಟೆಯಂತಿರುವ ರಚನೆಯಾಗಿದೆ.

ಸ್ತೂಪಿ : ದೇಗುಲದ ತುತ್ತತುದಿಯಾದ ಕಲಶವಾಗಿದೆ.

ಈ ಆರು ಭಾಗಗಳಿರುವುದರಿಂದಲೇ ದ್ರಾವಿಡ ದೇಗುಲಕ್ಕೆ ಷಡ್ವರ್ಗ ದೇವಾಲಯ ಎಂದು ಕರೆಯುವರು. ಶಿಖರದ ವಿನ್ಯಾಸವು ಚೌಕು, ಅಷ್ಟಕೋನ ಇಲ್ಲವೆ ವೃತ್ತಾಕಾರವಾಗಿ ಇರಬಹುದು. ಚೌಕಾಕಾರವಿದ್ದರೆ ಆ ಗುಡಿಯನ್ನು ನಾಗರ ವಿಮಾನವೆಂದು, ಅಷ್ಟಕೋನಾಕಾರವಿದ್ದರೆ ದ್ರಾವಿಡ ವಿಮಾನವೆಂದು, ವೃತ್ತಾಕಾರವಾಗಿದ್ದರೆ ವೇಸರ ವಿಮಾನವೆಂದು ಶಿಲ್ಪಶಾಸ್ತ್ರ ಗ್ರಂಥಗಳು ಹೆಸರಿಸುತ್ತವೆ. ಇಂಥ ದೇಗುಲಗಳು ಬಾದಾಮಿ ಚಲುಕ್ಯರ ಮತ್ತು ಪಲ್ಲವರ ಕಾಲದಲ್ಲಿ ಉತ್ಕೃಷ್ಟ ಮಟ್ಟದಲ್ಲಿ ಕಂಡುಬರುತ್ತವೆ.

ವಿಮಾನದಲ್ಲಿ ಒಳಗಡೆ ಗರ್ಭಗೃಹಕ್ಕೆ ಪ್ರದಕ್ಷಿಣೆ ಬರಲು ವ್ಯವಸ್ಥೆ ಇದ್ದರೆ ಅದು ಸಾಂಧಾರ ವಿಮಾನವೆನಿಸುತ್ತದೆ. ಅದಿಲ್ಲದ್ದಿದ್ದರೆ ಅದು ನಿರಂಧರ ವಿಮಾನವಾಗುವುದು. ಉದಾ : ಚಾಲುಕ್ಯರ ಕಾಲದ ದೇಗುಲಗಳಲ್ಲಿ ಸಾಂಧಾರ ಮತ್ತು ನಿರಾಂಧಾರ ದೇಗುಲಗಳು ಕಾಣಸಿಗುತ್ತವೆ.[೨೯]

ದಕ್ಷಿಣ ಭಾರತದ ದೇಗುಲಕ್ಕೆ ತಲವಿನ್ಯಾಸವು ವಿವಿಧ ರೀತಿಯಲ್ಲಿರುತ್ತದೆ. ರಚನೆಯು ಸಮತಲಾಕೃತಿಯಲ್ಲಿ ಮುಂದುವರೆಯುತ್ತದೆ. ಸುಕನಾಸಿಯು ಕಡ್ಡಾಯವಿರುವುದಿಲ್ಲ. ಈ ರೀತಿಯಾಗಿ ದಕ್ಷಿಣಾತ್ಯ ಶೈಲಿಯ ವಿನ್ಯಾಸವು ಕಂಡುಬರುತ್ತದೆ.[೩೦]

ಉತ್ತರ ಭಾರತ ಶೈಲಿಯ ದೇಗುಲಗಳ ವಿನ್ಯಾಸ :

ರೇಖಾನಾಗರ ಅಥವಾ ಲತಿನ ಪ್ರಸಾದಗಳೇ ಉತ್ತರ ಭಾರತ ಶೈಲಿ ಎಂದು ಕರೆಯಿಸಿಕೊಂಡಿವೆ. ಉತ್ತರ ಭಾರತದಲ್ಲಿ ಹೆಚ್ಚಾಗಿ ದೇವಾಲಯಗಳು ತೀರ್ಥಕ್ಷೇತ್ರಗಳಾಗಿದ್ದು ಅಲ್ಲಿ ದೇವಾಲಯಕ್ಕಿಂತ ತೀರ್ಥವೇ ಪ್ರಧಾನವಾಗಿದೆ. ಈ ದೇಗುಲದ ತಲವಿನ್ಯಾಸವು ಚೌಕಾಕಾರವಾಗಿದ್ದು ಅದೇ ರೀತಿಯಲ್ಲಿ ಮೇಲೆ ಮುಂದುವರೆಯುತ್ತದೆ. ದೇವಾಲಯದ ರಚನೆಯು ಎಂಬ ರೇಖಾಕೃತಿಯಲ್ಲಿ ಮುಂದುವರೆಯುತ್ತದೆ. ಈ ದೇಗುಲದ ಉರ್ಧ್ವರಚನೆಯಲ್ಲಿ ಪೀಠ, ಜಂಘಾ, ಶೃಂಗ (ಶಿಖರ), ಗ್ರೀವ (ಗಲ), ಆಮ್ಲಕ ಮತ್ತು ಕಲಶ ಎಂಬ ಪ್ರಮುಖ ಭಾಗಗಳನ್ನು ಗುರುತಿಸಲಾಗಿದೆ.

ಈ ದೇವಾಲಯಕ್ಕೆ ಪ್ರಸ್ತರವು ಪ್ರಧಾನಭಾಗವಲ್ಲ, ಶಿಖರವೆಂಬುದು ಪೂರ್ಣ ಮೇಲ್ಕಟ್ಟಡಕ್ಕೆ ಅನ್ವಯಸಿದೆ. ಇವು ಅರ್ಪಿತ ನಿರಂಧರ ದೇಗುಲಗಳಾಗಿವೆ. ಶುಕನಾಶಿಯು ಕಡ್ಡಾಯವಾಗಿದೆ. ಗರ್ಭಗೃಹ, ಅಂತರಾಳ (ಸುಖನಾಸ), ಸಭಾಮಂಟಪ, ಮುಖಮಂಟಪ ಅದರ ತಲವಿನ್ಯಾಸದ ಭಾಗಗಲಾಗಿವೆ.[೩೧]

ಪೀಠ : ಇಲ್ಲಿ ಪದ್ಮ, ಕಂಠ, ಕಪೋತಗಳು ಪ್ರಮುಖ ಭಾಗಗಳಾಗಿರುತ್ತವೆ. ಹಾಗೆಯೇ ಕೆಲವು ದೇಗುಲಗಳಲ್ಲಿ ಪದ್ಮ ಆದ ನಂತರ ಕಲಶ ಬಾಗವಿರುತ್ತದೆ. ಅದರಂತೆ ಕಲಶದ ಸ್ಥಾನವು ಕುಮುದದಿಂದ ಆಕ್ರಮಿತವಾಗಿದೆ. ಮೂಲ ಪ್ರಸಾದದ ಪೀಠವು ಪ್ರತಿಯೊಂದು ಪಾರ್ಶ್ವದ ಮಧ್ಯದಲ್ಲಿ ಮುಂಚಾಚಿನಿಂದ ಕೂಡಿರುತ್ತದೆ.

ಜಂಘಾ : ಇದು ಮಧ್ಯದಲ್ಲಿ ರಥ ಪ್ರೊಜೆಕ್ಸನ್ ಹೊಂದಿದೆ. ದೇಗುಲದ ಗೋಡೆಯ ಭಾಗವೇ ಜಂಘವಾಗಿದೆ.

ಶಿಖರ : ಶಿಖರವು ಲತಿನ ಮಾದರಿ, ನಾಗರ, ಭೂಮಿಜಗಳಲ್ಲಿ ಕಂಡುಬರುತ್ತದೆ. ಶಿಖರವು ಚೌಕವಿನ್ಯಾಸದಾಗಿದ್ದು ನಾಲ್ಕು ಪಾರ್ಶ್ವಗಳಲ್ಲಿ ಮೇಲೇರಿದಂತೆ ಕ್ರಮೇಣ ಒಳಕ್ಕೆ ಬಾಗುತ್ತಾ ಸಾಗಿರುತ್ತದೆ.

ಆಮ್ಲಕ : ಶಿಖರದ ಮೇಲೆ ನೆಲ್ಲಿಕಾಯಿ ರೂಪದಲ್ಲಿ ವೃತ್ತಾಕಾರ ಮತ್ತು ಚಪ್ಪಟೆ ಆಕರಾದಲ್ಲಿ ಕಂಡುಬರುತ್ತದೆ. ಶಿಖರದ ಕೋನಗಳಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಭೂಮಿಯನ್ನು ಸೂಚಿಸುವ ಕರ್ಣಾಮ್ಲಕಗಳಿರುತ್ತವೆ.

ಶುಕನಾಸಿ : ದೇವಾಲಯಕ್ಕೆ ಅಂತರಾಳ (ಕಪಿಲಿ) ಇದ್ದರೆ ದೇವಾಲಯವು ಮುಖಮಾಡಿರುವ ದಿಶೆಯಲ್ಲಿ ಶಿಖರಕ್ಕೆ ಮುಂಚಾಚು ಇರುತ್ತದೇ. ಅದುವೇ ಶುಕನಾಸಿಯಾಗಿದೆ. ಅದರ ಮುಂದೆ ಮುಖಪಟ್ಟಿ ಇರುತ್ತದೆ.

ಕಲಶ : ಶಿಖರದ ಮೇಲ್ಭಾಗವು ಸಮತಟ್ಟಾಗಿದ್ದು ಅದರ ಮಧ್ಯದಲ್ಲಿ ಗಲವನ್ನು ಪ್ರತಿನಿಧಿಸುವ ದುಂಡುಗಲ್ಲು ಇರುತ್ತದೆ. ಇದರ ಮೇಲೆ ಕ್ರಮವಾಗಿ ಆಮ್ಲಕ ಮತ್ತು ಕಲಶಭಾಗ ಇರುತ್ತದೆ.

ಕಕ್ಷಾಸನ : ಇದು ಉತ್ತರ ಭಾರತ ಶೈಲಿ ದೇಗುಲಗಳಲ್ಲಿ ಸರ್ವೇಸಾಮಾನ್ಯ. ಈ ರೀತಿಯಾಗಿ ಉತ್ತರ ಭಾರತ ಶೈಲಿಯ ದೇಗುಲಗಳು ವಿನ್ಯಾಸವನ್ನು ಹೊಂದಿದ್ದು ಇದಕ್ಕೆ ಸಾಕ್ಷಿಯೆಂಬಂತೆ ಐಹೊಳೆಯ ಹುಚ್ಚಿಮಲ್ಲಿ ಗುಡಿ, ಪಟ್ಟದಕಲ್ಲಿನ ಗಳಗನಾಥ ಮತ್ತು ಪಾಪನಾಥ ದೇಗುಲಗಳು ಉತ್ತಮ ಉದಾಹರಣೆಯಾಗಿವೆ.[೩೨]

ಫಾಂಸನಾ ಶೈಲಿಯ ದೇಗುಲಗಳ ವಿನ್ಯಾಸ :

ಮುಂಚೆ 'ಕದಂಬನಾಗರ' ಎಂದು ಸಂಬೋಧಿಸಲಾಗುತ್ತಿದ್ದ ವಾಸ್ತು ಶೈಲಿಯನ್ನು ಈಗ 'ಫಾಂಸನಾ ಶೈಲಿ' ಎಂಬುದಾಗಿ ಗುರುತಿಸಲಾಗುತ್ತದೆ. ಈ ಶೈಲಿಯ ದೇಗುಲಗಳು ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಅವರ ರಾಜಧಾನಿಯ ಸುತ್ತಲಿನ ಪ್ರದೇಶಗಳಾದ ಹುಲಿಗೆಮ್ಮನಕೊಳ್ಳ (ಜಾಲಿಹಾಳ), ಐಹೊಳೆ, ಮತ್ತು

ಮಹಾಕೂಟದಲ್ಲಿ ಕಾಣಸಿಗುತ್ತವೆ. ಅದರಲ್ಲಿ ವಿಶೇಷವಾಗಿ ಹುಲಿಗೆಮ್ಮನಕೊಳ್ಳದಲ್ಲಿ ಏಳು ದೇಗುಲಗಳು ಈ ಶೈಲಿಯಲ್ಲಿ ಕಂಡುಬರುತ್ತವೆ.

ಈ ಶೈಲಿಯ ದೇಗುಲಗಳು ರೇಖಾನಾಗರ ಶೈಲಿಯ ಪೂರ್ವಭಾವಿ ರೂಪವಾಗಿದ್ದು ತನ್ನ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ತಲವಿನ್ಯಾಸದಲ್ಲಿ : ಗರ್ಭಗೃಹ, ಗೂಢಮಂಟಪ, ಮುಖಮಂಟಪ ಇದರ ಭಾಗಗಳಾಗಿವೆ. ಎಲ್ಲವೂ ನಿರಾಂಧಾರ ದೇಗುಲಗಳಾಗಿವೆ.

ಉರ್ಧ್ವರಚನೆಯಲ್ಲಿ : ಅಧಿಷ್ಠಾನವು ಪದ್ಮ, ಕಂಠ, ಕಪೋತಗಳ ಮಡಿಕೆಗಳನ್ನು ಹೊಂದಿರುತ್ತದೆ.

ಜಂಘಾ : ಭಾಗ ಸರಳವಾಗಿದ್ದು ಅಲಂಕಾರರಹಿತವಾಗಿದೆ ಮತ್ತು ಇದರ ಮೇಲೆ ಪ್ರಸ್ತರ ಭಾಗ ಬರುತ್ತದೆ.

ಶಿಖರ : ಮೇಲಕ್ಕೆ ಹೋದಂತೆ ಕ್ರಮೇಣ ಕಿರಿದಾಗುತ್ತ ಸಾಗುತ್ತ, ಒಂದರ ಮೇಲೊಂದರಂತೆ ರಚಿತವಾಗಿರುವ ಕಪೋತ ಮತ್ತು ಕಿರಿದಾದ ಜಂಘಾಗಳ ಸಾಲಿನಿಂದಾದ ಭೂಮಿಗಳನ್ನು ಹೊಂದಿರುತ್ತದೆ. ಈ ಕಿರಿದಾದ ಜಂಘಾಗಳ ಸಾಲಿನಲ್ಲಿ ಕೆಲವು ಸಲ ಜೋಡು ಕಂಬಗಳ ವಿನ್ಯಾಸ ಗೋಚರಿಸುತ್ತದೆ.

ಗಲ : ಶಿಖರಾಂತ್ಯವು ಸಮತಟ್ಟಾಗಿದ್ದು ಅದರ ಮೇಲೆ ವೃತ್ತಾಕಾರ ರೀತಿಯಲ್ಲಿ ಗಲ ಕಾಣುತ್ತದೆ.

ಆಮ್ಲಕ : ಗಲದ ಮೇಲೆ ನೆಲ್ಲಿಕಾಯಿ ಆಕಾರದಲ್ಲಿ ವೃತ್ತಾಕಾರದ ಆಮ್ಲಕ ಕಂಡುಬರುತ್ತದೆ.

ಕಲಶ : ಆಮ್ಲಕದ ಮೇಲೆ ವೃತ್ತಾಕಾರದಲ್ಲಿ ಕಲಶ ಕಾಣುತ್ತದೆ. ದೇವಾಲಯ ಮುಖ ಮಾಡಿರುವ ದಿಕ್ಕಿಗೆ ಶಿಖರಕ್ಕೆ ಗವಾಕ್ಷ ಅಲಂಕಾರದಲ್ಲಿ ದೇವತೆಯ ಶಿಲ್ಪವುಳ್ಳ ಮುಖಪಟ್ಟಿ ಇರುತ್ತದೆ. ಈ ರೀತಿ ಫಾಂಸನಾ ಶೈಲಿ ದೇಗುಲಗಳು ಉತ್ತರ ಭಾರತದ ಶೈಲಿಯ ಭಾಗವಾಗಿ ವಿನ್ಯಾಸ ಹೊಂದಿವೆ.[೩೩]

ಮಂಟಪ ಮಾದರಿ ಶೈಲಿ ದೇಗುಲಗಳ ವಿನ್ಯಾಸ :

ಈ ಮಾದರಿಯ ದೇಗುಲಗಳು ಬಾದಾಮಿ ಚಾಲುಕ್ಯರ ಕಾಲದಲ್ಲಿ ಕಾಣಸಿಗುತ್ತವೆ. ಮುಖ್ಯವಾಗಿ ಐಹೊಳೆಯಲ್ಲಿ ಮಾತ್ರ ಈ ಗುಡಿಗಳು ಕಂಡುಬಂದಿವೆ. ಇವು ಕಂಬಗಳುಳ್ಳ ತುಸು ವಿಶಾಲ ರಚನೆಗಳಿಂದ ಕೂಡಿವೆ. ಮಂಟಪವು ಚೌಕ ಇಲ್ಲವೇ ಆಯತಾಕಾರದಲ್ಲಿರಬಹುದು. ಗರ್ಭಗೃಹವು ಹಿಂಗೋಡೆಯ ಮಧ್ಯಭಾಗದಿಂದ ಮಂಟಪದೊಳಕ್ಕೆ ಚಾಚಿರುತ್ತದೆ. ಕೆಲವು ಉದಾಹರಣೆಗಳಲ್ಲಿ ಮುಖಮಂಟಪ ಇರುವುದುಂಟು. ಇವುಗಳಿಗೆ ಶಿಖರವಿರುವುದಿಲ್ಲ. ಮಧ್ಯದ ಭಾವಣಿಯು ಸಮತಟ್ಟಾಗಿದ್ದು, ಉಳಿದೆಡೆ ಇಳಿಜಾರಾಗಿರುತ್ತದೆ. ಉದಾ : ಐಹೊಳೆಯ ಲಾಡಖಾನ್ ದೇಗುಲವು ಈ ಮಾದರಿಗೆ ಉತ್ತಮ ಉದಾಹರಣೆಯಾಗಿದೆ.[೩೪]

ಗಜಪುಷ್ಠಾಕಾರದ ದೇಗುಲಗಳ ವಿನ್ಯಾಸ :

ಈ ದೇಗುಲದ ಮಾದರಿಯ ತಲವಿನ್ಯಾಸದಲ್ಲಿ ಚಪ್ಪಾಕಾರವಾಗಿರುತ್ತದೆ. ಅಂದರೆ ಬಿಲ್ಲನ್ನು ಹೋಲುವ, ಇಂಗ್ಲೀಷ ಯೂ ಆಕಾರದಲ್ಲಿ ಕಂಡುಬರುತ್ತದೆ. ಆಯತಾಕಾರಕ್ಕೆ ಹಿಂಭಾಗದಲ್ಲಿ ಅರ್ಧವೃತ್ತವನ್ನು ಸೇರಿಸಿ ಈ ವಿನ್ಯಾಸ ರೂಪಗೊಳ್ಳುತ್ತದೆ. ಹೊರನೋಟದಲ್ಲಿ ಈ ವಿನ್ಯಾಸದ ದೇಗುಲಗಳು ನಿಂತ ಆನೆಯ ಹಿಂಭಾಗವನ್ನು ಹೋಲುತ್ತವೆಯಾದ್ದರಿಂದ ಗಜಪುಷ್ಠ ಎಂಬ ಹೆಸರು ಅದಕ್ಕೆ ಅನ್ವಯವಾಗಿದೆ.

ಉದಾ : ಈ ಮಾದರಿ ದೇಗುಲಗಳು ಪಲ್ಲವರ ಕಾಲದಲ್ಲಿ ಮಹಾಬಲಿಪುರದ ರಥಗಳಲ್ಲಿ ಮತ್ತು ಚಾಲುಕ್ಯರ ಕಾಲದ ಐಹೊಳೆ ಮತ್ತು ಚಿಕ್ಕಮಹಾಕೂಟದಲ್ಲಿ ಕಾಣಸಿಗುತ್ತವೆ. ಇದರಲ್ಲಿ ಐಹೊಳೆಯಲ್ಲಿರುವ ದುರ್ಗಾದೇಗುಲವು ಉತ್ತಮ ಉದಾಹರಣೆಯಾಗಿದೆ.[೩೫]

ಈ ರೀತಿಯಾಗಿ ಭಾರತದಲ್ಲಿ ದೇವಾಲಯಗಳ ಪ್ರಭೇದಗಳು ವಿಶಿಷ್ಟ ರೀತಿಯಲ್ಲಿ ಬೆಳೆದುಬಂದಿವೆ. ಅದರಲ್ಲಿ ಕರ್ನಾಟಕದಲ್ಲಿ ಬಾದಾಮಿ ಚಲುಕ್ಯರ ಕಾಲದಲ್ಲಿ ಮೇಲಿನ ಐದು ಮಾದರಿ ದೇಗುಲಗಳು ಕಂಡುಬರುವುದು ಹೆಮ್ಮೆಯ ಸಂಗತಿ.

ಹುಲಿಗೆಮ್ಮಕೊಳ್ಳದ ಪರಿಸರದಲ್ಲಿಯ ಕಲೆ ಮತ್ತು ವಾಸ್ತುಶಿಲ್ಪ :

ಹುಲಿಗೆಮ್ಮ ಕೊಳ್ಳದ ಪರಿಸರದ ಸ್ವರೂಪ :

ಬಾದಾಮಿ ಚಲುಕ್ಯರ ಆಡಳಿತಕ್ಕೆ ಒಳಪಟ್ಟ ಅನೇಕ ವಾಸ್ತುಶಿಲ್ಪ ತಾಣಗಳಲ್ಲಿ ಹುಲಿಗೆಮ್ಮಕೊಳ್ಳವು ಒಂದು. ಇದು ಪಟ್ಟದಕಲ್ಲಿನಿಂದ ಸು. ೫ ಕಿ.ಮೀ. ದೂರದಲ್ಲಿ ಭದ್ರನಾಯಕ ಜಾಲಿಹಾಳ ಎಂಬ ಗ್ರಾಮವಿದೆ. ಇದರ ಉತ್ತರಕ್ಕೆ ೧ ಕಿ.ಮೀ. ದೂರದಲ್ಲಿ ಪೂರ್ವ ಪಶ್ಚಿಮಾಭಿಮುಖವಾಗಿರುವ ಬೆಟ್ಟದ ಸಾಲಿದೆ.[೩೬] ಈ ಬೆಟ್ಟದ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿರುವ ವಿಶಾಲ ನೈಸರ್ಗಿಕ ಗುಹಾಲಯವಿದೆ ಮತ್ತು ಇದರ ಸುತ್ತಲಿನ ಪ್ರದೇಶ ಕೊಳ್ಳದ ಹಾಗೆ ಕಂಡುಬಂದಿರುದರಿಂದ, ಅಲ್ಲಿ ಹುಲಿಗೆಮ್ಮ ದೇವತೆ ನೆಲೆಸಿರುವಳೆಂದು ಸ್ಥಳ ಪುರಾಣದ ಮೂಲಕ ವಿವರಿಸುವುದರಿಂದ ಅದಕ್ಕೆ ಹುಲಿಗೆಮ್ಮನಕೊಳ್ಳ ಎಂದು ಕರೆಯಲಾಗಿದೆ.

ಈ ಕೊಳ್ಳವು ಪ್ರವಾಸಿಗರನ್ನು ಆಕರ್ಷಿಸುವ ಸುಂದರ ತಾಣವಾಗಿದೆ. ಅಂದರೆ ಸುತ್ತಲಿನ ಪರಿಸರವು ಹಚ್ಚ ಹಸುರಿನಿಂದ ಕೂಡಿದ್ದು ನಿಸರ್ಗ ಸೌಂದರ್ಯದಿಂದ ಕಂಗೊಳಿಸುತ್ತಿದೆ. ಹಾಗೆಯೇ ಕೊಳ್ಳದ ಪ್ರಮುಖ ಗುಹಾಲಯದ ಕಡಿದಾದ ಬೆಟ್ಟದಂಚಿನಿಂದ ಸದಾ ಜಲಧಾರೆಯು ಕೆಳಗೆ ಧುಮುಕುವ ದೃಶ್ಯ ರಮಣೀಯವಾಗಿದೆ. ಕೊಳ್ಳದ ಆಚೆ-ಈಚೆ ಇಕ್ಕೆಲಗಳಲ್ಲಿ ಒಟ್ಟು ೧೧ ದೇಗುಲಗಳು ಪಶ್ಚಿಮಾಭಿಮುಖವಾಗಿ ಮತ್ತು ಪೂರ್ವಾಭಿಮುಖವಾಗಿ

ಗೋಚರಿಸುತ್ತವೆ. ಇದರಲ್ಲಿ ಎರಡು ಶಕ್ತಿದೇವತೆಯ ದೇಗುಲಗಳು ಮತ್ತು ಒಂದು ಬೃಹತ್ ಲಿಂಗದೇಗುಲ ಕಂಡುಬರುತ್ತವೆ.[೩೭]

ಈ ಬೃಹತ್ ಗವಿಯ ಕೆಳಗಡೆ ಪುಷ್ಕರಣಿಯ ರೂಪದಲ್ಲಿ ಜಲಸಲೆಯು ಸದಾ ಹರಿಯುತ್ತಿರುತ್ತದೆ.ಇದರ ಹತ್ತಿರ ಎಡ,ಬಲ ಮತ್ತು ಎದುರಗಡೆ ಫಾಂಸನಾ ಶೈಲಿಯ ಶೈವ ದೇಗುಲಗಳು ಕಾಣಸಿಗುತ್ತವೆ ಮತ್ತು ಈ ಕೊಳ್ಳದ ಪರಿಸರದಲ್ಲಿ ಬೆಟ್ಟದ ಬಲಭಾಗದ ಸಾಲಿನಲ್ಲಿ ಕೆಲವು ಶಾಸನಗಳು, ವರ್ಣಚಿತ್ರಗಳು, ಗೀರು ಬಂಡೆಗಳ ಚಿತ್ರಗಳು ನಾನು ಕೈಗೊಂಡ ಕ್ಷೇತ್ರ ಕಾರ್ಯದ ಸಮಯದಲ್ಲಿ ಕಂಡುಬಂದಿರುತ್ತವೆ.

ಈ ರೀತಿಯಾಗಿ ಕೊಳ್ಳದ ಸ್ವರೂಪವಿದ್ದು ಜಾಲಿಹಾಳ ಗ್ರಾಮಸ್ಥರಿಗೆ ಅದು ಒಂದು ಶಕ್ತಿದೇವತೆಯ ಆರಾಧನಾ ತಾಣವಾಗಿದೆ. ಪ್ರತಿವರ್ಷವೂ ದೇವತೆಗೆ ಸಕಲ ನೈವೇದ್ಯಗಳ ಮೂಲಕ ಭಕ್ತಿಯನ್ನು ಸಲ್ಲಿಸಿ ಪರ್ವ ಆಚರಿಸುವುದು ಮೌಖಿಕ ಕಥನಗಳಿಂದ ತಿಳಿದು ಬಂದಿದೆ. ಮುಂದೆ ಇದು ಹಲವು ಐತಿಹ್ಯಗಳ ಮೂಲಕ ಚಲುಕ್ಯರ ಕಲೆ ಮತ್ತು ವಾಸ್ತುಶಿಲ್ಪದ ಪ್ರಮುಖ ಕ್ಷೇತ್ರವಾಗಿ ಉಳಿದುಕೊಂಡುಬಂದಿದೆ. ಒಂದು ವಾಸ್ತುಕಲೆ ಮತ್ತು ಶಿಲ್ಪಕಲೆಯನ್ನು ಕುರಿತು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಕೊಳ್ಳದ ದೇಗುಲಗಳ ವಿಶ್ಲೇಷಣೆ :

ಹುಲಿಗೆಮ್ಮ ಕೊಳ್ಳದಲ್ಲಿ ಬಾದಾಮಿ ಚಾಲುಕ್ಯರ ಕಾಲದ ಒಟ್ಟು ೧೩ ದೇಗುಲಗಳು ಗೋಚರಿಸುತ್ತಿದ್ದು ಅವುಗಳಲ್ಲಿ ನಾಲ್ಕು ಬೃಹತ್ ಗುಹೆಯ ಆಶ್ರಯದಲ್ಲಿಯೂ ಏಳು ಫಾಂಸನಾ ಶೈಲಿಯ ದೇಗುಲಗಳು ಗುಹೆಯ ಮುಂಭಾಗದಲ್ಲಿ ಪೂರ್ವ-ಪಶ್ಚಿಮಾಭಿಮುಖವಾಗಿಯೂ ಮತ್ತು ಎರಡು ಶಿಖರ ರಹಿತ ದೇಗುಲಗಳು ಪೂರ್ವಾಭಿಮುಖವಾಗಿಯೂ ಗೋಚರಿಸುತ್ತವೆ.[೩೮]

ಬೃಹತ್ ಗುಹೆಯ ಆಶ್ರಯದಲ್ಲಿಯ ದೇಗುಲಗಳ ರಚನಾ ವಿನ್ಯಾಸ :

ಈ ದೇವಾಲಯಗಳು ದಕ್ಷಿಣಾಭಿಮುಖವಾಗಿರುವ ಬೃಹತ್ ಗುಹೆಯ ಆಶ್ರಯದಲ್ಲಿ ರಚನೆಗೊಂಡಿವೆ. ಭಾಗಶಃ ರಾಚನಿಕ ದೇಗುಲಗಳಾಗಿವೆ. ಅವುಗಳನ್ನು ಒಂದೊಂದಾಗಿ ವಿಶ್ಲೇಷಿಸಲಾಗಿದೆ.

೧. ಸುಬ್ರಮಣ್ಯ ದೇಗುಲ : ಇದು ಇತ್ತೀಚಿನ ದೇಗುಲವಾಗಿದ್ದೆಂದು ಅದರ ದ್ವಾರಬಂಧದ ಮೇಲೆ ಕಂಡುಬಂದ ಕಾಲಮಾನ (೧-೪-೭೪, ಶಕೆ ೧೮೯೬) ಆಧಾರದಿಂದ ತಿಳಿಯಲಾಗಿದೆ. ಇದು ಪೂರ್ವಾಭಿಮುಖವಾಗಿದ್ದು ಭಾಗಶಃ ರಾಚನಿಕ ದೇಗುಲವಾಗಿದೆ. ಮೇಲಿನ ಛತ್ತು ಸಮತಟ್ಟಾಗಿದೆ. ಮೂರು ಕಡೆ ರಾಚನಿಕ ಭಿತ್ತಿಗಳಿದ್ದು ದೇಗುಲದ ಎಡಭಾಗ ಬೃಹತ್ ಬಂಡೆಯನ್ನು ಆಶ್ರಯಿಸಿದೆ.

ಇದು ಮೂಲತಃ ಮಲ್ಲಿಕಾರ್ಜುನ ದೇಗುಲ ಎಂದು ಕಂಡುಬಂದಿದೆ. ಗರ್ಭಗೃಹ ಮಾತ್ರವಿದ್ದು ಅಲ್ಲಿ ಜಟಾಧಾರಿ ಋಷಿ ಮುನಿಯ ಶಿಲ್ಪವು ಪದ್ಮಾಸನದಲ್ಲಿ ತಪೋನಿರತವಾಗಿದೆ. ೨.೫ ಫೂಟ್ ಎತ್ತರವಾಗಿದೆ. ಈ ದೇಗುಲಕ್ಕೆ ಪುಷ್ಪಾಲಂಕಾರಿಕ ದ್ವಾರಬಂಧವಿದೆ ಮತ್ತು ದಕ್ಷಿಣ ಭಿತ್ತಿಯಲ್ಲಿ ಒಂದು, ಪೂರ್ವಭಿತ್ತಿಯಲ್ಲಿ ಎರಡು ಪುಷ್ಪಜಾಲಂದರಗಳಿವೆ. ದ್ವಾರಬಂಧದ ಬಲಭಾಗದಲ್ಲಿ ಈಶ್ವರ ಲಿಂಗುವಿನ ಮತ್ತು ಎಡಭಾಗದಲ್ಲಿ ಆಂಜನೇಯನ ಉಬ್ಬುಶಿಲ್ಪಗಳಿವೆ. ಈ ದೇಗುಲದ ರಚನಾ ವಿನ್ಯಾಸವನ್ನು ಕ್ಷೇತ್ರಕಾರ್ಯ ಆಧಾರದಿಂದ ವಿವರಿಸಿರುವೆ.

೨. **ದುರ್ಗಾ ದೇಗುಲ :** ಇದು ಬೃಹತ್ ಗವಿಯೊಳಗೆ ಪೂರ್ವಾಭಿಮುಖವಾಗಿ ರಚನೆಗೊಂಡಿದೆ. ಗುಡಿಯು ಸಮತಲ ಅಡ್ಡಮಾಳಿಗೆಯುಳ್ಳ ಕೇವಲ ಒಂದು ಸರಳ ಗರ್ಭಗೃಹವಾಗಿದೆ. ಇದರಲ್ಲಿ ದುರ್ಗಾಮೂರ್ತಿಯ ಒಂದು ಅಪೂರ್ವ ಶಿಲ್ಪವು ಪ್ರತಿಷ್ಠಾಪನೆಗೊಂಡಿದೆ.[೭೯] ಪ್ರಸ್ತುತವಾಗಿ ಸ್ಥಳಿಕರು ಇದಕ್ಕೆ ಲಕ್ಕಮ್ಮ ದೇಗುಲವೆಂದು ಕರೆಯುವುದು ವಾಡಿಕೆ. ದ್ವಾರಬಂಧವು ಹಲವು ಶಾಖೆಗಳಿಂದ ಕೂಡಿದೆ. ದೇಗುಲದ ಛತ್ತು ಚೌಕಾಕಾರದಲ್ಲಿದ್ದು ಸರಳವಾಗಿದೆ. ಧ್ವಾರಬಂಧದ ಪ್ರಸ್ತರದ ಭಾಗದಲ್ಲಿ ಕಪೋತವು ಪಂಜರಗಳಿಂದ (ಗವಾಕ್ಷ) ರೂಪಿದೆ. ಭಿತ್ತಿ ಸರಳವಾಗಿದೆ. ಅಧಿಷ್ಠಾನವು ಉಪಾನ ಜಗತಿಯಿಂದ ಕೂಡಿದೆ ಮತ್ತು ದೇಗುಲದ ಮುಂದೆ ಯಜ್ಞಕುಂಡವಿದೆ.

ದುರ್ಗಾ ಮೂರ್ತಿ ಶಿಲ್ಪದ ಪ್ರತಿಮಾ ಲಕ್ಷಣ :

ಈ ಶಿಲ್ಪವು ದ್ವಿಭುಜ ದೇವಿಯಾಗಿದ್ದು ವಾಮ ಲಲಿತಾಸನದಲ್ಲಿ ಭದ್ರಪೀಠದ ಮೇಲೆ ಕುಳಿತಿದೆ. ಒಂದು ಕೈಯಲ್ಲಿ ಖಡ್ಗವು ಮತ್ತೊಂದರಲ್ಲಿ ಗುರಾಣಿಯು ಇವೆ. ಕಿರೀಟ ಮುಕುಟ, ಮಕರಕುಂಡಲ, ಹರಳಿನ ಕಂಠಾಭರಣ, ಮುತ್ತಿನ ಹಾರ ಕೆಲವೇ ರುಂಡಗಳುಳ್ಳ ಯಜ್ಞೋಪವೀತ, ತೋಳ್ಬಂಧಿ, ಕೈಬಳೆಗಳು, ಪದ್ಮಚಿಹ್ನೆಯುಳ್ಳ ಸೊಂಟದ ಪಟ್ಟಿ, ಕಾಲ್ಗಡಗಗಳು ದೇವಿಯನ್ನು ಅಲಂಕರಿಸಿವೆ. ಈ ದೇವಿಯ ಶಿಲ್ಪದಲ್ಲಿ ಕುತೂಹಲ ಕೆರಳಿಸುವ ಎರಡು ಅಪೂರ್ವ ಲಕ್ಷಣಗಳಿವೆ. ದೇವಿಗೆ ರಕ್ಕೆಗಳುಂಟು ಮತ್ತು ದೇವಿಯ ಎಡಬದಿಯಲ್ಲಿ ಗೂಬೆಯಿದೆ. ದುರ್ಗಾಮೂರ್ತಿಯಲ್ಲಿ ಸಾಮಾನ್ಯವಾಗಿ ಖಡ್ಗ ಮತ್ತು ಪಾನ ಪಾತ್ರೆಯನ್ನು ಕೈಗಳಲ್ಲಿ ತೋರಿಸಲಾಗುತ್ತದೆ. ಆದರೆ ಈ ಮೂರ್ತಿಯಲ್ಲಿ ಪಾನಪಾತ್ರೆಯ ಬದಲು ಖೇಟಕವಿದೆ. ಈ ಮೂರ್ತಿಗೆ ಪ್ರತ್ಯೇಕ ಸಿಂಹ ಪ್ರಭಾವಳಿ ಇದೆ.[೮೦] ಇದರ ಮೇಲಿನ ಪಟ್ಟಿಯಲ್ಲಿ ಶಂಖ ಮತ್ತು ಪದ್ಮನಿದಿಗಳ ಚಾಮರ ಸೇವಕಿಯರ ವಿಧ್ಯಾದರ ಮಧ್ಯದಲ್ಲಿ ಛತ್ರಿಯ ಚಿತ್ರಗಳಿವೆ. ಆದರೆ ಮೇಲಿನ ಗವಿಬಂಡೆಯ ಕಾರಣದಿಂದ ದೇವಾಲಯದ ಎತ್ತರ ಹೆಚ್ಚು ಮಾಡಲು ಸಾಧ್ಯವಾಗದ್ದರಿಂದ ಒಳಗಿನ ಮೂರ್ತಿಗೆ ಪ್ರಭಾವಳಿಯನ್ನು ಸರಿಯಾದ ರೀತಿಯಲ್ಲಿ ಜೋಡಿಸಲಾಗಿಲ್ಲ. ಆದ್ದರಿಂದ ಅದರ ಮೇಲಿನ ಚಿತ್ರಿತ ಕಮಾನು ಪಟ್ಟಿಕೆಯನ್ನು ಮೂರ್ತಿಯ ಮೇಲ್ಭಾಗ ಮುಚ್ಚಿದೆ.

ಈ ದೇವಿ ಮೂರ್ತಿಯ ವಿಶಿಷ್ಟ ಲಕ್ಷಣಗಳು ಇದುವರೆಗೆ ಬೇರೆ ಯಾವ ವಿಧದ ದುರ್ಗಾ ಮೂರ್ತಿಯಲ್ಲೂ ಕಂಡುಬಂದಿಲ್ಲ. ಈ ಮೂರ್ತಿ ವಿಷ್ಣು ಧರ್ಮೋತ್ತರ ಪುರಾಣದಲ್ಲಿ ವರ್ಣಿತವಾಗಿರುವ ಹಲವು ದೇವಿಮೂರ್ತಿ ಶಿಲ್ಪಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಭೂತಮಾತಾ ದೇವಿಯಂತಿದೆ.

''ಶ್ಯಾಮವರ್ಣಾ ವಿಶಾಲಾಕ್ಷೀ ಕ್ಷೀರಾರುಣ ನಿಭಾನನಾ ।
ದ್ವಿಭುಜಾ ಇಭೃಲೇ ಲಿಂಗಂ ಚರ್ಮ ಶಸ್ತ್ರಂ ತು ದಕ್ಷಿಣೆ ॥
ಸಿಂಹಾಸನೋಪವಿಷ್ಟೇಯಂ ಮುಕ್ತಾ ಭರಣ ಮೂರ್ಧಜಾ ।
ಭೂತಪ್ರೇತ ಪಿಶಾಚಾ ಧ್ಯೈಸ್ಸೇವಿತಾ ತು ವಿಶೇಷತಃ ॥
ಇಂದ್ರ ಯಕ್ಷಶ್ಚ ಗಂದರ್ವೈ ಸಿದ್ಧ ವಿದ್ಯಾಧರಾಭಿಃ ।
ಅಶ್ವತ್ಥ ಸ್ಯಾಪ್ಯಥೋ ದೇವಿ ಭೂತ ಮಾತೇತಿ ವಿಶ್ರುತಾ ॥''

ಭೂತ-ಪ್ರೇತಗಳಿಂದಲೂ ಸೇವಿಸಲ್ಪಡುವ ಈ ದೇವಿಯ ಮೂರ್ತಿ ಶಿಲ್ಪದಲ್ಲಿ ಗೂಬೆಯನ್ನು ತೋರಿಸುವುದು ಸಮಂಜಸವಾಗಿದೆ. ಆದರೆ ಯಾವ ದೇವಿಮೂರ್ತಿಯನ್ನು ರೆಕ್ಕೆ ಇರುವ ಹಾಗೆ ಪ್ರತಿಮಾ ಲಕ್ಷಣಗಳಲ್ಲಿ ವರ್ಣಿಸಿಲ್ಲ. ಸು. ೩-೪ನೆಯ ಶತಮಾನದಿಂದ ಪಾಶುಪತ ಶೈವರ ಧಾರ್ಮಿಕ ಕೇಂದ್ರವಾಗಿದ್ದ ಮಹಾಕೂಟಕ್ಕೆ ಈ ಕೊಳ್ಳವು ಸಮೀಪವಾಗಿರುವುದರಿಂದ ಈ ಧರ್ಮಸಂಪ್ರದಾಯಕ್ಕೆ ಸಂಬಂಧಿಸಿದ ಯಾಮಲಗಳಿಗೆ ಅಧಿದೇವತೆಗಳಾದ ಶಕ್ತಿಗಳಲ್ಲಿ ಒಂದನ್ನು ಈ ಮೂರ್ತಿಯು ಪ್ರತಿಬಿಂಬಿಸುವುದೇ ಎಂಬುದನ್ನು ವಿಮರ್ಶಿಸಬೇಕಾಗಿದೆ. ಪಾಶುಪತ ಶೈವರಲ್ಲಿ ಶಿವಲಿಂಗವನ್ನು ಮೈಮೇಲೆ ಧರಿಸುವ ಪದ್ಧತಿ ಇತ್ತು. ದೇವಿ ಮೂರ್ತಿಗಳಲ್ಲಿ ಭೂತಮಾತೆ ಮಾತ್ರ ಲಿಂಗವನ್ನು ಧರಿಸಬೇಕೆಂಬ ನಿಯಮವಿದೆ. ಆದರೆ ಮೇಲಿನ ಮೂರ್ತಿಯಲ್ಲಿ ಈ ಲಕ್ಷಣವಿಲ್ಲ. ಒಟ್ಟಿನಲ್ಲಿ ಇಂಥ ಮೂರ್ತಿಯು ಬೇರೆ ಎಲ್ಲಿಯೂ ಇದುವರೆಗೆ ಕಂಡುಬರದೆ ಅಪೂರ್ವವಾಗಿದೆ.[೪೧] ಮೂರ್ತಿಗೆ ಕಂತಿ ಮಾಡಲಾಗಿದ್ದು ಮೂಲತಃ ಇದು ಮರಳು ಮಿಶ್ರಿತ ಕೆಂಪುಶಿಲೆಯದ್ದಾಗಿದೆ.

ಪ್ರಸಾದ ನಿಲಯ : ಈ ದುರ್ಗಾ ಮೂರ್ತಿ ದೇಗುಲದ ಎಡಭಾಗದಲ್ಲಿ ಗುಹೆಯ ಆಶ್ರಯದಲ್ಲಿ ಈ ಪ್ರಸಾದ ಕೋಣೆಯನ್ನು ನಿರ್ಮಿಸಿದ್ದುದನ್ನು ಕಾಣಲಾಗಿದೆ. ಇಲ್ಲಿ ಭಕ್ತರಿಗೆ ಮತ್ತು ಪ್ರವಾಸಿಗರಿಗೆ ದನಂಪ್ರತಿ ಪ್ರಸಾದ ವಿತರಿಸುವ ಸಲುವಾಗಿ ದಾಸೋಹವನ್ನು ಸ್ಥಳಿಕರು ನೆರವೇರಿಸಿಕೊಡುತ್ತಾರೆ. ಅದ್ದರಿಂದ ಪ್ರಸಾದವನ್ನು ತಯಾರಿಸಲು ಒಂದು ಕೋಣೆಯ ಹಾಗೆ ಗುಹೆಯಲ್ಲಿ ರಚಿಸಿದ್ದಾರೆ. ಅದುವೆ ಪ್ರಸಾದ ನಿಲಯವಾಗಿದೆ.

ಜಯದುರ್ಗಾ (ಹುಲಿಗೆಮ್ಮ) ದೇಗುಲ :

ಈ ದೇಗುಲವು ಚಿಕ್ಕದಾಗಿದ್ದು ಗರ್ಭಗೃಹ ಮಾತ್ರ ಹೊಂದಿದೆ. ಇದು ದಕ್ಷಿಣಾಬಿಮುಖವಾಗಿ ಗುಹೆಯ ಆಶ್ರಯದಲ್ಲಿದೆ. ಇದು ಒಂದು ಗೂಡಿನ ಹಾಗೆ ಕಂಡು ಬಂದಿದೆ. ದ್ವಾರಬಂಧ (ಕಬ್ಬಿಣ) ಇತ್ತೀಚಿನದಾಗಿದೆ. ದೇಗುಲದ ಮುಂಭಾಗ ಟೈಲ್ಸ್‌ನಿಂದ ಜೀರ್ಣೋದ್ಧಾರಗೊಂಡಿದೆ.

ಹುಲಿಗೆಮ್ಮ ಮೂರ್ತಿ ಶಿಲ್ಪದ ಪ್ರತಿಮಾ ಲಕ್ಷಣ :

ಈ ಗರ್ಭಗುಡಿಯಲ್ಲಿ ದೇವತೆಯ ವಿಗ್ರಹವು ಇದೆ. ಈ ದೇವಿಯನ್ನು ಸ್ಥಳಿಕರು ಹುಲಿಗೆಮ್ಮ ಎಂದು ಕರೆಯುವರು. ಆದ್ದರಿಂದ ಈ ಕೊಳ್ಳಕ್ಕೆ 'ಹುಲಿಗೆಮ್ಮನಕೊಳ್ಳ' ಎಂದು ಕರೆಯಲಾಗಿದೆ. ಈ ಮೂರ್ತಿಗೆ ಕಂತಿ ಮಾಡಿದ್ದರಿಂದ ಮೂಲ ಲಕ್ಷಣಗಳು ಸ್ವಲ್ಪ ಅಲ್ಲಲ್ಲಿ ವಿರೂಪಗೊಂಡಿವೆ. ಆದರೂ ಲಕ್ಷಣ ಮತ್ತು ಕಾಲಮಾನವನ್ನು ಗುರುತಿಸಲಾಗದಷ್ಟು ಅಸ್ಪಷ್ಟವಾಗಿಲ್ಲ. ಈ ಚತುರ್ಭುಜ ದೇವಿಯು ಪೀಠದ ಮೇಲೆ ವಾಮಲಲಿತಾಸನದಲ್ಲಿ ಕುಳಿತಿದ್ದು, ಕೈಗಳಲ್ಲಿ ಖಡ್ಗ, ಪ್ರಯೋಗಚಕ್ರ ಮತ್ತು ಶಂಖವನ್ನು ಹಿಡಿದಿದ್ದು ಕೆಳಗಿನ ಎಡಗೈಯನ್ನು ಎಡತೊಡೆಯ ಮೇಲೆ ಇರಿಸಲಾಗಿದೆ. ಕೆಳಗೆ ಇಳಿಬಿಟ್ಟ ಎಡಗಾಲನ್ನು ಅರಳಿದ ಕಲಮದ ಮೇಲೆ ಇಡಲಾಗಿದೆ. ಕಿರೀಟ, ಮುಕುಟ, ಚಕ್ರಕುಂಡಲ ಕಂಠಾಭರಣ, ಹಾರ, ನಾಗಮುರಿಗೆ, ಕೈಬಳೆ, ಉದರ ಪಟ್ಟಿ, ರತ್ನ ಖಚಿತ ಸೊಂಟಪಟ್ಟಿ, ಕಾಲ್ಬಳೆ ಮುಂತಾದ ವಸ್ತ್ರಾಭರಣಗಳು ದೇವಿಯನ್ನು ಅಲಂಕರಿಸಿವೆ. ಹಿಂಬದಿಯಿಂದ ಬಲಗಡೆಗೆ ಅವಳ ವಾಹನ ಸಿಂಹವು ಕಾಣಿಸಿಕೊಂಡಿದೆ. ಮೂಲವಾಗಿ ಶಿಲ್ಪವು ಮುಗುಳ್ನಗೆ ಬೀರುತ್ತಾ ನೇರ ದೃಷ್ಟಿಯನ್ನು ಹೊಂದಿದೆ. ಶಾರದಾತಿಲಕ ಗ್ರಂಥದ ಪ್ರಕಾರ ಇದನ್ನು ಜಯದುರ್ಗಾ ಎಂದು ಗುರುತಿಸಬಹುದಾಗಿದೆ.[೪೨]

ಈಶ್ವರ (ಮಲ್ಲಿಕಾರ್ಜುನ) ದೇಗುಲ :

ಇದು ಚಲುಕ್ಯರ ಕಾಲದ ಶೈವ ದೇಗುಲವಾಗಿದೆ. ಈ ದೇಗುಲವು ಭಾಗಶಃ ರಾಚನಿಕವಾಗಿದ್ದು ಅದರ ಛತ್ತು ಸಂಪೂರ್ಣವಾಗಿ ಗುಹೆಯನ್ನು ಆಶ್ರಯಿಸಿದೆ. ಇದು ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ ಮಾತ್ರವಿದೆ. ಒಳಗಡೆ ಬೃಹತ್ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದು ಬ್ರಹ್ಮ ಪೀಠವನ್ನು ಹೊಂದಿದ್ದು ಸೋಮಸೂತ್ರ ಮತ್ತು ಬ್ರಹ್ಮ ಸೂತ್ರಗಳು ಸ್ಪಷ್ಟವಾಗಿ ಲಿಂಗದಲ್ಲಿ ಗೋಚರಿಸುತ್ತವೆ. ಲಿಂಗದ ಬಲಕ್ಕೆ ಅಭಿಷೇಕದ ಜಲತೀರ್ಥ ಹೋಗುಲು ಪ್ರನಾಳವಿರುವುದು ವಿಶೇಷ. ಸಾಮಾನ್ಯವಾಗಿ ಲಿಂಗಕ್ಕೆ ಎಡಗಡೆಗೆ ಪ್ರನಾಳವಿರುವುದು ಆದರೆ ಇಲ್ಲಿ ಬಲಗಡೆಗೆ ಕಂಡುಬಂದಿದ್ದು ವಿಶೇಷವಾಗಿದೆ.

ದೇಗುಲದ ದ್ವಾರದ ಬಲಭಾಗದಲ್ಲಿ ಶೈವ ದ್ವಾರಪಾಲಕನಿದ್ದಾನೆ ಮತ್ತು ದ್ವಾರದ ಎಡಬಲಗಳಲ್ಲಿ ಇತ್ತೀಚಿನ ಆಂಜನೇಯ, ಗಜ, ಉಬ್ಬುಶಿಲ್ಪಗಳು ಕಾಣಸಿಗುತ್ತವೆ. ಈ ದೇಗುಲದ ಎದುರಿಗೆ ಬೃಹತ್ ನಂದಿಶಿಲ್ಪವಿದೆ. ಸ್ಥಳಿಕರು ಇದಕ್ಕೆ ಮಲ್ಲಿಕಾರ್ಜುನ ದೇಗುಲ ಎಂದು ಕರೆಯುವರು.

ಈ ರೀತಿಯಾಗಿ ಬೃಹತ್ ಗುಹೆಯ ಆಶ್ರಯದಲ್ಲಿ ನಾಲ್ಕು ದೇಗುಲಗಳ ರಚನಾ ವಿನ್ಯಾಸ ಮತ್ತು ಮೂರ್ತಿ ಶಿಲ್ಪಗಳ ಪ್ರತಿಮಾಲಕ್ಷಣಗಳು ವಿಶಿಷ್ಟವಾಗಿಯೂ ಅತ್ಯಾಕರ್ಷಕವಾಗಿ ಕಂಡುಬಂದಿವೆ.

ಈ ದೇವಾಲಯದ ಎದುರಿಗೆ ಶಿವನ ವಾಹನವಾದ ನಂದಿಯು ಆಸೀನವಾಗಿದೆ. ಇದು ನಾಲ್ಕು ಅಡಿ ಎತ್ತರವಾಗಿದೆ. ಕೊರಳಲ್ಲಿ ಗೆಜ್ಜೆಸರ, ಹಣೆಕಟ್ಟು ಇದೆ. ಇತ್ತೀಚೆಗೆ ಸ್ಥಳಿಯರು ಬಣ್ಣ ಲೇಪಿಸಿರುವುದರಿಂದ ಮೂಲ ಕಳೆ ಕಂಡುಬರುವುದಿಲ್ಲ. ಶಿಲ್ಪವು ಮರಳು ಮಿಶ್ರಿತ ಕೆಂಪುಶಿಲೆಯಾಗಿದೆ.

ಗುಹೆಯ ಎದುರಿನ ಫಾಂಸನಾ ಶೈಲಿಯ ಏಳು ದೇಗುಲಗಳ ರಚನಾ ವಿನ್ಯಾಸ :

ಹುಲಿಗೆಮ್ಮ ಕೊಳ್ಳದಲ್ಲಿ ಬೃಹತ್ ಗುಹೆಯ ಎದುರಿಗೆ ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿ ಏಳು ಶೈವ ದೇಗುಲಗಳು ನಿರ್ಮಿತಗೊಂಡಿದ್ದು ಕಾಣಬಹುತ್ತವೆ. ಇವು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ನಿರ್ಮಾಣಗೊಂಡಿವೆ.

ಈ ದೇಗುಲಗಳ ರಚನಾ ವಿನ್ಯಾಸದ ಆಧಾರದ ಮೇಲೆ ಇವುಗಳಿಗೆ ಫಾಂಸನಾ ಮಾದರಿಯ ದೇಗುಲಗಳೆಂದು ಕರೆಯುವರು. ಮೂಲತಃ ಇವು ಕದಂಬನಾಗರ ಶೈಲಿ ಎಂಬುದಾಗಿ ಗುರುತಿಸಲ್ಪಟ್ಟಿವೆ. ಈಗಾಗಲೇ ದೇಗುಲದ ಪ್ರಭೇದಗಳನ್ನು ವಿಶ್ಲೇಷಿಸುವಾಗ ಈ ಮಾದರಿಯ ಲಕ್ಷಣಗಳನ್ನು ವಿವರಿಸಲಾಗಿದೆ. ಈ ಕೊಳ್ಳದಲ್ಲಿ ಎಲ್ಲಾ ಏಳು ದೇಗುಲಗಳಲ್ಲಿ ಲಿಂಗ ಪ್ರತಿಷ್ಠಾಪಿಸಿದ್ದು ವಿಶೇಷವಾಗಿದೆ.

೧ನೇ ಶೈವ ದೇಗುಲ : ಇದು ಶಿವ ದೇಗುಲವಾಗಿದ್ದು ಪೂರ್ವಾಭಿಮುಖವಾಗಿದೆ ಮತ್ತು ಈ ದೇಗುಲವು ಫಾಂಸನಾ ಶೈಲಿಯಲ್ಲಿದ್ದು, ತಲವಿನ್ಯಾಸವು ಗರ್ಭಗೃಹ ಮತ್ತು ಮುಖಮಂಟಪ (ತೆರೆದ)ದಿಂದ ಕೂಡಿದೆ. ಗರ್ಭಗೃಹದ ದ್ವಾರಬಂಧವು ಮೂರು ಶಾಖೆಗಳನ್ನು ಹೊಂದಿದೆ. ಶಿಖರವು ಮೇಲಕ್ಕೆ ಹೋದಂತೆ ಕ್ರಮೇಣ ಕಿರಿದಾಗುತ್ತಾ ಸಾಗಿದೆ ಮತ್ತು ಅದರಲ್ಲಿ ಒಂದರ ಮೇಲೊಂದು-ಕಪೋತ, ಜಂಘಗಳ ಸಾಲು ಕಂಡುಬಂದಿದ್ದು, ಭೂಮಿಗಳನ್ನು ಹೊಂದಿದೆ. ಆಮ್ಲಕವು ನೆಲ್ಲಿಕಾಯಿ ರೀತಿಯಲ್ಲಿ ವೃತ್ತಾಕಾರದಲ್ಲಿದೆ. ಕಲಶ (ಸ್ತೂಪ)ವು ಬಿದ್ದು ಹೋಗಿರಬಹುದು. ಭಿತ್ತಿ ಸರಳವಾಗಿದೆ. ಕಪೋತದಲ್ಲಿ ಗವಾಕ್ಷಿಗಳು, ಪದ್ಮಗಳು ಕಂಡುಬಂದಿವೆ.

ಗರ್ಭಗೃಹದಲ್ಲಿ ಲಿಂಗ ಪ್ರತಿಷ್ಠಾಪನೆಗೊಂಡಿದೆ. ಅದು ಬ್ರಹ್ಮಸೂತ್ರ ಮತ್ತು ಸೋಮಸೂತ್ರಗಳನ್ನು ಹೊಂದಿದೆ. ಇದು ರಾಷ್ಟ್ರಕೂಟರ ಕಾಲದ ಲಿಂಗವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗರ್ಭಗೃಹದ ಬಲಭಾಗದಲ್ಲಿ ಚತುರ್ಭುಜ ಶೈವ ದ್ವಾರಪಾಲಕನ ಉಬ್ಬಶಿಲ್ಪವಿದೆ. ಕೈಗಳಲ್ಲಿ ನಾಗ, ತ್ರಿಶೂಲ ಆಯುಧಗಳು ಕಂಡುಬಂದಿವೆ. ಶಿಲ್ಪವು ಕಿರೀಟಾಭರಣಗಳಿಂದ ಅಲಂಕೃತಗೊಂಡಿದೆ.

ಮುಖಮಂಟಪದ ಬ್ರಹ್ಮಕಾಂತಗಳು ಸೂಕ್ಷ್ಮ ಲತಾ ಕೆತ್ತನೆಯನ್ನು ಒಳಗೊಂಡಿವೆ. ಅಧಿಷ್ಠಾನವು ಭೂಮಿಯಲ್ಲಿ ಹುದುಗಿದೆ. ಆದರೂ ಇದು ಫಾಂಸನಾ ದೇಗುಲ ಎಂದ ಮೇಲೆ ಅಧಿಷ್ಠಾನವು ಪದ್ಮ, ಕಂಠ, ಕಪೋತಗಳಿಂದ ಕೂಡಿರಬಹುದೆಂದು ತಿಳಿಯಲಾಗಿದೆ.

೨ನೇ ಶೈವ ದೇಗುಲ :

ಈ ದೇವಾಲಯವು ಶಿವನಿಗೆ ಅರ್ಪಿತವಾಗಿದ್ದು ಪೂರ್ವಾಭಿಮುಖವಾಗಿದೆ. ಇದು ಕೂಡ ಫಾಂಸನ ಶೈಲಿಯ ದೇಗುಲವಾಗಿದೆ. ಇಲ್ಲಿ ಅಧಿಷ್ಠಾನ ಹುದುಗಿದೆ. ಭಿತ್ತಿ ಸರಳವಾಗಿದೆ. ಶಿಖರವು ಕದಂಬನಾಗರ ಶೈಲಿಯಲ್ಲಿದೆ. ಕಪೋತ, ಜಂಘಗಳ ಸಾಲಿನಿಂದ ಭೂಮಿಯನ್ನು ಹೊಂದಿದೆ. ಆಮ್ಲಕದ ಮೇಲೆ ಕಲಶವಿರುತ್ತದೆ. ಇದು ಗರ್ಭಗೃಹ ಮಾತ್ರ ಹೊಂದಿದೆ ಅದರೊಳಗೆ ಲಿಂಗ (೧ ಅಡಿ) ಪ್ರತಿಷ್ಠಾಪನೆಗೊಂಡಿದೆ ಇದರ ಪೀಠವು ಅರ್ಧ ಅಡಿ ಇದೆ. ದ್ವಾರಬಂಧವು ಚಿಕ್ಕ ಪಟ್ಟಿಯಾಕಾರದಲ್ಲಿ ಶಾಖೆಗಳನ್ನು ಹೊಂದಿದೆ.

ಈ ಗರ್ಭಗೃಹದ ಧ್ವಾರದ ಮುಂದೆ ತೃಟಿತ ಗಣೇಶ ವಿಗ್ರಹವಿದೆ. ಇದು ಕಿರೀಟರಹಿತವಾಗಿದ್ದು ಅಲಂಕಾರಿಕ ಅಭರಣಗಳಿಂದ ಕಂಗೊಳಿಸಿದೆ. ಎರಡು ಕೈಗಳು ಮಾತ್ರ ಕಾಣಸಿಗುತ್ತವೆ. ಕೈಗಳಲ್ಲಿರುವ ಆಯುಧಗಳು ಸ್ಪಷ್ಟವಾಗಿಲ್ಲ.

೩ನೇ ಶೈವ ದೇಗುಲ :

ಇದು ಶಿವ ದೇಗುಲವಾಗಿದೆ. ಉರ್ಧ್ವಮುಖ ವಿನ್ಯಾಸವು ಕದಂಬನಾಗರಶೈಲಿಯಲ್ಲಿದೆ. ಶಿಖರವು ಕಪೋತ, ಜಂಘಗಳ ಸಾಲಿನಿಂದ ಭೂಮಿಗಳನ್ನು ಹೊಂದಿದೆ. ಕಲಶರಹಿತ ಆಮ್ಲಕ ಮಾತ್ರ ಇದೆ. ಭಿತ್ತಿ ಸರಳವಾಗಿದೆ. ಶಿಖರದಲ್ಲಿ ಗವಾಕ್ಷಿಗಳು ಕಂಡುಬಂದಿವೆ. ಗರ್ಭಗೃಹ ಮಾತ್ರವಿದ್ದು ಬ್ರಹ್ಮಪೀಠದಲ್ಲಿ ಲಿಂಗ (೧ ಅಡಿ) ಪ್ರತಿಷ್ಠಾಪನೆಗೊಂಡಿದೆ. ಇಲ್ಲಿಯೂ ಅಧಿಷ್ಠಾನ ಭಾಗ ಹುದುಗಿದೆ. ಈ ದೇಗುಲವು ಪೂರ್ವಾಭಿಮುಖವಾಗಿದೆ. ದ್ವಾರಬಂಧವು ಹಾಳಾಗಿದೆ. ಲಿಂಗದಲ್ಲಿ ಸೋಮಸೂತ್ರ ಮತ್ತು ಬ್ರಹ್ಮಸೂತ್ರಗಳು ಕಂಡುಬಂದಿವೆ. ಈ ಲಿಂಗವು ರಾಷ್ಟ್ರಕೂಟರ ಕಾಲದ್ದು ಎಂದು ವಿದ್ವಾಂಸರು ಅಭಿಪ್ರಾಯವಾಗಿದೆ.

೪ನೇ ಶೈವ ದೇಗುಲ (ಉಮಾಮಹೇಶ್ವರ):

ಈ ದೇಗುಲವು ಪಶ್ಚಿಮಾಭಿಮುಖವಾಗಿದ್ದು ಗರ್ಭಗೃಹ ಮಾತ್ರ ಹೊಂದಿದೆ. ಇದರ ರಚನೆಯು ಫಾಂಸನಾ ಶೈಲಿಯಲ್ಲಿ ಕಂಡುಬಂದಿದೆ. ಶಿಖರವು ಕಪೋತ, ಜಂಘಗಳ ಸಾಲಿನಿಂದ ಭೂಮಿಗಳನ್ನು ಹೊಂದಿದ್ದು ಅಪೂರ್ಣಗೊಂಡಿದೆ. ದ್ವಾರಬಂಧವು ವಿವಿಧ ಶಾಖೆಗಳಿಂದ ಕೂಡಿದೆ. ಅಧಿಷ್ಠಾನವು ಪದ್ಮ, ಕಂಠ, ಕಪೋತಗಳಿಂದ ಕೂಡಿದೆ. ಜಂಘ (ಭಿತ್ತಿ) ಭಾಗದ ಮೇಲ್ಭಾಗವು ಕಪೋತಗಳಿಂದ ಕೂಡದ್ದು ಅದರಲ್ಲಿ ಗವಾಕ್ಷಗಳಿವೆ. ಶಿಖರದ

ಮೇಲೆ ಆಮ್ಲಕ ಮತ್ತು ಕಲಶ ಭಾಗ ಕಾಣಬರುವುದಿಲ್ಲ. ದೇಗುಲದ ಛತ್ತಿನ ಮಧ್ಯದಲ್ಲಿ ಪದ್ಮವಿದೆ. ಗರ್ಭಗೃಹದ ಒಳಗಡೆ ಉಮಾಮಹೇಶ್ವರ ಶಿಲ್ಪವು ಪೀಠದಲ್ಲಿ ಪ್ರತಿಷ್ಠಾಪಿಸಲಾಗಿದೆ. ಹೀಗಾಗಿ ಇದಕ್ಕೆ ಉಮಾಮಹೇಶ್ವರ ದೇಗುಲವೆಂದು ಕರೆಯುವರು.

ಉಮಾ ಮಹೇಶ್ವರ ಶಿಲ್ಪದ ಪ್ರತಿಮಾಲಕ್ಷಣ :

ಶಿವ ಪಾರ್ವತಿಯರೇ ಇಲ್ಲಿ ಉಮಾಮಹೇಶ್ವರರೆಂದು ಬಿಂಬಿತರಾಗದ್ದಾರೆ. ಶಿವನು ತ್ರಿಭಂಗಿಯಲ್ಲಿ ಸ್ಥಾನಿಕನಾಗಿದ್ದು ಮಹೇಶ್ವರಿಯು ಶಿವನ ಎಡಗಡೆ ಅತಿಭಂಗಿಯಲ್ಲಿದ್ದು ಮೇಲ್ಗಡೆ ಮುಖ ಮಾಡಿದ್ದಾಳೆ. ಶಿವನು ಚತುರ್ಭುಜನಾಗಿದ್ದು ಬಲಭಾಗದ ಕೈಯಲ್ಲಿ ಒಂದು ನಾಗನನ್ನು ಹಿಡಿದಿದ್ದು ಇನ್ನೊಂದು ತನ್ನ ಸೊಂಟದ ಮೇಲೆ ಇರಿಸಿದ್ದಾನೆ. ಎಡಭಾಗ ಕೈಗಳಲ್ಲಿ ಒಂದರಲ್ಲಿ ಡಮರು ಹಿಡಿದಿದ್ದು ಮತ್ತೊಂದನ್ನು ಪಾರ್ವತಿಯನ್ನು ಬಳಸಿದೆ.

ಉಮಾ ಮಹೇಶ್ವರಿ ಶಿಲ್ಪವು ಕಿರೀಟಧಾರಿಯಾಗಿದ್ದು ಶಿವನು ಮೇಲ್ಗಡೆ ದೃಷ್ಟಿ ಬೀರುತ್ತಾ ಮುಗುಳ್ನಗೆ ಬೀರಿದ್ದಾನೆ. ಕಿವಿಯೋಲೆ, ತೋಳಿನಲ್ಲಿ ನಾಗಮುರುಗಿ, ನಡಪಟ್ಟಿ, ಕೊರಳಹಾರ, ಕೈಗಡಗ ಮುಂತಾದ ವಸ್ತ್ರಾಭರಣದಿಂದ ಕೂಡಿದ್ದಾಳೆ. ಎರಡು ಕೈ ಮಾತ್ರವಿದ್ದು ಬಲಗೈಯನ್ನು ಪೃಷ್ಠಭಾಗ (ಕುಚ)ದಲ್ಲಿ ಇರಿಸಿದ್ದು ಎಡಗೈಯನ್ನು ಸೊಂಟದ ಮೇಲೆ ಇರಿಸಿದ್ದಾಳೆ. ಒಟ್ಟಿನಲ್ಲಿ ಇದು ಒಂದು ಉಬ್ಬುಶಿಲ್ಪವಾಗಿದ್ದು ಬ್ರಹ್ಮಪೀಠದಲ್ಲಿ ಪ್ರತಿಷ್ಠಾಪನೆಗೊಂಡಿದೆ.

೫ನೇ ಶೈವ ದೇಗುಲ :

ಇದೂ ಕೂಡ ಫಾಂಸನಾ ಮಾದರಿಯಲ್ಲಿದೆ. ಪಶ್ಚಿಮಾಭಿಮುಖವಾಗಿದ್ದು ಶಿವನಿಗೆ ಅರ್ಪಿತವಾಗಿದೆ. ಇದು ಕೊಳ್ಳದ ಎಡ ಪಾರ್ಶ್ವದಲ್ಲಿದೆ. ಇದರ ಉರ್ಧ್ವರಚನೆಯು ಅಧಿಷ್ಠಾನ, ಜಂಘ, ಶಿಖರ, ಆಮ್ಲಕ ಹೊಂದಿದ್ದು ಕಲಶವಿರುವುದಿಲ್ಲ. ಅಧಿಷ್ಠಾನದಲ್ಲಿ ಪದ್ಮ ಕಂಠ ಭಾಗಗಳು ಕಾಣುತ್ತವೆ. ಜಂಘ (ಭಿತ್ತಿ) ಮೇಲ್ಮೆ (ಪ್ರಸ್ತರ) ಕಪೋತದಿಂದ ಆವರಿಸಿದ್ದು ಅದರಲ್ಲಿ ಆಮ್ಲಕಗಳಿವೆ. ಶಿಖರದ ಮೇಲೆ ಘಂಟಾಭಾಗವಿದ್ದು ಅದರ ಮೇಲೆ ಆಮ್ಲಕವಿದೆ. ತಳ ವಿನ್ಯಾಸದಲ್ಲಿ ಗರ್ಭಗೃಹ ಮಾತ್ರವಿದ್ದು ಮುಖಮಂಟಪ ಬಿದ್ದು ಹೋಗಿದೆ. ಆದರೆ ಮುಖ ಮಂಟಪದ ಅಧಿಷ್ಠಾನ ಮಾತ್ರವಿದೆ.

ದ್ವಾರಬಂಧವು ಮೂರು ಶಾಖೆಯನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗ ಪ್ರತಿಷ್ಠಾಪಿಸಲಾಗಿದೆ. ಈ ಲಿಂಗದಲ್ಲಿ ರುದ್ರಪೀಠ ವಿಷ್ಣು ಪೀಠಗಳು ಕಂಡುಬಂದಿವೆ ಮತ್ತು ಸೋಮಸೂತ್ರ ಬ್ರಹ್ಮಸೂತ್ರಗಳನ್ನು ಒಳಗೊಂಡಿದೆ. ಲಿಂಗದ ಪ್ರನಾಳವು ಬಲಗಡೆ ಇದೆ. ಲಿಂಗವು ಒಂದೂವರೆ ಫೂಟ್ ಎತ್ತರವಾಗಿದೆ.

೬ನೇ ಶೈವ ದೇಗುಲ :

ಈ ದೇಗುಲವು ಕೊಳ್ಳದ ಎಡಪಾರ್ಶ್ವದ ಮುಂದೆ ಕಂಡು ಬಂದಿದ್ದು ಪಶ್ಚಿಮಾಭಿಮುಖವಾಗಿದೆ. ಇದು ಕೂಡ ಶಿವನಿಗೆ ಅರ್ಪಿತಗೊಂಡಿದ್ದು ಫಾಂಸನಾ ಶೈಲಿಯಲ್ಲಿದೆ. ಅಧಿಷ್ಠಾನ, ಪದ್ಮ, ಕಂಠದಿಂದ ಕೂಡಿದೆ. ಜಂಘಾ (ಭಿತ್ತಿ) ಸರಳವಾಗಿದೆ. ಶಿಖರ, ಕಪೋತದಲ್ಲಿ, ಗವಾಕ್ಷಗಳಿವೆ. ಶಿಖರದ ಮೇಲೆ ಘಂಟೆ ಮತ್ತು ಕಳಶವಿಲ್ಲ.

ತಲವಿನ್ಯಾಸವು - ಗರ್ಭಗೃಹ, ಮುಖಮಂಟಪಗಳಿಂದ ಕೂಡಿದೆ ಮತ್ತು ಐದು ಪಾದಗಳಿಂದ ಕೂಡಿದ ಎತ್ತರದ ಪೀಠದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದೇಗುಲದ ಛತ್ತು ಸರಳವಾಗಿದ್ದು ಚೌಕಾಕಾರದಲ್ಲಿದೆ. ಗರ್ಭಗೃಹದ ದ್ವಾರಬಂಧವು ವಿವಿಧ ಶಾಖೆಗಳಿಂದ ಕೂಡಿದೆ. ಮುಖಮಂಟಪವು ಭಿತ್ತಿಯಿಂದ ಆವರಿಸಿದೆ. ಈ ದೇಗುಲದ ಲಿಂಗವು ಸ್ಪಷ್ಟವಾದ ಬ್ರಹ್ಮ ಮತ್ತು ಸೋಮಸೂತ್ರಗಳನ್ನು ಹೊಂದಿದೆ. ಲಿಂಗದ ಪ್ರನಾಳವು ಅದರ ಬಲಭಾಗದಲ್ಲಿದೆ. ಲಿಂಗದ ಎತ್ತರ ಒಂದೂವರೆ ಅಡಿ ಇದೆ.

೭ನೇ ಶೈವ ದೇಗುಲ :

ಕೊಳ್ಳದ ಬೃಹತ್ ಗವಿಯ ಮುಂಭಾಗದಲ್ಲಿ ಈ ದೇಗುಲವು ಪೂರ್ವಾಭಿಮುಖವಾಗಿದ್ದು ಶಿವನಿಗೆ ಅರ್ಪಿತಗೊಂಡಿದೆ. ಇದು ಕೂಡ ಫಾಂಸನಾ ಶೈಲಿಯಲ್ಲಿದೆ. ತಲವಿನ್ಯಾಸವು ಗರ್ಭಗೃಹ ಮತ್ತು ತೆರೆದ ಮುಖಮಂಟಪ ಹೊಂದಿದೆ. ದೇಗುಲದ ಎದುರಿಗೆ ನಂದಿಶಿಲ್ಪವಿದೆ. (ಮೂರು ಅಡಿ) ಗರ್ಭದ ದ್ವಾರಬಂಧವು ಶಾಖೆಗಳಿಂದ ಕೂಡಿದೆ. ಮುಖಮಂಟಪದ ಬಲಭಾಗದಲ್ಲಿ ಗಣೇಶನ ಶಿಲ್ಪವು ಕಂಡುಬಂದಿದೆ. ಮಂಟಪದ ಸ್ತಂಭಗಳು ಅಲಂಕೃತಗೊಂಡಿದ್ದು ಪದ್ಮ ಬೋಧಿಗೆ ಹೊಂದಿವೆ. ಗರ್ಭಗೃಹದಲ್ಲಿ ಲಿಂಗಪ್ರತಿಷ್ಠಾಪನೆಯಾಗಿದ್ದು ಅದರ ಪ್ರನಾಳವು ಎಡಭಾಗದಲ್ಲಿದೆ. ಇದು ಸೋಮ ಮತ್ತು ಬ್ರಹ್ಮಸೂತ್ರಗಳಿಂದ ಕೂಡಿದ್ದು ಒಂದೂವರೆ ಅಡಿ ಎತ್ತರವಾಗಿದೆ. ಈ ರೀತಿಯಾಗಿ ಹುಲಿಗೆಮ್ಮಕೊಳ್ಳದ ಪರಿಸರದಲ್ಲಿ ಫಾಂಸನಾ ಶೈಲಿ ದೇಗುಲಗಳೇ ವಾಸ್ತುಕಲೆಯ ಆಕರ್ಷಕ ಕೇಂದ್ರಬಿಂದುಗಳಾಗಿ ಕಂಗೊಳಿಸಿವೆ.

ಬೃಹತ್ ಗುಹೆಯ ಎದುರಿನಲ್ಲಿರುವ ದೇಗುಲಗಳು :

೧ನೇ ಶಿವದೇಗುಲ :

ಈ ದೇವಾಲಯವು ಹುಲಿಗೆಮ್ಮನಕೊಳ್ಳದಲ್ಲಿಯ ಅತಿ ದೊಡ್ಡ ದೇಗುಲವಾಗಿದೆ. ಇದರ ಅಳತೆ ೬.೮೫ ೩.೫೦ಮೀ ಇದೆ. ಇದು ಬೃಹತ್ ಗುಹೆಯ ಎದುರಿಗೆ ಪೂರ್ವಾಭಿಮುಖವಾಗ್ಗಿದು ಶಿವನಿಗೆ ಅರ್ಪಿತಗೊಂಡಿದೆ. ಈ ದೇಗುವು ಗರ್ಭಗೃಹ ಮತ್ತು ಹೆಚ್ಚು ಅಗಲದ ಅರ್ಧಮಂಟಪವಿದೆ. ಮಂಚ ಬಂಧ ಶೈಲಿಯ ಅಧಿಷ್ಠಾನವಿದ್ದು ಭಿತ್ತಿಯ

ಮೇಲ್ಭಾಗವು ಅಡ್ಡಮಾಳಿಗೆಯಿಂದ ಕೂಡಿದೆ. ಆದರೆ ಶಿಖರವಿರುವುದಿಲ್ಲ. ಪ್ರಸ್ತರದ ಕಪೋತದ ಕೆಳಗೆ ಭಿತ್ತಿಯಲ್ಲಿ ಸುತ್ತಲು ತೋರಣಮಾಲಿಕೆ ಚಿತ್ರವಿದೆ.

ಅರ್ಧಮಂಟಪದ ದ್ವಾರಬಂಧದ ಬದಿಗಳಲ್ಲಿ ಶೈವ ದ್ವಾರಪಾಲಕರು, ಶಂಖನಿದಿ, ಪದ್ಮನಿಧಿ, ಶಿಲ್ಪಗಳಿವೆ. ದ್ವಾರಬಂಧವು ಅನೇಕ ಶಾಖೆಗಳಿಂದ ಕೂಡಿದ್ದು, ಅದರಲ್ಲಿ ಪುಷ್ಪ ಮತ್ತು ಲತೆಗಳನ್ನು ಕಾಣಾಲಾಗಿದೆ. ಮೇಲೆ ಲಲಾಟಬಿಂಬದಲ್ಲಿ ಉಮಾಮಹೇಶ್ವರನ ಶಿಲ್ಪವಿದೆ. ಈ ಶಿಲ್ಪದಲ್ಲಿ ನಂದಿ ಮಂಟಪದ ಛತ್ತಿನಲ್ಲಿ ಪದ್ಮವಿದೆ. ಈ ದೇಗುಲದ ಮುಂದೆ ನಂದಿ ಪೀಠಾಸೀನವಾಗಿದೆ. ಇದರ ಮುಖವು ಹಾಳಾಗಿದೆ. ದೇವಾಲಯದ ಮುಂಭಾಗದ ಬಲಬದಿಯ ಗೋಡೆಯ ಮೇಲೆ ಚಾಲುಕ್ಯ ೩ನೇ ವಿಕ್ರಮಾದಿತ್ಯನ (೭೩೩-೪೪) ಕಾಲದ ೩ ಸಾಲಿನ ಶಾನವಿದೆ. ದೇವಾರಿಯ ಮಗ ಬೆನಮ್ಮನ ಧರ್ಮವೆಂದು ಹೇಳಲಾಗಿದೆ.

ಈ ಶಾಸನದ ಪಾಠ ಹಾಗಿದೆ-

೧. ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಸತ್ಯಾಶ್ರೀಯ

೨. ದೇವಾಲಯ ಮಗನು ಬೆನ್ನಮ್ಮ ಕರಡದ

೩. ಪರದನಕೆ ಸೀದಮ್ಮ

ಗರ್ಭಗೃಹದ ದ್ವಾರ ಬಂಧದ ಬಲಭಾಗದಲ್ಲಿ ನೃತ್ಯ ಬಾಲಕ ಮತ್ತು ದ್ವಿಭುಜ ಗಣೇಶನ ಉಬ್ಬುಶಿಲ್ಪಗಳಿವೆ. ಎಡಭಾಗದಲ್ಲಿ ಕುಳಿತ ಬಾಲಕ ಮಹಿಷಿಮರ್ಧಿನಿ ಮತ್ತು ಹೂಬುಟ್ಟಿಯನ್ನು ಹಿಡಿದು ಪುರುಷರ ಚಿತ್ರಗಳಿವೆ. ಇದರ ಶಾಖೆಯ ಕೆಳಗೆ ಎಡಬಲ ಭಾಗಗಳಲ್ಲಿ ಶಿಲ್ಪಗಳಿದ್ದು ನಸಿಸಿ ಹೋಗಿವೆ. ಶಾಖೆಯು ಪುಷ್ಪಲತೆಯಿಂದ ಅಲಂಕೃತವಾಗಿದೆ. ಗರ್ಭಗೃಹದಲ್ಲಿ ಲಿಂಗವು ರುದ್ರ, ವಿಷ್ಣು ಮತ್ತು ಬ್ರಹ್ಮಪೀಠದಲ್ಲಿ ಪ್ರತಿಷ್ಠಾಪನೆಗೊಂಡಿದೆ. ಇದರ ಪ್ರನಾಳಿಯು ಲಿಂಗದ ಎಡಭಾಗದಲ್ಲಿದೆ. ಲಿಂಗವು ೩ ಅಡಿ ಎತ್ತರವಾಗಿದೆ.[೪೩]

೩ನೇ ಶಿವ ದೇಗುಲ :

ಕೊಳ್ಳದ ಗವಿಯ ಮುಂಭಾದಲ್ಲಿ ಪೂರ್ವಾಭಿಮುಖವಾಗಿ ಈ ದೇಗುಲವು ನಿರ್ಮಿತವಾಗಿದೆ. ಇಲ್ಲಿಯೂ ಮಂಚ ಬಂಧ ಶೈಲಿಯ ಅಧಿಷ್ಠಾನವಿದೆ. ಭಿತ್ತಿಯು ಸರಳವಾಗಿದ್ದು ಅದರ ಕಪೋತದ ಕೆಳಗೆ ತೋರಣ ಮಾಲಿಕೆ ಇದೆ ಮತ್ತು ಈ ದೇವಾಲಯವು ಕೂಡಾ ಶಿಖರರಹಿತವಾಗಿದ್ದು ಸಮತಟ್ಟಾದ ಅಡ್ಡ ಮಾಳಿಗೆಯನ್ನು ಹೊಂದಿದೆ. ಪ್ರಸ್ತರವು ಕಪೋತ, ಗವಾಕ್ಷಗಳಿಂದ ಕೂಡದ್ದು ಗವಾಕ್ಷದಲ್ಲಿ ಪದ್ಮವಿದೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ ಮಾತ್ರವಿದ್ದು ಮುಖಮಂಟಪ ಬಿದ್ದು ಹೋಗಿದೆ. ದ್ವಾರಬಂಧವು ಅನೇಕ ಶಾಖೆಗಳಿಂದ ಕೂಡಿದೆ. ಗರ್ಭಗೃಹದಲ್ಲಿ

ಲಿಂಗವು ರುದ್ರಪೀಠ ಮತ್ತು ವಿಷ್ಣುಪೀಠದಲ್ಲಿ ಕಾಣುತ್ತದೆ. ಇದರ ಎತ್ತರ ಎರಡು ಅಡಿ ಇದೆ. ದೇಗುಲದ ಛತ್ತಿನ ಭಾಗವು ಸರಳ ಮಾದರಿಯಲ್ಲಿದ್ದು ಚೌಕಾಕಾರವಾಗಿದೆ. ಒಟ್ಟಿನಲ್ಲಿ ಈ ದೇಗುಲವು ಶಿವನಿಗೆ ಅರ್ಪಿತವಾದುದಾಗಿದೆ.

ಈ ರೀತಿಯಾಗಿ ಹುಲಿಗೆಮ್ಮ ಕೊಳ್ಳದಲ್ಲಿ ಒಟ್ಟು ೧೩ ದೇಗುಲಗಳು ನಿರ್ಮಿತವಾಗಿದ್ದು, ಎಲ್ಲವೂ ಶೈವಧರ್ಮದ ಪ್ರತೀಕಗಳಾಗಿವೆ. ಚಲುಕ್ಯರ ಕಾಲದ ಫಾಂಸನಾ ಶೈಲಿಯ ದೇಗುಲಗಳು ಐಹೊಳೆ ಮಹಾಕೂಟದಲ್ಲಿ ಅಷ್ಟೇ ಅಲ್ಲ ಹುಲಿಗೆಮ್ಮನಕೊಳ್ಳದಲ್ಲಿ ಹೆಚ್ಚು ಕಂಡುಬರುತ್ತಿರುವದು ಒಂದು ವಿಶಿಷ್ಟ ಸಂಗತಿಯಾಗಿದೆ.

ಬಾಚಿನಗುಡ್ಡ ಪರಿಸರದಲ್ಲಿರುವ ದೇವಾಲಯಗಳು :

೧. ಮಹಿಷಮರ್ದಿನಿ (ದುರ್ಗಾ) ದೇವಾಲಯ :

ಈ ದೇವಾಲಯವು ಬಾದಾಮಿ ಚಲುಕ್ಯರ ಕಾಲದ[೪೪] ನಿರ್ಮಿತಿಯಾಗಿದೆ. ಬಾಚಿನಗುಡ್ಡ (ಮರಡಿ)ದ ದಕ್ಷಿಣದ ಅಂಚಿನಲ್ಲಿರುವ ಈ ದೇವಾಲಯ ಗರ್ಭಗುಡಿ ಅದರ ಮಂಟಪ ಮತ್ತು ಕಕ್ಷಾಸನವಿದ್ದು ಮುಖಮಂಟಪವಿದ್ದು ಈಗ ಅರ್ಧಮಂಟಪ ಮಾತ್ರ ಇದೆ. ಇದರ ಸುತ್ತಮುತ್ತ ಬಿದ್ದಿರುವ ಶಿಖರದ ನಟರಾಜನ ಶಿಲ್ಪವುಳ್ಳ ಸುಖನಾಸಿಯ ಮುಖಪಟ್ಟಿ , ಶಾಲ ಮುಂತಾದ ಅವಶೇಷಗಳು ಈ ಗುಡಿಗೆ ವಿಮಾನ ಶೈಲಿಯ ಶಿಖರವಿದ್ದಿತ್ತೆಂದು ಸೂಚಿಸುವವು. ಈಗ ಉಳಿದಿದ್ದು ಅರ್ಧ ಮಂಟಪದ ಹಿಂಬದಿಗೆ ಹಾಸುಗಲ್ಲುಗಳನ್ನು ಅಡ್ಡ ಇಟ್ಟು ಮತ್ತೆ ಗುಡಿಯಾಗುವ ಹಾಗೆ ಮಾಡಿ ಇದರೊಳಗೆ ಒಂದು ಅದೇ ಕಂಬ ಬಹಳಷ್ಟು ಎಣ್ಣೆ ಗಷ್ಟಿನಿಂದ ಅಸ್ಪಷ್ಟವಾದ ಮಹಿಷಮರ್ದಿನಿಯ ಮೂರ್ತಿಯನ್ನಿಡಲಾಗಿದೆ. ಅರ್ಧ ಮಂಟಪದ ಸಮತಲ ಮಾಡಿನ ಮಧ್ಯದಲ್ಲಿ ಅನಂತಶಯನ ಮೂರ್ತಿಯ ಉಬ್ಬುಶಿಲ್ಪಗಳು ಇವೆ. ಅನಂತಶಯನ ಮೂರ್ತಿಯಲ್ಲಿ ಕಮಲಾಸನಸ್ಥ ಬ್ರಹ್ಮನ ಚಿತ್ರವಿದೆ. ಐಹೊಳೆಯ 'ಕೊಂತಿ ಗುಡಿಗಳು' ಎಂದು ಕರೆಯಲಾದ ಪೂರ್ವಾಭಿಮುಖವಾದ ಈಶ್ವರನ ಗುಡಿಯೊಳಗಿನ ಅನಂತಶಯನ ಚಿತ್ರದಂತಿದೆ.''[೪೫] ಇದರೊಳಗೆ ಮತ್ತೊಂದು ದೊಡ್ಡ ಪ್ರಮಾಣದ ಮಹಿಷಿಮರ್ದಿನಿ ಶಿಲ್ಪದ ಒಂದು ಭಾಗ ಮಾತ್ರ ಇದೆ. ಅದು ಹೆಚ್ಚುಕಡಿಮೆ ದುಂಡುಶಿಲ್ಪದಲ್ಲಿರುವ ಮಹಿಷಾಸುರ ತನ್ನ ಬಲವನ್ನೆಲ್ಲ ಉಪಯೋಗಿಸಿ ದೇವಿಗೆ ಹೊಡೆಯಲು ಆಯುಧ ಹಿಡಿದ ಬಲಗೈಯ ಭಂಗಿ ಮತ್ತು ಮುಖದಲ್ಲಿಯ ಆತ್ಮವಿಶ್ವಾಸ ಮತ್ತು ಅವನು ಧರಿಸಿದ ಹೆಣೆದು ಮಾಡಿದ ಎದೆಕವಚ ನಿಜವಾಗಿಯೂ ಹೊಗಳುವಂಥಾದ್ದು. ಒಂದು ಶ್ರೇಷ್ಠ ಕಲಾಕೃತಿ. ಇದರ ಪ್ರಮಾಣದಿಂದ ದೇವಿಮೂರ್ತಿಯೂ ನಿಜವಾಗಿಯೂ ಮನಸ್ಸಿಗೆ ಹಿಡಿಯುವಂಥ ಅಪರೂಪದ ಭವ್ಯ ಶಿಲ್ಪವಾಗಿದ್ದಿರಬೇಕು ಎಂದು ಹೇಳಬಹುದು. ಕಳೆದುಹೋದದ್ದು ವಿಷಾದನೀಯ ಆದ್ದರಿಂದ ಮೂಲತಃ ಈ ದೇವಾಲಯವು ದುರ್ಗಾದೇವಾಲಯವಾಗಿರಬೇಕು. ಸಾಮಾನ್ಯವಾಗಿ ಚಲುಕ್ಯ ದೇವಾಲಯಗಳಲ್ಲಿ ಅದರಲ್ಲೂ ಮಧ್ಯಮ ಹಾಗೂ ಸಣ್ಣ ಪ್ರಮಾಣದ ಗುಡಿಗಳಲ್ಲಿ ಅರ್ಧಮಂಟಪವಿರುವ ದೇವಾಲಯಗಳು ಸ್ವಲ್ಪವೇ ಇವೆ.

೨. ಶೈವ ದೇವಾಲಯ :

ಬಾಚಿನಗುಡ್ಡದ ಮರಡಿಯ ಮೇಲೆ ಇರುವ ಈ ದೇವಾಲಯ ರಾಷ್ಟ್ರಕೂಟರ ಕಾಲದ ನಿರ್ಮಾಣವಾಗಿದೆ. ಕೇವಲ ಗರ್ಭಗೃಹ ಮಾತ್ರ ಉಳಿದಿದೆ. ಇದರ ವಾಸ್ತುಶಿಲ್ಪ ಲಕ್ಷಣಗಳು : ಪದ್ಮಬಂಧ ಶೈಲಿಯ ಅಧಿಷ್ಠಾನ, ಸಮಾನಾಂತರದಲ್ಲಿರುವ ಅರ್ಧಗಂಭಗಳುಳ್ಳ ಗೋಡೆ, ಕಪೋತ ಮತ್ತು ಅಡ್ಡ ಮಾಳಿಗೆ ಸರಳ ರೇಖೆಗಳಿಂದ ಕೂಡಿದ ದ್ವಾರ ಮತ್ತು ಒಳಗೆ ಅಷ್ಟಭುಜದ ಛತ್ತು ಸುಮಾರು ೧೦-೧೧ನೆಯ ಶತಮಾನದ ಮಧ್ಯನಾಡಿ ಪಾರ್ಶ್ವಸೂತ್ರಗಳಿಂದ ಕೂಡಿದ ಲಿಂಗವು (೬೩ ಸೆಂ.ಮೀ. ಎತ್ತರ ಮತ್ತು ೧.೫೬ ಸೆಂ.ಮೀ. ಸುತ್ತಳತೆ) ಭವ್ಯವಾಗಿದೆ. ಹೊರಗೋಡೆಯಲ್ಲಿ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕಿಗೆದುರಾಗಿ ಮೂರು ದೇವಕೋಷ್ಟಗಳಿವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಪಶ್ಚಿಮ ಮತ್ತು ಉತ್ತರದ ದೇವಕೋಷ್ಠಗಳಲ್ಲಿ ಕ್ರಮವಾಗಿ ಉಗ್ರನರಸಿಂಹ ಮತ್ತು ಬ್ರಹ್ಮನ ಶಿಲ್ಪಗಳಿವೆ. ದಕ್ಷಿಣದಲ್ಲಿರುವ ದೇವಕೋಷ್ಟದಲ್ಲಿ 'ಶಿವ' ವಿಗ್ರಹವು ಕಳಚಿಹೋಗಿದ್ದು ಮರಡಿಯ ಕೆಳಭಾಗದಲ್ಲಿ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತಿದ್ದು ಮೂಲ ಸ್ವರೂಪ ಭಗ್ನಗೊಂಡಿದೆ. ಆದ್ದರಿಂದ ಮೂಲತಃ ಇದು ತ್ರೈಪುರುಷ (ಬ್ರಹ್ಮ, ಶಿವ ಮತ್ತು ವಿಷ್ಣುವಿನ) ದೇವಾಲಯವಾಗದ್ದು ನಂತರ ಕೇವಲ ಶೈವದೇವಾಲಯವಾಗಿ ಉಳಿದಿರುವ ಹಾಗೆ ಕಾಣುವುದು.

ಹುಲಿಗೆಮ್ಮ ಕೊಳ್ಳದ ಶಿಲ್ಪಕಲೆ :

೧. ನಾಗಶಿಲ್ಪ :

ಈ ಶಿಲ್ಪವು ಬೃಹತ್ ಬಂಡೆಯ ಆಶ್ರಯದಲ್ಲಿದ್ದು ಇದಕ್ಕೆ ನಾಲ್ಕು ಕೈಗಳಿವೆ. ಒಂದು ಬಲಕೈಯಲ್ಲಿ ಶಂಖ, ಮತ್ತೊಂದು ಕೈಯಲ್ಲಿ ಚಕ್ರ ಕಂಡುಬರುತ್ತದೆ. ಎಡಗೈ ನಾಗಪೀಠವನ್ನು ಆಶ್ರಯಿಸಿದೆ. ಶಿಲ್ಪವು ಕಿರೀಟಧಾರಿಯಾಗಿದ್ದು ಐದು ಹೆಡೆಯ ನಾಗ ಪ್ರಭಾವಳಿ ಇದೆ .ಕೆಳಗಡೆ ಚೌಕಪೀಠವಿದ್ದು ಈ ಶಿಲ್ಪವು ೨.೫ ಅಡಿ ಎತ್ತರವಿದೆ. ಹಸನ್ಮುಖಿಯಾಗಿರುವ ಅನಂತಶಯನು ಕಿವಿಯೋಲೆ, ಕಾಮನಬಿಲ್ಲಿನಂತ ಹುಬ್ಬು, ಕೈಗಡಗ ಧರಿಸಿರುವನು ಈ ಶಿಲ್ಪ ಮರುಳು ಮಿಶ್ರಿತ ಕೆಂಪು ಶಿಲೆಯದಾಗಿದೆ. ಕರಂಡ ಮುಕುಟ, ಚಕ್ರಕುಂಡಲ, ಪದಕಸರ, ಮಣಿಬಂಧವುಳ್ಳ ಯಜ್ಞೋಪವೀತ, ನಾಗಮುರಿಗೆ, ಉದರಪಟ್ಟಿ ಇವೆಲ್ಲವನ್ನು ಅಲಂಕರಿಸಿವೆ. ಇವನು ಸಾಮಾನ್ಯ ನಾಗನಾಗಿರದೆ ವಿಷ್ಣುವಿಗೆ ಆಸನ ಅಥವಾ ಹಾಸಿಗೆಯಾಗಿರುವ 'ಅನಂತ' ಅಥವಾ 'ವಾಸುಕಿ' ಯಾಗಿರಬೇಕು. ಆದ್ದರಿಂದ ವಿಷ್ಣುವಿನ ಅಂಶವಾದ ಚಕ್ರ, ಶಂಖಧಾರಿಯಾದ ಮತ್ತೆರಡು ಹಸ್ತಗಳನ್ನು ತೋರಿಸಲಾಗಿದೆ. ಇಂಥ ಶಿಲ್ಪ ಇದುವರೆಗೆ ತಿಳಿದಮಟ್ಟಿಗೆ ಇದೊಂದೆ.[೪೬]

ಭಗ್ನಗೊಂಡ ಶಿವನ ವಿಗ್ರಹ :

ಸಮಪಾದ ಭಂಗಿಯಲ್ಲಿ ನಿಂತಿದ್ದು ಅಷ್ಟ ಕೈಗಳಿವೆ. ಜಟ (ಉಂಗುರ) ಮುಕುಟದಾರಿ. ಬಲಗೈಯಲ್ಲಿ ಡಮರು, ಎಡಗೈಯಲ್ಲಿ ತ್ರಿಶೂಲ, ನಾಗ ಇದೆ. ಉಳಿದ ಕೈಗಳು ಭಗ್ನಗೊಂಡಿವೆ. ತೋಳಬಂಧಿ, ನಾಡಪಟ್ಟಿ, ಅಲಂಕಾರಿಕ ಕೊರಳಹಾರದಿಂದ ಶೃಂಗಾರಗೊಂಡಿದ್ದಾನೆ. ಎಡಭಾಗದಲ್ಲಿ ಮೂರು ಬೃಂಗಿಗಳು ಕಂಡುಬರುತ್ತವೆ. ಬಲಗೈ ತೃಟಿತಗೊಂಡಿದ್ದು ಪಾದಗಳು ಮಾತ್ರ ಇವೆ. ಹಸನ್ಮುಖಿಯಾದ ಶಿವನು ದುಂಡು ಮುಖ ಬಿಲ್ಲಿನಾಕಾರದ ಹುಬ್ಬು ಅರಳಿದ ಕಮಲದಂತಹ ತೆರೆದ ಕಣ್ಣುಗಳು, ಗುಂಗುರು ಕೂದಲು ಜಟಾಕಿರೀಟ ಹೊಂದಿರುವನು. ಈ ಶಿಲ್ಪವು ತ್ರಿಪಾದ ಪೀಠದ ಮೇಲಿದೆ. ಇದನ್ನು ಬಳಪದ ಕಲ್ಲಿನಿಂದ ಮಾಡಲಾಗಿದ್ದು ವೈಶಿಷ್ಟ್ಯಪೂರ್ಣ ಶಿಲ್ಪವಾಗಿದೆ.

ಗಣೇಶ ಶಿಲ್ಪ : ಎತ್ತರ -ಮೂರೂವರೆ ಅಡಿ, ಶಿಲೆ-ಮರಳುಮಿಶ್ರಿತ ಕೆಂಪುಶಿಲೆ. ಈ ಕೊಳ್ಳದಲ್ಲಿ ಒಟ್ಟು ನಾಲ್ಕು ಗಣೇಶ ಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲಿ ಒಂದು ಕೊಳ್ಳದ ಬಲಭಾಗದಲ್ಲಿ ಫಾಂಸನ ಮಾದರಿಯ ದೇವಾಲಯದ ಮುಖಮಂಟಪದಲ್ಲಿ, ಇನ್ನೊಂದು ಕೊಳ್ಳದ ಮುಂಭಾಗದಲ್ಲಿರುವ ಶಿವದೇವಾಲಯದ ಮುಖಮಂಟಪದಲ್ಲಿ ಮತ್ತೊಂದು ಸಪ್ತಮಾತೃಕೆಯರ ಎಡಭಾಗದಲ್ಲಿರುವ ಉಬ್ಬುಶಿಲ್ಪ ಮತ್ತು ಬಲಭಾಗದಲ್ಲಿ ಬಿಡಿ ಶಿಲ್ಪ ಪ್ರಮುಖವಾಗಿವೆ. ಸಪ್ತಮಾತೃಕೆಯರ ಎಡಭಾಗದಲ್ಲಿರುವ ಶಿಲ್ಪವನ್ನು ಹೊರತುಪಡಿಸಿ ಉಳಿದ ಮೂರು ಶಿಲ್ಪಗಳ ಗಾತ್ರ ಒಂದೇ ತೆರನಾಗಿದೆ.

ಬೃಹತ್ ಬಂಡೆಯ ಆಶ್ರಯದಲ್ಲಿರುವ ಈ ಗಣೇಶನು ಚತುರ್ಭುಜನಾಗಿದ್ದು ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಸೊಂಡಿಯಿಂದ ತಿನಿಸು ತೆಗೆದುಕೊಳ್ಳುತ್ತಿದ್ದಾನೆ. ಇನ್ನೊಂದು ಕೈಯಲ್ಲಿ ಪರಶುಇದೆ. ಕಿರೀಟರಹಿತನಾಗಿದ್ದಾನೆ. ಈ ಶಿಲ್ಪವು ಪೀಠಾಸೀನವಾಗಿದ್ದು ಸೊಂಡಿಲು ಎಡಕ್ಕೆ ತಿರುಗಿದೆ. ಕೊರಳಹಾರ, ತೋಳುಬಂಧಿಯಿಂದ ಅಲಂಕಾರನಾಗಿದ್ದಾನೆ.

ಸಪ್ತಮಾತೃಕೆಯರ ಎಡಭಾಗದಲ್ಲಿರುವ ಗಣೇಶನ ಉಬ್ಬುಶಿಲ್ಪವು ಸಹ ಕಿರೀಟರಹಿತವಾಗಿದ್ದು, ಸೊಂಡಿಲು ಎಡಕ್ಕೆ ತಿರುಗಿಕೊಂಡಿದೆ. ಬಲಗೈಯಲ್ಲಿ ಹೊತ್ತಿಗೆ ಕಂಡುಬರುವುದು. ಎಡಗೈಯಿಂದ ಫಲ ಪಡೆಯುತ್ತಿದ್ದಾನೆ. ಎರಡು ಕೈಗಳು ಮಾತ್ರ ಇವೆ. ನಡಪಟ್ಟಿ, ತೋಳಬಂಧಿ, ಕೈಗಡಗ ಕಂಡುಬರುತ್ತವೆ. ಈ ಶಿಲ್ಪವು ಎರಡು ಅಡಿ ಎತ್ತರವಾಗಿದ್ದು ಸ್ಥಳಿಯರು ಬಣ್ಣ ಹಚ್ಚಿರುವುದರಿಂದ ಮೂಲ ನೈಸರ್ಗಿಕ ಅಲಂಕಾರದ ಕೊರತೆ ಕಂಡುಬರುತ್ತದೆ.

ಬೃಹತ್ ಬಂಡೆಯ ಆಶ್ರಯದಲ್ಲಿ ದಕ್ಷಿಣಾಭಿಮುಖವಾಗಿ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬರುತ್ತವೆ. ಇವುಗಳ ನೇರ ಬಲಬದಿಯಲ್ಲಿ ಬ್ರಹ್ಮ, ವಿಷ್ಣು, ವೃಷಭವಾಹನ ಸಹಿತ ಪಾರ್ವತಿ-ಪರಮೇಶ್ವರರು ಮತ್ತು ಎಡಬದಿಯಲ್ಲಿ ಮೇಲೆ ಹೇಳಿದ ದ್ವಿಭುಜ ಗಣೇಶ ಇರುವರು.

ಬ್ರಹ್ಮ : ಪದ್ಮಾಸನದಲ್ಲಿ ಕುಳಿತಿರುವ ಇವನು ಚತುರ್ಭುಜನಾಗಿರುವನು. ಬಲಗೈಯಲ್ಲಿ ದಂಡ ಮತ್ತು ಕಮಲ, ಎಡಗೈಯಲ್ಲಿ ಜಪಮಾಲೆ ಇವೆ. ಕಿವಿಯೋಲೆ, ಕೊರಳಹಾರ, ತೋಳ್ಬಂದಿ, ನಡಪಟ್ಟಿ, ಕೈಗಡಗ, ಕಾಲ್ಗಡಗಗಳಿಂದ ಅಲಂಕೃತವಾಗಿದ್ದಾನೆ. ಕಮಲ ಪೀಠಾಸೀನವಾಗಿದ್ದ ಈ ಶಿಲ್ಪವು ಒಂದೂವರೆ ಅಡಿ ಎತ್ತರವಾಗಿದೆ.

ವಿಷ್ಣು : ಚತುರ್ಭುಜನಾಗಿರುವ ವಿಷ್ಣು ಬಲಗೈಯಲ್ಲಿ ಚಕ್ರ, ಆಶೀರ್ವಾದ ಮುದ್ರೆ, ಎಡಗೈಯಲ್ಲಿ ಶಂಖ ಮತ್ತೊಂದು ಕೈ ಪೀಠಕ್ಕೆ ಆಶ್ರಯವಾಗಿದೆ. ಕಮಲ ಪೀಠಾಸೀನದಲ್ಲಿರುವ ವಿಷ್ಣು ಕಿರೀಟಧಾರಿಯಾಗಿದ್ದು ಕವಿಯೋಲೆ, ಕೊರಳಹಾರ, ತೋಳುಬಂದಿ, ಕೈಗಡಗ, ಕಾಲ್ಗಡಗ, ನಡಪಟ್ಟಿಯಿಂದ ಶೃಂಗಾರಗೊಂಡಿದ್ದಾನೆ. ಹಸನ್ಮುಖಿಯಾಗಿರುವ ಶಿಲ್ಪವು ಒಂದೂವರೆ ಅಡಿ ಎತ್ತರವಾಗಿದೆ.

ಪಾರ್ವತಿ ಪರಮೇಶ್ವರ : ಕಲಮಪೀಠಾಸನವಾಗಿರುವ ಶಿವನ ತೊಡೆಯ ಮೇಲೆ ಪಾರ್ವತಿಯು ಆಸೀನಳಾಗಿದ್ದಾಳೆ. ಈ ದಂಪತಿಗಳು ಪ್ರಲಂಭಾಸನದಲ್ಲಿದ್ದು ಶಿವನು ಚತುರ್ಭುಜಧಾರಿಯಾಗಿದ್ದಾನೆ. ಬಲಭುಜದ ಮೇಲ್ಭಾಗದಲ್ಲಿ ಉಬ್ಬುಲಿಂಗವಿದ್ದು ಶಿವನ ವಾಹನವಾದ ನಂದಿಯು, ಬಲಗಡೆ ಮುಖಮಾಡಿದೆ. ಇದರ ಹಣೆಯ ಮೇಲೆ ಅಲಂಕಾರಿಕ ಹಣೆಕಟ್ಟು ಇದೆ. ಇದರ ಕಣ್ಣುಗಳು ತದೇಕ ಚಿತ್ತದಿಂದ ನೋಡುವಂತಿದ್ದು ಕಿವಿಗಳು ಏನೋ ಗ್ರಹಿಸುವಂತೆ ಭಾಸವಾಗುತ್ತವೆ. ಕಿರೀಟಧಾರಿ ಶಿವನು ಕೊರಳಹಾರ, ತೋಳಬಂಧಿ, ಕೈಗಡಗ, ನಡಪಟ್ಟಿ, ಕಿವಿಯೊಲೆ, ಜಟಾಮುಕುಟನಾಗಿದ್ದಾನೆ. ಮುಖಲಕ್ಷಣ ನೇರದೃಷ್ಟಿಯಾಗಿದ್ದು ಹಸನ್ಮುಖಿಯಾಗಿದ್ದಾನೆ. ತಲೆಯ ಮೇಲೆ ಉಷ್ಣೀಶ ಕಂಡುಬರುವುದು.

ಪಾರ್ವತಿಯು ಪ್ರಲಂಭಾಸನದಲ್ಲಿ ಶಿವನ ಎಡ ತೊಡೆಯ ಮೇಲೆ ಕುಳಿತಿದ್ದು, ಪಾರ್ಶ್ವನೋಟ ಬೀರಿದ್ದಾಳೆ. ಕೊರಳಹಾರ, ಕಿವಿಯೋಲೆ ಧರಿಸಿದ್ದಾಳೆ. ಬಲಗೈಯನ್ನು ಶಿವನ ತೊಡೆಯ ಮೇಲೆ ಇರಿಸಿದ್ದು, ಎಡಗೈ ಭುಜದ ಮೇಲೆ ಇದೆ. ನಡಪಟ್ಟಿ, ತೋಳಬಂಧಿ ಧರಿಸಿದ್ದು ಕಿರೀಟರಹಿತಳಾಗಿರುವಳು.

ಸಪ್ತಮಾತೃಕೆಯರು :

ಬ್ರಹ್ಮ, ವಿಷ್ಣು, ಮಹೇಶ್ವರರ ಮಧ್ಯದಲ್ಲಿ ರತಕ್ಕಂತ ಈ ಸಪ್ತಮಾತೃಕೆಯರನ್ನು ಕುರಿತು ಬಾದಾಮಿ ಚಲುಕ್ಯರು ತಾವು ಸಪ್ತಮಾತೃಕೆಯರಿಂದ ಅನುಗ್ರಹಿತರೆಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ.[೪೭] ಹುಲಿಗೆಮ್ಮ ಕೊಳ್ಳಕ್ಕೆ ಹತ್ತಿರದ ಐಹೊಳೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ದೊರೆತಿವೆಯಾದರೂ ಈ ಕೊಳ್ಳದಲ್ಲಿ ಇರುವ ಸಪ್ತಮಾತೃಕೆ ಲಕ್ಷಣಗಲು ವ್ಯತ್ಯಾಸದಿಂದ ಕೂಡಿವೆ. ಕೊಳ್ಳದಲ್ಲಿಯ ಸಪ್ತಮಾತೃಕೆಯರು ಚತುರ್ಭುಜರಾಗಿದ್ದು ಆಸೀನರಾಗಿರುವದರೊಂದಿಗೆ ಅವರವರ ವಾಹನಗಳನ್ನು ಶಿಲ್ಪಿಯು ಕೆಳಗಡೆ ಚಿತ್ರಿಸಿದ್ದಾನೆ. ಇವರು ಕ್ರಮವಾಗಿ ಮಹೇಶ್ವರನ ಎಡದಿಂದ ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ ಮತ್ತು ಚಾಮುಂಡಾ

ಇರುವರು. ಇವರ ಕೊನೆಯಲ್ಲಿ ವಿನಾಯಕ ಆಸೀನನಾಗಿದ್ದಾನೆ. ಇವುಗಳಿಗೆ ಸ್ಥಳಿಯರು ಬಣ್ಣ ಮತ್ತು ಎಣ್ಣೆ ಹಚ್ಚಿರುವುದರಿಂದ ಇವುಗಳ ನೈಸರ್ಗಿಕ ಹೊಳಪು ಕಳೆದುಹೋಗಿದೆ. ಎಲ್ಲರೂ ಕಿರೀಟಧಾರಿಗಳಾಗಿದ್ದು ಕೊರಳಲ್ಲಿ ಹಾರ, ಕೈಯಲ್ಲಿ ಬಳೆ ತಮ್ಮ ತಮ್ಮ ಆಯುಧಗಳನ್ನು ಹೊಂದಿದ್ದಾರೆ. ತಾಯಿಯರು ಕಮಲಪೀಠದಲ್ಲಿ ಆಸೀನರಾಗಿದ್ದಾರೆ. ಬ್ರಾಹ್ಮೀ, ಮಹೇಶ್ವರಿ ಪದ್ಮಾಸನದಲ್ಲಿ ಉಳಿದ ನಾಲ್ವರು ವಾಮಲಲಿತಾಸನದಲ್ಲಿ ಮತ್ತು ಚಾಮುಂಡಿಯು ಪ್ರಲಂಭಾಸನದಲ್ಲಿ ಕುಳಿತಿದ್ದಾರೆ. ಸಪ್ತಮಾತೃಕೆಯರೊಡನೆ ಸಾಮಾನ್ಯವಾಗಿ ಕೇವಲ ಶಿವನ (ಕಾಲಕ್ರಮೇಣ ವಿಣಾಧರ, ವೀರಭದ್ರನ) ಚಿತ್ಕರವಿರುತ್ತದೆ. ಆದರೆ ಈ ಪಟ್ಟಿಕೆಯಲ್ಲಿ ವೃಷಭವಾಹನ, ಉಮಾ-ಮಹೇಶ್ವರನ ಮತ್ತು ಬ್ರಹ್ಮ, ವಿಷ್ಣುವನ್ನು ತೋರಿಸಲಾಗಿದೆ.[೪೮]

ಲಜ್ಜಾಗೌರಿ ಶಿಲ್ಪ :

ಚಲುಕ್ಯರ ಕಾಲದ ಶಿಲ್ಪಗಳಲ್ಲಿ ಇದು ವಿಶಿಷ್ಟ ಶಿಲ್ಪವಾಗಿದೆ. ಹುಲಿಗೆಮ್ಮನಕೊಳ್ಳ ಮತ್ತು ಇದರ ಸುತ್ತಲಿನ ಪರಿಸರದಲ್ಲಿ ಪ್ರಮುಖವಾಗಿ ನಾಗನಾಥನಕೊಳ್ಳ, ಮಹಾಕೂಟ(ಹೊಸ) ಸಿದ್ಧನಕೊಳ್ಳ ಐಹೊಳೆಗಳಲ್ಲಿ[೪೯] ಈ ಶಿಲ್ಪಗಳು ವಿಶೇಷವಾಗಿ ಕಂಡುಬರುತ್ತವೆ. ಚಲುಕ್ಯರ ಈ ಶಿಲ್ಪಗಳಲ್ಲಿ ಅತ್ಯಂತ ಕಲಾತ್ಮಕ ಶಿಲ್ಪವೆಂದರೆ ಬಾದಾಮಿ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿರುವ ಶಿಲ್ಪವಾಗಿದೆ.[೫೦] ಇದು ಮೂಲತಃ ನಾಗನಾಥನಕೊಳ್ಳದ್ದಾಗಿದೆ.

ಹುಲಿಗೆಮ್ಮನ ಕೊಳ್ಳದಲ್ಲಿ ಎರಡುಲಜ್ಜಾಗೌರಿ ಶಿಲ್ಪಗಳಿದ್ದು (೮೨ ೫೬ ಸೆಂ.ಮೀ. ೫೫ ೩೧ ಸೆಂ.ಮೀ) ಈ ಶಿಲ್ಪಿಗಳ ಲಕ್ಷಣವು ಸ್ತ್ರೀಯ ಅಂಗಾತವಾಗಿ ಮಲಗಿರುವ ಸಂಭೋಗಭಂಗಿಯದೋ ಅಥವಾ ಕುಳಿತ ಪ್ರಸೂತಿ ಭಂಗಿಯದೋ ಎಂಬ ಸಂದೇಹ ಕಂಡುಬರುತ್ತದೆ. ಯೋನಿಯು ಕಾಣಿಸುವಂತೆ ಎರಡೂ ಕಾಲುಗಳನ್ನು ಮಡಚಿ ಮೇಲಕ್ಕೆ ಎಳೆದು ಕೊಂಡಿರುವಂತೆ ಶಿಲ್ಪದ ರಚನೆ ಇದೆ. ಈ ಶಿಲ್ಪಕ್ಕೆ ಮುಖವಿರದೆ ಅದರ ಜಾಗೆಯಲ್ಲಿ ಕಮಲ ಪುಷ್ಪವಿದೆ. ಸ್ತ್ರೀಯ ಎರಡು ಕೈಗಳಲ್ಲಿ ಒಂದೊಂದು ಕಮಲದ ಪುಷ್ಪವಿರುವುದು ಈ ಶಿಲ್ಪದ ಲಕ್ಷಣ. ಇದಕ್ಕೆ ಸ್ಥಳಿಯರು ಸುಣ್ಣ ಹಚ್ಚಿರುವುದರಿಂದ ಮೂಲ ಸೂಕ್ಷ್ಮ ಲಕ್ಷಣಗಳು ಅಸ್ಪಷ್ಟವಾಗಿವೆ. ಈ ಶಿಲ್ಪದ ಕುರಿತು ಅನೇಕ ವಿದ್ವಾಂಸರು ಅನೇಕ ರೀತಿಯ ಭಿನ್ನಾಭಿಪ್ರಾಯ ವ್ಯಕ್ತಪಡಿಸಿರುವರು. ಅವುಗಳೆಂದರೆ :

ಗುದಸ್ಥಾನದ ಮೂಲಾಧಾರ ಚಕ್ರದಿಂದ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿ, ಸುಷುಮ್ನನಾಡಿ ಮಾರ್ಗವಾಗಿ ಅದನ್ನು ಮೇಲ್ಮುಖವಾಗಿ ಹರಿಸಿ, ಮೆದುಳಿನಲ್ಲಿರುವ ಸಹಸ್ರದಳ ಚಕ್ರ (ಕಮಲ)ಕ್ಕೆ ಮುಟ್ಟಿಸುವುದು ತಾಂತ್ರಿಕರ ಉದ್ದೇಶವಾಗಿದ್ದು, ಇದನ್ನು ಈ ವಿಗ್ರಹ ಪ್ರತಿನಿಧಿಸುತ್ತದೆಂದು ಅ. ಸುಂದರ ಹೇಳುತ್ತಾರೆ.[೫೧] ಆದರೆ ಇದು ಫಲಶಕ್ತಿಯ ಸಂಕೇತವೆಂದೂ ಫಸಲು ಸಮೃದ್ಧಿಗಾಗಿ ಇದನ್ನು ಆರಾಧಿಸುತ್ತಿರಬಹುದೆಂದೂ ಡಾ.ಎಂ. ಚಿದಾನಂದಮೂರ್ತಿ ಹೇಳುತ್ತಾರೆ.[೫೨] ಬಂಜೆಯರು ಮಕ್ಕಳಿಗಾಗಿ ಕೆಲವೊಮ್ಮೆ ಈ ವಿಗ್ರಹವನ್ನು ಪೂಜಿಸುವುದರಿಂದ

ಇದು ಕೇವಲ ಮಕ್ಕಳ ಫಲಕ್ಕಾಗಿ ಪೂಜಿಸುವ ದೇವತೆಯೆಂದು ಹೇಳಬೇಕೆನಿಸುತ್ತಿದ್ದರೂ ಇದು ಆಮೇಲೆ ಬೆಳೆದುಬಂದ ನಂಬಿಕೆಯಾಗಿರುವಂತೆ ಕಾಣುತ್ತದೆ. ಒಟ್ಟಿನಲ್ಲಿ ಇದು ಲೌಕಿಕ ಫಲಪ್ರಾಪ್ತಿಗಾಗಿ ಪೂಜಿಸುವ ವಿಗ್ರಹವಲ್ಲವೆನಿಸುತ್ತದೆ.[೫೩]

ಈ ವಿಗ್ರಹದ ಬಗೆಗೆ ಎರಡು ಜಾನಪದ ಹೇಳಿಕೆಗಳಿವೆ. ೧) ಒಮ್ಮೆ ಶಿವ ಮತ್ತು ಪಾರ್ವತಿ ನಗ್ನ ಜಲಕ್ರೀಡೆಯಾಡುತ್ತಿದ್ದರು. ಆಗ ಭಕ್ತನೊಬ್ಬ ತನ್ನ ದರ್ಶನಕ್ಕೆ ಬರಲು ಶಿವನು ಓಡಿಹೋಗಿ ದೇವಾಲಯದ ಲಿಂಗದಲ್ಲಿ ಲೀನವಾದನು. ಪಾರ್ವತಿ ಲಜ್ಜೆಯಿಂದ ನೀರಿನಲ್ಲಿ ಅಡಗಿದಳು. ಪಾರ್ವತಿಯ ಈ ಲಜ್ಜೆಗೆ ಕಾರಣವಾಗಿ ಆಕೆಯನ್ನು ''ಲಜ್ಜಾಗೌರಿ'' ಎಂದು ಕರೆಯುತ್ತಾರೆಂದು 'ದೇವಿಕೋಶ' ತಿಳಿಸುತ್ತದೆ.[೫೪] ೨) ಶ್ರೀ ಗಣೇಶಶಾಸ್ತ್ರಿ ಲೇಲೆ ಅವರು ಮಹಾಕೂಟದಲ್ಲಿ ಸಂಗ್ರಹಿಸಿದ ಹೇಳಿಕೆ ಹೀಗಿದೆ: ಪಾರ್ವತಿಗೆ ತನ್ನ ಕಂಬಳಿಯನ್ನು ಕೊಟ್ಟು ಲೋಕಸಂಚಾರಕ್ಕೆ ಹೋಗಿದ್ದ ಶಿವನು ತಾನೇ ಇಲಿಯಾಗಿ ಬಂದು ಅದನ್ನು ಅಲ್ಲಲ್ಲಿ ಕಡಿದ ಇದರಿಂದ ತಾನು ಗಂಡನ ಕೋಪಕ್ಕೆ ಗುರಿಯಾಗಬೇಕಾಗುವುದೆಂದು ಪಾರ್ವತಿ ನಡುಗಿದಳು. ಅಷ್ಟರಲ್ಲಿ ಶಿವ ಸಿಂಪಿಗನ ರೂಪದಲ್ಲಿ ಬರುತ್ತಾನೆ. ಕಂಬಳಿಯನ್ನು ಮೊದಲಿನಂತೆ ಹೊಲಿದುಕೊಟ್ಟರೆ ಬೇಡಿದುದನ್ನು ಕೊಡುವುದಾಗಿ ಸಿಂಪಿಗನಿಗೆ ಪಾರ್ವತಿ ಮಾತು ಕೊಡುತ್ತಾಳೆ. ಕಂಬಳಿಯನ್ನು ಮೊದಲಿನಂತೆ ಮಾಡಿದ ಸಿಂಪಿಗ ಪಾರ್ವತಿಗೆ ಭೋಗಸುಖವನ್ನು ಕೇಳಿದ. ಮಾತುಕೊಟ್ಟ ತಪ್ಪಿಗಾಗಿ ಪಾರ್ವತಿ ಅನಿವಾರ್ಯ ಒಪ್ಪಿದಳು. ಸಂಭೋಗ ನಿರತ ಸಿಂಪಿಗ ತನ್ನ ಶಿವರೂಪ ತೋರಿದ. ಆಗ ಪಾರ್ವತಿ ಲಜ್ಜೆಯಿಂದ ತಲೆಕೆಳಗೆ ಮಾಡಿದಳು. ರುಂಡ ಕತ್ತರಿಸಿ ಬಿದ್ದಿತು. ಸಂಭೋಗ ಸಮಯದ ನಗ್ನರೂಪದಲ್ಲಿಯೇ ಮುಂಡ ಉಳಿದುಬಿಟ್ಟಿತು. ಇದೇ 'ಲಜ್ಜಾಗೌರಿ' ಈ ಕಥೆ ಲಜ್ಜಾಗೌರಿ ವಿಗ್ರಹ ರುಂಡರಹಿತವಾಗಿರುವುದಕ್ಕೆ ನಗ್ನವಾಗಿರುವುದಕ್ಕೆ ಸುದಂರ ಕಾರಣವನ್ನು ಒದಗಿಸುತ್ತದೆ. ಶಂಕರ ದಾಸಿಮಯ್ಯನ ಪುರಾಣ ಮತ್ತು ಜನಪದ ಸಾಹಿತ್ಯಗಳಲ್ಲಿಯೂ ಈ ಕಥೆ ಕಂಡುಬರುವುದು.[೫೫]

ಸಾಮಾನ್ಯವಾಗಿ ಲಜ್ಜಾಗೌರಿ ವಿಗ್ರಹಗಳು ಕೊಳ್ಳಗಳಲ್ಲಿ ಮಾತ್ರ ದೊರೆತಿವೆ. ಈ ಕೊಳ್ಳಗಳಲ್ಲಿ ಈಗ ಜನವಸತಿಯಿಲ್ಲ. ಪೂರ್ವಕಾಲದಲ್ಲಿಯೂ ಇದ್ದ ಸೂಚನೆಯಿಲ್ಲ. ಬಹುಶಃ ನಿರ್ಜನ ಸ್ಥಳದಲ್ಲಿ ರಹಸ್ಯವಾಗಿ ಈ ಮೂರ್ತಿಗಳನ್ನು ಪೂಜಿಸುತ್ತಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಬತ್ತಲೆಗೌರಿ (ಲಜ್ಜಾಗೌರಿ) ತುಂಬಾ ಪ್ರಾಚೀನವಾದುದೆಂದು ತೋರುತ್ತದೆ. ಅದರಲ್ಲಿಯೂ ಈ ಪರಿಸರದ ಸುತ್ತಲೂ ಹೆಚ್ಚು ಸಿಗುತ್ತವೆ. ಆದುದರಿಂದ ಬಾದಾಮಿ ಕ್ಷೇತ್ರ ಈ ಸಂಪ್ರದಾಯದ ಒಂದು ಮುಖ್ಯ ನೆಲೆಯೆನಿಸುತ್ತದೆ. ಈ ಪರಿಸರ ಪ್ರಮುಖವಾಗಿ ಶೈವ ಪರಿಸರವಾಗಿರುವುದರಿಂದ ಶೈವ ಸಂಪ್ರದಾಯಕ್ಕೂ ಲಜ್ಜಾಗೌರಿಗೂ ತಾತ್ವಿಕ, ಆಚರಣಾತ್ಮಕ ಸಂಬಂಧವಿರಬೇಕು.[೫೬] ಲಜ್ಜಾಗೌರಿಗೆ ಸಂಬಂಧಿಸಿದಂತೆ, ಹಿಂದೆ ಹೇಳಿದ ಶಿವಸಿಂಪಿಗನ ಕಥೆಯ ಘಟನೆ ಮಾಗಂಡ ಕ್ಷೇತ್ರದಲ್ಲಿ ಅಂದರೆ ಮಹಾಕೂಟದಲ್ಲಿ ಜರುಗಿತೆಂದು

ಶಂಕರದಾಸಿಮಯ್ಯನ ಪುರಾಣ ಹೇಳುವುದನ್ನು ಇಲ್ಲಿ ಪೋಷಕವಾಗಿಟ್ಟುಕೊಳ್ಳಬಹುದು. ಈ ಲಜ್ಜಾಗೌರಿ ವಿಗ್ರಹ ಒಂಬತ್ತು ಲಿಂಗಗಳ ಪರಿಸರದಲ್ಲಿರುವುದಕ್ಕೆ ಏನಾದರೂ ವಿಶೇಷ ಅರ್ಥವಿದೆಯೇ? ವಿಚಾರಿಸಬೇಕು. ಏಕೆಂದರೆ ಅಲಂಪುರದ ಲಜ್ಜಾಗೌರಿ ವಿಗ್ರಹವು ನವಬ್ರಹ್ಮೇಶ್ವರ (ನವಲಿಂಗೇಶ್ವರ) ದೇವಾಲಯದಲ್ಲಿದೆ[೫೭] ಹಾಗೆ ಹುಲಿಗೆಮ್ಮನಕೊಳ್ಳದಲ್ಲಿ ಪ್ರಾಚೀನ ನವಲಿಂಗೇಶ್ವರ ದೇವಾಯಗಳಿವೆ.

ಈ ಬತ್ತಲೆಸ್ತ್ರೀ ವಿಗ್ರಹವನ್ನು (ಕೆಲವೊಮ್ಮೆ ಬತ್ತಲೆಸ್ತ್ರೀಯರನ್ನು[೫೮]) ಪೂಜಿಸುತ್ತಿದ್ದವರು ಯಾವ ಪಂಥದವರು ? ಎಂಬ ಪ್ರಶ್ನೆಗೆ ನಾವು ಇಲ್ಲಿ ಉತ್ತರಿಸಬೇಕಾಗಿದೆ. ಶಿವನ ಉಗ್ರರೂಪ ಭೈರವ, ಶಕ್ತಿಯ ಉಗ್ರರೂಪ ಕಾಳಿ, ಭೈರವನ ಆರಾಧಕರು ಕಪಾಲಿಕರು, ಕಾಳಿಯ ಆರಾಧಕರು ಕಾಳರೆಂದು ಸಮಯ ಪರೀಕ್ಷೆ ಮತ್ತು ಶಂಕರದಾಸಿಮಯ್ಯನ ಪುರಾಣಗಳು ತಿಳಿಸುತ್ತವೆ. ಶಂಕರದಾಸಿಮಯ್ಯನ ಪುರಾಣದಲ್ಲಿ ''ಹೊಲತಿಯರನರ್ಚಿಸಿರಿ ಪ್ರಾಣಿಯ ಕೊಲುವಿರನುಜೆಭಗಿನಿ ಜನನಿಸುತೆ । ಗೆಳಸುವಿರಿ.....[೫೯]ಎಂದು ಕೌಳರ ಬಗೆಗೆ ಹೇಳಲಾಗಿದೆ. ಆದುದರಿಂದ ವಾಮಮಾರ್ಗಿಗಳ ಈ ಕಾಳರು ನಗ್ನಸ್ತ್ರೀ ಇಲ್ಲವೆ ನಗ್ನಸ್ತ್ರೀ ವಿಗ್ರಹಗಳನ್ನು ಗವಿ, ಕೊಳ್ಳ, ಅರಣ್ಯ ಇತ್ಯಾದಿ ಏಕಾಂತ ಪರಿಸರದಲ್ಲಿ ಪೂಜಿಸುತ್ತಿದ್ದ ವಿಗ್ರಹಗಳಾಗಿವೆ.[೬೦]

ಲಜ್ಜಾಗೌರಿ ತುಂಬಾ ವಿಲಕ್ಷಣ ವಿಗ್ರಹ, ಶಿಷ್ಟಪದರ ಸೌಮ್ಯ ದೇವತೆಗಳಿಂದಲೂ ಜಾನಪದರ ಉಗ್ರದೇವತೆಗಳಿಂದಲೂ ಇದು ಪ್ರತ್ಯೇಕವಾಗಿ ನಿಲ್ಲುವ ದೇವತೆ. ಸಾಮಾನ್ಯವಾಗಿ ತೀರ್ಥಂಕರರು, ಭೈರವ ಇತ್ಯಾದಿ ಪುರುಷ ವಿಗ್ರಹಗಳ ಬತ್ತಲೆತನವನ್ನು ರೂಢಿಸಿಕೊಂಡ ಜನತೆಯ ಕಣ್ಣಿಗೆ ಅಪರೂಪವಾಗಿ ಕಾಣಿಸಿಕೊಳ್ಳುವ ಈ ನಗ್ನ ಸ್ತ್ರೀವಿಗ್ರ ಸಹಜವಾಗಿಯೇ ವಿಶೇಷ ಕುತೂಹಲ ಹುಟ್ಟಿಸುತ್ತದೆ. ಹೀಗಾಗಿ ಜನಪದರು ಲಜ್ಜಾಗೌರಿ ವಿಗ್ರಹದ ಬಗ್ಗೆ ಪ್ರತ್ಯೇಕ ಅನಿಸಿಕೆ, ನಂಬಿಕೆಗಳನ್ನು ಬೆಳೆಸಿಕೊಂಡು ಬಂದಿರುವುದು ಸಹಜ. ಇವುಗಳಲ್ಲಿ ಸರ್ವಸಾಮಾನ್ಯ ನಂಬಿಕೆಯೆಂದರೆ ಲಜ್ಜಾಗೌರಿ ಮಕ್ಕಳ ಫಲಕೊಡುವ ದೇವತೆಯೆಂಬುದು. ಹೀಗಾಗಿ ಈ ನಂಬಿಕೆಯ ಸುತ್ತ ಕೆಲವು ಜಾನಪದ ಆಚರಣೆಗಳು ಹೀಗೆ ಸಮಾಜದಲ್ಲಿ ಬೆಳೆದುಬಂದಿವೆ.[೬೧]

ಇದಕ್ಕೆ ಸಾರ್ವಜನಿಕ ಪೂಜೆ ಉತ್ಸವಗಳಿಲ್ಲ, ವೈಯಕ್ತಿಕ ಆದರಲ್ಲಿಯೂ ಗುಪ್ತಪೂಜೆಗೆ ಇಲ್ಲಿ ಅವಕಾಶವಿದ್ದರೂ ಇಂದು ಅಂಥ ಪೂಜೆಗಳು ನಡೆಯುವ ಬಗ್ಗೆ ಆಧಾರಗಳಿಲ್ಲ. ಆದರೆ ಮಕ್ಕಳಿಗಾಗಿ ಹಂಬಲಿಸುವ ಮಹಿಳೆಯರು ಈ ವಿಗ್ರಹವನ್ನು ಪೂಜಿಸುವರೆಂದು ಅದರ ಯೋನಿಯನ್ನು ನೆಕ್ಕುವರೆಂದು ತಿಳಿದುಬರುತ್ತದೆ. ಸಿದ್ದನಕೊಟ್ಟ(ಕೊಳ್ಳ?) ವಿಗ್ರಹದ ಯೋನಿಗೆ ಬೆಣ್ಣೆ, ಸಿಂಧೂರ ಹಚ್ಚುವುದಾಗಿ ಶ್ರೀ ಡೇರೆ ಹೇಳುತ್ತಾರೆ.[೬೨]

ಉಳುಮೆ ಮಾಡುತ್ತಿರುವ ರೈತನ ಉಬ್ಬುಶಿಲ್ಪ :

ಹುಲಿಗೆಮ್ಮ ಕೊಳ್ಳದ ಸಾಂಸ್ಕೃತಿಕ ಅಧ್ಯನಯದ ಜೊತೆಗೆ ಕೆಲವೊಂದು ಸುತ್ತಮುತ್ತಲಿನ ಪ್ರದೇಶಗಳ ಕ್ಷೇತ್ರಕಾರ್ಯ ಕೈಗೊಂಡಾಗ ಬಾದಾಮಿ ಚಲುಕ್ಯರ ದತ್ತಿ ಗ್ರಾಮವಾದ ''ಶ್ರೀಯಂಬಾಟಕ' ಎಂಬಲ್ಲಿ ಅಂದರೆ ಈಗಿನ ಶಿರಬಡಗಿ ಗ್ರಾಮದಲ್ಲಿ ಉಳುಮೆ ಮಾಡುತ್ತಿರುವ ರೈತನ ವಿಶೇಷ ಉಬ್ಬು ಶಿಲ್ಪವು ದೊರೆತಿದೆ.

ಈ ತರಹದ ಶಿಲ್ಪವು ಕರ್ನಾಟಕದಲ್ಲಿಯೇ ಮೊದಲಬಾರಿಗೆ ಕಂಡುಬಂದಿರುವುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ವಿಶಿಷ್ಟ ರೀತಿಯ ಪ್ರತಿಮಾ ಲಕ್ಷಣಗಲನ್ನು ಹೊಂದಿರುವ ಶಿಲ್ಪವು ದೊರೆತಿರುವುದು ಸಂತಸಕರವಾಗಿದೆ.

ಈ ಶಿಲ್ಪವು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಪ್ರಮುಖವಾಗಿ ಇದರ ಪ್ರತಿಮಾ ಲಕ್ಷಣಗಳೆಂದರೆ ಎರಡು ಎತ್ತುಗಳಿಂದ ರೈತನು ರಂಟೆ ಹೊಡೆಯುತ್ತಿರುವ ದೃಶ್ಯ ಕಂಡುಬಂದಿದೆ. ಇಲ್ಲಿ ಸ್ಪಷ್ಟವಾಗಿ ರಂಟೆ ಹೊಡೆಯುವ ಚಿತ್ರ, ಬಸವಣ್ಣ(ಎತ್ತು)ನ ಅಲಂಕಾರ ಮತ್ತು ರೈತನ ಆಂಗಿಕ ಚಲನೆಗಳು ಇವೆಲ್ಲವುಗಳು ಇತ್ತೀಚಿನ ರೈತಾಪಿವರ್ಗವನ್ನೇ ಹೋಲುತ್ತವೆ. ಹಾಗೆಯೇ ಎತ್ತುಗಳ ಹೆಗಲಿನ ಮೇಲೆ ನೊಗವು ಸ್ಪಷ್ಟವಾಗಿ ಹಗ್ಗದಿಂದ ಜೋಡಣೆಗೊಂಡಿದ್ದು ಕೆಳಗೆ ರಂಟೆಯಲ್ಲಿಯೂ ಈ ಹಗ್ಗ ಕಾಣಸಿಗುತ್ತದೆ. ಅದರಂತೆ ರೈತನ ಬಲಗೈಯಲ್ಲಿ ರಂಟೆಯ ಮೇಳಿ ಮತ್ತು ಎಡಗೈಯಲ್ಲಿ ಎತ್ತಿನ ಚಾಟಿ (ಬಾರಕೋಲು) ಕಂಡುಬರುವುದು ವಿಶೇಷವಾಗಿದೆ. ಹಾಗೆಯೇ ರೈತನ ಉಡುಗೆ-ತೊಡುಗೆಯು ಇಂದಿನ ರೈತನನ್ನು ಪ್ರತಿನಿಧಿಸುತ್ತದೆ. ಅದರಂತೆ ಉಳುಮೆ ಮಾಡುತ್ತಿರುವ ರೈತನ ಹಿಂದೆ ಇನ್ನೆರಡು ಶಿಲ್ಪಗಳಿವೆ. ಅವುಗಳಲ್ಲಿ ಸ್ಪಷ್ಟವಾದ ಲಕ್ಷಣಗಳು ಕಂಡುಬರುವುದಿಲ್ಲ.

ಪ್ರಸ್ತುತವಾಗಿ ಈ ವಿಶಿಷ್ಟ ಶಿಲ್ಪವು ಶ್ರೀಯಂಬಾಟಕ (ಶಿರಬಡಗಿ)ದ ಮಾರುತೇಶ್ವರ (ಆಂಜನೇಯ) ದೇವಾಲಯದ ಪ್ರಾಕಾರದ ಪೂರ್ವದಿಕ್ಕಿನಲ್ಲಿ ಕಂಡುಬರುತ್ತದೆ. ಹಾಗೆಯೇ ಶಿಲ್ಪವು ತಿಳಿ ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿದೆ. ಇಂತಹ ಶಿಲ್ಪವು ಮತ್ತೊಂದು ಪ್ರದೇಶದಲ್ಲಿ ಎಲ್ಲಿಯೂ ಕಂಡುಬಂದಿರಲಿಕ್ಕಿಲ್ಲವೆಂಬುದು ವಿಶಿಷ್ಟ ಸಂಗತಿಯಾಗಿದೆ. ಹಾಗೆಯೇ ಇಂತಹ ಶಿಲ್ಪದ ಬಗ್ಗೆ ಇದುವರೆಗೆ ಯಾರೂ ಎಲ್ಲಿಯೂ ಪ್ರಕಟಿಸಿಲ್ಲವೆಂದು ವಿದ್ವಾಂಸರು ಊಹಿಸಿದ್ದಾರೆ.

ಕೆಸರಿ (ಸಿಂಹ) ಶಿಲ್ಪ :

ಈ ಶಿಲ್ಪವು ದುಂಡು ಶಿಲ್ಪವಾಗಿದ್ದು, ಬಾಚಿನಗುಡ್ಡದಲ್ಲಿ ಕಂಡುಬಂದಿದೆ. ಈ ಶಿಲ್ಪವು ಮಧ್ಯಮ ಗಾತ್ರದ್ದಾಗಿದ್ದು ಎದೆಹಾರ ಬೃಹತ್ತಾಗಿದ್ದು, ಸೊಂಟದ ಭಾಗ ತೆಳುವಾಗಿದೆ. ಅದರ ಕುತ್ತಿಗೆಯ ಸುತ್ತ ದಟ್ಟ ಕೇಶಗಳನ್ನು ಚಿತ್ರಿಸಿದ್ದು ಕಂಡುಬಂದಿದೆ. ಅದರಂತೆ ಮುಂಗಾಲಿನಿಂದ ವರಾಹವನ್ನು ಸಂಹರಿಸುವಂತೆ ತೋರುತ್ತದೆ. ಈ ಶಿಲ್ಪವು ಮರಳು

ಮಿಶ್ರಿತ ಕೆಂಪು ಶಿಲೆಯದಾಗಿದ್ದು ಮೂರು ಅಡಿ ಎತ್ತರವಾಗಿದೆ. ಸ್ಥಳೀಕರು ಇದು ದುರ್ಗಿಯ ವಾಹನವೆಂದು ತಿಳಿದು ಪ್ರತಿನಿತ್ಯ ಪೂಜಿಸುತ್ತಿದ್ದಾರೆ.

ಉಗ್ರ ನರಸಿಂಹನ ಶಿಲ್ಪ :

ಹಳೆ ಶಿಲಾಯುಗದ ಮತ್ತು ಬೃಹತ್ ಶಿಲಾ ಸಮಾಧಿಯ ನೆಲೆಯಾದ ಬಾಚಿನಗುಡ್ಡದಲ್ಲಿ ರಾಷ್ಟ್ರಕೂಟರ ಕಾಲದ ಒಂದು ಶೈವ ದೇಗುಲ ಕಾಣಬರುತ್ತದೆ. ಈ ಶೈವ ದೇಗುಲದ ಭಿತ್ತಿಯಲ್ಲಿ ಮೂರು ದೇವಕೋಷ್ಟಕಗಳಿದ್ದು ಒಂದರಲ್ಲಿ ಈ ಉಗ್ರನರಸಿಂಹನ ಶಿಲ್ಪವು ಕಂಡುಬಂದಿದೆ.

ಈ ನರಸಿಂಹ ಮೂರ್ತಿಯು ವಿಷ್ಣುವಿನ ಅವತಾರವಾಗಿದ್ದು ಅಸುರ, ಹಿರಣ್ಯಕಶ್ಯಪನನ್ನು ಸಂಹರಿಸುವ ದೃಶ್ಯ ಮನೋಜ್ಞವಾಗಿ ಶಿಲ್ಪಿತಗೊಂಡಿದೆ. ಪ್ರಮುಖ ಈ ಶಿಲ್ಪದ ಪ್ರತಿಮಾ ಲಕ್ಷಣವೇನೆಂದರೆ-ಸಿಂಹದ ಮುಖವನ್ನು ಹೊಂದಿದ್ದು ನರದೇಹವನ್ನು ಹೊಂದಿದೆ. ಚತುರ್ಭುಜಧಾರಿಯಾದ ಈ ಶಿಲ್ಪವು ಎರಡು ಕೈಗಳಲ್ಲಿ ಶಂಖ ಮತ್ತು ಪರಶು ಹಿಡಿದಿದ್ದು ಇನ್ನೆರಡು ಕೈಗಳು ಅಸುರ ಹಿರಣ್ಯಕಶ್ಯಪನ ಹೊಟ್ಟೆಯನ್ನು ಬಗಿಯುತ್ತಿದೆ. ಈ ಕೈಗಳಲ್ಲಿ ಬೆರಳುಗಳ ನಖಗಳು ಸಿಂಹದ ನಖಗಳಂತೆ ತೋರುತ್ತವೆ.

ಈ ಶಿಲ್ಪದಲ್ಲಿ ನರಸಿಂಹ ಮಾಲೆ ಹಾಗೂ ವಸ್ತ್ರಾಭರಣಗಳಿಂದ ಶೋಭಿತಗೊಂಡಿದ್ದು ಕಿರೀಟಪ್ರಾಯವಾಗಿದೆ ಮತ್ತು ಹಿರಣ್ಯಕಶ್ಯಪನ ಮೂರ್ತಿಯು ನರಸಿಂಹನ ತೊಡೆಯ ಮೇಲೆ ಕಂಡುಬಂದಿದೆ. ಒಟ್ಟಾರೆಯಾಗಿ ಈ ಶಿಲ್ಪವು 'ದಷ್ಟನಿಗ್ರಹ ಶಿಷ್ಟ ಪರಿಪಾಲಕ' ಎಂಬಂತೆ ಕಥಾನಿರೂಪಕ ಶಿಲ್ಪವಾಗಿದೆ.

ಈ ವೈಷ್ಣವ ಶಿಲ್ಪವು ಶೈವ ದೇಗುಲದ ಭಿತ್ತಿಯಲ್ಲಿ ಹಿಂದೆ ಕಂಡುಬರುವುದು. ಒಟ್ಟಾರೆ ಈ ದೇಗುಲದ ಶಿಲ್ಪವು ರಾಷ್ಟ್ರಕೂಟರು ಧರ್ಮ ಸಹಿಷ್ಣುರಾಗಿದ್ದರೆಂಬುದುಕ್ಕೆ ಜೀವಂತ ಸಾಕ್ಷಿಗಳಾಗಿವೆ.

ಹುಲಿಗೆಮ್ಮನ ಕೊಳ್ಳ ಪರಿಸರದ ಸುತ್ತಲಿನ ಗಣಗಾರಿಕೆ ಗಿರುಬಂಡೆ/ರೇಖಾಚಿತ್ರಗಳು :

ಹುಲಿಗೆಮ್ಮನ ಕೊಳ್ಳದ ಬೆಟ್ಟದ ಸಾಲಿನಲ್ಲಿ ಕೊಳ್ಳದಿಂದ ಪೂರ್ವಕ್ಕೆ ಶಂಕರಲಿಂಗನ ಗುಂಡು ಅಕ್ಕರಗಲ್ ಮೋಟರ ಮರಡಿ, ಅಯ್ಯನ ಪಡೆ ಶಂಕರಲಿಂಗನ ಗುಡ್ಡ ಡೊಂಕನಕೊಳ್ಳ ಮುಂತಾದ ಸ್ಥಳಗಳಲ್ಲಿ ಬಾದಾಮಿ ಚಲುಕ್ಯರ ಕಾಲದ ರೇಖಾಚಿತ್ರಗಳು, ಶಾಸನಗಳು ದೊರೆಕಿವೆ. ಈ ಬೆಟ್ಟದಿಂದ ಇಂದಿನ ವಿಶ್ವಪರಂಪರೆಯ ತಾಣವಾಗಿರುವ ಪಟ್ಟದಕಲ್ಲಿನ ಬೃಹತ್ ಸ್ಮಾರಕಗಳ ನಿರ್ಮಾಣಕ್ಕೆ ಶಿಲೆಯು ಈ ಸ್ಥಳದಿಂದ ಸರಬರಾಜು ಆಗಿದ್ದ ಬಗ್ಗೆ ಅನೇಕ ಕುರುಹುಗಳು ದೊರೆತಿವೆ. ಅವುಗಳಲ್ಲಿ ಪ್ರಮುಖವಾಗಿ ಕಲ್ಲನ್ನು ಎಬ್ಬಿಸಿರುವ ಚಿಹ್ನೆಗಳ ಗಣಿ ಮಾಲಕರ ಹೆಸರು ಹೇಳುವ ಶಾಸನಗಳು ಕಬ್ಬಿಣದ ಉಪಕರಣಗಳು ಪ್ರಮುಖವಾಗಿವೆ.

ಅಂದಿನ ಸ್ಥಪತಿ ಶಿಲ್ಪಿಗಳು ತೋರಿರುವ ತಾಂತ್ರಿಕ ಕೌಶಲ, ಉತ್ತಮ ನಿರ್ಮಾಣ ಸಾಮಗ್ರಿಯಾದ ಕಲ್ಲಿನ ವಿಶಿಷ್ಟ ಗುಣಲಕ್ಷಣಗಳು ಅವು ಮೂಲಬಂಡೆಗಳಿಂದ ಬೇರ್ಪಡಿಸಿದ ಪ್ರತಿ ಶಿಲಾ ಖಂಡದ ಗುಣವಗುಣಗಳನ್ನು ಆಧರಿಸಿ ಅವುಗಳಿಂದ ರೂಪಿಸಬಹುದಾದ ವಾಸ್ತು ಭಾಗಗಳನ್ನು ಗುರುತಿಸಲು ವಿಶಿಷ್ಟ ಚಿಹ್ನೆಗಳ ಮೂಲಕ ನೀಡಿರುವ ಸೂಚನೆಗಳು, ಶಿಲ್ಪಕಲಾ ಅಭ್ಯಾಸಿಗಳಿಗೆ ತರಬೇತಿ ನೀಡಲು ವಾಸ್ತುಭಾಗ, ದೇವತೆ ಹಾಗೂ ಪ್ರಾಣಿಗಳ ರೇಖಾ ಚಿತ್ರಗಳನ್ನು ಬಿಡಿಸಿರುವುದು, ಸ್ಥಪತಿ ಶಿಲ್ಪಿ ಕಾರ್ಮಿಕರ ಹೆಸರಿರುವ ಕಿರುಶಾಸನಗಳು, ಹಾಜರಾತಿ ಚಿಹ್ನೆಗಳು ಮುಂತಾದವು ಈ ನಿವೇಶನದ ವಿಶಿಷ್ಟ ಅಂಶಗಳಾಗಿವೆ.

ಗಣಿಕೈಗಾರಿಕೆ ಮತ್ತು ಬಳಸಿದ ವಿಧಾನಗಳನ್ನು ಕುರಿತು ಕುರುಹುಗಳು :

ಶಂಕರಲಿಂಗನ ಗುಂಡು, ಮೋಲರ ಮರಡಿ ಮತ್ತು ಇತ್ತೀಚೆಗೆ ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಬೆಳಕಿಗೆ ಬಂದ ಸುಮಾರು ಗಿರುಬಂಡೆ ಚಿತ್ರಗಳು, ೧೫ಕ್ಕೂ ಹೆಚ್ಚು ಶಾಸನಗಳಿಂದ ಈ ನಿವೇಶನಗಳಲ್ಲಿ ಉತ್ತಮ ಮಟ್ಟದ ಶಿಲಾಕಂಡಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಲು ನಿರಂತರ ಗಣಿಗಾರಿಕೆ ನಡೆದಿದ್ದ ಕುರುಹುಗಳು ದೊರೆತಿವೆ. ನಿವೇಶನವಿರುವ ಸ್ಥಳವು ರಾಜ್ಯ ಸರ್ಕಾರದಿಂದ ರಕ್ಷಿತ ಅರಣ್ಯ ಮಿತಿಯೊಳಗಿರುವುದರಿಂದ ಕುರುಹುಗಳು ಸಾಕಷ್ಟು ಉತ್ತಮವಾಗಿಯೇ ಉಳಿದಿವೆ. ಸ್ಥೂಲ ಸ್ಥಳ ಪರಿಶೋಧನೆಯಿಂದ ಹಂತ ಹಂತವಾಗಿ ಅಚ್ಚುಕಟ್ಟಾಗಿ ಬಹುಕಾಲ ಗಣಿಕಾರಿಕೆ ನಡೆಸಿರುವುದರಿಂದ ವಿವಿಧ ಎತ್ತರಗಳಲ್ಲಿ ಉಂಟಾಗಿರುವ ಸಮತಟ್ಟಾದ ಮಜಲುಗಳು ಮೂಲ ಶಿಲೆಯ ಸವೆದ ಹೊರಪದರದಿಂದ ಕೂಡಿದ್ದು ನಿರ್ಮಾಣ ಕಾರ್ಯಕ್ಕೆ ಅನುಪಯುಕ್ತವೆನಿಸಿ, ಸ್ಥಳದಲ್ಲಿಯೇ ತಿರಸ್ಕೃತವಾದ ಶಿಲಾ ಖಂಡಗಳು ಕಲ್ಲೆಬ್ಬಿಸಲು ಮಾಡಿರುವ ಗುರುತುಗಳು ನಿರ್ದಿಷ್ಟ ವಾಸ್ತುಭಾಗಕ್ಕಾಗಿ ಅವಶ್ಯಕ ಗಾತ್ರಗಳಿಗನುಗುಣವಾಗಿ ಕತ್ತರಿಸಿ, ನಿರ್ಮಾಣ ಸ್ಥಾನಕ್ಕೆ ಸಾಗಣಿಕೆಯ ವಿವಿಧ ಹಂತಗಳಲ್ಲಿ ಜೋಡಿಸಿರುವ ಆಯ್ದ ಕಲ್ಲುಗಳು, ಸ್ಥಪತಿ, ಶಿಲ್ಪಿ ಕಾರ್ಮಿಕರ ಹೆಸರಿರುವ ಕಿರುಶಾಸನಗಳು, ಹಾಜರಾತಿ ಚಿಹ್ನೆಗಳು, ಪ್ರಾಣಿದೇವತೆಗಳ ಚಿತ್ರಣಗಳು, ಗತಿಕಾರ್ಯಕ್ಕೆ ಬಳಸಿದ ಉಪಕರಣಗಳು ಇಂತಹ ಕುರುಹುಗಳಲ್ಲಿ ಮುಖ್ಯವಾಗಿವೆ.

೨.೯೦ x೦.೯೦ ಮೀ, ೨.೮೫ x೦.೮೦ x೦.೩೦ ಮೀ ೨.೦೦ x೧.೨೦ x೧.೨೦ ಮೀ, ೧.೮೦ x೧.೦೦ x೧.೦೦ ಮೀ ಮುಂತಾದ ಅಳತೆಗೆ ಸರಿಯಾಗಿ ಭಾರವಾಹಕ ವಸ್ತು ಭಾಗಗಳಾದ ಕಂಬ, ತೊಲೆ, ಬೋಧಿಗೆ, ಕಂಬಪೀಠ, ಛಾವಣಿ ಫಲಕ ಮುಂತಾದವನ್ನು ರೂಪಿಸಲು ಸೂಕ್ತವಾದ ಶಿಲಾಖಂಡಗಳನ್ನು ಇನ್ನೇನು ನಿರ್ಮಾಣ ಸ್ಥಾನಕ್ಕೆ ಸಾಗಿಸಲು ಸಿದ್ಧಮಾಡಿಟ್ಟಂತೆ ಕ್ರಮವಾಗಿ ಜೋಡಿಸಿಟ್ಟಿದೆ. ಕತ್ತರಿಸಿದ ಕಲ್ಲುಗಳು ಮೂಲ ಶಿಲೆಯ ಮೇಲೆ ೧೦ x ೬ ಸೆಂ.ಮೀ. ಅಳತೆಯ ೮-೧೦ ಸೆಂ.ಮೀ. ಆಳದ ಇದೇ ಸ್ಥಳದಲ್ಲಿ ದೊರೆತಿರುವ ಉಳಿಯ ಅಳತೆಗೆ ಸರಿಹೊಂದುವ ಉಳಿಗಳು ಗಮನಾರ್ಹವಾಗಿದೆ. ಉಳಿ ಮತ್ತು ಭಾರವಾದ ಸುತ್ತಿಗೆಯಿಂದ ಇಂತಹ ಆಳವಾದ ಗುರುತುಗಳನ್ನು

ಸಮಾನಾಂತರದಲ್ಲಿ (೧೦-೧೫ ಸೆಂ.ಮೀ.) ಸಾಲಾಗಿ ಮಾಡಿಸಿ ನಂತರ ಅದೇ ಅಳತೆಯ ಮರದ ಬೆಣೆಗಳನ್ನು ಸಿಗಿಸಿ ತೋಯಿಸಿದ ಬೆಣೆ ವಿಧಾನದಿಂದ ಉದ್ದೇಶಿತ ಗಾತ್ರದ ಕಲ್ಲುಗಳನ್ನು ಎಬ್ಬಿಸಿರುವುದು ಕಂಡುಬರುತ್ತದೆ.

ಕಬ್ಬಿಣದ ಉಪಕರಣಗಳು :

ಚಲುಕ್ಯರ ಕಾಲದಲ್ಲಿ ಪಟ್ಟದಕಲ್ಲಿನ ಮತ್ತು ಸುತ್ತಲಿನ ಸ್ಥಳಗಳಲ್ಲಿ ದೇವಾಲಯ ನಿರ್ಮಾಣಕ್ಕೆ ಶಿಲೆಯ ಗಣಿಗಾರಿಕೆಯನ್ನು ನಡೆಸಿರುವಂತಹ ಕುರುಹುಗಳು ಹುಲಿಗೆಮ್ಮನಕೊಳ್ಳದಿಂದ ೩.೫ ಕಿ.ಮೀ. ಅಂತರದಲ್ಲಿ ಗಣಿಗಾರಿಕೆಗೆ ಉಪಯೋಗಿಸಿದ ಉಳಿ, ಸುತ್ತಿಗೆ ಮುಂತಾದ ಉಪಕರಣಗಳು ದೊರೆತಿವೆ. ಇಲ್ಲಿ ದೊರೆತ ಕಬ್ಬಿಣದ ಆಯತಾಕರಾದ (೧೦ ಸೆಂ.ಮೀ. ಉದ್ದ ಮತ್ತು ೬ ಸೆಂ.ಮೀ. ಗರಿಷ್ಟ ಅಗಲ) ಉಳಿಯು ಸುಮಾರು ೧.೨೫ ಕಿ.ಗ್ರಾಂ. ತೂಕವಿದೆ. ಮೊಂಡಾದ ಇದರ ತುದಿ ೧.೨ ಸೆಂ.ಮೀ. ದಪ್ಪವಿದೆ ಮತ್ತು ಬಡಿಯುವ ತುದಿಯಲ್ಲಿ ೪.೫ ಸೆಂ.ಮೀ. ದಪ್ಪವಾಗಿದೆ. ನಿರಂತರ ಬಳಕೆಯಿಂದ ಎರಡೂ ತುದಿಗಳು ಮೊಂಡಾಗಿವೆ. ಈ ಮೊದಲು ಹೇಳಿರುವಂತೆ ಗಣಿಯ ಕಲ್ಬಂಡೆಗಳು ಮತ್ತು ಶಿಲಾಖಂಡಗಳ ಮೇಲಿರುವ ಉಳಿ ಗುರುತುಗಳ ಅಳತೆ ಮತ್ತು ಈ ಉಳಿಯ ಗಾತ್ರಕ್ಕೆ ಹೊಂದಿಕೆ ಇರುವುದು ಸಹಜವೇ ಆಗಿದೆ. ಅದರಂತೆಯೇ ೨.೫ ಕಿ.ಗ್ರಾಂ ತೂಕ, ೧೨ ಸೆಂ.ಮೀ. ಉದ್ದ ಗರಿಷ್ಟ .೭ ಸೆಂ.ಮೀ. ವ್ಯಾಸವಿರುವ ಸಿಲಿಂಡರಿನಾಕಾರದ ಭಾಗ ಸುತ್ತಿಗೆಯೂ ಇಲ್ಲಿ ದೊರೆತಿದೆ. ಇದು ಮೊದಲಿಗೆ ಆಯ ಘನಾಕಾರದಲ್ಲಿದ್ದು ಕ್ರಮೇಣ ಬಳಕೆಯಿಂದಾಗಿ ದುಂಡಾದಂತೆ ಕಾಣುತ್ತದೆ. ಇದರ ಒಂದು ತುದಿಯಲ್ಲಿ ೪ ಸೆಂ.ಮೀ .ವ್ಯಾಸ ಒಂದು ಸೆಂ.ಮೀ. ಆಳವಿರುವ ಕುಳಿಯಿದ್ದು ಇನ್ನೊಂದು ತುದಿ ಬಳಕೆಯಿಂದ ಚಕ್ಕೆ ಏಳುವಷ್ಟು ಸವೆದಿದೆ. ಸುತ್ತಿಗೆಯ ಮಧ್ಯ ಹಿಡಿಯನ್ನು ಜೋಡಿಸಲು ರಂಧ್ರವೂ ಇದೆ. ಈ ಎರಡು ಉಪಕರಣಗಳ ಜೊತೆಯಲ್ಲಿ ಉಳಿಯನ್ನು ಕೆಂಪಾಗಿ ಕಾಯಿಸಿ ನೀರಿನಲ್ಲಿ ತೋಯಿಸಿ ಹದ ಮಾಡಲು ಬಳಸಿರಬಹುದಾದ ಕಲ್ಲಿನ ಸಣ್ಣ (೨೦ ಸೆಂ.ಮೀ. ಚೌಕ, ೨೨ ಸೆಂ.ಮೀ. ಎತ್ತರ) ಬೋಗುಣಿಯಂತಹ ವಸ್ತುಗಳೂ ಇಲ್ಲಿ ದೊರಕಿವೆ. ಈ ಬೋಗುಣಿಯ ಒಂದು ಬದಿಗೆ ೧೫ ಸೆಂ.ಮೀ. ವ್ಯಾಸ ಮತ್ತು ಅಷ್ಟೇ ಆಳವಿರುವ ದುಂಡನೆಯ ಕುಳಿಯು ಇದೆ.

ಇವುಗಳೆಲ್ಲವನ್ನು ಗಮನಿಸಿದಾಗ ಪಟ್ಟದಕಲ್ಲು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ನಿರ್ಮಿತವಾಗಿರತಕ್ಕಂತ ದೇವಾಲಯಗಳಿಗೆ ಈ ಗಣಿಯಿಂದಲೇ ಶಿಲೆಯ ಸರಬರಾಜು ಆಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಸ್ಥಪತಿಗಳು ಮತ್ತು ರಾಜರಾತಿ ಚಿಹ್ನೆಗಳು :

ಗಣಿ ಪ್ರದೇಶವನ್ನೊಳಗೊಂಡು ಸುತ್ತಲು ಮತ್ತು ಕತ್ತರಿಸಲ್ಪಟ್ಟ ಕಲ್ಲುಗಳ ಮೇಲೆ ವಿಚಿತ್ರವೆನಿಸಬಹುದಾದ ಜ್ಯಾಮಿತಿ ತರದ ಚಿನ್ಹೆಗಳು ವಿವಿಧ ಶೈಲಿಯ ಶಂಖ, ತ್ರಿಶೂಲ, ನಂದಿ, ಖಡ್ಗ, ಕಮಲ, ಸ್ವಸ್ತಿಕ, ಕೊಡಲಿ ಮತ್ತು ಅದರ ಕಾವು ವೃಷಭಸಿಂಹ, ಗಣೇಶ ಮುಂತಾದ ಸ್ಥಪತಿ ಚಿಹ್ನೆಗಳು ದೊರೆತಿವೆ. ಇವುಗಳಲ್ಲಿ ಕನಿಷ್ಟ ಮೂರು ರೀತಿಯ

ತ್ರಿಶೂಲಗಳು ಮುಖ್ಯವಾಗಿವೆ. ಇವು ಮತ್ತು ಶಂಖದ ಗುರುತುಗಳು ಬಹುಶಃ ಅಧಿಕೃತ ಮಾಲಿಕತ್ವದ ಗಣಿಯ ಪ್ರದೇಶವನ್ನು ಅಲ್ಲಿಂದ ತೆಗೆದ ಕಲ್ಲುಗಳನ್ನು ಗುರುತಿಸಲು ಉಪಯೋಗಿಸಿರಬೇಕು. ಅಲ್ಲದೆ ಸಂಕಲನ, ವ್ಯವಕಲನ ಚಿಹ್ನೆಗಳು ಬಿಡಿಯಾಗಿ ವೃತ್ತವೊಂದಕ್ಕೆ ಹೊಂದಿಸಿ ಅದರೊಳಗೆ, ಹೊರಗೆ ಹೇಗೆ ಸಂಯುಕ್ತವಾಗಿ ಸಹ (0.0) ಮುಂತಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಇವುಗಳನ್ನು ಶಿಲೆಯ ಗುಣಮಟ್ಟ ಗಾತ್ರ, ಮುಂತಾದವುಗಳನ್ನು ಆಧರಿಸಿ ಭಾರವಾಹಕ ವಾಸ್ತು, ವಾಸ್ತು ಅಂಗಗಳಾದ ಕಂಬ, ತೊಲೆ, ಬೋಧಿಗೆ, ವಿತಾನಫಲಕ ಮೊದಲಾದವನ್ನು ರೂಪಿಸಲೆಂದು ಗಣಿಯಲ್ಲಿಯೇ ವರ್ಗೀಕರಣ ಸೂಚನೆ ನೀಡಿ, ನಿರ್ಮಾಣ ಸ್ಥಾನಕ್ಕೆ ಸಾಗಿಸಿ ಬಳಕೆಗಾಗಿ ನೀಡಿರುವ ಸೂಚನೆಗಳೆಂದು ಭಾವಿಸಬಹುದು. ಇಂತಹ ವಿಶಿಷ್ಟ ಉಪಯೋಗಕ್ಕಾಗಿ ಅನುಕೂಲತೆ ಹೆಚ್ಚಾಗುವುದು ಸಹಜ. ಕಲ್ಬಂಡೆಗಳು, ಬೇರ್ಪಡಿಸಿದ ಕಲ್ಲುಗಳ ಮೇಲೆ ಕಂಡು ಬರುವ ಇವೆ ಗುರುತುಗಳು ವಿರೂಪಾಕ್ಷ, ಮಲ್ಲಿಕಾರ್ಜುನ, ಜೈನ ಮತ್ತು ಭದ್ರನಾಯಕನ ಜಾಲಿಹಾಳದ ಕೆಲವು ಗುಡಿಗಳ ನಿರ್ದಿಷ್ಟ ವಾಸ್ತುಭಾಗಗಳ ಮೇಲೂ ಕಾಣುವುದು. ಈ ಊಹೆಯನ್ನು ಸಮರ್ಥಿಸುತ್ತದೆ.

ಬೆಟ್ಟದ ಹಲವೆಡೆ ೨.೫ ರಿಂದ ೩.೫ ಸೆಂ.ಮೀ. ಉದ್ದದ ಉದ್ದ ಮತ್ತು ಅಡ್ಡ ಗೆರೆಗಳ ಸಮಾನಾಂತರ ಸಾಲುಗಳನ್ನು ಕೊರೆದಿರುವುದು ಒಂದು ಗಮನಾರ್ಹ ಅಂಶ. ಇಂತಹ ಗೆರೆಗಳ ಸಾಲುಗಳು ಬಾದಾಮಿ, ಐಹೊಳೆ, ಹುಲಿಗೆಮ್ಮನಕೊಳ್ಳ, ಬಾಚಿನಗುಡ್ಡದ ಅಯ್ಯನ ಪಡೆ ಮುಂತಾದ ಗಣಿ, ಸ್ಥಪತಿ ಪ್ರದೇಶದಲ್ಲಿ ಕಂಡುಬರುತ್ತವೆ. ಪ್ರತಿ ಸಾಲಿನ ಕೊನೆಯಲ್ಲಿ ಉದ್ದನೆಯ ಒಂದು ಗೆರೆ ಎಳೆದು ಸಾಲಿನಲ್ಲಿನ ಒಟ್ಟು ಗೆರೆಗಳ ಮೊತ್ತ ಅಥವಾ ಕಾರ್ಮಿಕ ಅಥವಾ ಸಾಗಿಸಿದ ಕಲ್ಲುಗಳ ಮೊತ್ತವನ್ನು ಸೂಚಿಸುವ ಚಿಹ್ನೆಯೂ ಇರಬಹುದು. ಕೆಲವು ಗೆರೆಗಳು ಉದ್ದದಷ್ಟರ ಅರ್ಧಮಾತ್ರ ಇವೆ. ಇವು ಬಹು ಗಣಿ ಕೆಲಸಕ್ಕೆ ಬಂದಿದ್ದ ಕಾರ್ಮಿಕರ ಹಾಜರಾತಿಯನ್ನು ಸೂಚಿಸುತ್ತವೆ. ಈ ಗೆರೆಗಳ ಮೊತ್ತ ಏಳು ಅಥವಾ ಅದರ ಗುಣಕಗಳಲ್ಲಿದ್ದು ಇಂದಿಗೂ ಇಂತಹ ವೇತನ ಪಾವತಿಯು ವಾರ ಅಥವಾ ಅದರ ಗುಣಕಗಳಲ್ಲಿಯೇ ನಡೆಯುವುದನ್ನು ನೆನಪಿಸುತ್ತದೆ. ಚಾಲುಕ್ಯ ಕಾಲದ ವಿವಿಧ ವಾಸ್ತು ಕೇಂದ್ರ ಗಣಿ ಪ್ರದೇಶಗಳಲ್ಲಿ ಕಂಡುಬರುವ ಇಂತಹ ಚಿಹ್ನೆಗಳ ವಿಶೇಷ ಅಧ್ಯಯನದಿಂದ ಪ್ರಾಚೀನ ಗಣಿಕಾರಿಕೆ ಪದ್ಧತಿಯ ವ್ಯವಹಾರದ ಒಂದು ಉತ್ತಮ ಒಳನೋಟ ದೊರೆಯಬಹುದು.

ರೇಖಾಚಿತ್ರಗಳು :

ಹುಲಿಗೆಮ್ಮನಕೊಳ್ಳವು ಸೇರಿದಂತೆ ಅದರ ಮುಂದಿನ ಬೆಟ್ಟದ ಸಾಲಿನಲ್ಲಿ ಅನೇಕ ಕಡೆಗಳಲ್ಲಿ ರೇಖಾಚಿತ್ರಗಳು ದೊರೆಯುತ್ತವೆ. ಇವು ಹುಲಿಗೆಮ್ಮನಕೊಳ್ಳದಿಂದ ಪೂರ್ವಕ್ಕೆ ಶಂಕರಲಿಂಗನ ಗುಂಡು (ಅಕ್ಕರಗಲ್) ವರೆಗೆ ಹರಡಿಕೊಂಡಿವೆ. ಈ ಚಿತ್ರಗಳು ಬಂಡೆಗಲ್ಲುಗಳ ಮೇಲೆ ಒರಟಾಗಿ ಮೂಡಿಸಿರುವ ಗಣೇಶ, ಮಹಿಷಮರ್ದಿನಿ,

ಲಜ್ಜಾಗೌರಿ, ವೃಷಭಸಿಂಹ, ತ್ರಿಶೂಲ, ಕಮಲ, ಖಡ್ಗ, ನಂದಿ, ಸ್ವಸ್ತಿಕ, ಕಾರ್ತಿಕೇಯ, ಶಂಖ, ಚಕ್ರವ್ಯೂಹ, ಬೇಟೆಯ ದೃಶ್ಯ ಮುಂತಾದ ರೇಖಾಚಿತ್ರಗಳನ್ನು ಈ ಶಿಲ್ಪಿಗಳು ಬಿಡಿಸಿರುವುದು ಕಂಡುಬರುತ್ತದೆ. ಈ ಚಿತ್ರಗಳ ಜೊತೆಗೆ ನನ್ನ ಕ್ಷೇತ್ರಕಾರ್ಯದಲ್ಲಿ ಅನೇಕ ಶಾಸನಗಳು ದೊರೆತಿವೆ. ಬಾಚಿನಗುಡ್ಡದಿಂದ ನೇರವಾಗಿ ಉತ್ತರಕ್ಕೆ ಅಯ್ಯನ (ಸಿದ್ದರ)ಪಡೆ ಮತ್ತು ಡೊಂಕನಕೊಳ್ಳಗಳ ಮಧ್ಯೆ ಇದಕ್ಕೆ ಸಾಕ್ಷಿಯಾಗಿ ಶಾಸನಗಳು ಮತ್ತು ಗೀರುಬಂಡೆ ಚಿತ್ರಗಳು ದೊರೆತಿವೆ. ಗೀರುಬಂಡೆ ಚಿತ್ರಗಳಲ್ಲಿ ಮುಖ್ಯವಾಗಿ ಹಡಗು (ನಾವು) ವೃಷಭಸಿಂಹ, ಚಕ್ರವ್ಯೂಹ, ಲಜ್ಜಾಗೌರಿ, ಕೊಡಲಿ, ಖಡ್ಗ, ಗಣೇಶ, ಈಶ್ವರ, ನಂದಿ ಮುಂತಾದವು ಪ್ರಮುಖವಾಗಿವೆ.

ಈ ಚಿತ್ರದ ಜೊತೆಗೆ ಗಣಿಕಾರ್ಮಿಕರ ಚಿಹ್ನೆಗಳು ಹಾಗೂ ಪ್ರಾಣಿಗಳ ಚಿತ್ರಣಗಳು ಇವೆ. ಹೆಚ್ಚಿನವು ದ್ವಿಭುಜ ರೀತಿಯವು. ಅವಯವಗಳನ್ನು ಸ್ಪಷ್ಟವಾಗಿ ಮೂಡಿಸಿದ್ದರೂ ಮುಖ ಅಷ್ಟು ಸ್ಪಷ್ಟವಾಗಿಲ್ಲ. ಒಂಟೆ, ಸ್ವಸ್ತಿಕ, ಶಂಖ, ಪಾಶ ಮುಂತಾದವುಗಳ ಜೊತೆ ಕೆತ್ತಿರುವ ಗಣಪತಿ, ಮಹಿಷಮರ್ದಿನಿ, ವೃಷಭ, ಸಿಂಹ ಚೆಲುವಾಗಿವೆ. ಈ ಗಣೇಶ ಚಿತ್ರಗಳಲ್ಲಿ ಒಂದು ಕರಂಡ ಮುಕುಟಧಾರಿಯಾಗಿದ್ದಾರೆ. ಇನ್ನೊಂದರಲ್ಲಿ ಕಮಲಾಕಾರದ ಅಲಂಕಾರವಿದ್ದು ಮೂರನೆಯದರಲ್ಲಿ ಯಾವ ಆಭರಣವೂ ಇಲ್ಲ.

ಇಲ್ಲಿಯ ಅಷ್ಟಬಾಹು ಮಹಿಷಮರ್ದಿನಿ ಇನ್ನೊಂದು ಗಮನಾರ್ಹ ಚಿತ್ರಣ, ವಿವಿಧ ಆಯುಧಗಳನ್ನು ಹಿಡಿದಿರುವ ಈ ದೇವಿಯ ಚಿತ್ರಣ ಪ್ರತಿಮಾಲಕ್ಷಣದ ದೃಷ್ಟಿಯಿಂದ ವಿರೂಪಾಕ್ಷ ದೇವಾಲಯದಲ್ಲಿರುವ ದೇವ ಕೋಷ್ಠದಲ್ಲಿರುವ ಮಹಿಷಮರ್ದಿನಿ ಶಿಲ್ಪವನ್ನು ಹೋಲುತ್ತದೆ. ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಮಹಿಷಮರ್ದಿನಿಯ ಚಿತ್ರವು ಕಿರೀಟಧಾರಿಯಾಗಿದ್ದು ಮಹಿಷನನ್ನು ಪಳಗಿಸುವಂತೆ ಅದರ ಬಾಲವನ್ನು ಎತ್ತಿ ಮುಖವನ್ನು ಸಂಪೂರ್ಣವಾಗಿ ಮುರಿದು ಹಾಕಿದ್ದಾಳೆ. ಈ ರೇಖಾಚಿತ್ರವು ಬಾಚಿನಗುಡ್ಡಕ್ಕೆ ನೇರವಾಗಿ ಉತ್ತರದಲ್ಲಿ (ಸಿದ್ದರ) ಅಯ್ಯನಪಡೆಯ್ಲ್ಲಲಿ ಕಂಡು ಬರುತ್ತದೆ.

ಶೈಲಿಕೃತ ಒಂಟೆ (?) ವಿವಿಧ ಬಂಗಿಯ ಸಿಂಹ, ನವಿಲು ಮುಂತಾದ ಪ್ರಾಣಿಗಳನ್ನು ಗಣಪತಿ ಚಿತ್ರದ ಜೊತೆಗೆ ಬಿಡಿಸಿದೆ. ಇಲ್ಲಿ ನವಿಲು ಚಿತ್ರ ಚಾಲುಕ್ಯ ಶೈಲಿಯ ಕಾರ್ತಿಕೇಯನ ಶಿಲ್ಪದ ನವಿಲಿಗೆ ಹೋಲಿಸಬಹುದಾಗಿದೆ. ಸಿಂಹ ಶಿಲ್ಪಗಳ ಹೋಲಿಕೆಯನ್ನು ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯದ ಅಧಿಷ್ಠಾನದ ಮೇಲಿರುವ ಇಂತಹುದೇ ಸಿಂಹಗಳಲ್ಲಿ ಕಾಣಬಹುದು. ಒಂಟೆಯ ಚಿತ್ರವು ಒರಟಾಗಿದ್ದು ಇದುವರೆಗೆ ಚಾಲುಕ್ಯ ಶಿಲ್ಪಗಳಲ್ಲಿ ಕಂಡುಬಂದಿಲ್ಲ. ಮೇಲೆ ಹೇಳಿದವಲ್ಲದೇ ಚೈತ್ಯ, ಕಂಬದ ವಿವಿಧ ಭಾಗಗಳು, ಬೋಧಿಗೆ, ವಿಜಯ ಅಥವಾ ಕೀರ್ತಿಸ್ತಂಭ, ಶಂಖ, ಸ್ವಸ್ತಿಕ, ಪೂರ್ಣಘಟ, ಮಂಡಲಗಳು, ಪರಶು, ಹಡಗು, ಪಾಶ, ತ್ರಿಶೂಲ ಮುಂತಾದ ಕೆತ್ತನೆಗಳ ರೇಖಾಚಿತ್ರಗಳು ಅನೇಕ ಕಡೆ ದೊರೆತಿವೆ.

ವರ್ಣಚಿತ್ರಗಳು :

ಹುಲಿಗೆಮ್ಮನಕೊಳ್ಳದ ಬಲಗಡೆಯ ಬೆಟ್ಟದಲ್ಲಿ ಸುಮಾರು ೪೦ ಅಡಿ ಎತ್ತರದ ಬೃಹತ್ ಬಂಡೆಯ ಮೇಲೆ ಬಿಳಿಯ ಬಣ್ಣದ ವರ್ಣಚಿತ್ರವಿದೆ. ಇದು ಹಲವಾರು ಸುತ್ತು ಗೆರೆಗಳನ್ನು ಸುತ್ತಲೂ ಹೊಂದಿದ್ದು ಒಳಗಡೆ ತ್ರಿಕೋನಾಕಾರವಾಗಿದೆ. ಮಳೆಯ ನೀರು ಇದರ ಮೇಲೆ ಹರಿಯುತ್ತಿರುವುದರಿಂದ ಅಷ್ಟೊಂದು ಸ್ಪಷ್ಟವಾಗಿ ಕಾಣುವುದಿಲ್ಲ. ಇಲ್ಲಿಂದ ಪೂರ್ವಕ್ಕೆ ೧.೫ ಕಿ.ಮೀ. ದೂರದಲ್ಲಿರುವ ಬಾಚಿನಗುಡ್ಡದ ವ್ಯಾಪ್ತಿಯಲ್ಲಿ ಬರುವ (ಸಿದ್ಧರ) ಅಯ್ಯನಪಡೆಯಲ್ಲಿ ದಕ್ಷಿಣಾಭಿಮುಖವಾಗಿ ಮತ್ತೊಂದು ವರ್ಣಚಿತ್ರವೂ ಕಂಡುಬರುವುದು. ಇದು ಕೆಂಪು ಮತ್ತು ಬಿಳಿವರ್ಣ ಚಿತ್ರಗಳನ್ನು ಒಳಗೊಂಡಿದ್ದು ಸುಮಾರು ೩೦ ಅಡಿ ಎತ್ತರದ ಬಂಡೆಯ ಮೇಲಿದೆ. ಸುತ್ತಲೂ ಆಯಾತಾಕಾರದ ಕೆಂಪು ಮತ್ತು ಬಿಳಿಪಟ್ಟಿಕೆಗಳನ್ನು ಹೊಂದಿದ್ದು ಒಳಗಡೆಯೂ ಸಹ ಅದೇ ತರಹ ವಿಭಾಗಗೊಂಡಿದೆ. ಆ ವಿಭಾಗಗಳ ಒಳಗಡೆ ತ್ರಿಕೋನ (ಕ್ರಾಸ್) ರೀತಿಯಲ್ಲಿ ಪಟ್ಟಿಕೆಗಳು ಕಂಡುಬರುತ್ತವೆ ಅಧಿಕ ಚಿಹ್ನೆ ಮತ್ತು ಗುಣಾಕಾರದ ಚಿಹ್ನೆಯ ರೀತಿಯಲ್ಲಿ ಒಳಗಡೆ ಪಟ್ಟಿಕೆಯನ್ನು ಹೊಂದಿದ್ದು ಬಹು ಆಕರ್ಷಕವಾಗಿದೆ. ಆದರೆ ಯಾವುದೇ ರಕ್ಷಣೆ ಇಲ್ಲದ ಕಾರಣ ಮಳೆಯ ನೀರು ಆದರ ಮೇಲೆ ಹರಿಯುವುದರಿಂದ ಕೆಲವು ಭಾಗ ಸ್ಪಷ್ಟವಾಗಿ ಕಾಣುವುದಿಲ್ಲ. ಈ ಸ್ಥಳದ ಸುತ್ತಲೂ ಚಲುಕ್ಯರ ಕಾಲದ ಶಾಸನ, ರೇಖಾಚಿತ್ರಗಳು ಇರುವದರಿಂದ ಬಾದಾಮಿ ಚಾಲುಕ್ಯರ ಕಾಲದ ವರ್ಣಚಿತ್ರವಿರಬಹುದಾಗಿದೆ.

ಅಡಿ ಟಿಪ್ಪಣಿಗಳು :

೧. ಬಾದಾಮಿ ಚಾಲುಕ್ಯ ಶಿಲ್ಪಕಲೆ, ಡಾ. ಶೀಲಾಕಾಂತ ಪತ್ತಾರ, ಪು. ೫.
೨. ಬಾದಾಮಿ ಚಾಲುಕ್ಯ ಶಿಲ್ಪಕಲೆ, ಡಾ. ಶೀಲಾಕಾಂತ ಪತ್ತಾರ, ಪು. ೭.
೩. ಬಾದಾಮಿ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪ್ರೊ. ಎಸ್. ವಿ. ಪಾಡಿಗಾರ, ಪು. ೩೧.
೪. ದೇವಾಲಯ ವಾಸ್ತು ಶಿಲ್ಪ ಪರಿಚಯ, ಕೂ. ಸ. ಅಪರ್ಣ, ಪು. ೪-೫.
೫. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ರಮೇಶ ನಾಯಕ, ಪು. ೭೮.
೬. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ರಮೇಶ ನಾಯಕ, ಪು. ೭೯.
೭. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ರಮೇಶ ನಾಯಕ, ಪು. ೮೦.
೮. ಬಾದಾಮಿ ಚಾಲುಕ್ಯ ಶಿಲ್ಪಕಲೆ, ಡಾ. ಶೀಲಾಕಾಂತ ಪತ್ತಾರ, ಪು. ೨೨.
೯. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ರಮೇಶ ನಾಯಕ, ಪು. ೮೧.
೧೦. ಬಾದಾಮಿ ಚಾಲುಕ್ಯ ಶಿಲ್ಪಕಲೆ, ಡಾ. ಶೀಲಾಕಾಂತ ಪತ್ತಾರ, ಪು. ೨೨.
೧೧. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ರಮೇಶ ನಾಯಕ, ಪು. ೯೬.
೧೨. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೧೮೫-೧೮೬.
೧೩. ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ರಮೇಶ ನಾಯಕ, ಪು. ೫೮.
೧೪. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೩೩-೩೪.
೧೫. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೧-೨.
೧೬. ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಡಾ. ಮುರಿಗೆಪ್ಪ, ಪು. ೪೦೬.
೧೭. ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಡಾ. ಮುರಿಗೆಪ್ಪ, ಪು. ೪೦೭.
೧೮. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೨.
೧೯. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೩೩-೩೪.
೨೦. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೪೬.
೨೧. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೩೬-೩೭.
೨೨. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೪೭.
೨೩. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೭೪.
೨೪. ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಡಾ. ಎಸ್. ಆಯ್. ಪತ್ತಾರ, ಪು. ೨೭೫.
೨೫. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೫-೬.
೨೬. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೭.
೨೭. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೭.
೨೮. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೮.
೨೯. ಬಾದಾಮಿ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪ್ರೊ. ಎಸ್. ವಿ. ಪಾಡಿಗಾರ, ಪು. ೩೧-೩೨.
೩೦. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೬-೭.
೩೧. ದೇವಾಲಯದ ವಾಸ್ತು ಶಿಲ್ಪ ಪರಿಚಯ, ಕೂ.ಸ. ಅಪರ್ಣ, ಪು. ೬..
೩೨. ಬಾದಾಮಿ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪ್ರೊ. ಎಸ್. ವಿ. ಪಾಡಿಗಾರ, ಪು. ೩೧-೩೨.

೩೩. ಬಾದಾಮಿ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪ್ರೊ. ಎಸ್. ವಿ. ಪಾಡಿಗಾರ, ಪು. ೪೮.

೩೪. ಬಾದಾಮಿ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪ್ರೊ. ಎಸ್. ವಿ. ಪಾಡಿಗಾರ, ಪು. ೪೯.

೩೫. ಬಾದಾಮಿ ಚಾಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪ್ರೊ. ಎಸ್. ವಿ. ಪಾಡಿಗಾರ, ಪು. ೫೧-೫೨.

೩೬. ಕರ್ನಾಟಕ ಭಾರತಿ, ೧೯೯೭, ಸಂಪುಟ-೯-೪, ಪು.೮೪.

೩೭. ಅದೇ, ಪು. ೮೪.

೩೮. ಅದೇ, ಪು೮೫.

೩೯. ಅದೇ, ಪು. ೮೫.

೪೦. ಅದೇ, ಪು. ೮೬.

೪೧. ಅದೇ, ಪು.೮೭.

೪೨. ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತುಶಿಲ್ಪಕಲೆ, ಎಸ್. ವ್ಹಿ. ಪಾಡಿಗಾರ, ಪು. ೪೮.

೪೩. ಕರ್ನಾಟಕ ಭಾರತಿ, ಪೂರ್ವೋಕ್ತ, ಪು. ೮೪-೮೫.

೪೪. ಅದೇ, ಪು. ೮೮.

೪೫. ಮಾರ್ಗ-೨, ಪು. ೩೮೨.

೪೬. ಅದೇ, ಪು. ೩೮೨.

೪೭. ಅದೇ, ಪು. ೩೭೫.

೪೮. ಬಾದಾಮಿ ಚಲುಕ್ಯ ಶಿಲ್ಪಕಲೆ, ಎಚ್. ಎಸ್. ಗೋಪಾಲರಾವ್ (ಸಂ), ಪು. ೩೮-೩೯.

೪೯. ಕರ್ನಾಟಕ ಭಾರತಿ, ಪೂರ್ವೋಕ್ತ, ಪು. ೮೭.

೫೦. ಮಾರ್ಗ-೨, ಪು. ೩೭೫.

೫೧. ಅಧ್ಯಯನ (ಶಂಭಾ ಜೋಶಿ, ಅಭಿನಂದನ ಗ್ರಂಥ), ಪು. ೩೭೭.

೫೨. ಎಂ. ಚಿದಾನಂದಮೂರ್ತಿ, ಬಾದುಬ್ಬೆ-ಬಾದುಮಯ್ಯ-ಬನಶಂಕರಿ ಪೆಟ್ಟಿಗೆ ಲಜ್ಜಾಗೌರ, (ಸಾಧನೆ-೧೪-೨).

೫೩. ಮಾರ್ಗ-೨, ಪು. ೩೭೫.

೫೪. ಮಾರ್ಗ-೨, ಪು. ೩೭೫.

೫೫. ಮಾರ್ಗ-೨, ಪು. ೩೭೮.

೫೬. ಮಾರ್ಗ-೨, ಪು. ೩೭೯.

೫೭. ಮಾರ್ಗ-೨, ಪು. ೩೭೯.

೫೮. ಶಂಕರ ದಾಸಿಮಯ್ಯ ಪುರಾಣ, ಪು. ೧೪-೨೪.

೫೯. ಮಾರ್ಗ-೨, ಪು. ೩೮೧.

ಅಧ್ಯಾಯ-ಆರು

ಶಾಸನಗಳು ಮತ್ತು ವೀರಗಲ್ಲುಗಳು

ಶಾಸನಗಳು ಪ್ರಾಚೀನ ಭಾರತದ ಇತಿಹಾಸ ರಚಿಸಲು ಸಹಾಯಕವಾದಂತೆ ಪ್ರಾದೇಶಿಕ ಇತಿಹಾಸ ರಚನೆಗೂ ಮಹತ್ವ ಒದಗಿಸಿವೆ. ಪ್ರಸ್ತುತ ಹುಲಿಗೆಮ್ಮನಕೊಳ್ಳದಲ್ಲಿರುವ ಮತ್ತು ಸುತ್ತಮುತ್ತಲಿರುವ ಅನೇಕ ಶಾಸನಗಳು ಇಲ್ಲಿಯ ಚರಿತ್ರೆಯನ್ನು ರಚಿಸಲು ಅತ್ಯಂತ ಸಹಾಯಕಾರಿಯಾಗಿವೆ.

ಶಾಸನಗಳು ಇತಿಹಾಸ ರಚನೆಗೆ ಆಧಾರಸ್ತಂಭಗಳು. ಪ್ರಸ್ತುತ ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳದ ಚರಿತ್ರೆಯ ರಚನೆಯಲ್ಲಿ ಇವು ತಮ್ಮದೇ ಪ್ರಭಾವವನ್ನು ಬೀರಿವೆ. ಈ ಪ್ರದೇಶ ಬಾದಾಮಿ ಚಲುಕ್ಯರ ಕಲಾಕುಸುಮದ ನೆಲೆಯಾಗಿದ್ದು ಇವರ ಅನೇಕ ಶಾಸನಗಳು ಇಲ್ಲಿ ಕಂಡುಬಂದಿವೆ. ಈ ಶಾಸನಗಳು ಅಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆಡಳಿತಾತ್ಮಕ ಇನ್ನೂ ಮುಂತಾದ ವಿಷಯಗಳನ್ನು ತಿಳಿಸುವಲ್ಲಿ ಸಹಾಯಕವಾಗಿವೆ. ಅದರಂತೆ ಈ ಪ್ರದೇಶದ ಸುತ್ತಮುತ್ತಲಿನ ಪರಿಸರದಲ್ಲಿ ಅನೇಕ ವೀರಗಲ್ಲುಗಳು ದೊರೆತಿದ್ದು ಇವು ಸಹ ಇತಿಹಾಸ ರಚನೆಗೆ ಪುಷ್ಟಿಯನ್ನು ಒದಗಿಸಿವೆ.

ಪ್ರಮುಖವಾಗಿ ಈ ಕೊಳ್ಳ ಪರಿಸರದಲ್ಲಿ ಚಲುಕ್ಯರ ಕಾಲದ ಕಲಾಕುಸುಮಗಳನ್ನು ಅರಳಿಸಿದ ಶಿಲ್ಪಿ ಶ್ರೇಷ್ಠರು, ಸ್ಥಪತಿಗಳನ್ನು ಕುರಿತು ವಿವರಗಳನ್ನು ನೀಡುವ ಅನೇಕ ಶಾಸನಗಳು ಕಂಡುಬಂದಿವೆ. ಈ ಕೊಳ್ಳ ಪರಿಸರವು ಚಲುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಸಿಲೆಗಳನ್ನು ಒದಗಿಸುವ ಪ್ರಮುಖ ಗಣಿ ಪ್ರದೇಶವಾಗಿತ್ತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯಕ್ಕೆ ಇಂಬು ಎಂಬಂತೆ ಅನೇಕ ಶಾಸನಗಳು ದೊರೆತಿದ್ದು, ಅವುಗಳು ಗಣಿ ಮಾಲಿಕರ ಮತ್ತು ಕಾರ್ಮಿಕರ, ಸ್ಥಪತಿಗಳ ಹೆಸರುಗಳನ್ನು ಉಲ್ಲೇಖಿಸುತ್ತವೆ.

ಈ ಶಾಸನಗಳು, ಬಂಡೆಗಳನ್ನು ಕಡಿದು ಕಲ್ಲೆಬ್ಬಿಸಿರುವ ಎತ್ತರವಾದ ಗೋಡೆಯಂತಹ ಸ್ಥಳದಲ್ಲಿ, ಶಿಲ್ಪಿ ಸಮತಟ್ಟಾಗಿ ದುಡಿದು, ದಣಿದು ವಿಶ್ರಾಂತಿಗಾಗಿ ಕುಳಿತುಕೊಳ್ಳಲು ಅನುವಾಗಿ ಸಮತಟ್ಟಾಗಿ ನೆರಳಿರುವ ಸ್ಥಳಗಳಲ್ಲಿ ಈ ಶಾಸನಗಳನ್ನು ಬರೆದಿದೆ. ಲಿಪಿ ಲಕ್ಷಣದ ಆಧಾರದ ಮೇಲೆ ಇವುಗಳನ್ನು ಕ್ರಿ.ಶ. ೮ನೇ ಶತಮಾನದಷ್ಟು ಮಧ್ಯಭಾಗಕ್ಕೆ ಸೇರಿಸಬಹುದು[೧] ಅವುಗಳು :

೧. ಮೂರು ಸಾಲಿನ ಶಾಸನ : ಶಂಕರಗುಡ್ಡದಲ್ಲಿರುವ ಗಣಪತಿ ಶಿಲ್ಪದ ಕೆಳಗೆ

೧. ಶ್ರೀ ದಮ್ರ್ಮ ಸಂಗಾತಂ ನಾಕಣಿ

೨. ಪಪಾಕ್ಕ ಅಜ್ಜವೊ ಪಾರಮ ಮಾ

೩. ಹೇಶ್ವರ

ಈ ಶಾಸನವು ಪೀಠದ ಮೇಲೆ ಕುಳಿತಿರುವ ಗಣೇಶ, ಎಡಕ್ಕೆ ಒಂಟೆ ಮತ್ತು ನವಿಲಿನ ಚಿತ್ರಗಳ ಮಧ್ಯ ಇದೆ. ಗಣೇಶನ ಚಿತ್ರದ ನೇರ ಕೆಳಗೆ 'ಸಿದ್ಧಂ' ಎಂದು ಮಂಗಳ ಸೂಚಕ ಚಿನ್ಹೆಯಿಂದಾರಂಭವಾಗುವ ಶಾಸನ ಪಾಠವಿದೆ.

ಈ ಶಾಸನದ ಅರ್ಥ ಸ್ಪಷ್ಟವಾಗಿಲ್ಲ. ಬಹುಶಃ ಶ್ರೀ ಧರ್ಮನೆಂಬುವವನ ಸಂಘಕ್ಕೆ ಸಂಬಂಧಿಸಿದ ಅಥವಾ ಒಡೆತನದ ಕ(ಗ)ಣಿ ಪಪಾಕ ಅಂಬುವವರು ಈ ಸಂಘದ ಇತರ ಸದಸ್ಯರು, ಇವರೆಲ್ಲ ಪರಮ ಮಾಹೇಶ್ವರರು ಎಂದು ಅರ್ಥವಾಗಬಹುದು.

೨. ಬಸವಶಿಲ್ಪದ ಸಮೀಪದಲ್ಲಿ (ಶಂಕರಗುಡ್ಡದಲ್ಲಿ)

ಶ್ರೀಮತಿರಗನ್[೨] ಎಂದು ಉಲ್ಲೇಖಿತಗೊಂಡಿದೆ.

೩. ಅದೇ ಬಸವಶಿಲ್ಪದ ಹಿಂಬದಿಯಲ್ಲಿ

''ಶ್ರೀ ಬೀರವಿದ್ಯಾಧರನ್[೪] ಎಂಬುದನ್ನು ತಿಳಿಸುತ್ತದೆ.

ಇದು ಹೆಚ್ಚು ಪ್ರಾಕೃತಿಕ ಸವೆತಕ್ಕೊಳಗಾದ ಕಲ್ಲಿನ ಮೇಲೆ ಬರೆದಿರುವುದಾಗಿದ್ದು ವ್ಯಕ್ತಿಯ ಹೆಸರನ್ನು ಹೆಸರಿಸುತ್ತದೆ.

೪. ಅಲ್ಲೇ ಪರಶು ರೇಖಾ ಶಿಲ್ಪದ ಸಮೀಪದಲ್ಲಿ

ಶ್ರೀ ಚರುಚನ್[೫]

ಇದು ಚರುಚನ್ ಎಂಬ ಶಿಲ್ಪಿಯನ್ನು ಹೆಸರಿಸಿದೆ.

೫. ಅದೇ ಪರಶುರೇಖಾಶಿಲ್ಪದ ಸಮೀಪದಲ್ಲಿ

ಶ್ರೀಗುಣ.....ನ್[೬]

ತ್ರುಟಿತ ಶಾಸನವಾಗಿದೆ.

೬. ಅಲ್ಲೇ ಇನ್ನೊಂದು ಬಂಡೆಯ ಮೇಲೆ

೧. ಭೈಬೆಗನ ಸಿ[ಂ]ಗ

೨. ಸ್ವಸ್ತಿ ಶ್ರೀನಿಧಿ ಪುರುಷ

೩. ಓವಜರ...ಸ. .....ಆ

ಈ ಶಾಸನದಲ್ಲಿ ಶ್ರೀ ನಿಧಿಪುರುಷ ಎಂದು ಉಲ್ಲಖಿಸಿದೆ. ಕ್ರಿ.ಶ. ೭-೮ನೆಯ ಶತಮಾನದ ಶಾಸನವಾಗಿದೆ.

೭. ಹುಲಿಗೆಮ್ಮನಕೊಳ್ಳದಲ್ಲಿರುವ ಒಂದು ಕಲ್ಲಿನ ಮೇಲೆ-

೧. ಶ್ರೀ ಕಾದಮಾರಕ್ಕುಟ್ಟರ ಚಟ್ಟ ತ.......ಱ ವಾ

೨. ಮಾಬ್ರತಿದಾಸ ಪರಮ ಮಹೇಶ್ವರ್

ಕಾದ ಮಾರಕ್ಕುಟ್ಟ ಮತ್ತು ಪರಮ ಮಹೇಶ್ವರರನ್ನು ಉಲ್ಲೇಖಿಸುತ್ತದೆ.

೮. ಹುಲಿಗೆಮ್ಮಕೊಳ್ಳದ ಮುಂಭಾಗದಲ್ಲಿರುವ ಶಿವದೇವಾಲಯದ ಮುಂದಿನ ಭಿತ್ತಿಯ ಮೇಲೆ-

೧. ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಸತ್ಯಾಶ್ರಯ

೨. ದೇವಾರಿಯ ಮಗನು ಬೆನಮ್ಮ ಕರಂಡದ

೩. ಪಾರದನ ಕೇಸಿದ ಧರ್ಮ್ಮವಕ್ಕೆ

ವಿಕ್ರಮಾದಿತ್ಯ ಸತ್ಯಾಶ್ರಯ ದೇವಾರಿಯ ಮಗ ಬೆನಮ್ಮ ಎಂಬುವವನು ಕರಂಡದ ಸ್ವರ್ಗದ ದಾರಿಯ ಗಾಡಿಯನ್ನು ಮಾಡಿದ ಎಂದು ಉಲ್ಲೇಖಿಸುತ್ತದೆ.

ಹಾಗೇ ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ೧೫ ಶಾಸನಗಳು ಹೊಸದಾಗಿ ಕಂಡುಬಂದಿವೆ. ಅವುಗಳು ಬಾಚಿನಗುಡ್ಡದಿಂದ ಉತ್ತರಕ್ಕೆ ಇರುವ "ಶಂಕರಲಿಂಗನ ಗುಡ್ಡ"ದಲ್ಲಿ ಇರುತ್ತವೆ. ಈ ಶಾಸನಗಳಿರುವ ಸ್ಥಳವನ್ನು ಅಯ್ಯನಪಡೆ ಅಥವಾ ಸಿದ್ಧರ ಗುಹೆ ಎಂದು ಕರೆಯುವರು. ಈ ಪ್ರದೇಶವು ಬಾದಾಮಿ ಚಲುಕ್ಯರ ಕಾಲದಲ್ಲಿ ಗಣಿಪ್ರದೇಶವಾಗಿತ್ತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಶಾಸನಗಳ ಹತ್ತಿರ ಚಕ್ರವ್ಯೂಹ, ಮಹಿಷಮರ್ದಿನಿ, ಆನೆ, ವೃಷಭಸಿಂಹ, ತ್ರೆಡ್ ಲೆಸ್, ತ್ರಿಶೂಲ ಮುಂತಾದ ಗೀರುಬಂಡೆ ಚಿತ್ರಗಳು ಇವೆ. ಹಾಗೇ ಈ ಶಂಕರಲಿಂಗಕೊಳ್ಳದ ಎಡಭಾಗದಲ್ಲಿರುವ ಡೊಂಕನಕೊಳ್ಳದಲ್ಲಿ ಮತ್ತೊಂದು ಮೂರು ಸಾಲಿನ ಶಾಸನವಿದ್ದು, ಇದರ ಹತ್ತಿರದಲ್ಲಿ ಲಜ್ಜಾಗೌರಿ ಮತ್ತು ಗಣೇಶನ ರೇಖಾಚಿತ್ರಗಳು ಇರುತ್ತವೆ. ಹಾಗೇ ಅಯ್ಯನಪಡೆಯಲ್ಲಿ ಆನೆಯ ರೇಖಾಚಿತ್ರದ ಮೇಲ್ಭಾಗದಲ್ಲಿ ಆರು ಸಾಲಿನ ಶಾಸನವಿದೆ. ಈ ಶಾಸನಗಳನ್ನು ವಿದ್ವಾಂಸರ ಗಮನಕ್ಕೆ ತರಲಾಗಿದೆ.

ವೀರಗಲ್ಲುಗಳು :

ಚರಿತ್ರೆಯ ರಚನೆಯಲ್ಲಿ ಶಾಸನಗಳಂತೆ ವೀರಗಲ್ಲುಗಳು ತಮ್ಮದೆಯಾದ ಪ್ರಮುಖಪಾತ್ರ ವಹಿಸಿವೆ. ಈ ವೀರಗಲ್ಲುಗಳನ್ನು ನಿಲ್ಲಿಸುವ ಪ್ರಮುಖ ಉದ್ದೇಶವೆಂದರೆ, ಯುದ್ಧದಲ್ಲಿ ಹೋರಾಡಿ ಮಡಿದ ವೀರನ ಪರಾಕ್ರಮ ಲೋಕಕ್ಕೆ ತಿಳಿಯುವಂತೆ, ಆ ವೀರನನ್ನು ತಮ್ಮ ಆದರ್ಶ ಪುರುಷನನ್ನಾಗಿ ಮಾಡಿಕೊಳ್ಳುವಂತೆ ಮಾಡುವುದೇ

ಆಗಿತ್ತೆಂಬುದು ಸ್ಪಷ್ಟವಾಗುತ್ತದೆ.[೧೦] ಈ ವೀರಗಲ್ಲನ್ನು ನಿಲ್ಲಿಸುವಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದೃಷ್ಟಿಗಳೆರಡೂ ಇತ್ತೆಂದು ತೋರುತ್ತದೆ. ವೀರನ ಪರಾಕ್ರಮವನ್ನು ಮೆಚ್ಚಿ ವೀರಗಲ್ಲನ್ನು ನೆಡುವುದು, ಅವನ ಪರಾಕ್ರಮ ಲೋಕಕ್ಕೂ ತಿಳಿಯಲೆಂದು ನೆಡುವುದು ಇವು ಲೌಕಿಕ ಉದ್ದೇಶಗಳು[೧೧] ಮಡಿದ ವೀರನಿಗೆ ವೀರಗಲ್ಲನ್ನು ನಿಲ್ಲಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ, ಹಾಗೆ ವೀರಗಲ್ಲು ನಿಲ್ಲಿಸುವುದರ ಮೂಲಕ ಅವನಿಗೆ ಸ್ವರ್ಗವೋ, ಕೈಲಾಸವೋ, ವೈಕುಂಠವೋ ಪ್ರಾಪ್ತವಾಗುತ್ತದೆಯೆಂದು ನಂಬಿ ವೀರಗಲ್ಲುಗಳನ್ನು ನೆಡುವುದು ಇವು ಪಾರಮಾರ್ತಿಕ ಉದ್ದೇಶಗಳು. ಇವುಗಳು ಮುಖ್ಯವಾಗಿ ದೇವಾಲಯಗಳ ಮುಂದೆ ನಿಲ್ಲಿಸುವುದು ಅಂದರೆ ಇದರ ಉದ್ದೇಶ ವೀರನು ದೇವರ ಸನ್ನಿಧಿಯಲ್ಲಿರುತ್ತಾನೆಂಬುದಾಗಿದೆ.[೧೨]

ಆದರೆ, ಈ ಪ್ರದೇಶದಲ್ಲಿ ದೊರೆತ ವೀರಗಲ್ಲುಗಳು ಕೆಲವು ದೇವಾಲಯದ ಮುಂದೆ ದೊರೆತರೆ ಇನ್ನೂ ಕೆಲವು ಗದ್ದೆ ಮತ್ತು ಗುಡ್ಡದಲ್ಲಿ ದೊರೆತಿವೆ. ಬಾಚಿನಗುಡ್ಡದಲ್ಲಿರುವ ಎರಡು ವೀರಗಲ್ಲುಗಳು ಶಿರಬಡಗಿಯಲ್ಲಿಯ ವೀರಗಲ್ಲುಗಳು ದೇವಾಲಯಗಳ ಮುಂಭಾಗದಲ್ಲಿ ಕಂಡುಬಂದರೆ, ಮಂಗಳೂರುನಲ್ಲಿಯ ಒಂದು, ಗೋನಾಳದಲ್ಲಿಯ ಎರಡು ವೀರಗಲ್ಲುಗಳು ಗದ್ದೆಯಲ್ಲಿ ಕಂಡುಬರುತ್ತವೆ. ಹಾಗೆ ಇನ್ನೊಂದು ಹುಲ್ಲಿಕೇರಿಯ ವ್ಯಾಪ್ತಿಯಲ್ಲಿ ಬರುವ ಗುಡ್ಡದಲ್ಲಿ ಕಂಡುಬಂದಿದೆ.

ಅಡಿ ಟಿಪ್ಪಣಿಗಳು :

೧. ಇತಿಹಾಸ ದರ್ಶನ, ಸಂಪುಟ-೧೯, ಪು. ೩೫೬.

೨. ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ-೯, ಪ್ರಾ.ಕ.ವಿ.ವಿ., ಹಂಪಿ, ಪು. ೨೨೫.

೩. ಅದೇ,

೪. ಅದೇ, ಪು. ೨೨೬.

೫. ಅದೇ,

೬. ಅದೇ,

೭. ಅದೇ, ಪು. ೨೨೭.

೮. ಅದೇ, ಪು. ೧೮೫.

೯. ಅದೇ, ಪು. ೧೮೬.

೧೦. ಕರ್ನಾಟಕದ ವೀರಗಲ್ಲುಗಳು, ಡಾ. ಆರ್. ಶೇಷಶಾಸ್ತ್ರಿ, ಕ.ಸಾ.ಪ., ಬೆಂಗಳೂರು, ಪು. ೯೩.

೧೧. ಅದೇ, ಪು. ೯೬.

೧೨. ಅದೇ, ಪು. ೧೧೦.

ಅಧ್ಯಾಯ-ಏಳು

ಸಮಾರೋಪ

ಭರತಖಂಡದ ಸಂಸ್ಕೃತಿಯ ಚೌಕಟ್ಟಿನಲ್ಲಿ ಸುಂದರವಾಗಿ ಅರಳಿರುವ ಕುಸುಮಗಳಲ್ಲಿ ಕರ್ನಾಟಕದ ಪಾತ್ರ ಹಿರಿದಾದುದು. ಕ್ಷೇತ್ರಕಾರ್ಯದ ಮೂಲಕ ಚಿಕ್ಕಪುಟ್ಟ ಪ್ರೇದಶಗಳಿಂದ ಹಿಡಿದು ಅಲ್ಲಿಯ ಶಾಸನಗಳು, ಸಾಂಸ್ಕೃತಿಕ ಅವಶೇಷಗಳನ್ನು ಕಡೆಗಣಿಸದೇ ಎಲೆಗಳ ಮೇಲಿನ ಇಬ್ಬನಿಯ ಹನಿಯಲ್ಲಿ ವಿಶ್ವದ ದೃಶ್ಯವನ್ನು ಕಂಡಂತೆ ಚಿಕ್ಕಪುಟ್ಟ ಪ್ರದೇಶಗಳಲ್ಲಿಯೂ ಕಾಣಬಹುದು. ಅದರ ಹಿನ್ನೆಲೆಯಲ್ಲಿ ಈ ಪುಟ್ಟ ವರದಿಯನ್ನು ಸಲ್ಲಿಸಲಾಗಿದೆ. ಯಾವುದೇ ಒಂದು ಪ್ರದೇಶವನ್ನು ಅಧ್ಯಯನ ಮಾಡಬೇಕಾದರೆ ಪ್ರಬಲವಾದ ಅಥವಾ ಪ್ರಬುದ್ಧವಾದ ಜ್ಞಾನವಿರಬೇಕೆಂದು ಅನೇಕ ವಿದ್ವಾಂಸರು ತೋರ್ಪಡಿಸಿದ್ದಾರೆ.

''ಸಾಂಸ್ಕೃತಿಕ ನೆಲೆಗಳು ಇತಿಹಾಸದ ಬೆನ್ನೆಲುಬು'' ಇದ್ದಂತೆ. ಪ್ರಾಗೈತಿಹಾಸ ಕಾಲದಿಂದ ಇಂದಿನವರೆಗೂ ಪ್ರಾಚೀನ ಸಾಂಸ್ಕೃತಿಯ ವಿವಿಧ ಮುಖಗಳನ್ನು ಅರಿಯಲು ಪ್ರಾಚ್ಯಾವಶೇಷಗಳು, ಶಾಸನಗಳು, ಸ್ಮಾರಕಗಳು, ರೇಖಾಚಿತ್ರಗಳು, ವರ್ಣಚಿತ್ರಗಳು, ಕೆರೆಕಟ್ಟೆಗಳು, ಕಾಲುವೆಗಳು, ರಕ್ಷಣಾ ಕೋಟೆಗಳು ಮುಂತಾದವು ಸಹಾಯಕಾರಿಯಾಗಿವೆ. ಈ ಎಲ್ಲಾ ಆಧಾರಗಳಿಂದ ಕರ್ನಾಟಕದ ರಾಜಕೀಯ ಚರಿತ್ರೆಯು ರೂಪಗೊಂಡ ಸಂಗತಿಯು ತಿಳಿದುಬರುತ್ತದೆ.

ಪ್ರಸ್ತುತ ಬಾದಾಮಿ ತಾಲೂಕಿನ ಹುಲಗೆಮ್ಮನಕೊಳ್ಳ ಸಾಂಸ್ಕೃತಿಕ ಅಧ್ಯಯನದ ವಿಷಯವು ಇದಕ್ಕೆ ಹೊರತಾಗಿಲ್ಲ. ಪ್ರಸ್ತುತ ವಿಷಯಗಳ ಕುರಿತು ಈವರೆಗೆ ವಿವರವಾದ ಅಧ್ಯಯನಗಳು ನಡೆದೆ ಇಲ್ಲವೆಂದು ಹೇಳುವುದು ಸ್ಪಷ್ಟ. ಈ ಒಂದು ಅಧ್ಯಯನದಲ್ಲಿ ಅಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಈ ಪ್ರದೇಶದ ಸ್ಥಳೀಯ ಚರಿತ್ರೆಯನ್ನು ವಿಶ್ಲೇಷಣಾತ್ಮಕ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಹಿನ್ನೆಲೆಯಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು.

ಕ್ಷೇತ್ರಕಾರ್ಯದ ಮೂಲಕ ಪ್ರದೇಶದಲ್ಲಿನ ಪ್ರಾಗೈತಿಹಾಸ ಕಾಲದ ನೆಲೆಗಳು, ಚಾರಿತ್ರಿಕ ಕಾಲಘಟ್ಟದ ದೇವಾಲಯಗಳು, ಮೂರ್ತಿಶಿಲ್ಪಗಳು, ಶಾಸನಗಳು, ರಕ್ಷಣಾ ವಾಸ್ತುಶಿಲ್ಪ, ಕೆರೆ-ಕಟ್ಟೆಗಳು, ವರ್ಣಚಿತ್ರಗಳು, ರೇಖಾಚಿತ್ರಗಳ ಕುರಿತು ಅಧ್ಯಯನ ನಡೆಸಲಾಯಿತು. ಒಟ್ಟಾರೆಯಾಗಿ ಈ ಪ್ರದೇಶದ ಚರಿತ್ರೆಯನ್ನು ಸಮಗ್ರವಾಗಿ ರಚಿಸುವ ಸಲುವಾಗಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಪ್ರಾಗೈತಿಹಾಸ ಕಾಲದಿಂದ

ಇತ್ತೀಚಿನ ಕಾಲದವರೆಗೆ ಈ ಪ್ರದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಾನವ ತನ್ನ ಪ್ರಭಾವ ಬೀರಿರುವುದು ಈ ಪ್ರದೇಶದ ಅಧ್ಯಯನದಿಂದ ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನದ ವಿಷಯವನ್ನು ಆಯ್ದುಕೊಂಡು ವಿವರವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಈ ಪ್ರದೇಶದಲ್ಲಿ ಹಳೇ ಶಿಲಾಯುಗದಿಂದ ಹಿಡಿದು ಇತಿಹಾಸ ಆರಂಭಕಾಲದವರೆಗಿನ ನೆಲೆಗಳಿದ್ದು, ಅವುಗಳನ್ನು ಈಗಾಗಲೇ ಪತ್ತೆಹಚ್ಚುವ ಕಾರ್ಯ ನಡೆದಿದೆ. ಈ ಪ್ರದೇಶದ ಬೆಟ್ಟಗಳಲ್ಲಿ ಪ್ರಾಚೀನ ಮಾನವರು ಬಿಡಿಸಿದ ಬಯಲುಬಂಡೆ ರೇಖಾಚಿತ್ರಗಳನ್ನು ನಾವು ಕಾಣಬಹುದಾಗಿದೆ. ನನ್ನ ಅಧ್ಯಯನದ ಸಂದರ್ಭದಲ್ಲಿ ಮಧ್ಯಹಳೇ ಶಿಲಾಯುಗದ ಮಾನವನ ನೆಲೆಯನ್ನು ಮತ್ತು ಬಾದಾಮಿ ಚಲುಕ್ಯರ ಶಾಸನಗಳನ್ನು, ಬಯಲು ಬಂಡೆ ರೇಖಾಚಿತ್ರಗಳನ್ನು, ಕಲ್ಯಾಣ ಚಾಲುಕ್ಯರ ಕಾಲದ ಮಡಿಕೆಯಿಂದ ಉಳುತ್ತಿರುವ ರೈತನ ಉಬ್ಬು ಶಿಲ್ಪವನ್ನು, ರೇಖಾಚಿತ್ರಗಳಲ್ಲಿ ಪ್ರಮುಖವಾಗಿ ವೃಷಭ ಸಿಂಹ, ದುರ್ಗಾದೇವಿ, ತ್ರಿಶೂಲದ ಬೆಳವಣಿಗೆ ಹಂತ ಹಂತವಾಗಿರುವ ಆವಿಷ್ಕಾರಗಳನ್ನು ಮಾಡಲಾಗಿದೆ. ಈಪ್ರದೇಶದಲ್ಲಿ ಇತಿಹಾಸ ಕಾಲಕ್ಕೆ ಸಂಬಂಧಿಸಿದ ಮಡಿಕೆಚೂರುಗಳನ್ನು ಸಂಗ್ರಹಿಸಲಾಗಿದೆ. ಈ ನೆಲೆಯ ಬಹುತೇಕ ಹಾಳಾಗಿದ್ದು ಆಧುನಿಕ ಮಾನವನ ವಿಸ್ತೃತ ಕೃಷಿ ಚಟುವಟಿಕೆಗಳಿಂದ ತಮ್ಮ ಮೂಲ ಸ್ವರೂಪ ಕಳೆದುಕೊಂಡಿವೆ. ಇದರಿಂದ ಈ ಪ್ರದೇಶದಲ್ಲಿ ಹಳೇ ಶಿಲಾಯುಗದ ಕಾಲದಿಂದಲೂ ಮಾನವನು ನೆಲೆಸಿರುವ ಕುರುಹುಗಳನ್ನು ಕಾಣಬಹುದಾಗಿದೆ.

ಇತಿಹಾಸ ಕಾಲಘಟ್ಟಕ್ಕೆ ಸಂಬಂಧಿಸಿದಂತೆ, ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು ಕಲ್ಯಾಣದ ಚಾಲುಕ್ಯರು, ವಿಜಯನಗರ ಅರಸರು, ಸಿಂಧರು, ನೊಳಂಬರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದು ಕಂಡುಬಂದಿದೆ. ಇದಕ್ಕೆ ಪುರಾವೆಯಾಗಿ ಅವರ ಕಾಲದ ದೇವಾಲಯಗಳು, ಶಾಸನಗಳು, ಕೋಟೆ-ಕೊತ್ತಲಗಳು, ರೇಖಾಚಿತ್ರಗಳು, ವರ್ಣಚಿತ್ರಗಳು ಕಂಡುಬಂದಿವೆ, ಬರುತ್ತಿವೆ. ಪ್ರಸ್ತುತ ಸಂಪ್ರಬಂಧದಲ್ಲಿ ಈ ಪ್ರದೇಶದ ಚರಿತ್ರೆಯನ್ನು ವಿವರಣಾತ್ಮಕವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ವಿರಳವಿರಬಹುದು, ಆದರೆ ಸುತ್ತಲಿನ ಪರಿಸರದಲ್ಲಿ ದೊರೆತಿರುವ ಶಾಸನಗಳಿಂದ ಈ ಭಾಗದ ಆಡಳಿತ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ತಿಳಿಯಲು ಅನುಕೂಲವಾಗಿವೆ. ಇಲ್ಲಿ ಲಭ್ಯವಾಗಿರುವ ಅತೀ ಪ್ರಾಚೀನ ಶಾಸನವೆಂದರೆ ಬಾದಾಮಿ ಚಲುಕ್ಯರ ಶಾಸನಗಳಾಗಿವೆ. ಇವರ ಒಂದು ಆಡಳಿತದ ಕಾಲಾವಧಿಯಿಂದ ಈ ಪ್ರದೇಶದ ಸಾಂಸ್ಕೃತಿಕ ಚಿತ್ರಣ ಸ್ಪಷ್ಟಗೊಳ್ಳುತ್ತಾ ಬರುತ್ತದೆ.

ಇಲ್ಲಿ ಲಭ್ಯವಿರುವ ಶಾಸನಗಳು ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಸಿಂಧರು, ವಿಜಯನಗರದ ಅರಸರಿಗೆ ಸಂಬಂಧಿಸಿದ್ದು ಅವರ ಆಡಳಿತ ಅವಧಿಯ ಮಾಹಿತಿಯನ್ನು ತಿಳಿಸಿಕೊಡುತ್ತದೆ. ಅಲ್ಲದೇ ಈ ಶಾಸನಗಳ ಆಡಳಿತ ವ್ಯವಸ್ಥೆಯಲ್ಲಿ ಸಹಾಯ ಮಾಡಿದ ಮಹಾ ಮಂಡಳೇಶ್ವರರ, ಮಂಡಳೇಶ್ವರ ಸಾಮಂತ ಅಧಿಕಾರಿಗಳ ಕುರಿತು ವಿವರಣೆಯನ್ನು ನೀಡುತ್ತದೆ.

ಪ್ರಸ್ತುತ ಪ್ರದೇಶದ ಸುತ್ತಮುತ್ತಲಿನ ಪರಿಸರದಲ್ಲಿ ಹಲವಾರು ವೀರಗಲ್ಲು, ಮಹಾಸತಿಗಲ್ಲುಗಳಿದ್ದು, ಅವುಗಳು ಪ್ರಾದೇಶಿಕ ಸ್ಥಳೀಯ ಚರಿತ್ರೆಗೆ ಸಹಾಯಕಾರಿಯಾಗಿವೆ. ಈ ವೀರಗಲ್ಲುಗಳು ಅಂದಿನ ಸಾಮಾಜಿಕ ಜೀವನದ ಚಿತ್ರಣವನ್ನು ನೀಡುತ್ತವೆ. ಜೊತೆಗೆ ಅಂದಿನ ರಾಜ್ಯವ್ಯವಸ್ಥೆಯಲ್ಲಿ ಯುವಕರು ಮಾಡಬೇಕಾದ ಮೂಲಭೂತ ಕರ್ತವ್ಯಗಳನ್ನು ಪ್ರತಿಪಾದಿಸುತ್ತ ಮುಂದಿನ ಪೀಳಿಗೆಯ ಯುವಕರ ಪಾತ್ರವೇನೆಂಬುದನ್ನು ತಿಳಿಸುತ್ತದೆ. ಮಾಸ್ತಿಕಲ್ಲುಗಳು ಅಂದಿನ ಸಮಾಜದಲ್ಲಿದ್ದ ಸಾಮಾಜಿಕ ಪದ್ಧತಿ, ಸ್ತ್ರೀಯರ ಸ್ಥಾನಮಾನ ಮುಂತಾದವುಗಳನ್ನು ತಿಳಿಸಿಕೊಡುತ್ತವೆ.

ಪ್ರಸ್ತುತ ಕ್ಷೇತ್ರದಲ್ಲಿ ಆಡಳಿತ ನಡೆಸಿದ ರಾಜ ಮನೆತನಗಳೆಲ್ಲಾ ಧರ್ಮಶ್ರದ್ಧೆ ಮತ್ತು ಧಾರ್ಮಿಕ ಸಹಿಷ್ಣುತೆಯನ್ನು ಪಾಲಿಸಿಕೊಂಡು ಬಂದಿರುವುದು ಸ್ಮಾರಕ ಮತ್ತು ಶಾಸನಗಳ ಆಧಾರಗಳ ಮೇಲಿಂದ ತಿಳಿಯುತ್ತದೆ. ಇಲ್ಲಿ ಶೈವರ ಪ್ರಭಾವ ಹೆಚ್ಚಿದ್ದರೂ ಸಹ ವೈಷ್ಣವ, ಜೈನ, ಬೌದ್ಧ ಪಂಥಾಚರಣೆಗಳು ಅಸ್ತಿತ್ವದಲ್ಲಿರುವುದು ದೇವಾಲಯದ ಮೂರ್ತಿಶಿಲ್ಪಗಳಿಂದ ವ್ಯಕ್ತವಾಗುತ್ತದೆ. ಚಲುಕ್ಯರು ಮೂಲತಃ ವೈಷ್ಣವರಾಗಿದ್ದರೂ ಎಲ್ಲ ಧರ್ಮಗಳಿಗೆ ಪ್ರೋತ್ಸಾಹ ನೀಡಿ ಧಾರ್ಮಿಕ ಸಹಿಷ್ಣುತೆಗೆ ಬುನಾದಿ ಹಾಕಿದರು. ತಮ್ಮ ಆಡಳಿದ ಉತ್ತರಾರ್ಧರಲ್ಲಿ ಶೈವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿರುವುದು ಇವರು ನಿರ್ಮಿಸಿರುವ ಶೈವ ದೇವಾಲಯಗಳೇ ಸಾಕ್ಷಿಯಾಗಿವೆ. ಹಾಗೆಯೇ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರದ ಅರಸರ ಕಾಲದಲ್ಲಿ ಸರ್ವಧರ್ಮ ಸಮನ್ವಯತೆ ಎಲ್ಲೆಲ್ಲೂ ಮೊಳಗಿತ್ತು ಎಂಬುದು ಸಾಧಿತವಾಗಿದೆ. ಮುಖ್ಯವಾಗಿ ಕಾಳಾಮುಖ, ಪಾಶುಪಥ ಪಂಥಕ್ಕೆ ಈ ಪರಿಸರವು ಹೇಳಿ ಮಾಡಿಸಿದಂತಾಗಿತ್ತು. ಅದರಂತೆ ಎಲ್ಲ ಧರ್ಮಗಳ ಸಂರಕ್ಷಣೆ ಹಾಗೂ ಪುರೋಭಿವೃದ್ಧಿಯನ್ನು ಸಾಧಿಸಿದ್ದು ವಿಧಿತವಾಗುತ್ತದೆ.

ಸುತ್ತಲಿನ ಪರಿಸರದಲ್ಲಿ ಲಭ್ಯವಿರುವ ಶಾಸನ, ಶಿಲ್ಪ, ದೇವಾಲಯಗಳಿಂದ ಅಂದಿನ ಆರ್ಥಿಕ ಸ್ಥಿತಿಗತಿಯನ್ನು ತಿಳಿಯಲಾಗಿದೆ. ಅಂದು ಪ್ರಚಲಿತದಲ್ಲಿದ್ದ ಕೃಷಿಪದ್ಧತಿ, ನೀರಾವರಿ ವ್ಯವಸ್ಥೆ, ಕೆರೆ, ವ್ಯಾಪಾರ ವಹಿವಾಟು,

ತೂಕ-ಅಳತೆಗಳ ಸಹಾಯದಿಂದ ಅವರ ಆರ್ಥಿಕ ಪದ್ಧತಿಯನ್ನು ತಿಳಿಯಲಾಯಿತು. ಈ ಪ್ರದೇಶವು ಫಲವತ್ತತೆಯಿಂದ ಕೂಡಿದ್ದರಿಂದ ಪ್ರಾಚೀನ ಕಾಲದಿಂದಲೂ ಈ ಭಾಗದಲ್ಲಿ ಜನ ಕೃಷಿ ಅವಲಂಬಿಸಿರುವುದು ಪ್ರಮುಖವಾಗಿದೆ.

ಈ ಕ್ಷೇತ್ರದಲ್ಲಿ ಆಡಳಿತ ನಡೆಸಿರತಕ್ಕಂತ ಅರಸರು ಸಾಕಷ್ಟು ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇಲ್ಲಿನ ದೇವಾಲಯವು ಹೆಚ್ಚಾಗಿ ಬಾದಾಮಿ ಚಲುಕ್ಯರ ಕಾಲಾವಧಿಯಲ್ಲಿ ನಿರ್ಮಾಣಗೊಂಡವುಗಳಾಗಿವೆ. ವಿಶೇಷವಾಗಿ ಹುಲಿಗೆಮ್ಮ ಕೊಳ್ಳದಲ್ಲಿಯ ದೇವಾಲಯಗಳು ಫಾಂಸನಾ ಶೈಲಿಯಲ್ಲಿರುವುದು ಇಲ್ಲಿಯ ಒಂದು ವೈಶಿಷ್ಟ್ಯವೇ ಆಗಿದೆ.

ಈ ಅಧ್ಯಯನದಲ್ಲಿ ಆ ದೇವಾಲಯಗಳ ರಚನೆ, ವಾಸ್ತುಶೈಲಿ ಮುಂತಾದ ಸೂಕ್ಷ್ಮ ವಿಷಯಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಅದೇ ರೀತಿ ಈ ಕ್ಷೇತ್ರದಲ್ಲಿಯ ಮೂರ್ತಿಶಿಲ್ಪಗಳು ಹೆಚ್ಚಾಗಿ ಬಾದಾಮಿ ಚಲುಕ್ಯರ ಕಾಲದ್ದಾಗಿವೆ. ಇವುಗಳ ರಚನೆಯ ಲಕ್ಷಣಗಳಿಂದ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಒಂದು ರಾಜ್ಯಾಂಗದ ಸಂಪ್ತಾಂಗಗಳಲ್ಲಿ ಒಂದಾಗಿರುವ ಕೋಟೆಯು ಈ ಕ್ಷೇತ್ರದಲ್ಲಿ ಮತ್ತು ಹತ್ತಿರದ ಬಾಚಿನಗುಡ್ಡದ ಮರಡಿಯ ಮೇಲೆ ಕಂಡುಬಂದಿವೆ. ಇವುಗಳು ಸಂಪೂರ್ಣವಾಗಿ ನಾಶದ ಅಂಚಿನಲ್ಲಿವೆ. ಅಂದು ರಾಜ್ಯದ ಕೊನೆಯ ಘಟಕ ಗ್ರಾಮವಾಗಿದ್ದು, ರಕ್ಷಣೆಗೆ ಕೋಟೆ-ಕೊತ್ತಲಗಳನ್ನು ಕಟ್ಟಿ ಅದರಿಂದ ವಿರೋಧಿಗಳ ಚಲನವಲನಗಳನ್ನು ಗಮನಿಸುತ್ತಿದ್ದರು.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಫಲಿತಗಳು ಅಧ್ಯಯನ ಸಂದರ್ಭದಲ್ಲಿ ಬೆಳಕಿಗೆ ಬಂದಿದ್ದು ವಿಶೇಷವಾಗಿ ಹೊಸ ಪ್ರಾಚೀನ ನೆಲೆಗಳನ್ನು ಗುರುತಿಸಲಾಯಿತು. ಜೊತೆಗೆ ಇಲ್ಲಿರುವ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪ, ಕೋಟೆ-ಕೊತ್ತಲುಗಳನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಯಿತು. ಈ ಹಿಂದಿನ ಅಧ್ಯಯನಗಳು ಹೆಚ್ಚಿನ ಸಮುಗ್ರತೆಯನ್ನು ಪಡೆದಿಲ್ಲ ಎಂಬ ಹಿನ್ನೆಲೆಯಿಂದ ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನ ಕೈಗೊಳ್ಳಲಾಯಿತು. ಕ್ಷೇತ್ರಕಾರ್ಯದ ಮೂಲಕ ಲಭ್ಯವಿರುವ ಪುರಾತತ್ವ ಆಕರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಚರಿತ್ರೆಯನ್ನು ನಿರ್ಮಿಸುವ ಪ್ರಯತ್ನವನ್ನು ಮಾಡಲಾಗಿದೆ. ಚಾರಿತ್ರಿಕ ಘಟ್ಟಕ್ಕೆ ಸಂಬಂಧಿಸಿದಂತೆ ಶಾಸನಗಳನ್ನು ಕ್ರಮಬದ್ಧವಾಗಿ ಹಾಗೂ ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಲಾಗಿದೆ. ದೇವಾಲಯಗಳು, ಕೋಟೆ-ಕೊತ್ತಲುಗಳು, ಬಯಲಬಂಡೆ, ರೇಖಾಚಿತ್ರಗಳು, ವರ್ಣಚಿತ್ರಗಳ ಕುರಿತು ವ್ಯವಸ್ಥಿತ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಮುಖ್ಯ ಉದ್ದೇಶವೆಂದರೆ ಬಾದಾಮಿ ತಾಲೂಕಿನ ಹುಲಿಗೆಮ್ಮನಕೊಳ್ಳದ ಸಾಂಸ್ಕೃತಿಕ ಮಹತ್ವವನ್ನು ಮತ್ತು ಮರೆತು ಹೋಗಿರುವ ಚಾರಿತ್ರಿಕ ವಿಷಯಗಳನ್ನು ಪುನರ್ ಪರಿಶೀಲಿಸಿ ಈ ಪ್ರದೇಶದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹಾಗೂ ಸ್ಥಳೀಯ ಚರಿತ್ರೆಯ ಮಹತ್ವವನ್ನು ತಿಳಿಸಲು ಈ ಸಂಪ್ರಬಂಧ ರಚನೆಯಲ್ಲಿ ಪ್ರಯತ್ನ ಮಾಡಲಾಗಿದೆ. ಆದರೆ, ಪ್ರಸ್ತುತ ಅಧ್ಯಯನವೇ ಅಂತಿಮವಲ್ಲ. ಏಕೆಂದರೆ ಈ ಅಧ್ಯಯನದಲ್ಲಿ ವಿವರಿಸಿರುವ ಹೊಸ ಪ್ರಾಗೈತಿಹಾಸ ಕಾಲದ ನೆಲೆಗಳನ್ನು ಕೇವಲ ಸ್ಥಳ ಪರೀಶೋಧನೆಯಿಂದ ಮಾತ್ರ ಗುರುತಿಸಿ ಅಲ್ಲಿ ದೊರೆತ ಅವಶೇಷಗಳನ್ನು ವಿವರಿಸಲಾಗಿದೆ. ಈ ನೆಲೆಗಳನ್ನು ಉತ್ಖನನ ಮಾಡಿದರೆ ಹೆಚ್ಚಿನ ಮಾಹಿತಿಯು ದೊರೆಯಬಹುದು. ಈ ಕ್ಷೇತ್ರದಲ್ಲಿ ನಶಿಲಾಯುಗದ ಬಗೆಗೆ ವ್ಯಾಪಕ ಕ್ಷೇತ್ರಕಾರ್ಯವನ್ನು, ಸೂಕ್ಷ್ಮವಾಗಿ ಸಂಶೋಧನೆಯನ್ನು ಕೈಗೊಳ್ಳುವ ಅವಶ್ಯಕತೆಯಿದೆ. ಈ ಕ್ಷೇತ್ರದಲ್ಲಿರುವ ಧಾರ್ಮಿಕ ವ್ಯವಸ್ಥೆ ಮತ್ತು ಜನಸಮುದಾಯಗಳ ಕುರಿತು ಹೇರಳವಾಗಿ ಲಭ್ಯವಿರುವ ಮೌಖಿಕ ಕಥನಗಳು ಹಾಗೂ ಐತಿಹ್ಯಗಳ ಕುರಿತು ಅಧ್ಯಯನದ ಅವಶ್ಯಕತೆಯಿದೆ. ಈ ಕ್ಷೇತ್ರದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯಾದ ಸಮಾಜೋ-ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಇನ್ನೂ ವ್ಯಾಪಕವಾದ ಅಧ್ಯಯನ ಕೈಗೊಳ್ಳುವ ಅಗತ್ಯವಿದೆ.

ಗ್ರಂಥಋಣ

ಅಣ್ಣಿಗೇರಿ ಎಂ. ಎಂ., 'ಪಟ್ಟದಕಲ್ಲು ಗುಡಿಗಳು', ಧಾರವಾಡ.

ಅಣ್ಣಿಗೇರಿ ಎಂ. ಎಂ., 'ಐಹೊಳೆ ಕಲೆ ಮತ್ತು ಸಂಸ್ಕೃತಿ', ಕ.ವಿ.ವಿ., ಧಾರವಾಡ.

ಆರ್. ಶೇಷಶಾಸ್ತ್ರಿ, ೨೦೦೪, 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಆರ್. ಸಿ. ಹಿರೇಮಠ (ಪ್ರ.ಸಂ.), ೧೯೭೨, ಡಾ. ಎಂ. ಎಂ. ಕಲಬುರ್ಗಿ (ಸಂ), 'ಕರ್ನಾಟಕ ಭಾರತಿ', ಪ್ರಸಾರಾಂಗ, ಕ.ವಿ.ವಿ., ಧಾರವಾಡ.

ಎ. ಎಸ್. ನಂಜುಂಡಸ್ವಾಮಿ, ೨೦೦೯, 'ಚಾಲುಕ್ಯರ ಇತಿಹಾಸ', ಸಮಾಜ ಪುಸ್ತಕಾಲಯ, ಧಾರವಾಡ-೧.

ಎನ್. ಬಸವರಾಧ್ಯ (ಪ್ರ.ಸಂ.), ೨೦೦೧, 'ಸಂಕ್ಷಿಪ್ತ ಕನ್ನಡ ನಿಘಂಟು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಎಂ. ಎಸ್. ಸುಂಕಾಪುರ (ಪ್ರ.ಸಂ.), ೧೯೭೭, ಡಾ. ಎಂ. ಎಂ. ಕಲಬುರ್ಗಿ (ಸಂ), 'ಕರ್ನಾಟಕ ಭಾರತಿ', ಪ್ರಸಾರಾಂಗ, ಕ.ವಿ.ವಿ., ಧಾರವಾಡ.

ಎಂ. ಜಿ. ಮಂಜುನಾಥ, ಜಿ. ಕೆ. ದೇವರಾಜಸ್ವಾಮಿ, ೧೯೯೯, 'ಕನ್ನಡ ಲಿಪಿ ಶಾಸ್ತ್ರ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಸೆನ್ ಎಚ್., ೧೯೨೬, 'ದಿ ಚಾಲುಕ್ಯ ಆರ್ಕಿಟೆಕ್ಚರ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್', ಕಲ್ಕತ್ತಾ.

ಕೂಸ ಅಪರ್ಣ, ೧೯೯೯, 'ದೇವಾಲಯದ ವಾಸ್ತುಶಿಲ್ಪ ಸಂಚಯ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಗೋಪಾಲ ಬಿ. ಆರ್., ೧೯೯೩, 'ಕರ್ನಾಟಕದ ಕಲೆಗಳು, ವಾಸ್ತು', (ಸಂ.೪), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಿದಾನಂದಮೂರ್ತಿ ಎಂ., ೧೯೮೩, 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು', ಪಿ.ಬಿ.ಎಚ್. ಪ್ರಕಾಶನ, ಬೆಂಗಳೂರು.

ತಿಪ್ಪೇರುದ್ರಸ್ವಾಮಿ ಹೆಚ್, ೧೯೯೭, 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ಡಿ.ನಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

ದೇವರಕೊಂಡಾರೆಡ್ಡಿ (ಪ್ರ.ಸಂ.), 'ಕನ್ನಡ ವಿ.ವಿ. ಶಾಸನ ಸಂಪುಟ-೯' ಬಾಗಲಕೋಟ ಜಿಲ್ಲೆ, ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಪರಶುರಾಮ ಎಫ್. ಗೋಡಿ, ೨೦೦೬, 'ಚಲುಕ್ಯ ಮಾರ್ಗದರ್ಶಿ', ಸಾಗರ ಪ್ರಕಾಶನ, ಐಹೊಳೆ.

ಪರಶಿವಮೂರ್ತಿ ಡಿ. ವಿ., ೨೦೦೮, 'ಕನ್ನಡ ಶಾಸನ ಶಿಲ್ಪಗಳು', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಪಾಡಿಗಾರ ಎಸ್. ವ್ಹಿ., ೧೯೭೮, 'ಎ ಸ್ಕಲ್ಪ್‌ಚರಲ್ ಪ್ಯಾನಲ್ ಆಫ್ ಯಶೋಧರಾ ಸ್ಟೋರಿ ಆ್ಯಟ್ ಪಟ್ಟದಕಲ್', ಕ.ವಿ.ವಿ., ಧಾರವಾಡ.

ಪ್ರಭಾಕರ ಎಂ. ಎನ್. (ಸಂ), ೨೦೦೨, 'ದೇವಾಲಯಗಳ ವಾಸ್ತುಚಂದ್ರಿಕೆ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಪಿ. ಕೆ. ಖಂಡೋಬಾ, ೨೦೦೫, 'ಸಂಸ್ಕೃತಿ ಶೋಧ', ಸಂಗೀತ ಪಬ್ಲಿಕೇಷನ್ಸ್, ಗುಲ್ಬರ್ಗಾ.

ಬಾಲಸುಬ್ರಮಣ್ಯ (ಸಂ), ೨೦೦೪, 'ಕುರುಗೋಡು', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಬಾ. ರಾ. ಗೋಪಾಲ್, ೧೯೯೮, 'ಕರ್ನಾಟಕದ ವಾಸ್ತು ಕಲೆಗಳು' (ಸಂ-೪), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಬ್ಯಾನರ್ಜಿ ಆರ್. ಡಿ, ೧೯೨೮, 'ಬಾಸ್-ರಿಲೀಫ್ಸ್ ಆಫ್ ಬಾದಾಮಿ', ಕಲ್ಕತ್ತಾ.

ಬಿ. ಷೇಕ್‌ಅಲಿ (ಪ್ರ.ಸಂ.), ಅ. ಸುಂದರ, ೧೯೯೭, 'ಕರ್ನಾಟಕ ಚರಿತ್ರೆ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಪಂಚಮುಖಿ ಆರ್. ಎಸ್., 'ಕರ್ನಾಟಕದ ಇತಿಹಾಸ'.

ಮಹದೇವ ಸಿ., ೨೦೦೧, 'ಕರ್ನಾಟಕದಲ್ಲಿ ಪುರಾತತ್ವ ಶೋಧ', ಲಕ್ಷ್ಮೀ ಪ್ರಕಾಶನ, ಶ್ರೀರಂಗಪಟ್ಟಣ.

ಮುರಿಗೆಪ್ಪ ಎ, (ಪ್ರ.ಸಂ.), ೨೦೦೯, 'ಬಾದಾಮಿ ಚಾಲುಕ್ಯರು', ಲೇಖನ ಸಂಪುಟ, ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ರಮೇಶ ಕೆ. ವಿ., ೧೯೮೪, 'ಚಾಲುಕ್ಯಾಸ್ ಆಫ್ ವಾತಾಪಿ', ಆಗಮ ಪ್ರಕಾಶನ, ನವದೆಹಲಿ.

ರಮೇಶ ನಾಯಕ (ಸಂ), ೨೦೦೭, 'ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ರಾಜಶೇಖರ ಎಸ್., ೧೯೮೫, 'ಅರ್ಲಿ ಚಾಲುಕ್ಯನ್ ಆರ್ಕಿಟೆಕ್ಚರ್ (ಐಹೊಳೆ)', ಅಭಿನವ ಪ್ರಕಾಶನ, ದೆಹಲಿ.

ಲಕ್ಷ್ಮಣ್ ತೆಲಗಾವಿ (ಸಂ), ೨೦೦೧, 'ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಲಕ್ಷ್ಮಣ್ ತೆಲಗಾವಿ (ಸಂ), ೨೦೦೪, 'ಮೌರ್ಯ ಮತ್ತು ಶಾತವಾಹನ ಯುಗ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಲಕ್ಷ್ಮಣ್ ತೆಲಗಾವಿ (ಸಂ), ೨೦೦೬, 'ಚರಿತ್ರೆ ಅಧ್ಯಯನ ಸಂಪುಟ-೧' ಸಂಚಿಕೆ-೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಲಕ್ಷ್ಮಣತೆಲಗಾವಿ, ಶ್ರೀನಿವಾಸ್ ಎಂ. ವಿ.(ಸಂ), ೧೯೭೬, 'ಚಂದ್ರವಳ್ಳಿ', ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ,

ವಾಸುದೇವ ಬಡಿಗೇರ (ಸಂ), ೨೦೦೧, 'ಹಾನಗಲ್ಲು', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ವಾಸುದೇವನ್ ಸಿ. ಎಸ್., ೨೦೦೧, 'ಹಂಪಿ ಪರಿಸರದ ಕೆರೆಗಳು', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ವಾಸು ಎಂ. ವಿ., ೨೦೦೪, 'ಮೌಖಿಕ ಇತಿಹಾಸ', ಅಂಕಿತ ಪುಸ್ತಕ ಬಸವನಗುಡಿ, ಬೆಂಗಳೂರು.

ಶೀಲಾಕಾಂತ ಪತ್ತಾರ, ೨೦೦೦, 'ಬಾದಾಮಿ ಸಾಂಸ್ಕೃತಿಕ ಅಧ್ಯಯನ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಶೀಲಾಕಾಂತ ಪತ್ತಾರ, ೨೦೦೬, 'ಬಾದಾಮಿ', ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಶಿವತಾರಕ್, ೨೦೦೧, 'ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಶ್ರೀನಿವಾಸ ಪಾಡಿಗಾರ, ೧೯೯೭, 'ಪುರಾತತ್ವ ಶಾಸ್ತ್ರ ಪರಿಚಯ', ರಾಮಾಶ್ರಯ ಪಬ್ಲಿಕೇಷನ್, ಧಾರವಾಡ.

ಶ್ರೀನಿವಾಸ ಪಾಡಿಗಾರ, ೨೦೦೪, 'ಭಾರತೀಯ ಇತಿಹಾಸದ ಶಾಸನ ಆಕರಗಳು', ರಾಮಾಶ್ರಯ ಪಬ್ಲಿಕೇಷನ್, ಧಾರವಾಡ.

ಶೀನಿವಾಸ ಪಾಡಿಗಾರ, ೨೦೦೮, 'ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ', ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಶೇಷಶಾಸ್ತ್ರಿ ಆರ್., ೧೯೮೨, 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.


ಸುಂದರ ಅ, (ಸಂ), ೧೯೯೭, 'ಕರ್ನಾಟಕ ಚರಿತ್ರೆ ಸಂಪುಟ-೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ವಿದ್ಯಾರಣ್ಯ.

ಸುಂದರ ಅ., ೧೯೭೧, 'ಬಾದಾಮಿ ಚಾಲುಕ್ಯ ಪೂರ್ವದ ಒಂದು ಇಟ್ಟಿಗೆ ಕಟ್ಟಡ', ಕರ್ನಾಟಕ ಭಾರತಿ, (ಸಂ.೫), ಕ.ವಿ.ವಿ., ಧಾರವಾಡ.


ಸಿಂದಗಿ ರಾಜಶೇಖರ, ೧೯೮೮, 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ', ಸುಜಾತ ಪಬ್ಲಿಕೇಷನ್, ಧಾರವಾಡ.


ಸೋಮಶೇಖರ ಎಸ್. ವೈ., ೨೦೦೯, 'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ', ಸಂಚಿಕೆ ಪ್ರಕಾಶನ್, ಚಿತ್ರದುರ್ಗ.


ಹೆಚ್, ಎಸ್. ಗೋಪಾಲರಾವ್ (ಸಂ), ಡಾ. ಶೀಲಾಕಾಂತ ಪತ್ತಾರ (ಲೇ), ೨೦೦೮, 'ಬಾದಾಮಿ ಚಲುಕ್ಯ ಶಿಲ್ಪಕಲೆ', ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.


ಭಾರತ
ಕರ್ನಾಟಕ ರಾಜ್ಯ
ಬಾಗಲಕೋಟೆ
N




ಬಾಗಲಕೋಟ ಜಿಲ್ಲೆ
ಬಿಜಾಪುರ ಜಿಲ್ಲೆ
ಬೆಳಗಾಂ ಜಿಲ್ಲೆ
ಧಾರವಾಡ ಜಿಲ್ಲೆ
ಕೊಪ್ಪಳ ಜಿಲ್ಲೆ
ರಾಯಚೂರು ಜಿಲ್ಲೆ
ಕೃಷ್ಣಾ ನದಿ
ಘಟಪ್ರಭಾ ನದಿ
ಮಲಪ್ರಭಾ ನದಿ
N


ಬಾದಾಮಿ ತಾಲೂಕ
ಬಾಗಲಕೋಟೆ ತಾಲೂಕು
ಹುನಗುಂದ ತಾಲೂಕು
ರಾಯಚೂರ ಜಿಲ್ಲೆ
ಧಾರವಾಡ ಜಿಲ್ಲೆ
ಯಂಡಿಗೇರಿ
ಜಲಗೇರಿ
ಆನವಾಳ
ಕಟಗೇರಿ
ಯರಗೊಪ್ಪ
ಕೆಲವಡಿ
ಮಾಳಗಿ
ಕೆರೂರ
ನಾಗರಾಳ
ಹುಲಿಗೆಮ್ಮ ನಕೊಳ್ಳ
ಪಟ್ಟದಕಲ್ಲು
ಬಾದಾಮಿ
ಬನಶಂಕರಿ
ಚೊಳಚಗುಡ್ಡ
ಹೊಸೂರ
ಬೇಲೂರ
N


ಮಲಪ್ರಭಾ ನದಿ ಪ್ರದೇಶ
AIHOLE
SIDDHANAKOI
ಆಯ್ಯನಪಡಿ
ಹುಲಿಗೆಮ್ಮನಕೊಳ್ಳ
ಬಾಚಿನಗುಡ್ಡ
MAHAKUTA
BADAMI




೧. ಹುಲಿಗೆಮ್ಮ ನಕೊಳ್ಳ



೨. ಶೈವ ದೇವಾಲಯದ ದ್ವಾರಪಾಲಕ
ಹುಲಿಗೆಮ್ಮ ನಕೊಳ್ಳ



೩. ಶ್ವೇತ ವರ್ಣಚಿತ್ರ, ಹುಲಿಗೆಮ್ಮ ನಕೊಳ್ಳ



೪. ಈಶ್ವರ ದೇವಾಲಯದ ಮುಂಭಾಗದಲ್ಲಿರುವ ಶಾಸನ
ಹುಲಿಗೆಮ್ಮ ನಕೊಳ್ಳ



೫. ಉಮಾಮಹೇಶ್ವರ ಶಿಲ್ಪ, ಹುಲಿಗೆಮ್ಮ ನಕೊಳ್ಳ



೬. ಸಪ್ತಮಾತೃಕೆಯರು, ಹುಲಿಗೆಮ್ಮ ನಕೊಳ್ಳ



೭. ಈಶ್ವರ ದೇವಾಲಯ, ಹುಲಿಗೆಮ್ಮ ನಕೊಳ್ಳ



೮. ಫಾಂಸನಾ ಮಾದರಿ ಶಿವ ದೇಗುಲ
ಹುಲಿಗೆಮ್ಮ ನಕೊಳ್ಳ




೯. ಪಾಂಸನಾ ಮಾದರಿ ಶಿವ ದೇಗುಲ, ಹುಲಿಗೆಮ್ಮ ನಕೊಳ್ಳ



೧೦. ಭೈರವ ಶಿಲ್ಪ, ಹುಲಿಗೆಮ್ಮ ನಕೊಳ್ಳ




೧೧.ಲಜ್ಜಾಗೌರಿ, ಹುಲಿಗೆಮ್ಮ ನಕೊಳ್ಳ




೧೨. ಅಪ್ರಕಟಿತ ಶಾಸನ, ಹುಲಿಗೆಮ್ಮ ನಕೊಳ್ಳ



೧೪. ಮಧ್ಯಹಳೇಶಿಲಾಯುಗದ ನೆಲೆ, ಮಂಗಳೂರು




೧೩. ವೀರಗಲ್ಲು, ಹುಲ್ಲೇಕೇರಿ



೧೫. ಚಲುಕ್ಯೋತ್ತರ ಮತ್ತು ಪೂರ್ವಚಲುಕ್ಯರ ಕಾಲದ ಲಿಂಗಗಳು, ಶಿರಬಡಗಿ




೧೬. ಉಳುತ್ತಿರುವ ರೈತನ ಶಿಲ್ಪ, ಶಿರಬಡಗಿ




೧೭. ಬಾಚಿನಗುಡ್ಡದ ಡೊಂಕನಕೊಳ್ಳದಲ್ಲಿಯ ಅಪ್ರಕಟಿತ ಶಾಸನ



ಅಪ್ರಕಟಿತ ಶಾಸನ ಅಯ್ಯನಪಡೆ, ಬಾಚಿನಗುಡ್ಡ




೧೮ಅ. ಅಪ್ರಕಟಿತ ಶಾಸನ, ಅಯ್ಯನಪಡೆ
ಬಾಚಿನಗುಡ್ಡ



೧೮ಬಿ. ಅಪ್ರಕಟಿತ ಶಾಸನ, ಅಯ್ಯನಪಡೆ
ಬಾಚಿನಗುಡ್ಡ



೧೯. ಅಪ್ರಕಟಿತ ಶಾಸನ, ಅಯ್ಯನಪಡೆ, ಬಾಚಿನಗುಡ್ಡ



೨೦. ಅಪ್ರಕಟಿತ ಶಾಸನ, ಅಯ್ಯನಪಡೆ, ಬಾಚಿನಗುಡ್ಡ



೨೧. ಅಪ್ರಕಟಿತ ಶಾಸನ, ಅಯ್ಯನಪಡೆ, ಬಾಚಿನಗುಡ್ಡ



೨೨. ಮಹಿಷಮರ್ದಿನಿ ರೇಖಾಚಿತ್ರ ಅಯ್ಯನಪಡೆ, ಬಾಚಿನಗುಡ್ಡ



೨೩. ಚಕ್ರವ್ಯೂಹ ರೇಖಾಚಿತ್ರ, ಅಯ್ಯನಪಡೆ, ಬಾಚಿನಗುಡ್ಡ



೨೪. ವೃಷಭ ಸಿಂಹ-ಅಯ್ಯನಪಡೆ, ಬಾಚಿನಗುಡ್ಡ



೨೫. ತ್ರೈಪುರುಷ (ಬ್ರಹ್ಮ, ವಿಷ್ಣು, ಮಹೇಶ್ವರ) ದೇವಾಲಯ, ಬಾಚಿನಗುಡ್ಡ



೨೬. ಚತುರ್ಮುಖ ಬ್ರಹ್ಮ
ತ್ರೈಪುರುಷ ದೇವಾಲಯ, ಬಾಚಿನಗುಡ್ಡ



೨೭. ಉಗ್ರನರಸಿಂಹ
ತ್ರೈಪುರುಷ ದೇವಾಲಯ, ಬಾಚಿನಗುಡ್ಡ



೨೮. ಅಯ್ಯನ (ಸಿದ್ಧರ) ಪಡೆಯಲ್ಲಿಯ ಕೆಂಪು ಮತ್ತು ಬಿಳಿ ವರ್ಣಚಿತ್ರ, ಬಾಚಿನಗುಡ್ಡ



೨೯. ಶಾತವಾಹನರ ಸಮಕಾಲೀನ ಮಡಿಕೆ ಚೂರುಗಳು ದೊರೆತ ನೆಲೆ, ಬಾಚಿನಗುಡ್ಡ




೩೦. ಕೇಸರಿ (ಸಿಂಹ) ಶಿಲ್ಪ, ಬಾಚಿನಗುಡ್ಡ



೩೧. ಶಾ ತವಾಹನರ ಸಮಕಾಲೀನ ಮೃತ್ ಪಾತ್ರೆಗಳ ಚೂರುಗಳು, ಬಾಚಿನಗುಡ್ಡ



೩೨. ಬೃಹತ್ ಶಿಲಾ ಸಮಾಧಿ, ಬಾಚಿನಗುಡ್ಡ



೩೩. ಮಹಿಷಮರ್ದಿನಿ, ಬಾಚಿನಗುಡ್ಡ



೩೪. ದ್ಯಾಮವ್ವನ ಜಾತ್ರೆ, ನಂದಿಕೇಶ್ವರ



೩೫. ಶ್ರೀ ಬಸವಲಿಂಗೇಶ್ವರ ಜಾತ್ರೆ, ಬಾಚಿನಗುಡ್ಡ



೩೬. ಶ್ರೀ ಬಸವಲಿಂಗೇಶ್ವರ ಜಾತ್ರೆ, ಬಾಚಿನಗುಡ್ಡ